
ಪುಸ್ತಕ ಪ್ರಪಂಚ

ಕಾರಂತ ವಿಶೇಷ ಸಂಚಿಕೆ



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೮ ಸಂಚಿಕೆ ೭-೮

ಏಪ್ರಿಲ್-ಮೇ ೧೯೯೮

ಪರಿವಿಡಿ

ಹೆಚ್ಚುವರಿ ಪುಟಗಳನ್ನು ಅಳವಡಿಸಿ ಈ ವಿಶೇಷ ಸಂಚಿಕೆಯನ್ನು ಪ್ರಕಟಿಸಿದೆ. ಮಾನ್ಯ ಓದುಗರು ಎಂದಿನಂತೆ ಸಹಕರಿಸಬೇಕಾಗಿ ಕೋರಿಕೆ.

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು—೫೭೦ ೦೦೬

ಕಾರಂತರು—ಕೆಲವು ನೆನಪುಗಳು

ಕಾರಂತರ ಬಗ್ಗೆ ಎಷ್ಟು ಬರೆದರೂ ತೀರದು. ಬರೆದಂತೆಲ್ಲ ಇನ್ನೂ ಬರೆಯ ಬೇಕೆನಿಸುತ್ತದೆ. ಆ ಬರಹದ ಒಡಲಿಂದಲೇ ಹೊಸ ಹೊಸ ವಿಚಾರಗಳು, ಅನುಭವಗಳು, ಕಲ್ಪನೆಗಳು ಮೂಡುತ್ತವೆ. ಕಾರಂತ ಎನ್ನುವುದು ವ್ಯಕ್ತಿಯ ಹೆಸರಲ್ಲ, ಅದೊಂದು ಶಕ್ತಿ ಮಾತ್ರವಲ್ಲ, ತತ್ತ್ವಎಂಬ ಅರ್ಥವೂ ಮುಂದೆ ಪ್ರಾಪ್ತವಾಗಲಿದೆ. ವಿರಾಟ್ ಶಕ್ತಿ ಏನೆಂಬುದು ತಕ್ಕಮಟ್ಟಿಗೆ ಗ್ರಹಿಕೆಯಾಗ ಬೇಕಾದರೆ ಒಬ್ಬ ವಿವೇಕಾನಂದ, ಒಬ್ಬ ವಿಶ್ವೇಶ್ವರಯ್ಯ, ಒಬ್ಬ ಕುವೆಂಪು, ಒಬ್ಬ ಕಾರಂತರ ಕಡೆಗೆ ಕಣ್ಣು ಹೊರಳಿಸಬೇಕಾಗುತ್ತದೆ. ಅವರ ವ್ಯಕ್ತಿತ್ವದಲ್ಲಿ ಕಾಣುವಂಥದು ಸಮೃದ್ಧಿ, ಸಮೃದ್ಧಿ; ಅನುಭವ ಸಮೃದ್ಧಿ, ಆಲೋಚನಾ ಸಮೃದ್ಧಿ, ವಿಚಾರಸಮೃದ್ಧಿ, ಭಾವಸಮೃದ್ಧಿ, ಜ್ಞಾನಸಮೃದ್ಧಿ, ಉತ್ಸಾಹ ಸಮೃದ್ಧಿ, ಕ್ರಿಯಾಸಮೃದ್ಧಿ, ಆತ್ಮವಿಭೂತಿ. ಈ ಸಮೃದ್ಧಿ, ಈ ವಿಭೂತಿತ್ವ ದಿಂದಾಗಿ ಅವರು ಸಾಹಿತ್ಯ ಲೋಕದ ಚಿರಂಜೀವಿಯಾಗುಳಿಯುತ್ತಾರೆ.

ಅವರ ಕೃತಿ ವಿಸ್ತಾರವನ್ನು ನೋಡಿದರೆ ಸಾಕು, ಅವರ ವಿಭೂತಿತ್ವದ ಹರಹು ಮನಗಾಣುತ್ತದೆ. ಅವರ ಜ್ಞಾನಕುತೂಹಲ, ಆ ಕುತೂಹಲವನ್ನು ಪುಟ ಗೊಳಿಸುವ, ಪುಷ್ಟಿಗೊಳಿಸುವ ವೀಕ್ಷಣ ಮತ್ತು ಚಿಂತನ ಸಾಮರ್ಥ್ಯ, ಆ ಸಾಮರ್ಥ್ಯದ ಪರಿಣಾಮವಾಗಿ ಅವರ ಚಿತ್ತಾಗರದಲ್ಲಿ ಸಂಗ್ರಹಗೊಳ್ಳುವ ಅನುಭವಸಂಪತ್ತು ಅನನ್ಯವಾದುವು. ಆ ಅನುಭವ ಸಂಪತ್ತು ಅಭಿವ್ಯಕ್ತ ಗೊಳ್ಳುವ ಮಾಧ್ಯಮಗಳು ಹಾಗೂ ಕಾಲುವೆಗಳು ಹಲವಾರು. ಒಂದು ದೇಶದ ಅಥವಾ ಜನಾಂಗದ ಸರ್ವತೋಮುಖವಾದ ವಿಕಾಸಕ್ಕೆ ನಿಸರ್ಗ ಸಂಪತ್ತು ಆಧಾರ ನಿಜ; ಆದರೆ ಅದಕ್ಕಿಂತ ಮುಖ್ಯವಾದದ್ದು ಅಲ್ಲಿಯ ಜನರ ದುಡಿಮೆ ಮತ್ತು ಬೌದ್ಧಿಕ ಸಂಪತ್ತೆಂಬುದು ಕಾರಂತರ ನಿಶ್ಚಿತಾ-ಭಿಪ್ರಾಯ. ನಿರಂತರಕಾಯಕ ಹಾಗೂ ಬೌದ್ಧಿಕ ವಿಕಾಸದಿಂದ ಮಾತ್ರ ಕನ್ನಡಭಾಷೆ ಶ್ರೀಮಂತವಾಗುತ್ತದೆಂಬ ಅವರ ಮಾತಿನ ಬಗ್ಗೆ ಭಿನ್ನಾಭಿಪ್ರಾಯ ವಿರಲಾರದು. ಪರಾನುಕರಣೆಗಿಂತ ಸ್ವಂತಾನುಭಗಳು, ಸ್ವೋಪಜ್ಞತೆ ಮತ್ತು ಸ್ವತಂತ್ರ ವೈಚಾರಿಕತೆ ಕನ್ನಡ ಸಾಹಿತ್ಯದ ಪ್ರವರ್ಧಮಾನಕ್ಕೆ, ವೈಶಾಲ್ಯಕ್ಕೆ ಹಾಗೂ ಗಗನೋನ್ನತ್ತಿಗೆ ಕಾರಣವಾಗುತ್ತವೆಂಬ ಅವರ ಮಾತಿನಲ್ಲಿ ಅಪಾರ ಸತ್ಯವಿದೆ.

ಈ ಮಾತುಗಳನ್ನವರು ಲಿಖಿಸುವಾಗ ಅಥವಾ ಭಾಷಣಗಳಲ್ಲಿ ಉಗ್ಗಡಿಸುವಾಗ ತಾವು ಮಾತ್ರ ಅನುಭವ ಶ್ರೀಮಂತರು, ಇತರರು ಅನುಕರಣ ಶೀಲರು, ಕೃತಿ ಚೋರರು ಇಲ್ಲವೆ ಅನುಭವದರಿದ್ರರು ಎನ್ನುವ ಧಾಟಿಯನ್ನನುಸರಿಸುವಂತೆ ತೋರುತ್ತದೆ. ಭಾವಾವಸರ ಅಥವಾ ಉದ್ರೇಕದಲ್ಲಿ ಮಾತಾಡುವಾಗ 'ಕನ್ನಡ

ಸಾಹಿತಿಗಳು ಕನ್ನಡ ಭಾಷೆಗೆ ಏನು ಕೊಡುಗೆ ಕೊಟ್ಟಿದ್ದಾರೆ? ತಮ್ಮ ಸುತ್ತಮುತ್ತಣ ನಿಸರ್ಗ ಶಕ್ತಿಗಳ ಹೆಸರು ಅವರಿಗೆ ಗೊತ್ತಿವೆಯೆ? ಪುಟ್ಟಪ್ಪನವರು ಕಾಜಾಣ, ಕಾಮಳ್ಳಿ, ಸೀತಾಳಿ, ದೊಡ್ಡು, ಕುರ್ಕ, ಈ ಕೆಲವನ್ನು ಕೊಟ್ಟಿದ್ದಾರೆ. ಮುಂದೆ....?' ಎಂದು ಅಣಕವಾಡಿದ್ದುಂಟು. 'University Professors killers of Knowledge' ಎಂದವರು ಘೋಷಿಸಿದ್ದುಂಟು. ಹೀಗೆಲ್ಲ ಅಣಕವಾಡುವಾಗ, ಪಂಪ ರನ್ನ ಬಸವೇಶ್ವರ ಹರಿಹರ ಕುಮಾರವ್ಯಾಸ ರತ್ನಾಕರವರ್ಣಿ, ಬೇಂದ್ರೆ, ಡಿವಿಜಿ, ಆರ್. ಎಲ್. ನರಸಿಂಹಯ್ಯ, ಸೀಬಯ್ಯ, ಜಿ. ಟಿ. ನಾರಾಯಣರಾವ್, ಶಂಕರ್, ನಾಗಲೋಟಿಮಠ, ಬಿ. ಜಿ. ಎಲ್. ಸ್ವಾಮಿ ಮೊದಲಾದ ಘಟಾನುಘಟಿಗಳ ಕೃತಿಗಳು ಅವರ ನೆನಪಿಗೆ ಬರಲಿಲ್ಲವೆನಿಸುತ್ತದೆ. ದೇವನಾಗರಿ ಲಿಪಿಯಲ್ಲಿ ಬರೆದದ್ದೆಲ್ಲ ಮುಕ್ತಿದಾಯಿ, ರೋಮನ್ ಲಿಪಿಯಲ್ಲಿ ಬರೆದದ್ದೆಲ್ಲ ಶಕ್ತಿದಾಯಿ, ಕನ್ನಡ ಲಿಪಿಯಲ್ಲಿ ಬರೆದದ್ದೆಲ್ಲ ವ್ಯರ್ಥಶಾಯಿ ಎಂಬ ಭಾವನೆ ಕೆಲವರ ಜಾಯಮಾನಕ್ಕೆ ಅಂಟಿಕೊಂಡು ಬಂದಂತಿದೆ. ಆದರೆ ಕಾರಂತರಂಥ ಮೇಧಾವಿಗೆ ಸತ್ವಶಾಲಿಗೆ ಅಂಥ ಭಾವನೆಯಿರಲಾರದು. ತಮ್ಮ ಅನುಭವಸಮಸ್ತವನ್ನು ಕನ್ನಡ ಭಾಷೆಯ ಮೂಲಕ ನಾಡಿನಲ್ಲೆಲ್ಲ ಹರಿಯಬಿಡಬೇಕೆನ್ನುವ ಅವಸರದಲ್ಲಿ ಅವರ ಗಮನ ಪರರ ಕೃತಿಗಳ ಕಡೆಗೆ ಹರಿದಿರಲಾರದು. ಒಂದು ಗ್ರಂಥಭಂಡಾರವನ್ನು ತುಂಬುವಷ್ಟು ಬರೆಯುವ ಉದ್ದೇಶವಿರುವಾಗ, ಅದಕ್ಕೆ ತಕ್ಕ ಸಾಮರ್ಥ್ಯವಿರುವಾಗ, ಲೇಖನ ಚಿಂತನಗಳ ಮೂಲಕ ಅವರ ಬದುಕು ದಿನೇ ದಿನೇ ನವೋನವವಾಗುತ್ತಿರುವಾಗ, ಓದಿಗೆ ಸಮಯವೆಲ್ಲಿದೆ? ಓದು ಬರಹಕ್ಕೆ ಶತ್ರುವೆಂಬುದನ್ನು ಅವರು ಬಲ್ಲರು. ಹೀಗಿರುವಾಗ ಕನ್ನಡದಲ್ಲೇನೂ ಇಲ್ಲವೆನ್ನುವುದು ಧಾರ್ಷ್ಟ್ಯವಾಗುತ್ತದೆ.

ಅನುಕರಣ, ಅನುವಾದ ಮತ್ತು ಸ್ವತ್ವ, ಈ ಮೂರೂ ಸೃಷ್ಟಿ ಹಾಗೂ ಪ್ರಗತಿಯ ಹಿನ್ನೆಲೆಯಲ್ಲಿರುವ ತತ್ತ್ವಗಳು. ಮನುಷ್ಯ ಜೀವನದ ಪ್ರಗತಿಯ ಮೂಲದಲ್ಲಿ ಅನುಕರಣವಿದ್ದೇ ಇದೆ. ಎಲ್ಲೆಲ್ಲೂ ಅದರದೇ ದರ್ಬಾರೆಂದರೂ ನಡೆಯುತ್ತದೆ. ಮಗು ಅನುಕರಣದ ಮೂಲಕ ಭಾಷೆಯನ್ನು ಕಲಿಯುತ್ತದೆ, ತಂದೆಯ ವೃತ್ತಿಯನ್ನು ಮಗ ಕಲಿತುಕೊಳ್ಳುತ್ತಾನೆ. ಅಂತೆಯೇ ಶಿಷ್ಯ ಗುರುವಿನ ಅನುಸರಣೆಯಿಂದ ಜ್ಞಾನ ಸಂಪಾದಿಸುತ್ತಾನೆ. ಯಾರೋ ತಾನು ಕಂಡದ್ದನ್ನು ಬಳಿಯ ಗೆಳೆಯನಿಗೆ ವಿವರಿಸುತ್ತಾನೆ. ಗೆಳೆಯ ಕಥೆಗಾರ. ಅವನದನ್ನು ತನ್ನ ಭಾಷೆಯಲ್ಲಿ ಕಥಿಸುತ್ತಾನೆ. ಅದು ಅನುವಾದ. ಅನುಕರಣ ಅನುವಾದಗಳು ಸ್ವಂತಾನುಭವ ಅಥವಾ ಸ್ವತ್ವದ ಜಾಗೃತಿಗೂ ಪ್ರಚೋದನೆ ನೀಡುತ್ತವೆ. ಯಾವ ಸಾಹಿತ್ಯ ಕೃತಿಯನ್ನು ತೆಗೆದುಕೊಂಡರೂ ಸ್ವಂತದ್ದು ಸೊಲಿಗೆಯಷ್ಟಾದರೆ ಅನುಕರಣ ಅಥವಾ ಅನುವಾದದ್ದು ಕೊಳಗದಷ್ಟಾಗುತ್ತದೆ. ಕದಿಯದ ಕವಿಯಿಲ್ಲ, ಸುಲಿಗೆಮಾಡದ ಶ್ರೀಮಂತನಿಲ್ಲ ಎಂಬುದು

ಲೋಕವೇದ್ಯಸೂಕ್ತಿ. ಕಾರಂತ ಬರಹಗಳ ಬಹುಭಾಗ ಅನುಕರಣ ಅನುವಾದ ದಿಂದ ಸಮೃದ್ಧವಾಗಿದೆಯೆಂದರೆ, ಅದರ ಬೆಲೆ ಕಡಮೆಯೆಂದು, ಯಾರೂ ಮೂಗುಮುರಿಯಬೇಕಾಗಿಲ್ಲ. ಅನುಕರಣ ಅಥವಾ ಅನುವಾದ ಎಷ್ಟರ ಮಟ್ಟಿಗೆ, ಹೇಗೆ ಅವರ ಬುದ್ಧಿಯ ಕುಲುಮೆಯಲ್ಲಿ ಅವರ ಅನುಭವವಾಗಿ ನಿರ್ದುಷ್ಟವಾಗಿ ಹೊರಬಂದಿದೆ ಎಂಬುದು ಮುಖ್ಯ.

ಕಾರಂತರ ಬಾಲಪ್ರಪಂಚ ಮತ್ತು ವಿಜ್ಞಾನ ಪ್ರಪಂಚಗಳನ್ನು ಈ ದೃಷ್ಟಿಯಿಂದ ಗಮನಿಸಬಹುದಾಗಿದೆ. ಸ್ವಯಂಶ್ರೇಷ್ಠ ವಿಜ್ಞಾನ ಲೇಖಕರಾದ ಜಿ. ಟಿ. ನಾರಾಯಣರಾಯರು ಅವುಗಳನ್ನು ಕುರಿತಂತೆ ಬರೆದಿರುವ ವಿಮರ್ಶೆಯ ಕೆಲವು ಪಂಕ್ತಿಗಳ ಉದ್ಧರಣೆಯಿಂದ ಕಾರಂತರ ವಿಜ್ಞಾನ ಸಾಹಿತ್ಯದ ಇತಿಮಿತಿಗಳು ಸ್ಪಷ್ಟವಾಗುತ್ತವೆ: 'ಬಿಡಿ ವಿವರಗಳಲ್ಲಿ ತಲೆಕೆಡಿಸಿಕೊಳ್ಳದೆ ಗಡಿಬಿಡಿಯಿಂದ ಗುರಿಸಾಧಿಸುವುದು ಅವರ ಧ್ಯೇಯವಾಗಿರುವಂತೆ ತೋರುತ್ತದೆ. ದೈತ್ಯತ್ರಾಣ, ಅಮಿತ ಉತ್ಸಾಹ, ಆದರೆ ಅಸಮರ್ಪಕ ನಿರ್ವಹಣಾಕೌಶಲ ಮತ್ತು ಬಿಡಿ ವಿವರಗಳತ್ತ ದಿವ್ಯನಿರ್ಲಕ್ಷ್ಯ ಈ ಕೃತಿಕಾರರ ಲಕ್ಷಣಗಳು.'[1] ರಾಯರು ತಮ್ಮ ವಿಮರ್ಶೆಯ ಸಮರ್ಥನೆಗೆ ಕೆಲವು ಉದಾಹರಣೆಗಳನ್ನು ಕೊಟ್ಟು ಮತ್ತೂ ತಮ್ಮ ಪ್ರತಿಕ್ರಿಯೆಯನ್ನು ಮುಂದುವರಿಸಿದ್ದಾರೆ: 'ಆದ್ದರಿಂದ ಕಾರಂತರ (ಮೇಲೆ ಉಲ್ಲೇಖಿಸಿರುವ) ಕೃತಿಗಳು ಕನ್ನಡದ ಅಭಿವರ್ಧನೆಗೆ ನೀಡಿರುವ ಕೊಡುಗೆ ಬಹುತೇಕ ನಿಷೇಧಾತ್ಮಕ: ವಿಶ್ವಕೋಶ ಹೇಗೆ ಇರಬಾರದು ಅಥವಾ ಅದನ್ನು ಹೇಗೆ ರಚಿಸಬಾರದು ಎನ್ನುವುದಕ್ಕೆ ನಿದರ್ಶನ. ವಾಸ್ತವವಾಗಿ ವರ್ತಮಾನ ಯುಗದಲ್ಲಿ ಯಾವ ವಿಶ್ವಕೋಶವೂ ಏಕವ್ಯಕ್ತಿ ಸಾಹಸವಾಗಿರುವುದು ಅಸಾಧ್ಯ. ಜ್ಞಾನದ ವಿವಿಧ ಪ್ರಕಾರಗಳು ಅಸಂಖ್ಯ ಸಂಶೋಧಕರ ಅವಿಚ್ಛಿನ್ನ ಚಿಂತನೆಗಳ ವಿಶಿಷ್ಟ ಫಲಗಳು. ಅಂದಮೇಲೆ ಇವುಗಳ ಗ್ರಾಂಥಿಕ ಪ್ರತಿಬಿಂಬವಾದ ವಿಶ್ವಕೋಶ ಸಹಜವಾಗಿಯೇ ವಿವಿಧ ಪರಿಣತ ಪರಿಪಕ್ವ ಲೇಖನಗಳ ಸಂಕೀರ್ಣವಾಗಿರತಕ್ಕದ್ದೆಂಬುದು ಸ್ವತಸ್ಸಿದ್ಧ.'[2] ಇಂಥದೇ ಅಭಿಪ್ರಾಯಗಳನ್ನು ಇನ್ನು ಕೆಲವು ವಿಜ್ಞಾನಿಗಳ ಬಾಯಿಂದಲೂ ಕೇಳಿದ್ದೇನೆ. ಕೆಲವು ಮಕ್ಕಳ ಪುಸ್ತಕಗಳನ್ನು ಕಾರಂತರಿಗಾಗಿ ನಾರಾಯಣರಾಯರು ಅನುವಾದಮಾಡಿಕೊಟ್ಟದ್ದುಂಟು. 'ಸ್ವಧರ್ಮೇನಿಧನಂಶ್ರೇಯಃ, ಪರಧರ್ಮೋಭಯಾವಹಃ' ಆದರೆ ಒಂದು ಮಾತು ಮಾತ್ರ ನಿಜ: ಬೆಂಗಳೂರಿನ ಕೆಲವು ಪ್ರಕಾಶಕರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಈ ಕೃತಿಗಳ ಪ್ರತಿಗಳನ್ನು ಮುದ್ರಿಸಿ, ಅಧಿಕಾರಗಳ ನೆರವಿನೊಡನೆ ಶಾಲೆಕಾಲೇಜುಗಳ ಗ್ರಂಥಭಂಡಾರಗಳನ್ನು ಭರ್ತಿಮಾಡಿದ್ದಾರೆ.

---

[1] ಕನ್ನಡದ ಅಳಿವು-ಉಳಿವು (೧೯೮೫) ಪು. ೨೪೪. ಕಾರಂತರಿದ್ದಾಗಲೇ ಇದನ್ನು ಬರೆದದ್ದು.

[2] ಅದೇ ಪುಟ ೨೪೭.

ಆ ವ್ಯವಹಾರದಿಂದ ಕಾರಂತರ ಅಗತ್ಯಪೂರೈಸಿತೋ ಇಲ್ಲವೋ, ಪ್ರಕಾಶಕರ ಖಜಾನೆಯಂತು ಸೊಕ್ಕಿತು.

ಕಾರಂತರಿಗೆ ವಿಜ್ಞಾನದಲ್ಲಿ ಪರಿಣತಿ ಇಲ್ಲದಿದ್ದರೂ, ನಮ್ಮ ಮಕ್ಕಳಿಗೆ ಅದು ತಲುಪದಿದ್ದಲ್ಲಿ, ದೇಶದಲ್ಲಿ ವೈಜ್ಞಾನಿಕ ವಾತಾವರಣ ಹರಡುವುದಿಲ್ಲ, ಅದರಿಂದಾಗಿ ದೇಶ ಹಿಂದುಳಿದಿರಬೇಕಾಗುತ್ತದೆಂಬ ತಳಮಳ ಅವರದು. ಆ ತಳಮಳ ಬರಿಯ ನಾಟಕವಲ್ಲ. ಆ ಕೆಲಸವನ್ನು ಸಂಬಳ ಪಡೆಯುವ ವಿಜ್ಞಾನದ ಪ್ರಾಧ್ಯಾಪಕರು ಕೈಗೆತ್ತಿಕೊಂಡಿದ್ದರೆ ಕಾರಂತರು ಈ ದಿಕ್ಕಿನಲ್ಲಿ ಶ್ರಮ ಪಡಬೇಕಾಗಿರಲಿಲ್ಲ. ಅವರ ಆ ಶ್ರಮದ ಹಿಂದಿರುವ ಆಶಯವನ್ನು, ಅಭಿಮಾನವನ್ನು ಜನ ಅರಿಯಬೇಕಾಗಿದೆ. ಸತ್ಯನಿಷ್ಠವಾದ ವೈಜ್ಞಾನಿಕ ದೃಷ್ಟಿ ಅವರ ಜೀವನವನ್ನೆಲ್ಲ ತುಂಬಿಕೊಂಡಿರುವುದಂತು ನಿಜ. ಅವರ ಸತ್ಯನಿಷ್ಠೆ ಎಷ್ಟು ಉಗ್ರವಾದದ್ದೆಂದರೆ, ಅವರು ಒಮ್ಮೊಮ್ಮೆ ರಾಜಮಾರ್ಗವನ್ನು ಬಿಟ್ಟು ಕಾಲುದಾರಿಯ ಕಡೆಗೂ ಹೊರಳಿದ್ದುಂಟು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಸಂಪಾದಕಮಂಡಲಿಯಲ್ಲಿ ಕಾರಂತರೂ ಕುಶಿಯವರೂ ಸದಸ್ಯರಾಗಿದ್ದರು. ಅದರ ಮೊದಲನೆಯ ಭಾಗ ಪ್ರಕಟಗೊಂಡಾಗ ಕಾರಂತರು ನನಗೊಂದು ಪತ್ರ ಬರೆದು 'ನೋಡಿ ಗೌಡರೆ, ನಿಘಂಟಿನ ಪ್ರಾರಂಭದಲ್ಲಿ ಸಂಪಾದಕ ಮಂಡಲಿಯ ಸದಸ್ಯರ ಹೆಸರು ಅಚ್ಚಾಗಿವೆ. ಕುಶಿಯವರು ಮಂಡಲಿಯಲ್ಲಿರಲಿಲ್ಲ. ಅವರ ಹೆಸರೂ ಅಚ್ಚಾಗಿದೆ. ಕೂಡಲೇ ವಿಚಾರಿಸಿ ಉತ್ತರಿಸಿ' ಎಂದು ಒಕ್ಕಣಿಸಿದ್ದರು. ನಾನು ಆ ಹೊತ್ತಿಗೆ ನಿವೃತ್ತನಾಗಿ ಬಹುದಿನಗಳಾಗಿದ್ದುವು. ಆದರೆ ಸದಸ್ಯರ ಹೆಸರು ನನಗೆ ನೆನಪಿದ್ದುವು. 'ಕುಶಿಯವರೂ ಸದಸ್ಯರಾಗಿದ್ದರು. ಒಮ್ಮೊಮ್ಮೆ ನಿಮ್ಮ ಕಾರಿನಲ್ಲಿಯೇ ಬರುತ್ತಿದ್ದರು' ಎಂದು ಉತ್ತರ ಬರೆದೆ. 'ಇಲ್ಲ, ಇಲ್ಲ. ಅವರು ಮಂಡಲಿಯಲ್ಲಿರಲಿಲ್ಲ. ನಾನು ಬಲ್ಲೆ.' ಎಂದವರು ಮತ್ತೆ ನನಗೆ ಪತ್ರ ಬರೆದದ್ದಲ್ಲದೆ, ಪ್ರಸಾರಾಂಗದ ನಿರ್ದೇಶಕರಿಗೂ ಕಾಗದ ಕಳಿಸಿದರು. ನಿರ್ದೇಶಕರು ವಿಶ್ವವಿದ್ಯಾನಿಲಯದ ನಿಘಂಟು ಮಂಡಲಿ ರಚನೆಗೆ ಸಂಬಂಧಿಸಿದ ಪತ್ರದ ಪ್ರತಿಯನ್ನು ಕಾರಂತರಿಗೂ ನನಗೂ ಕಳಿಸಿಕೊಟ್ಟರು. ಇದೊಂದು ಸಣ್ಣ ವಿಷಯ. ನಾನೇ ಅವರ ಜಾಗದಲ್ಲಿದ್ದರೆ, ಆ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆಶ್ಚರ್ಯವೇನೆಂದರೆ, ಅಷ್ಟೊಂದು ಕೆಲಸದ ಮಧ್ಯೆ ಅಪ್ಪಟ ಸತ್ಯವನ್ನು ತಿಳಿಯಲು ಪತ್ರವ್ಯವಹಾರದಲ್ಲಿ ತೊಡಗಿದ್ದು. ಅನೇಕ ವೇಳೆ ಸತ್ಯ ಮತ್ತು ನ್ಯಾಯವನ್ನು ರುಜುವಾತು ಪಡಿಸಲು ಕೋರ್ಟುಮೆಟ್ಟಿಲು ಹತ್ತಿದ್ದೂ ಉಂಟು.

ತಾವು ನಿರೀಶ್ವರವಾದಿಯೆಂದು ಹೇಳಿಕೊಂಡರೂ, ಆಸ್ತಿಕರನ್ನು ತೆಗಳಿ, ಅವರ ಮನಸ್ಸನ್ನು ನೋಯಿಸುವ ಹೀನತನ ಅವರಲ್ಲಿರಲಿಲ್ಲ. ತಮ್ಮ ಹೆಂಡತಿ ಸತ್ಯಸಾಯಿಬಾಬರನ್ನು ನೋಡುವ ಆಸೆ ವ್ಯಕ್ತಪಡಿಸಿದಾಗ, ಕಾರಂತರು

ಅವರನ್ನು ತಡೆಯುಲಿಲ್ಲ. ಅವರವರ ನಂಬಿಕೆ ಅವರಿಗೆ ಎಂದು ತಿಳಿಯುವ ದೊಡ್ಡಸ್ತಿಕೆ ಅವರದು. ಚರ್ಚೆಗಳಲ್ಲಿ ಅವರು ಗುರುಗುಟ್ಟುವುದಾಗಲಿ, ತಮ್ಮ ನಿಲವೇ ಸರಿಯೆಂದು ಅಬ್ಬರಿಸುವುದಾಗಲಿ ಅವರಿಗೆ ಸಹಜವಾದದ್ದೇ. ಆದರೆ ವಾಗ್ವಾದ ಕಾವೇರಿದಾಗ, ತಮ್ಮ ಧೋರಣೆಯಲ್ಲಿ ಏನೋ ಕೊರತೆಯಿದೆ ಎಂದು ತೋರಿದಾಗ, ಹಾಸ್ಯದ ಚಟಾಕಿಯನ್ನು ಹಾರಿಸಿ, ವಿನೋದದ ಮುಕ್ತಾಯವನ್ನು ಹಾಡುವ ಸ್ನೇಹಮಯ ಔದಾರ್ಯ ಅವರದು.

ಕೆಲವೊಮ್ಮೆ ಕಾರಂತರದು ದ್ವಂದ್ವ ವ್ಯಕ್ತಿತ್ವವೆಂಬಂತೆ ತೋರುತ್ತದೆ. ಸರ್ಕಾರವನ್ನೆನುಂಗಿಬಿಡುವಂಥ ಪ್ರಕಾಶಕರೊಡನೆ ರಾಜಿಮಾಡಿಕೊಳ್ಳುತ್ತಾರೆ. ಅವರ ಹೆಸರಿನ ಮರೆಯಲ್ಲಿ ತಿಮಿಂಗಿಲಗಾತ್ರದ ಪ್ರಕಾಶಕರು ಅನೇಕ ಲೇಖಕರನ್ನು ಸಣ್ಣ ಪುಟ್ಟ ಪ್ರಕಾಶಕರನ್ನು ನುಂಗಿಬಿಡುತ್ತಾರೆ. ಭೂಸುಧಾರಣೆ ವಿಮಾಸಲಾತಿಗಳಿಗೆ ಅವರು ವಿರೋಧಿ. ಕಾರ್ಮಿಕ ಚಳುವಳಿ ಸಮಾಜವಾದ ಕಮ್ಯೂನಿಸಂಗಳನ್ನವರು ಗೇಲಿಮಾಡುತ್ತಾರೆ. ಕರ್ತವ್ಯಭ್ರಷ್ಟರು ಹಕ್ಕುಗಳ ಬಗ್ಗೆ ಹೋರಾಡುತ್ತಾರೆಂಬ ಅವರ ಮೂದಲಿಕೆ ಸರಿಯಾದದ್ದೇ. ಅಜ್ಞಾನ ಮೌಢ್ಯ ನಿರಕ್ಷರತೆ ಜಾತೀಯತೆ ಅಸ್ಪೃಶ್ಯತೆ ದಾರಿದ್ರ್ಯ ಮೊದಲಾದ ಸಾಮಾಜಿಕ ವೈಪರೀತ್ಯಗಳು ಸಾಮುದಾಯಿಕ ದೌಷ್ಟ್ಯಗಳೆಂಬುದನ್ನು ಅವರಂಥ ವಿಚಾರವಾದಿಗಳು ಗಣನೆಗೆ ತೆಗೆದುಕೊಳ್ಳಬೇಕಾಗಿತ್ತು.

ಜಗತ್ತಿನ ಮಹಾನುಭಾವರು ಸಾಹಿತಿಗಳು ವಿಜ್ಞಾನಿಗಳು ತಮ್ಮ ಜೀವನಾನುಭವಗಳನ್ನು ಆತ್ಮಕಥೆಗಳ ರೂಪದಲ್ಲಿ ಬಿಟ್ಟುಹೋಗಿದ್ದಾರೆ. ಅಂಥ ಜೀವಂತ ಅನುಭವಗಳು ಮುಂದಿನ ಪೀಳಿಗೆಗಳಿಗೆ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ. ಸಾಮಾನ್ಯವಾಗಿ ಲೇಖಕರು ತಮ್ಮ ಆತ್ಮಕಥೆಗಳಲ್ಲಿ ದೋಷ ದೌರ್ಬಲ್ಯಗಳನ್ನು ಮುಚ್ಚುವುದೆ ಹೆಚ್ಚು. ಅಂಥವನ್ನು ಉತ್ತಮಕೃತಿಗಳೆಂದು ಹೇಳಲಾಗದು. ಕಾರಂತರೂ ಆತ್ಮಕಥೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿಯೂ ಈ ಮುನ್ನ ಕಾಣಿಸಿದ ಕೊರತೆಗಳಿವೆ ಎಂದೇ ಹೇಳಬೇಕಾಗಿದೆ. ಆದರೆ ಅವರಂಥ ಲೇಖಕರು ತಮ್ಮ ಕತೆ ಕಾದಂಬರಿ ನಾಟಕಗಳಲ್ಲಿ. ಅಲ್ಲಿ ಬರುವ ಪಾತ್ರಗಳ ಮೂಲಕ ತಮ್ಮ ದೌರ್ಬಲ್ಯಗಳನ್ನು ತೋರಿಸುವ ಅವಕಾಶ ಹೊಂದಿದ್ದಾರೆ ಎಂಬುದು ನಿಜ. ಆದರೆ ಆ ದೌರ್ಬಲ್ಯಗಳಲ್ಲಿ ಯಾವುದು ಅವರಿಗೆ ಅನ್ವಯುವಾಗುತ್ತದೆ, ಯಾವುದು ಆಗುವುದಿಲ್ಲ ಎಂದು ನಿರ್ಧರಿಸುವುದು ಬಲುಕಷ್ಟ. ಅವರ ಜೀವನವಾಹಿನಿಯನ್ನು ಮೊದಲಿಂದ ತುದಿಯವರೆಗೆ ಕಂಡವರು ಮಾತ್ರ ಅವನ್ನು ಗುರುತಿಸಬಲ್ಲರು. ತಮ್ಮ ದೌರ್ಬಲ್ಯಗಳನ್ನು ನೇರವಾಗಿ ಹೇಳಿಕೊಳ್ಳಲಾರದವರು ಆತ್ಮಕಥೆ ಬರೆಯದಿರುವುದೇ ಲೇಸು. ಸ್ವಪ್ರಶಂಸೆಗೆ ಮಾತ್ರವೇ ಮುಡಿಪಾದ ಆತ್ಮಕಥೆ ಆತ್ಮದ್ರೋಹದ, ಆತ್ಮವಂಚನೆಯ ವಿರೂಪದ ವಿಕೃತ ಕೃತಿಯಾಗುತ್ತದೆ.

ಅನ್ಯಾಯ ಅದಕ್ಷತೆಗಳ ಬಗೆಗಿನ ಅಸಹನೆ, ಸಿಡುಕು, ಆತ್ಮ ಪ್ರತ್ಯಯವನ್ನು ಮೀರಿದ ಅಹಂಭಾವ ಅವರ ದೌರ್ಬಲ್ಯಗಳೆಂಬುದನ್ನು ಅವರ ಸಂಪರ್ಕ ವಿರುವ ಎಲ್ಲರೂ ಬಲ್ಲರು. ಅವರ ಮಡದಿ ಲೀಲಾ ಕಾರಂತರೇ ಕೆಲವನ್ನು ಗುರುತಿಸಿದ್ದಾರೆ. 'ಅವರ ವಿಡಂಬನೆ ತುಸುವಕ್ರ, ಸ್ವಲ್ಪ ಕಠೋರ, ತೀಕ್ಷ್ಣ ವಿಮರ್ಶೆಯ ಕತ್ತಿಯಿಂದ ಇರಿದೇಬಿಡುತ್ತಾರೆ. ಮನಸ್ಸಿಗೆ ಬಂದ ಭಾವವನ್ನು ಹಾಗೆಯೇ ನುಡಿದುಬಿಡುತ್ತಾರೆ. ಬೇರೆಯವರ ನೋವಿನ ಮಾತು ಅವರಿಗೆ ತಿಳಿಯದು. ಮನಸ್ಸಿಗೆ ಬಾರದು ಇದರಿಂದ ಕಾರಂತರು ಒರಟು ಎಂಬ ಆರೋಪಕ್ಕೆ ಗುರಿಯಾಗಿದ್ದಾರೆ.[1] ಆದರೆ ಈ ಎಲ್ಲ ಸಿಟ್ಟಿನ ಗರ್ಭದಲ್ಲಿ ಮಿದುತನ, ಮಮತೆ, ವಾತ್ಸಲ್ಯ, ಕರುಣೆಗಳು ಅವಿತಿವೆ ಎನ್ನುವುದನ್ನು ಸಹ ಶ್ರೀಮತಿ ಕಾರಂತರು ಸ್ವತಃ ಕಂಡಿದ್ದಾರೆ.


ಕಾರಂತರಂಥ ಮಹಾವ್ಯಕ್ತಿಗಳ ಸಿಡುಕು, ಅಸಹನೆ, ಕೆಲವು ವ್ಯಾವಹಾರಿಕ ನ್ಯೂನತೆಗಳು ಖಂಡಿತವಾಗಿಯೂ ದೌರ್ಬಲ್ಯಗಳಲ್ಲ. ತಂದೆ ಮಗನನ್ನು ಶಿಕ್ಷಿಸುವಾಗ ಹಿನ್ನೆಲೆಯಲ್ಲಿ ವಾತ್ಸಲ್ಯವಿದೆಯೇ ಹೊರತು ಕ್ರೋಧವೂ ಅಲ್ಲ, ಮಾತ್ಸರ್ಯವೂ ಅಲ್ಲ. ದೇಶದ ಶುಭೋದಯದ ದೃಷ್ಟಿಯಿಂದಲೇ ಅವರು ಸಿಡುಕಬೇಕಾಗುತ್ತದೆ. ದೇಹದೊಳಗಣ ಪರಿಸ್ಥಿತಿಗೆ ಹೊರಗಣ ವಾತಾವರಣ ವೆಂತು ಕಾರಣವೊ ಅಂತೆಯೆ ಮಹಾವ್ಯಕ್ತಿಗಳ ಪ್ರತಿಕ್ರಿಯೆಗೆ ಸಮಾಜವೇ ಕಾರಣ. ಅನ್ಯಾಯ, ಅಸತ್ಯ, ಅಧರ್ಮ, ಅನೀತಿಯ ವಿರುದ್ಧವಾಗಿ ಸಿಡಿಯ ಬೇಕಾದ್ದು, ಬಂಡೇಳಬೇಕಾದ್ದು ಅವರ ಆದ್ಯ ಪವಿತ್ರ ಕರ್ತವ್ಯ. ಅಂದ ಮೇಲೆ ಅವು ಅವರ ದೌರ್ಬಲ್ಯಗಳು ಅವರ ಲೋಕಸಂಗ್ರಹ ಕಾರ್ಯದ ಒಂದು ಭಾಗವೆಂದೇ ತಿಳಿಯಬೇಕಾಗಿದೆ. ಗೂಳಿಕುಳದಂತೆ ಅವರು ಮುನ್ನುಗುವಾಗ ಸಂಭವಿಸಬಹುದಾದ ಕೆಲವು ಅಚಾತುರ್ಯಗಳನ್ನು ದೇಶ ಹಿತದೃಷ್ಟಿಯಿಂದ ಸಮಾಜ ಸಹಿಸಿಕೊಳ್ಳಬೇಕಾಗುತ್ತದೆ. ಕಾರಂತರಂಥ ವ್ಯಕ್ತಿ ಇಲ್ಲಿ, ಅಲ್ಲಿ, ಎಲ್ಲೆಲ್ಲು ಸಲ್ಲುತ್ತಾರೆ.


ನಾಡುನುಡಿಗಳ ಕೀರ್ತಿಯನ್ನು ಮುಗಿಲೆತ್ತರಕ್ಕೇರಿಸಿದ ಇಂಥ ಮಹಾವ್ಯಕ್ತಿಗೆ ಮಣಿಹ ಸಲ್ಲಿಸಬೇಕಾದ್ದು ಕೃತಜ್ಞ ಜನಾಂಗದ ಶ್ರೇಷ್ಠ ಕರ್ತವ್ಯ. ಅವರೊಡ ನಾಡಿದ, ಅವರನ್ನು ಹತ್ತಿರದಿಂದ ಬಲ್ಲ ಸಜ್ಜನರು ತಮಗೆ ಬಲ್ಲಂತೆ ಕಾರಂತರ ಬದುಕಿನ ಘಟನೆಗಳನ್ನು ಕುರಿತು ಲೇಖನಗಳನ್ನು ಬರೆದಿದ್ದಾರೆ, ಈ ವಿಶೇಷ ಸಂಚಿಕೆಯ ಯಶಸ್ಸಿಗೆ ಕಾರಣರಾಗಿದ್ದಾರೆ. ಅವರೆಲ್ಲರಿಗೂ ಸಂಪಾದಕ ಮಂಡಲಿಯ ಹಾಗೂ ವಯಸ್ಕರ ಶಿಕ್ಷಣ ಸಮಿತಿಯ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ದೇಜಗೌ

[1] ಮಲ್ಲಿಗೆ (ಮಾಸಪತ್ರಿಕೆ), ಫೆಬ್ರುವರಿ ೧೯೭೮, ಪ್ರ.ಸಂ. ಕೆ. ಸಿ. ಶಿವಪ್ಪ, ಪುಟ ೩೧.

ಪುಸ್ತಕ ಪ್ರಪಂಚಕ್ಕೆ ಲೇಖನ ಕೋರಿದಾಗ ಎರಡೇ ದಿನದಲ್ಲಿ ಕಾರಂತರಿಂದ ಬಂದ ಉತ್ತರ







ವಿ. ಸೀ, ಶಂ. ಬಾ. ಜೋಶಿ ಮತ್ತು ದ. ಬಾ ಅವರೊಡನೆ ಕಾರಂತರು



ಅಧ್ಯಯನ ನಿರತ ಕಾ

ವಿದ್ಯಾಸಾಗರ

ಡಾ॥ ದೇ. ಜವರೇಗೌಡ
ವಿಶ್ರಾಂತ–ಕುಲಪತಿಗಳು
'ಕಲಾ ನಿಲಯ', ಕಾಳಿದಾಸ ರಸ್ತೆ
ಜಯಲಕ್ಷ್ಮೀಪುರ, ಮೈಸೂರು–೫೭೦ ೦೧೨

ಬೆಟ್ಟದ ಜೀವ, ಮರಳಿ ಮಣ್ಣಿಗೆ ಮತ್ತು ಬಾಲಪ್ರಪಂಚಗಳನ್ನು ಓದಿದ ನಂತರ ಅವುಗಳ ಕರ್ತಾರ, ಕಡಲ ಕರೆಯ ಭಾರ್ಗವ, ಸಾಹಿತ್ಯ ಪ್ರಪಂಚದ ವಿಶ್ವರೂಪಿಯನ್ನು ನೋಡುವ ಕುತೂಹಲ ಮನಸ್ಸಿನ ಮೂಲೆಯಲ್ಲಿ ಒದ್ದಾಡುತ್ತಿತ್ತು. ಅವರನ್ನೂ ಮತ್ತು ಮಂಜೇಶ್ವರದ ಗೋವಿಂದ ಪೈ ಅವರನ್ನೂ ನೋಡಬಹುದೆಂಬ ಏಕಮಾತ್ರ ಆಸೆಯಿಂದಲೇ ನಾನು ಕಾಸರಗೋಡಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋದದ್ದು. ನಡುಹಾದಿಯ ಪುತ್ತೂರಿನಲ್ಲಿ ಬಸ್ಸಿಳಿದು ಶಿವರಾಮ ಕಾರಂತರ ಕಾಡು ಮನೆಗೆ, ಆದಷ್ಟು ಜಾಗ್ರತೆ ಅವರನ್ನು ನೋಡುವ ಸಲುವಾಗಿ, ದಾರಿ ಕೇಳಿಕೊಂಡು ನಡೆದುಹೋದೆ. ಮಧ್ಯಾಹ್ನದ ಮಾಗಿಯ ಬಿಸಿಲು ಸುಡುತ್ತಿತ್ತು. ಕಾರಂತರು ಮನೆಯಲ್ಲಿರಲಿಲ್ಲ. ಅವರ ಮೃಗಾಲಯದ ಕಡೆಗೆ ತುಸು ಕಣ್ಣು ಹೊರಳಿಸಿ, ಬಸ್ಸು ನಿಲ್ದಾಣಕ್ಕೆ ಮತ್ತೆ ಹಿಂದಿರುಗಿದೆ. ಆ ಮೃಗಾಲಯ ಆ ಹೊತ್ತಿಗಾಗಲೆ ಕ್ಷೀಣಿಸುತ್ತಿತ್ತೆಂದು ನನ್ನ ನೆನಪು.

ಕಾಸರಗೋಡಿನಲ್ಲಿ ಕಾರಂತರನ್ನು ಕಂಡ ನೆನಪಿಲ್ಲ. ಅವರನ್ನು ನೋಡದೆ ಹಿಂದಿರುಗಿದ ಅತೃಪ್ತಿ ಮನಸ್ಸಿನಲ್ಲಿ ಬಹುದಿನದ ತನಕ ಮನೆಮಾಡಿಕೊಂಡಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಕೃತಿಕ ವಾತಾವರಣವನ್ನು ನೋಡಿದ ನಂತರ ಮತ್ತೊಮ್ಮೆ ಹಿಂದೆ ಓದಿದ್ದ ಕಾದಂಬರಿಗಳನ್ನು ಕೈಗೆತ್ತಿಕೊಂಡಾಗ ಅವು ನನಗೆ ಹೊಸದಾಗಿ ತೋರಿದುವು. ಆ ಕಾದಂಬರಿಗಳಲ್ಲಿ ಬರುವ ಒಂದೊಂದು ಸಂಗತಿಯೂ ಕಲ್ಪನಾನುಭವವಾಗಿರದೆ ಕಟು ವಾಸ್ತವಾನುಭವವಾಗಿ ನನಗೆ ಕಂಡಿತು. ಆ ಪ್ರವಾಸದಿಂದೊದಗಿದ ಸಮಾಧಾನ ಇದೂ ಒಂದು. ಅನಂತರ ಸರಾಸರಿ ವರ್ಷಕ್ಕೊಮ್ಮೆಯಾದರೂ ಆಕಡೆಗೆ ಹೋಗಿದ್ದೇನೆ. ಅನೇಕ ಸಾರಿ ಅವರ ವನಕುಟಿಗೂ ಹೋಗಿದ್ದೇನೆ. ಮತ್ತೊಮ್ಮೆ ನಾನವರ ಮನೆಗೆ ಹೋದದ್ದು ಆಪ್ತಮಿತ್ರರಾದ ಶ್ರೀಮಾನ್ ಹರಿದಾಸ ಭಟ್ಟರೊಡನೆ. ಸಂಧ್ಯಾ ಸಮಯದಲ್ಲೆಂದು ನನ್ನ ನೆನಪು. ಬೆಟ್ಟದ ತೊಡೆಯ ಮೇಲೆ ಕುಳಿತಿರುವ ಅವರ ಮನೆಗೆದುರಿನ ಬಾನಿನಲ್ಲಿ ಪೂರ್ವ ದಿಗ್ದೇವತೆಯ ಚಂದನದ ಬೊಟ್ಟಿನಂತೆ ಮೂಡುತ್ತಿದ್ದ ಚಂದ್ರಬಿಂಬವೂ, ಚಂದ್ರಿಕೆಯಲ್ಲಿ ಮಲಗಿ ನಿದ್ರಿಸುತ್ತಿದ್ದ ಬೆಟ್ಟ ಕಾಡುಗಳ ದೃಶ್ಯವೂ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ. ಆ ದಿನವೂ ಸದಾ

ಪರ್ಯಟನಶೀಲರಾದ ಕಾರಂತರನ್ನು ಮನೆಯಲ್ಲಿ ಕಾಣಲಿಲ್ಲ.

ಮೊಟ್ಟಮೊದಲಿಗೆ ಅವರನ್ನು ನೋಡಿದ್ದು ಮೈಸೂರಿನ ಉಷಾ ಪ್ರೆಸ್ಸಿನ ಮಹಡಿಯ ಮೇಲೆ, ಶ್ರೀ ಹಬ್ಬು ಅವರ ಮನೆಯಲ್ಲಿ ಎಂದು ನನ್ನ ನೆನಪು. ನನ್ನನ್ನವರಿಗೆ ಯಾರೊ ಪರಿಚಯ ಮಾಡಿಕೊಟ್ಟಾಗ ಗಡಸುದನಿಯಲ್ಲಿ 'ಊಹ್ಞೂ' ಎಂದು ನನ್ನ ಕಡೆಗೊಮ್ಮೆ ಕಣ್ಣು ಹೊರಳಿಸಿ ಕೂಡಲೆ ಅನ್ಯ-ಮನಸ್ಕರಾಗಿ ಕುಳಿತದ್ದುಂಟು. ನಾನಾಗಿಯೆ ಮೇಲೆಬಿದ್ದು ಯಾರನ್ನೂ ಮಾತಾಡಿಸದ ಸ್ವಭಾವವುಳ್ಳ ನಾನು ಮಾತುಕತೆಯಿಲ್ಲದೆ ತುಟಿಹೊಲಿದುಕೊಂಡು ಕುಳಿತೆ. ಪಕ್ಕದಲ್ಲಿದ್ದ ಮಿತ್ರರು ಅವರೊಡನೆ ಮಾತಾಡುವುದನ್ನೂ ಅವರ ಚುಟುಕು ಉತ್ತರವನ್ನೂ ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದೆ. ಅವರ ಮಾತಿನಲ್ಲೆಂತೊ ಅವರ ಮುಖಭಾವದಲ್ಲಿಯೂ ಗಡಸುತನ, ಗಾಂಭೀರ್ಯ, ನಿಷ್ಠುರತೆ ಮತ್ತು ಬಿಂಕಬಿಗುಮಾನಗಳು ಮನಸ್ಸಿಗೆ ಬಡಿಯುವಂತೆ ಕಾಣುತ್ತಿದ್ದುವು. ಮಟ್ಟಸ ಎತ್ತರದ ತೆಳು ಮೈಯ ಆ ವ್ಯಕ್ತಿ ತುಂಬ ದಢೂತಿಯಾಗಿದ್ದಂತೆ ನನಗೆ ಭಾಸವಾಗುತ್ತಿತ್ತು. ಅವರ ಮುಖಕಾಂತಿಯ ಪ್ರಭಾವಳಿಯಲ್ಲಿ ಸುತ್ತಮುತ್ತಣ ಜನರ ನೋಟ ಸೆರೆಗೊಂಡಿತ್ತು. ಅವರ ಆತ್ಮಶಕ್ತಿ ಆತ್ಮಪ್ರತ್ಯಯ ಮತ್ತು ಕುಶಾಗ್ರಮತಿ ಅವರ ನುಡಿಪುಟಿಕೆಗಳಲ್ಲಿ ಆಸ್ಫೋಟಗೊಳ್ಳುತ್ತಿದ್ದುವು. ತುಂಬ ಬಿಗುಮಾನಿಗಳೆಂದು, ಪ್ರತಿಷ್ಠಾವಂತರೆಂದು, ನಿಷ್ಠುರರೆಂದು ತೋರುತ್ತಿದ್ದರೂ ಅವರ ಬಗೆಗೆ ಅಗೌರವ ಮೂಡುವಂತಿರಲಿಲ್ಲ.

ಅಲ್ಲಿಂದೀಚೆಗೆ ಅವರನ್ನು ಅನೇಕಬಾರಿ ನೋಡಿದ್ದೇನೆ; ಹತ್ತಿರದಲ್ಲಿ ನಿಂತು ಅವರ ಮಾತು ಕೇಳಿದ್ದೇನೆ; ವೇದಿಕೆಗಳಿಂದ ಅವರ ಭಾಷಣಗಳನ್ನು ಆಲಿಸಿದ್ದೇನೆ; ಅವರ ಕೃತಿಗಳನ್ನು ಓದಿ ಸಂತುಷ್ಟಿಗೊಂಡಿದ್ದೇನೆ; ಕರ್ಣಾಟಕದ, ಮಾತ್ರವಲ್ಲ ಇಡೀ ಭರತಖಂಡದ ಮಹಾ ಮೇಧಾವಿಗಳ ಸಾಲಿನಲ್ಲಿ ಅಗ್ರಸ್ಥಾನಕ್ಕೆ ಯೋಗ್ಯರಾದವರೆಂದು ಮೆಚ್ಚಿಕೊಂಡಿದ್ದೇನೆ. ಆದರೂ ಅವರು ಗಂಟುಮೋರೆಯುವರೆಂಬ, ನಿಷ್ಠುರರೆಂಬ, ಕಠಿನಹೃದಯರೆಂಬ ಭಾವನೆ ಮನಸ್ಸಿನಿಂದ ಪೂರ್ತಿಯಾಗಿ ಜಾರಿಹೋಗಲಿಲ್ಲ. ಅವರು ಇಂಗ್ಲಿಷ್–ಕನ್ನಡ ಕೋಶದ ಪರಿಷ್ಕರಣ ಸಮಿತಿಯ ಸದಸ್ಯರಾದ ನಂತರ, ತೀರ ಹತ್ತಿರದಿಂದ ಅವರನ್ನು ನೋಡುವ ಸದವ-ಕಾಶವೊದಗಿ, ಅವರನ್ನು ತಕ್ಕಮಟ್ಟಿಗೆ 'ಕಂಡು'ಕೊಳ್ಳುವ ಪುಣ್ಯ ಲಭಿಸಿದೆ.

ಅವರು ಮೇಲ್ಕಂಡ ಪರಿಷ್ಕರಣ ಸಮಿತಿಯ ಸದಸ್ಯರಾಗಬಾರದೆಂದು ನಮ್ಮಲ್ಲಿ ಕೆಲವರ ಹಾರೈಕೆಯಾಗಿತ್ತು. ಅವರು ಬಹುಜನಾಭಿಪ್ರಾಯಕ್ಕೆ ಮಣಿಯು... ವವರಲ್ಲ; ತಾವು ಹಿಡಿದ ಮೊಲಕ್ಕೆ ಎರಡಲ್ಲ ನಾಲ್ಕು ಕೊಂಬುಂಟೆಂದು ವಾದಿಸುವ ಹ... ಸ್ವಭಾವದವರು; ಸರ್ವಾಧಿಕಾರ ಮನೋ... ಭಾವವುಳ್ಳವರು; ಎಲ್ಲೆಲ್ಲೂ ತಮ... ಅಭಿಪ್ರಾಯವೇ ಮೇಲುಗೈಯಾಗಬೇಕೆಂ... ಸೆಣಸುವವರು; ಅವರು ಹಾಜರಿದ್ದೆಡೆ ಕಾ... ಕಲಾಪಗಳು ಸುಸೂತ್ರವಾಗಿ ಜರುಗದಿ... ಬಹುದು; ಈ ಕಾರಣಗಳಿಂದ ಆ ಸಮಿ... ಯಲ್ಲಿ ಅವರಿಲ್ಲದಿರುವುದೇ ಮೇಲೆಂದು ನಾ... ಕೆಲವರು ಯೋಚಿಸಿಕೊಂಡಿದ್ದೆ... ಅನಿವಾರ್ಯವಾಗಿ ಸದಸ್ಯರ ಪಟ್ಟಿಯಲ್ಲಿ ಅ...

ಹೆಸರು ಸೇರ್ಪಡೆಯಾಗಿ, ವಿಶ್ವವಿದ್ಯಾನಿಲಯದಿಂದ ಆ ಪಟ್ಟಿಯು ಅಂಗೀಕೃತವಾಗಿ ಬಂದಾಗ ನಿಘಂಟುವಿನ ಶ್ರೇಯಸ್ಸಿನ ಬಗೆಗೆ ನಾನಂತು ಬಹುದಿನಗಳ ತನಕ ಸಂಶಯಗ್ರಸ್ತನಾಗಿದ್ದೆ. ಇದೆಲ್ಲ ಹುಸಿಕಲ್ಪನೆಯೆಂದೂ, ಆ ಕಲ್ಪನೆಗೆ ನಮ್ಮ ಮನೋವಿಕಾರವೇ ಕಾರಣವೆಂದೂ ತಿಳಿಯಲು ಬಹುದಿನ ಬೇಕಾಗಲಿಲ್ಲ. ಪರಿಷ್ಕರಣ ಸಮಿತಿಯ ಒಂದೆರಡು ಸಭೆಗಳಲ್ಲಿಯೇ ಕಾರಂತರ ನಿಜ ಸ್ವಭಾವ ತಿಳಿದು, ಹಿಂದಿನ ಭಾವನೆಗಳೆಲ್ಲ ಕಂತುಹೋದದ್ದಲ್ಲದೆ, ಕಾರಂತರನ್ನು ತಪ್ಪು ತಿಳಿದುಕೊಂಡಿದ್ದಕ್ಕಾಗಿ ತುಂಬ ಪಶ್ಚಾತ್ತಾಪಪಟ್ಟಿದ್ದೇನೆ.

ಪರಿಷ್ಕರಣ ಸಮಿತಿಯ ಸಭೆ ತಿಂಗಳಿಗೊಂದು ಬಾರಿ ನಾಲ್ಕು ದಿನ ಒಂದೇ ಸಮನೆ ಮೈಸೂರಿನಲ್ಲಿ ಸೇರುತ್ತದೆ. ಬೆಳಗ್ಗೆ ಹನ್ನೊಂದು ಗಂಟೆಗೆ ಸಭೆ ಶುರುವಾದರೆ ಮುಗಿಯುವುದು ಅಪರಾಹ್ನ ಐದು ಗಂಟೆಗೆ. ಆರು ಗಂಟೆಯೆಂದರೆ, ೬–೬೦ ನಿಮಿಷ ಸಭೆಯ ಕಾರ್ಯಕಲಾಪಗಳು, ಬೇರಾವ ಅಡ್ಡದಾರಿಗೂ ಅವಕಾಶವಿಲ್ಲದೆ ಜರುಗುತ್ತವೆ. ಕಾರಂತರು ಈ ಸಭೆಗೆ ಎಂದೂ ತಪ್ಪಿಸಿಕೊಂಡವರಲ್ಲ. ದೇವರ ತಲೆಯ ಮೇಲೆ ಹೂ ತಪ್ಪೀತು, ಆದರೆ ಈ ಸಭೆಗೆ ಕಾರಂತರ ಹಾಜರಿ ತಪ್ಪುವುದಿಲ್ಲ. ಒಮ್ಮೆಯೋ ಇನ್ನೊಮ್ಮೆಯೋ ದೇಶದ ಹೊರಗಡೆ ಹೋದಾಗ ಮಾತ್ರ ಅವರ ಗೈರುಹಾಜರಿ ಎದ್ದು ಕಾಣುತ್ತದೆ. ಆ ಕಾಲದಲ್ಲಿ ಸಭೆ ಬಿಕೊ ಎನ್ನುತ್ತದೆ. ಅವರಂತೆ ಎತ್ತರದ ದನಿಯಲ್ಲಿ ಮಾತಾಡುವ ಸಮರ್ಥರಾಗಲಿ, ಅವರಂತೆ ಆಗಾಗ್ಗೆ ಹಾಸ್ಯದ ಚಟಾಕಿಯನ್ನೆಸೆಯುವ ಗತ್ತುಗಾರರಾಗಲಿ, ಪಾದರಸದಂತೆ ಬುದ್ಧಿಯನ್ನು ಹರಿಸುವ, ಬಹುಶ್ರುತರಂತೆ ಅಧಿಕಾರಯುತವಾಗಿ ಮಾತಾಡುವ ಧೀಮಂತರಾಗಲಿ ಸಭೆಯಲ್ಲಿಲ್ಲ. ಅವರೆಂದೂ ಸಭೆಗೆ ಒಂದು ಸೆಕೆಂಡು ತಡವಾಗಿ ಬಂದವರಲ್ಲ; ಐದು ಗಂಟೆಯ ನಂತರ ಒಂದು ನಿಮಿಷವೂ ಕುಳಿತವರಲ್ಲ; ಆರು ಗಂಟೆಗಳ ದೀರ್ಘಾವಧಿಯಲ್ಲಿ ಅರುವತ್ತೆಂಟು ವಯಸ್ಸಿನ ಆ ಕಠೋರ ಸಂಯಮಿ ಬಳಲಿಕೆಯಿಂದ ಎಂದೂ ಮೈಮುರಿದವರಲ್ಲ, ಆಕಳಿಸಿದವರಲ್ಲ; ಅಂಗಾಂಗಗಳನ್ನು ಕೊಕ್ಕರಿಸಿದವರಲ್ಲ, ನಡು ಬಗ್ಗಿಸಿದವರಲ್ಲ; ಒಂದು ನಿಮಿಷವನ್ನೂ ಪೋಲುಮಾಡಿದವರಲ್ಲ. ಸಭೆ ಮುಗಿದ ನಂತರವೂ ಬೇಕಾದರೆ ಎರಡು ಗಂಟೆ ಭಾಷಣ ಮಾಡಬಲ್ಲರು. ಇತರರೂ ಅನ್ಯಮನಸ್ಕರಾಗದಂತೆ ಸಮಯ ಹಾಳು ಮಾಡದಂತೆ ಎಚ್ಚರವಹಿಸಿದವರು. ಯಾರು ಬರಲಿ ಬರದಿರಲಿ ನಿಘಂಟಿನ ಕಾರ್ಯ ಮಾತ್ರ ಸಕಾಲಕ್ಕೆ ಶುರುವಾಗುತ್ತದೆ.

ವಿಶ್ವವಿದ್ಯಾನಿಲಯದ ಆದರ್ಶ ಮಹಾಪ್ರಾಧ್ಯಾಪಕನಲ್ಲಿರಬೇಕಾದ ಗುಣಗಳೆಲ್ಲ ಅವರಲ್ಲಿ ಮಡುಗೊಂಡಿವೆ. ನಿಘಂಟುವಿನ ಕರಡನ್ನು ಮುಂದಾಗಿ ಪರಿಶೀಲಿಸದೆ, ನಾಲ್ಕಾರು ಕೋಶಗಳ ಸಹಾಯದಿಂದ ಟಿಪ್ಪಣಿ ಮಾಡಿಕೊಳ್ಳದೆ, ಕೈಬೀಸಿಕೊಂಡು ಅವರೆಂದೂ ಸಭೆಗೆ ಬಂದವರಲ್ಲ. ಆಮೂಲಾಗ್ರವಾದ ಸಂಶೋಧನೆ, ಸ್ವತಂತ್ರವಾದ ಆಲೋಚನೆ, ಸತ್ಯನಿಷ್ಠೆ ಇವು ಅವರ ವಿದ್ವತ್ತಿನ ವಿಶಿಷ್ಟ ಲಕ್ಷಣಗಳು. ಯಾವ ಪದ ತೆಗೆದುಕೊಂಡರೂ ಸಂಪೂರ್ಣವಾಗಿ ಜಾಲಾಡಿಸುತ್ತಾರೆ. ಅಚ್ಚಗನ್ನಡದಲ್ಲಿಯೇ ಶಬ್ದಗಳನ್ನು ಸೃಷ್ಟಿಸುವಲ್ಲಿ ವ್ಯಕ್ತವಾಗುವ ಪ್ರತಿಭೆ, ಅವರ ಬುದ್ಧಿಯ ಹರಿತ ಎಂಥ

ಮೇಧಾವಿಯನ್ನಾದರೂ ದಂಗುಬಡಿಸುವಂತ ಹುದು. ಪ್ರತಿಯೊಂದು ಇಂಗ್ಲಿಷ್ ಪದಕ್ಕೂ ಕನ್ನಡಪದವನ್ನು ಜೋಡಿಸುವ ಚಟ ಅವರದು. ಆ ಪದ ನಿರ್ದುಷ್ಟವಾಗಿರಬೇಕು, ಶ್ರವಣಸುಭಗವಾಗಿರಬೇಕು, ಸರ್ವಗ್ರಾಹ್ಯವಾಗಿರಬೇಕು ಎನ್ನುವುದನ್ನು ಮಾತ್ರ ಅವರು ಸದಾ ನೆನಪಿನಲ್ಲಿಟ್ಟಿರುತ್ತಾರೆ. ಅರ್ಥವಾಗದ, ಸುಲಭವಾಗಿ ಉಚ್ಚರಿಸಲಾಗದ ಪದಗಳನ್ನು ಹೇರುವುದರ ಬದಲು ಇರುವ ಕನ್ನಡ ಪದಗಳಿಗೆ ನಿಷ್ಪನ್ನ ಪ್ರತ್ಯಯಗಳನ್ನು ಸೇರಿಸಿಕೊಂಡು ಹೊಸ ಮಾತುಗಳನ್ನು ಸೃಷ್ಟಿಸಿಕೊಳ್ಳಬೇಕೆಂಬುದರ ಕಡೆಗೆ ಅವರ ಒಲವು ಜಾಸ್ತಿ. ಕನ್ನಡದಲ್ಲಿ ಭಾವವಾಚಕ, ಕೃದಂತ ಹಾಗೂ ತದ್ಧಿತಾಂತ ಪ್ರತ್ಯಯಗಳು ಎಷ್ಟಿಲ್ಲ; ಅವನ್ನೇಕೆ ನೂತನ ಪದಸೃಷ್ಟಿಗೆ ಬಳಸಿಕೊಳ್ಳಬಾರದು? ಅವೂ ಸಾಲದೆ ಬಂದರೆ ಹಿಂದೂಸ್ಥಾನಿ ಅರಬ್ಬೀ ಭಾಷೆಗಳ ಪ್ರತ್ಯಯಗಳ ಪ್ರಯೋಜನವನ್ನೇಕೆ ಪಡೆದುಕೊಳ್ಳಬಾರದು? ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಆಸಕ್ತರಾಗಿರುವ ಜನ ಈ ಅಭಿಪ್ರಾಯಗಳನ್ನು ಹಿಂದು ಮುಂದು ನೋಡದೆ ಅಂಗೀಕರಿಸಬಹುದಾಗಿದೆ. ಇಷ್ಟೇ ಅಲ್ಲ. ಆಂಗ್ಲಭಾಷೆಯ ಪ್ರತ್ಯಯಗಳನ್ನೂ ಉಚಿತವರಿತು ನಮ್ಮವನ್ನಾಗಿ ಮಾಡಿಕೊಳ್ಳಬೇಕೆಂಬುದೇ ನನ್ನ ಅಭಿಪ್ರಾಯ. ಸಂಪ್ರದಾಯಶರಣರ ಮತಿಗೆ ಈ ಮಾತು ಹಿಡಿಸದು. 'signatory' ಅನ್ನುವ ಮಾತಿಗೆ 'ರುಜುಗಾರ' ಪದವನ್ನೇಕೆ ಬಳಸಬಾರದು. 'ಬೇಜವಾಬ್ದಾರಿ'ಯಿದ್ದಂತೆ 'ಬೇನಿಷ್ಠೆ' ಆಗಬಾರದೇಕೆ? 'ಮಡಿವಳ' ಆಗಬಹುದಾದರೆ 'ಸೊಗವಳ' (aesthetician) ಆಗಬಾರದೇಕೆ? 'ಆಡಿತ' ಆಗಬಹುದಾದರೆ 'ಮಾಡಿತ' ಆಗಬಾರದೆ? 'ಶಬ್ದಪಾರಮಾರ್ಗಮಸಾಧ್ಯಂ' ಎಂದು ಕೇಶಿರಾಜ ಹೇಳಿದ. ಆದರೆ ಎಂದೋ ಅವನು ಟಂಕಿಸಿದ ನಾಣ್ಯಗಳು ಮಾತ್ರ ಚಲಾವಣೆಗೆ ಬರಬೇಕು. ಹೊಸ ನಾಣ್ಯಗಳನ್ನು ಟಂಕಿಸಿಕೊಳ್ಳಬಾರದೆನ್ನುವ ಸಂಪ್ರದಾಯಶರಣರು ಭಾಷಾದ್ರೋಹಿಗಳೇ ಹೊರತು ಭಾಷಾಭಿಮಾನಿಗಳಲ್ಲ.

ಅವರ ಬುದ್ಧಿಯ ಪ್ರಖರತೆಯನ್ನು ಶಬ್ದಸೃಷ್ಟಿ ಸಮಯದಲ್ಲಿ ನೋಡಬೇಕು. ಒಂದು ಇಂಗ್ಲಿಷ್ ಪದ ಭೂತಾಕಾರವಾಗಿ ಮುಂದೆ ನಿಂತಾಗ ಪುಂಖಾನುಪುಂಖವಾಗಿ ಅಚ್ಚ-ಗನ್ನಡದ ಶಬ್ದಗಳನ್ನೆಸೆದು ಅದನ್ನೆದುರಿಸುತ್ತಾರೆ. ಆ ಸಂದರ್ಭದಲ್ಲಿ ಅವರು ಯೋಚನೆ ಮಾಡುವಂತೆಯೇ ತೋರುವುದಿಲ್ಲ. ಮುಂದೆ ಕುಳಿತವರಿಗೆ ಅವರ ಅಂತರ್ವಾಣಿ ನುಡಿಯುತ್ತಿರುವಂತೆ ಸರಸ್ವತಿಯೇ ಮಾತಾಡುತ್ತಿರುವಂತೆಯೇ ಕಾಣುತ್ತದೆ. ಅವರ ಜ್ಞಾಪಕಶಕ್ತಿಯೋ ಅಗಾಧ. ಸಹಸ್ರ ಸಹಸ್ರ ಬಳಕೆಯ ಮಾತುಗಳು ಅವರ ನೆನಪಿನ ಬೊಕ್ಕಣದಲ್ಲಿವೆ. ಸಮಯ ಒದಗಿದಾಗ ಅವು ಅಪ್ರಯಾಸವಾಗಿ ಶಿಸ್ತಿನ ಸಿಪಾಯಿಗಳಂತೆ ಕವಾಯತು ನಡೆಸುತ್ತವೆ. ಕನ್ನಡದ ನಾನಾ ಉಪಭಾಷೆಗಳಲ್ಲಿಯ ಮಾತುಗಳೆಲ್ಲ ಅವರಿಗೆ ಕರತಲಾಮಲಕವಾಗಿವೆ. ಒಮ್ಮೆ ಅವರ ಕಿವಿಯ ಮೇಲೆ ಬಿದ್ದ ಮಾತು ನೆನಪಿನ ಕೋಶದಲ್ಲಿ ನೆಲೆಯೂರುವಂತೆ ಕಾಣುತ್ತದೆ.

ಕಾರಂತರು ಯಾವ ಸ್ನಾತಕೋತ್ತರ ಸಂಸ್ಥೆಯಲ್ಲಿಯೂ ಶಿಕ್ಷಣ ಪಡೆಯ... ನಾಲ್ಕಾರು ವಿಷಯಗಳಲ್ಲಿ ಯಾ... ಪ್ರಾಧ್ಯಾಪಕನನ್ನಾದರೂ ಮೀರಿಸುವಂ...

ಪಾಂಡಿತ್ಯವನ್ನು ಗಳಿಸಿದ್ದಾರೆ. ಪ್ರಾಣಿಶಾಸ್ತ್ರವೆ, ಸಸ್ಯಶಾಸ್ತ್ರವೆ, ಮಾನವಶಾಸ್ತ್ರವೆ, ಕಲಾವಿದ್ಯೆಯೆ, ಶಿಲ್ಪಶಾಸ್ತ್ರವೆ—ಈ ಎಲ್ಲ ಶಾಖೆಗಳಲ್ಲಿಯೂ ನಿರ್ದುಷ್ಟವೂ ಸಿಖರವೂ ಆದ ಜ್ಞಾನವನ್ನವರು ವಶಪಡಿಸಿಕೊಂಡಿದ್ದಾರೆ. ಆಫ್ರಿಕಾಖಂಡದ ಯಾವುದೋ ದೂರದ ಕಾಡಿನ ಮೂಲೆಯಲ್ಲಿ ಅಥವಾ ಪೆಸಿಫಿಕ್ ಸಾಗರದ ಗರ್ಭಾಂತರಾಳದಲ್ಲಿ ನಿವಾಸಿಯಾಗಿರುವ ಭೂಜಲಚರಗಳ ಗುಣ ಸ್ವಭಾವ, ಗಾತ್ರರಚನೆಗಳ ಅತ್ಯಂತ ಸೂಕ್ಷ್ಮಗಳನ್ನೆಲ್ಲ ಚೆನ್ನಾಗಿ ಬಲ್ಲರು. ಅದನ್ನು ಸಂಪೂರ್ಣವಾಗಿ ವರ್ಣಿಸಿ ಇದಕ್ಕೆ ಈ ಹೆಸರು ಸಲ್ಲದು, ಆ ಹೆಸರು ಇರಬಹುದೇನೊ ಎಂದು ಸ್ಪಷ್ಟಪಡಿಸುತ್ತಾರೆ. ಹಕ್ಕಿಗಳ ವಿಷಯವೂ ಅಷ್ಟೆ, ಸಸ್ಯಗಳ ವಿಷಯವೂ ಅಷ್ಟೆ. ಸೂಕ್ಷ್ಮಾತಿಸೂಕ್ಷ್ಮವಾದ ಭಾವನೆಗಳನ್ನು ಹೆಸರಿಸುವಾಗಲೂ ತಡೆಬಡೆಯಿಲ್ಲದೆ ಮಾತುಗಳು ಹೊರಹೊಮ್ಮುತ್ತವೆ. ನಾವು ಯಾರುಯಾರನ್ನೊ ಅಭಿಮಾನಕ್ಕೆ ಜಂಗಮ ವಿಶ್ವಕೋಶವೆಂದು ಕರೆಯುವುದುಂಟು. ನನಗೆ ತಿಳಿದಮಟ್ಟಿಗೆ ಈ ಮಾತು ಇವರೊಬ್ಬರಿಗೇ ಅನ್ವಯಿಸತಕ್ಕದ್ದು. ಅವರಂತೆ ವಸ್ತುವಿನ ಹಾಗೂ ಮಾತಿನ ರಹಸ್ಯವನ್ನು ಕೆದಕಿ ಬೆದಕಿ ಅವೆರಡಕ್ಕೂ ಅನ್ಯೋನ್ಯ ಸಂಬಂಧವನ್ನು ಕಲ್ಪಿಸುವ ಸಾಮರ್ಥ್ಯವುಳ್ಳವರು ಕಡಿಮೆ. ಇವರು ನಿಜಕ್ಕೂ ಶಬ್ದಬ್ರಹ್ಮರು.

ಅವರ ಜ್ಞಾನ ಕೇವಲ ಪುಸ್ತಕದ ಬದನೆಕಾಯಿಯಲ್ಲ; ಬರಿಯ ಪರಾನುಕರಣೆಯಲ್ಲ; ಅವರಿವರ ಎಂಜಲಲ್ಲ. ಸ್ವತಂತ್ರ ವಿಚಾರ ಶಕ್ತಿ, ಆಲೋಚನಾ ಸಾಮರ್ಥ್ಯ ಮತ್ತು ಸ್ವಯಂ ವೀಕ್ಷಣೆಯಿಂದ ಲಭ್ಯವಾದದ್ದು. ತಮ್ಮ ಕಣ್ಣೆದುರಿನ ಪ್ರತಿಯೊಂದು ವಸ್ತುವನ್ನೂ ಆಮೂಲಾಗ್ರವಾಗಿ ವಿಚಿಕಿತ್ಸಕ ದೃಷ್ಟಿಯಿಂದ ವಿಶ್ಲೇಷಣಮನೋಭಾವದಿಂದ ನೋಡುತ್ತಾರೆ; ನೋಡಿದುದನ್ನೆಲ್ಲ ಸ್ಪಷ್ಟವಾಗಿ ಗ್ರಹಿಸುತ್ತಾರೆ. ಸಪ್ತಸಾಗರಗಳೂ ಅವರ ಜ್ಞಾನತೃಷೆಯನ್ನು ಅಡಗಿಸಲಾರವು; ಪ್ರಳಯ ಮೇಘವೂ ಅವರ ಕುತೂಹಲಾಸಕ್ತಿಗಳನ್ನು ನಂದಿಸಲಾರದು; ಚತುರ್ದಶ ಭುವನಗಳೇ ಅವರ ಸಾಹಸಕ್ಕೆ ಮೇರೆ. ಅವರು ನಿಂತೆಡೆ ನಿಲ್ಲರು; ಕುಳಿತೆಡೆ ಕೂಡರು. ಒಂದು ರೀತಿಯಲ್ಲಿ ಅವರು ನಿರಂತರ ಯಾತ್ರಿಗಳು, ಸಾಹಸೋನ್ಮುಖ ಪರಿವ್ರಾಜಕರು. ತಿ. ನರಸೀಪುರವಾಗಬಹುದು, ಕೊಡಗಿನ ಕೊಂಪೆಯಾಗಬಹುದು, ಕಾಬೂಲಿನ ಮೂಲೆಯಾಗಬಹುದು—ಎಲ್ಲಿಯೆ ಆಗಲಿ ಪುರಾತನ ಪ್ರತಿಮೆಯೊ ಮಡಕೆಯೊ ಮೂಳೆಯೊ ಇದ್ದಿತೆಂದರೆ ಅಲ್ಲಿಗೆ ನಾಗಾಲೋಟದಲ್ಲಿ ಬಿದ್ದಂಬೀಳ ಓಡುತ್ತಾರೆ. ಅದನ್ನು ನೋಡುವ ತನಕ ಅವರ ಮನಸ್ಸು ತಣಿಯದು, ಕಾಲು ದಣಿಯದು. ಯಾವ ವಸ್ತುವನ್ನೆ ಆಗಲಿ ಅವರು ನೋಡುವ ರೀತಿಯೆ ಬೇರೆ; ಆ ವಸ್ತುವಿನಲ್ಲಿ ಅವರಿಗೆ ಹೊಸ ತತ್ವ ಗೋಚರವಾಗುತ್ತದೆ.

ಅವರಿರುವ ಸಭೆ ಯಾವಾಗಲೂ ಕಾರ್ಯೋತ್ಸಾಹದಿಂದ ಎಡಬಿಡದ ಚಟುವಟಿಕೆಗಳಿಂದ ಕೂಡಿರುತ್ತದೆ. ಆಲಸ್ಯಕ್ಕಾಗಲಿ ಕಾಡುಹರಟೆಗಾಗಲಿ ಸ್ವಲ್ಪವೂ ಅವಕಾಶವಿಲ್ಲ. ಯಾರಲ್ಲಿಯಾದರೂ ಸ್ವಲ್ಪ ಪಾಲುಮಾರಿಕೆ ಕಂಡದ್ದಾದರೆ ಕೂಡಲೆ ಹಾಸ್ಯದ ಬಾಣಬಿರುಸು ಬಿಡುತ್ತಾರೆ. ಸಭೆ ಗೊಳ್ಳೆಂದು ನಗುತ್ತದೆ. ಪುನಃ ಉತ್ಸಾಹ

ಚೇತರಿಸಿಕೊಳ್ಳುತ್ತದೆ. ಕೆಲವು ಜನ ತಿಳಿದಂತೆ, ಅಥವಾ ನಾನೇ ಹಿಂದೆ ತಿಳಿದುಕೊಂಡಿದ್ದಂತೆ ಅವರು ಕಠೋರರೂ ಅಲ್ಲ, ಕ್ರೂರಿಯೂ ಅಲ್ಲ, ನಿಷ್ಠುರರೂ ಅಲ್ಲ. ಅವರಂಥ ಸರಸಿಯನ್ನು ನಾನು ಕಂಡೇ ಇಲ್ಲ. ಅವರ ಗಾಂಭೀರ್ಯದ ಮೇಲೊದಿಕೆಯ ಕೆಳಗೆ ತಿಳಿಹಾಸ್ಯದ ಊಟೆ ಬುಗ್ಗೆಗೊಳ್ಳಲು ಸದಾ ಸಿದ್ಧವಾಗಿದೆ. ಆ ಹಾಸ್ಯವೊ ಯಾರನ್ನೂ ನೋಯಿಸುವಂತಹುದಲ್ಲ. ಅದು ಉತ್ಸಾಹಕಾರಕವೇ ಹೊರತು ಅವಹೇಳನಕಾರಕವಲ್ಲ. ಅದೆಂದೂ ಅಶ್ಲೀಲಕ್ಕೆ ತಿರುಗುವುದಿಲ್ಲ. ಆ ಹಾಸ್ಯ ಪ್ರಕರಣ ನೀಳವಾಗಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಯಾಗದಂತೆ ನೋಡಿಕೊಳ್ಳುವವರೂ ಅವರೆ.

ಅವರ ಹಾಸ್ಯದ ಸ್ವರೂಪವನ್ನು ತಿಳಿಯಬೇಕಾದರೆ ಒಂದೆರಡು ನಿದರ್ಶನ ಅವಶ್ಯಕವಾಗಬಹುದು. Aesthetician ಎನ್ನುವ ಪದಕ್ಕೆ 'ಸೊಗವಳ' ಎಂಬ ಸಂವಾದಿ ಪದವನ್ನೆಸೆದು, ಮರುಕ್ಷಣದಲ್ಲಿಯೆ ಅವನು ಮಡಿವಳನ ತಮ್ಮನೆನ್ನುತ್ತಾರೆ. Groundnut oil ಎನ್ನುವ ಪದವನ್ನು ತಮಾಷೆಗಾಗಿ 'ನೆಲದನದ ತುಪ್ಪ' ಎಂದು ಭಾಷಾಂತರಿಸುತ್ತಾರೆ; ಹಾಗೆಯೇ Nuptial ಎಂಬ ಪದಕ್ಕೆ ಕನ್ನಡದ 'ಚಾಪೆಮದುವೆ.' ಈಗಿನ ಕಾಲದ ಪಂಡಿತರೆಲ್ಲ 'ವಿಕೇಶಿರಾಜ'ರೆನ್ನುತ್ತಾರೆ. Headmaster ಅನ್ನು 'ಹೆಮ್ಮಾಸ್ತರು' ಎಂದು ತರ್ಜುಮೆ ಮಾಡಿದಾಗ ಯಾರಿಗಾದರೂ ವಿಸ್ಮಯವಾಗದಿರದು. ಅವರ ಸಮಯಸ್ಫೂರ್ತಿಗೆ ಮತ್ತು ಕುಶಾಗ್ರಮತಿಗೆ ಇಂಥ ಇನ್ನೆಷ್ಟೋ ಉದಾಹರಣೆಗಳನ್ನು ಉದ್ಧರಿಸಬಹುದು. ಕೊನೆಗೆ ಒಂದು ದಿನದ ಸಭೆ ಮುಗಿಯುವುದರೊಳಗೆ ಒಂದೆರಡು ಡಜನ್ ನಿದರ್ಶನಗಳನ್ನು ಸಂಗ್ರಹಿಸುವುದು ಕಷ್ಟವಲ್ಲ. ಹಾಸ್ಯದ ಸಮಯದಲ್ಲಿ ಮಾತ್ರವಲ್ಲ, ಎಚ್ಚೆತ್ತಿರುವಾಗಲೆಲ್ಲ ಅವರ ಪ್ರಜ್ಞೆ ಜಾಗ್ರತವಾಗಿರುತ್ತದೆ. Amphibian ಎಂದು ಹೇಳುತ್ತಿರುವಾಗಲೇ 'ಇಜ್ಜೀವಿ' ಎಂದೂ, Focus ಎಂದಕೂಡಲೆ 'ನಾಭಿಗೊಳಿಸು' ಎಂದೂ, Evergreen ಎಂದಕೂಡಲೆ 'ಸದಾಪರ್ಣಿ' ಎಂದೂ, Vacuum ಎಂದಕೂಡಲೆ 'ನಿರನಿಲ' ಎಂದೂ ತಟಕ್ಕನೆ ಪದನಿರ್ಮಾಣ ಮಾಡುವ ಶಕ್ತಿ ಅವರಿಗೆ ವಶವಾಗಿದೆ. ಇದು ಪಂಡಿತಸಾಮರ್ಥ್ಯಕ್ಕೆ ದಕ್ಕದ ಮಹಾಕವಿ ಪ್ರತಿಭೆಯ ಕಾರ್ಯವೆಂದೇ ನನ್ನ ನಂಬಿಕೆ.

ಅವರೆಂದೂ ಸಭಾಮರ್ಯಾದೆಗೆ, ಬಹುಮತಕ್ಕೆ ವಿರುದ್ಧವಾಗಿ ವರ್ತಿಸುವುದಿಲ್ಲ. ತಮಗೆ ಸತ್ಯವೆಂದು ತೋರಿದ ಸಂಗತಿಯನ್ನು ನಿರ್ದಾಕ್ಷಿಣ್ಯವಾಗಿ ಸಭೆಯ ಮುಂದಿಡುತ್ತಾರೆ; ಸವಾಲಿಗೆ ಪ್ರತಿಸವಾಲೆಸೆಯುತ್ತಾರೆ. ವಾದದಲ್ಲಿ ಯಾರಿಗೂ ಬಿಟ್ಟುಕೊಡುವುದಿಲ್ಲ. ತಮ್ಮ ಎದುರಾಳಿಗಳನ್ನು ತಾರ್ಕಿಕವಾಗಿ ಸಕಾರಣವಾಗಿ ಒಪ್ಪಿಸುತ್ತಾರೆ. ತಮ್ಮ ವಾದ ಸರಿಯಲ್ಲವೆಂದು ಕಂಡಾಗ ತೆಪ್ಪಗಾಗುತ್ತಾರೆ. ಅನೇಕ ವೇಳೆ ಎದೆಗಾರಿಕೆಯಿಂದ ತಪ್ಪೊಪ್ಪಿಕೊಳ್ಳುತ್ತಾರೆ. ಸಭಾಧ್ಯಕ್ಷ ಯಾರೇ ಆಗಿರಲಿ, ವಯೋಜ್ಞಾನಗಳಲ್ಲಿ ಹಿರಿಯನಾಗಲಿ ಕಿರಿಯನಾಗಲಿ ಅವರಿಗೆ ಉಚಿತವಾದ ಗೌರವ ಸಲ್ಲಿಸುತ್ತಾರೆ. ಒಮ್ಮೊಮ್ಮೆ ತಮ್ಮ ವಾದವೇ ಸರಿಯೆಂದು ತೋರಿದಾಗಲೂ ಅಧ್ಯಕ್ಷರ ನಿರ್ಣಯಕ್ಕೆ ಮಣಿಯುತ್ತಾರೆ. ಅವರ

ವಯೋವೃದ್ಧರು, ಜ್ಞಾನವೃದ್ಧರು, ಅನುಭವಶ್ರೀಮಂತರು; ಜೊತೆಗೆ ಸೌಜನ್ಯ ಸಭ್ಯತೆಗಳಲ್ಲಿ ಅವರನ್ನು ಮೀರಿಸುವವರು ಕಡಿಮೆ.

ತಾವು ಕೈಗೆತ್ತಿಕೊಂಡ ಕಾರ್ಯದಲ್ಲಿ ಅವರು ಸಂಪೂರ್ಣವಾಗಿ ನಿಮಗ್ನರಾಗಿಬಿಡುತ್ತಾರೆ. ಅದರ ಸಾಧನೆಯ ಹಾದಿಯಲ್ಲಿ ಸಮಸ್ಯೆಗಳು ಉದ್ಭವವಾದರೆ ಅವನ್ನು ಬಿಡಿಸುವ ತನಕ ಅವರಿಗೆ ನೆಮ್ಮದಿ ಇಲ್ಲ. ಯಾವಾಗಲೂ ಅವುಗಳದೇ ಧ್ಯಾನ. ಪರಿಷ್ಕರಣ ಸಮಿತಿಯಸಭೆ ಮುಗಿಯಿತೆಂದರೆ ನಮ್ಮಲ್ಲಿ ಹಲವರು ಅಲ್ಲಿಗೇ ಕೈತೊಳೆದುಕೊಂಡು, ಅವನ್ನು ಸಂಪೂರ್ಣವಾಗಿ ಮರೆತುಬಿಡುತ್ತೇವೆ. ಆದರೆ ಅವರು ಹಾಗಲ್ಲ. ಏನಾದರೂ ಸಂದೇಹ ಉಳಿದಿದ್ದರೆ, ಅವರ ಮನವೆಲ್ಲ ಅದೇ ಗುಂಗಿನಲ್ಲಿರುತ್ತದೆ. ಊರಿಗೆ ಮರಳಿದ ನಂತರವೂ ಸಂದೇಹಕ್ಕೆ ಪರಿಹಾರ ಹೊದಗಿದರೆ ಕೂಡಲೇ ತಿಳಿಸುತ್ತಾರೆ: "ದಾರಿಯಲ್ಲಿ ಕೆಲವು ಸೂಚನೆ ಹೊಳೆದುವು. ಇವನ್ನು ಪರಿಶೀಲಿಸಿ. Absence ಎನ್ನುವ ಪದಕ್ಕೆ 'ಅನ್ಯಮನಸ್ಕತೆ' ಆಗಬಾರದೆ? 'ಸೊಯ–ಗೆಡಿಕೆ'ಯೂ ಆಗಬಹುದೇನೊ. **'Abracadabra'** ನನ್ನ ಮಟ್ಟಿಗೆ ಗಜರುಬಜರು, ಅಬ್ಬರಡುಬ್ಬರ, ಅಕ್ಕರ–ಡುಬ್ಬರ—ಯಾವುದಾದರೂ ಒಂದು ಸರಿಹೋದೀತೇನೊ?" ಎಂಥ ಮಹಾ ಪ್ರಾಧ್ಯಾಪಕನೂ ಅವರಿಂದ ಕಲಿಯಬೇಕಾದ ಪಾಠವಿದು.

ಕಾರಂತರು ಒಂದು ತರಹ 'ಕನ್ನಡ ಮಾಧ್ಯಮ ವಿರೋಧಿ'ಯೆಂದು ಕೆಲವು ಜನ ಟೀಕಿಸುವುದುಂಟು. ಅಂತಹ ಟೀಕಾಕಾರರಲ್ಲಿ ನಾನೂ ಒಬ್ಬ. ಅವರು ಕನ್ನಡ ಜನದ ರಿಕ್ತತೆಯನ್ನು ಕುರಿತು ಆಗಾಗ್ಗೆ ಸಿಡಿಯುವುದುಂಟು. ದುಡಿಮೆ ಅವರ ಬದುಕಿನ ಯಶಸ್ಸಿನ ರಹಸ್ಯ. ಅವರಂತೆ ಕನ್ನಡಕ್ಕೆ ಸರ್ವಸ್ವವನ್ನು ಸಮರ್ಪಿಸಿ ದುಡಿದವರು ಅತಿ ವಿರಳ. ಸಹಸ್ರ ಸಹಸ್ರ ಪುಟಗಳ ಜ್ಞಾನ ವಿಜ್ಞಾನ ಸಾಹಿತ್ಯವನ್ನು ಸೃಷ್ಟಿಸಿ ಕನ್ನಡದ ಶಕ್ತಿ ಸಾಮರ್ಥ್ಯಗಳನ್ನು ಪರಾಕಾಷ್ಠೆಗೆ ಮುಟ್ಟಿಸಿದ್ದಾರೆ. ಸಿಡಿಲಕುಡವನ್ನು ಮಿಂಚಿನಲ್ಲದ್ದಿ ಸಾಹಿತ್ಯ ಸೃಷ್ಟಿಸಿದ್ದಾರೆ. ಅವರ ಕನ್ನಡಕ್ಕೆ ಸಿಡಿಲ ಕಾವಿದೆ, ಮೇಣದ ಬನಿಯಿದೆ, ವಜ್ರದ ಕಠೋರತೆಯಿದೆ, ರೇಷ್ಮೆಯ ನುಣ್ಪಿದೆ. ಆಡುವಮಾತಿಗೆ ಗ್ರಾಂಥಿಕ ಸ್ಥಾನವನ್ನು ಕೊಟ್ಟು ಕನ್ನಡದ ಬೊಕ್ಕಸವನ್ನು ಸಮೃದ್ಧಿಗೊಳಿಸಿದ್ದಾರೆ. ಸ್ವತಂತ್ರ ಮನೋಭಾವವುಳ್ಳ, ವಿಚಾರಸಾಮರ್ಥ್ಯವುಳ್ಳ, ಜನರಿಂದ ಮಾತ್ರ ಭಾಷೆ ಬೆಳೆಯುತ್ತದೆನ್ನುವ ಅವರ ವಾದ ಸರ್ವಸಮ್ಮತವಾದುದು. ಅಂತಹ ಜನ ನಮ್ಮಲ್ಲಿಲ್ಲವೆಂಬುದೇ ಅವರ ಕೊರಗು. ಆ ಕೊರಗು ಆಗಾಗ್ಗೆ ಕ್ರೋಧವಾಗಿ ಸಿಡಿಯುತ್ತದೆ. ಕೇವಲ ಅಂಧಾಭಿಮಾನದಿಂದ ಸ್ವಾರ್ಥದಿಂದ ಪಟ್ಟಭದ್ರ ಹಿತಾಸಕ್ತಿಯಿಂದ ಕನ್ನಡದ ಬಗ್ಗೆ ಆಸಕ್ತಿ ನಟಿಸುವವರನ್ನು ಕಂಡರೆ ಅವರಿಗಾಗದು. ಈ ಹಿನ್ನೆಲೆಯಲ್ಲಿ ಅವರ ಮನೋಭಾವವನ್ನು ಗ್ರಹಿಸಿದಾಗ ಅವರ ಬಗ್ಗೆ ಗೌರವ ಮೂಡುತ್ತದೆಯೆ ಹೊರತು ಸ್ವಲ್ಪವೂ ಕ್ರೋಧ ಜನಿಸುವುದಿಲ್ಲ.

ಕಾರಂತರ ಜೀವನದ ಯಶಸ್ಸು ಅವರ ದುಡಿಮೆಯಲ್ಲಿದೆಯೆಂದು ಹಿಂದೆ ಹೇಳಿದೆ. ನಿದ್ರಾಸಮಯವನ್ನು ಬಿಟ್ಟರೆ ಉಳಿಕೆ ಸಮಯದಲ್ಲೆಲ್ಲ ಶ್ರದ್ಧೆಯಿಂದ ಪ್ರಾಮಾಣಿಕವಾಗಿ ದುಡಿಯುತ್ತಾರೆ. ರಾತ್ರಿ ಒಂಬತ್ತಕ್ಕೊ

ಒಂಬತ್ತೂವರೆಗೊ ಕರಾರುವಾಕ್ಕಾಗಿ ಮಲಗುತ್ತಾರೆ. ಮಲಗಿದಕೂಡಲೆ ನಿದ್ದೆ ಬರುತ್ತದೆಂದು ಅವರೇ ಹೇಳುತ್ತಾರೆ. ಬೆಳಗ್ಗೆ ಆರು ಗಂಟೆಗೆ ಎಚ್ಚರ. ಎಚ್ಚರವಾದ ನಂತರ ಕಾಯಕನಿರತ, ಬರಹ ಅಥವಾ ಚಿಂತನ. ಹಗಲು ಅವರು ಮಲಗುವಂತೆಯೇ ಕಾಣುವುದಿಲ್ಲ. ಪುತ್ತೂರಿನ ಬೇಸಗೆಯ ಮಧ್ಯಾಹ್ನದ ಸುಡುಬಿಸಿಲಿನಲ್ಲಿಯೂ ಅವರು ಲೇಖನಕಾರ್ಯದಲ್ಲಿ ನಿರತವಾಗಿದ್ದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಅಂತೆಯೇ ಆಹಾರದಲ್ಲಿಯೂ ಸಂಯಮ. ಬೇಕಾದರೆ ಮೂರೋ ನಾಲ್ಕೋ ಪ್ಯಾಕ್ ಸಿಗರೇಟ್ ಸೇದಬಲ್ಲರು; ಮರುಕ್ಷಣದಲ್ಲಿಯೇ ಅದರ ಬಗ್ಗೆ ಜಿಗುಪ್ಸೆ ತಾಳಬಲ್ಲರು. ಇದೆಲ್ಲ ಕಠೋರ ಸಂಯಮದಿಂದ ಮಾತ್ರ ಲಬ್ಧ ವಾಗುವಂತಹುದು.

ಅವರು ನಿಷ್ಠುರ ಸತ್ಯವಾದಿಗಳು ನಿಜ. ಒಂದು ಕಾವ್ಯವನ್ನೊ ಲೇಖನವನ್ನೊ ಕುರಿತು ಒಂದೆರಡು ಖಂಡನೆಯ ಮಾತಾಡ ಬಹುದು. ಆ ಮಾತಿನಲ್ಲಿ ಕಹಿ ಕಾಣುವು ದಿಲ್ಲ. ಆದರೆ ಸೋದರ ಸಾಹಿತಿಗಳನ್ನು ಕಟುವಾಗಿ ಟೀಕಿಸಿದ ಸಂದರ್ಭಗಳು ನನಗೆ ನೆನಪಿಲ್ಲ. ಟೀಕಿಸುವ ಸಂದರ್ಭ ಒದಗಿದರೂ ಬಹು ಸಂಯಮದಿಂದ ವರ್ತಿಸುತ್ತಾರೆ. ಅವರ ಖಂಡನಾತ್ಮಕ ಮನೋಭಾವ ಮಾತಿನಲ್ಲಿ ಪ್ರಕಟವಾಗುವುದಿಲ್ಲ. ಒಮ್ಮೊಮ್ಮೆ ಮೌನದಲ್ಲಿಯೊ ಮುಖಭಂಗಿಯಲ್ಲಿಯೊ ಗೊತ್ತಾಗುತ್ತದೆ. ಅಂಥ ಪ್ರಸಂಗಕ್ಕೆ ಅವರು ಅವಕಾಶ ಕೊಡುವಂತೆಯೂ ಕಾಣುವುದಿಲ್ಲ. ಅದು ತಲೆದೋರಿದಾಗ ಮೊಳಕೆಯಲ್ಲಿಯೇ ಚಿವುಟಿಬಿಡುತ್ತಾರೆ. ನಿರ್ಲಿಪ್ತ ಮನೋಭಾವ ಇಲ್ಲದಿದ್ದರೆ ಇಂತಹ ಸಂಯಮಶಕ್ತಿ ಸಾಧ್ಯ ವಾಗದು.

ಕಾರಂತರಂತಹ ವ್ಯಕ್ತಿ ಯಾವ ರಾಷ್ಟ್ರ ಕ್ಕಾದರೂ ಭೂಷಣ. ತಮ್ಮ ಸ್ವಂತ ಭಾಷೆ ಯಲ್ಲಿ ಅವರು ತಮ್ಮ ಆಲೋಚನಾ ಭಾವ ಗಳನ್ನು ಪ್ರಕಟಿಸಿದರೂ ಅವರು ವಿಶ್ವ ಮಾನವರು. ಪ್ರಪಂಚದ ಇತರ ಸಾಹಸಿ ಗಳಂತೆ ಇವರೂ ಸಮಾಜದಿಂದ ಪ್ರತ್ಯೇಕ ವಾಗಿ ನಿಲ್ಲುವ ವ್ಯಕ್ತಿ; ಧೃವತಾರೆ. ಅವರು ಮೇಲೆ ಮೇಲೆ ನಾಸ್ತಿಕರಂತೆ ಕಂಡರೂ ಅವರ ಅಂತರಂಗದಲ್ಲಿ ಪರಂಪರೆಯಿಂದ ಬಂದ ಆಸ್ತಿಕತೆ ಸದಾ ಮಿಡಿಯುತ್ತಿರುತ್ತದೆ. ನುಡಿಯಲ್ಲಿ ನಾಸ್ತಿಕರಂತೆ ಕಂಡುಬಂದರೂ ನಡೆಯಲ್ಲಿ ಮಾತ್ರ ಆಸ್ತಿಕರು. ಯಾವು ದಾದರೂ ಒಂದು ವಸ್ತುವಿನ ರಹಸ್ಯ ಭೇದನ ಮನೋಭಾವ ಆಸ್ತಿಕನ ಲಕ್ಷಣವಲ್ಲದೆ ಮತ್ತೇನು? ಅವರ ಬಳಿ ಕುಳಿತಾಗ ವಿದ್ಯಾಸಾಗರದ ದಡದಲ್ಲಿ ಕುಳಿತಂತೆ ಜ್ಞಾನ ಸೂರ್ಯನ ಸನ್ನಿಧಿಯಲ್ಲಿದ್ದಂತೆ ಅನುಭವ ವಾಗುತ್ತದೆ.

...ಶಿವರಾಮ ಕಾರಂತರು

ಎಸ್. ನಿಜಲಿಂಗಪ್ಪ
ಮಾಜಿ ಮುಖ್ಯಮಂತ್ರಿಗಳು
'ವಿನಯ', ವಿ. ಪಿ. ಬಡಾವಣೆ
ಚಿತ್ರದುರ್ಗ—೫೭೭೫೦೧

...ಕೋಟ ಶಿವರಾಮ ಕಾರಂತರ ಜೀವನ ...ಅಸಮಾನ್ಯವಾದದ್ದು, ಅಸಾಧಾರಣ ...ವಾದದ್ದು, ಅಮೂಲ್ಯವಾದದ್ದು. ...ಕರ್ನಾಟಕದ ಸಾರಸ್ವತ ಲೋಕದಲ್ಲಿ ...ಮತ್ತೊಬ್ಬ ಅಂತಹ ವ್ಯಕ್ತಿ ಕಂಡುಬರುವು...ದಿಲ್ಲ. ಆಡುಮುಟ್ಟದ ಸೊಪ್ಪಿಲ್ಲ ಎನ್ನು...ವಂತೆ, ಕಾರಂತರು ಮುಟ್ಟದ ಸಾಹಿತ್ಯ ...ಪ್ರಾಕಾರಗಳಿಲ್ಲ ಎನ್ನಬಹುದು. ಅವರ ...ಸಾಧನಾ ಕ್ಷೇತ್ರಗಳು ನಾನಾ ಮುಖ. ...ಒಂದಲ್ಲ, ಎರಡಲ್ಲ ಅನಂತ ಮುಖ ...ಸಮಾಜ ಸೇವೆ, ಸಾಹಿತ್ಯ, ಕಲೆ, ನಾಟಕ, ...ನೃತ್ಯ, ನೃತ್ಯನಾಟಕ, ಮಕ್ಕಳ ಸಾಹಿತ್ಯ, ...ಯಕ್ಷಗಾನ, ಪರಿಸರಪ್ರೇಮ, ಇನ್ನೂ ...ಹಲವಾರು. ಸಮಾಜ ಹಾಗೂ ಸಾಮಾಜಿಕ ...ಬೆಳವಣಿಗೆಯ ಎಲ್ಲ ಮುಖಗಳಲ್ಲಿಯೂ ...ಅವರ ಚಿಂತನೆ ಹಾಗೂ ಸಾಧನೆಗಳು ...ಅಪಾರ, ಚಿಕ್ಕಮಕ್ಕಳಿಂದ ಹಿಡಿದು, ವೃದ್ಧರ ...ವರೆಗೂ ಸಮಾಜದ ಏಳಿಗೆಗೆ, ತಿಳಿವಳಿಕೆಗೆ ...ಬೇಕಾಗುವ ಎಲ್ಲ ಸಾಧನೆಗಳ ಬಗ್ಗೆಯೂ ...ಅವರ ಅತೀವ ವ್ಯಕ್ತಿತ್ವವು ಕಂಡು ಬರು...ತ್ತದೆ. ಅವರ ಜೀವನವೇ ಅಪರೂಪ...ವಾದದ್ದು.

...ಸಮಾಜದ ಯಾವ ಸಂಪ್ರದಾಯ...ವನ್ನೂ, ಅದು ಎಷ್ಟೇ ಪುರಾತನವಾದುದಾಗಿರಲಿ, ಸಾಕಷ್ಟು ಪರಿಶೀಲನೆ, ಪರೀಕ್ಷೆಗಳಿಲ್ಲದೆ ಅವರು ಒಪ್ಪಲೂ ಇಲ್ಲ, ಪರಿಪಾಲಿಸಲೂ ಇಲ್ಲ. ತಮ್ಮದೇ ಆದ ಅಭಿಪ್ರಾಯದಂತೆ ಅವಶ್ಯಕವಿದ್ದಲ್ಲಿ ವಿರೋಧಿಸುತ್ತ ತಮ್ಮ ಜೀವನದಲ್ಲಿ ಬೆಳೆಸಿಕೊಂಡು ಬಂದರು. ಅತಿ ಸಂಪ್ರದಾಯ ಬದ್ಧವಾದ ಬ್ರಾಹ್ಮಣ ಕುಟುಂಬದಲ್ಲಿ ಅವರು ಹುಟ್ಟಿದರೂ, ಅವರು ಮದುವೆಯಾದದ್ದು ಬ್ರಾಹ್ಮಣೇತರ ಹೆಣ್ಣನ್ನು, ಯಾವ ಜಾತಿಯನ್ನು ಅವರು ತಮ್ಮದಾಗಿ ಮಾಡಿಕೊಳ್ಳಲಿಲ್ಲ. ತಮಗೆ ಧರ್ಮದ ದೃಷ್ಟಿಯಿಂದ ಯಾವುದು ಸರಿ ಎನಿಸಿತೋ ಅದರಂತೆ ತಮ್ಮಜೀವನವನ್ನು ರೂಪಿಸಿಕೊಂಡು ನಡೆದರು.

ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರ ಕರೆ ಬಂದಾಗ ತಮ್ಮ ವಿದ್ಯಾಭ್ಯಾಸವನ್ನೇ ತೊರೆದು, ಸತ್ಯಾಗ್ರಹಿಗಳಾಗಿ ಸೇವೆ ಸಲ್ಲಿಸಿದರಲ್ಲದೆ, ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ಸಕ್ರಿಯವಾಗಿ ದುಡಿದರು.

ಸಾಹಿತ್ಯದಲ್ಲಿ ಅವರ ದುಡಿಮೆ ಮೊದಲೇ ಹೇಳಿದಂತೆ ನಾನಾ ಮುಖ. ಅವರು ಪ್ರಸಿದ್ಧಿಗೆ ಬಂದದ್ದು ಮೊಟ್ಟಮೊದಲು ಅದ್ವಿತೀಯವಾದ ಬಾಲ ಪ್ರಪಂಚದ

ಮೂರು ಸಂಪುಟಗಳಿಂದ. ಮಕ್ಕಳಿಗೆ ಅಗತ್ಯವಾಗಿದ್ದ ಜ್ಞಾನಭಂಡಾರವನ್ನು ಅದರಲ್ಲಿ ತೆರೆದಿಟ್ಟರು. ಆಗ ಚಿಕ್ಕವರಾಗಿದ್ದ ನನ್ನ ಮಕ್ಕಳು ಶಾಲಾ ಪುಸ್ತಕಗಳಿಗಿಂತ ಹೆಚ್ಚಾಗಿ ಅವುಗಳನ್ನು ಓದುತ್ತ ತಮ್ಮ ತಿಳುವಳಿಕೆಯನ್ನು ಬೆಳೆಸಿಕೊಂಡುದು ಚೆನ್ನಾಗಿ ನೆನಪಿದೆ. ಬಹುಶಃ ಅವು ಆಗ ಎಲ್ಲ ಮಕ್ಕಳ ಜ್ಞಾನಭಂಡಾರಗಳು ಮಾತ್ರ ಅಲ್ಲದೆ ಮಕ್ಕಳ ಪುಸ್ತಕಗಳೂ ಆಗಿದ್ದವು. ಅದೇ ರೀತಿ ಸಾಮಾನ್ಯ ಜನರಿಗೆ ಬೇಕಾದ ವಿಜ್ಞಾನದ ಬಗ್ಗೆ ನಾಲ್ಕು ಸಂಪುಟಗಳನ್ನು ಸೃಷ್ಟಿಸಿದರು.

ನನ್ನ ರಾಜಕೀಯ ಚಟುವಟಿಕೆಗಳಲ್ಲಿಯೂ ಶ್ರೀ ಕಾರಂತರ ಪ್ರಸಿದ್ಧ ಕೃತಿಗಳಾದ ಮರಳಿ ಮಣ್ಣಿಗೆ, ಮೂಕಜ್ಜಿಯ ಕನಸುಗಳು, ಕುಡಿಯರ ಕೂಸು ಇವುಗಳನ್ನು ನಾನು ಓದದೇ ಇರಲು ಆಗಲಿಲ್ಲ. ಇನ್ನೂ ಒಂದೆರಡರ ಹೆಸರು ಮರೆತು ಹೋಗಿದೆ. ಅವರ "ಹುಚ್ಚು ಮನಸ್ಸಿನ ಹತ್ತು ಮುಖಗಳು" ಓದಿ ಅವರ ಬಹುಮುಖದ ಪರಿಚಯ ಮಾಡಿಕೊಂಡೆನು. ಹಾಗೂ ಅವರ ಬಿಚ್ಚುಮನಸ್ಸು ಹಾಗೂ ಧೈರ್ಯವನ್ನು ಒಪ್ಪಿದೆನು, ಮೆಚ್ಚಿದೆನು. ೧೯೪೦ರಲ್ಲಿ ಮುದ್ರಿತವಾದ ಶ್ರೀ ಕಾರಂತರ "ಸಿರಿಗನ್ನಡ ಅರ್ಥಕೋಶ"ದ ೧೯೭೧ರ ಎಂಟನೆಯ ಆವೃತ್ತಿ ಈಗಲೂ ನನ್ನಲ್ಲಿ ಇದೆ.

ಅತಿ ಸಂಪ್ರದಾಯ ಬದ್ಧವಾದ, ಅತ್ಯಂತ ಪುರಾತನವಾದ ಯಕ್ಷಗಾನವನ್ನು ಈಗಿನ ಜನರಿಗೆ ರುಚಿಸುವಂತೆ, ಸಂಪ್ರದಾಯ ಬದ್ಧತೆಗೆ ಚ್ಯುತಿಬರದಂತೆ ನವೀಕರಿಸಿದುದು ಅಲ್ಲದೆ ಶ್ರೀ ಕಾರಂತರು ತಮ್ಮ ೯೦ನೇ ವಯಸ್ಸಿನಲ್ಲಿ ತಾವೇ ಗೆಜ್ಜೆಕಟ್ಟಿಕೊಂಡು ಕುಣಿದು ಆ ಕಲೆಯನ್ನು ಜನಪ್ರಿಯಗೊಳಿಸಿದ್ದಾರೆ.


ಶ್ರೀ ಶಿವರಾಮ ಕಾರಂತರ ಪ್ರತಿಭೆಗೆ ಪೂರಕವಾಗಿ ಅವರ ಕಲೆ ಹಾಗೂ ಕೃತಿಗಳಿಗೆ ಬಂದಿರುವ ಪ್ರಶಸ್ತಿಗಳು ಅನೇಕ. ನನಗೆ ತಿಳಿದಿರುವಂತೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಪಂಪಪ್ರಶಸ್ತಿ, ಎಲ್ಲಕ್ಕಿಂತ ಹೆಚ್ಚಾಗಿ ಜ್ಞಾನಪೀಠ ಪ್ರಶಸ್ತಿಯಲ್ಲದೆ, ಇತರೇ ಪ್ರಾಂತಗಳ ವಿಶ್ವವಿದ್ಯಾನಿಲಯಗಳಿಂದ ಗೌರವ ಡಾಕ್ಟರೇಟ್ ಪ್ರಶಸ್ತಿಗಳೂ ದೊರತಿವೆ. ಕನ್ನಡ ವಿಶ್ವವಿದ್ಯಾಲಯದ 'ನಾಡೋಜ ಪ್ರಶಸ್ತಿ', ಬಹುಶಃ ನನ್ನ ತರುವಾಯ ಅವರಿಗೇ ದೊರೆತಿರುವಂತೆ ಕಾಣುತ್ತದೆ.

ಶ್ರೀ ಕೋಟ ಶಿವರಾಮ ಕಾರಂತರ ಬಗ್ಗೆ ನಾನು ಇಷ್ಟೆಲ್ಲ ಬರೆದರೂ ಸಹ, ಬಹುಶಃ ನಮ್ಮಗಳ ಕಾರ್ಯಕ್ಷೇತ್ರಗಳು ಬೇರೆ ಬೇರೆಯಾದ್ದರಿಂದ ನಮ್ಮಗಳ ವೈಯಕ್ತಿಕ ಪರಿಚಯ ಬಹಳ ಕಡಿಮೆ. ಕಾರಂತರ ಸಹೋದರರು ಎಲ್ಲರೂ ಪ್ರಸಿದ್ಧರು. ಒಬ್ಬರು ಕೆ. ಆರ್. ಕಾರಂತರು ರಾಜಕೀಯ ಧುರೀಣರಾಗಿ ಮಿಂಚಿದವರು, ನನಗೆ ಬಹಳ ಆತ್ಮೀಯರಾಗಿದ್ದರು. ಅವರು ಮದರಾಸಿನಲ್ಲಿ ಮಂತ್ರಿಗಳಾಗಿದ್ದರು. ಕರ್ನಾಟಕ ಏಕೀಕರಣಕ್ಕಾಗಿ ನನ್ನ ಜೊತೆಯಲ್ಲಿ ಹೋರಾಡಿದರು. ನಂತರ ಬೆಂಗಳೂರಿನಲ್ಲಿ ಸುಪ್ರಸಿದ್ಧ ವಕೀಲರಾಗಿದ್ದರು.

ಶ್ರೀ ಶಿವರಾಮ ಕಾರಂತರ ಹಾಗೂ ನನ್ನ ಮಧ್ಯೆ ಹೆಚ್ಚಿನ ಸಂಪರ್ಕವಿಲ್ಲದ್ದಿದರೂ

ಪರಸ್ಪರ ಅರಿತಿದ್ದೆವು. ಪರಸ್ಪರ ಗೌರವವೂ ಇದ್ದಿತು. ಆದ್ದರಿಂದಲೇ ನನ್ನ ಜನ್ಮದಿನೋತ್ಸವ ಸಮಾರಂಭದಲ್ಲಿ ಇಲ್ಲಿಯವರೆಗೂ ಬಂದು, ಅವರು ನನ್ನನ್ನು ಗೌರವಿಸಿದುದನ್ನು ಮರೆಯಲಾರೆ.

ಶ್ರೀ ಕಾರಂತರ ಬಗ್ಗೆ ಪ್ರಕಟಿಸಲಿರುವ ವಿಶೇಷ ಸಂಚಿಕೆಯು ಜನತೆಗೆ ಪ್ರೋತ್ಸಾಹವನ್ನೂ, ಚೈತನ್ಯವನ್ನೂ, ಕನ್ನಡ ಸಾಹಿತ್ಯದ ಬಗ್ಗೆ ಒಲವನ್ನೂ ತರಲಿ ಎಂದು ಹಾರೈಸುತ್ತೇನೆ.



ಕರ್ನಾಟಕದ 'ಚಹರೆ–ಪಟ್ಟಿ'ಯಲ್ಲಿ ಕಾರಂತರ ಗೆರೆ ಢಾಳವಾಗಿ ಎದ್ದು ಕಾಣುವಂತಹುದು. ಸಮಾಜವು ಸಂಸ್ಕಾರ ಉಳ್ಳದ್ದಾಗಬೇಕು–ಎಂಬುದು ಅವರ ಜೀವನ ಸ್ಫೂರ್ತಿಯಾಗಿ ಅನೇಕರಿಗೆ ಕಂಡಿರಬಹುದು. ಅದಕ್ಕಾಗಿಯೇ ನಾಡತುಂಬ ಅವರಿಗೆ ಗೌರವ. ಅವರು ಬಹುಬಾಹುವಾದ ವ್ಯಕ್ತಿ: ಕಾರ್ಯದಲ್ಲಿ ಪರಶುರಾಮನ ಚರಿತ, ನಾಟಕ, ಶಿಕ್ಷಣ, ನಾಡಹಬ್ಬ, ಕಲೆ, ಸಾಹಿತ್ಯ, ನೃತ್ಯ, ಸಂಪಾದನೆ, ಪ್ರವಾಸ, ಖಂಡಿತವಾದ—ಒಂದೊಂದರಲ್ಲಿಯೂ ಕಾರಂತರ ಮುದ್ರೆ ಭದ್ರವಾದುದು.

—ದ. ರಾ. ಬೇಂದ್ರೆ

ಪೂರ್ಣಜೀವನದ ಶಿವರಾಮ ಕಾರಂತರು

ಕಯ್ಯಾರ ಕಿಞ್ಞಣ್ಣರೈ
ಪೆರಡಾಲ
ಕಾಸರಗೋಡು—೬೭೧ ೫೫೧

ಓಂ ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ—

ಇದು ಉಪನಿಷತ್ ಮಂತ್ರ; ಅದು, ಇದು, ಎಲ್ಲವೂ ಪೂರ್ಣ; ಪೂರ್ಣದಿಂದ ಕಳೆದರೂ ಪೂರ್ಣವೇ ಉಳಿಯುವುದು—ಎಂಬೀಮಾತು ಮಾನವನ ಜೀವನದ ಸಿದ್ಧಿಗಳಿಗೆ ಸಂಬಂಧಿಸಿದ ಋಷಿವಾಣಿ. ಜೀವೇಮ ಶರದಶ್ಶತವಮ್ – ಮೋದಾಮ ಶರದಶ್ಶತಮ್–ಎಂಬುದೇ ಜೀವನದ ಧ್ಯೇಯ. ಬದುಕು ಬರಿಯ ಭ್ರಮೆ–ಮಿಥ್ಯೆ ಎಂಬೀ ನಿರಾಶಾವಾದವನ್ನು ನಾವು ಪ್ರಾಚೀನ ಧೀಮಂತ ಋಷಿವಾಣಿಯಲ್ಲಿ ಎಲ್ಲಿಯೂ ಕಾಣುವುದಿಲ್ಲ; ಈ ಲೋಕದಲ್ಲಿ ಜನಿಸಿ ಬಂದ ನೀನು ನಿನ್ನ ಕರ್ತವ್ಯವನ್ನು, ನಿನಗೊಪ್ಪಿಸಿದ ಕೆಲಸವನ್ನು ಶ್ರದ್ಧಾಪೂರ್ವಕ ಮಾಡುತ್ತಾ, ನೂರು ವರ್ಷ ಸಮೃದ್ಧವಾದ ಜೀವನಮಾಡು ಎಂಬುದು ಈಶೋಪನೀಷತ್ತಿನ ಸೂಕ್ತಿಯಾಗಿದೆ. ಇಂತಹ ಆರ್ಷೇಯನೀತಿಗೆಅನುಗುಣವಾಗಿ ಬದುಕಿದ ಜೀವನವನ್ನು ಸಾರ್ಥಕಗೊಳಿಸಿದ ಅಪೂರ್ವ ಮಹಾಚೇತನ ಕೀರ್ತಿಶೇಷ ಶಿವರಾಮ ಕಾರಂತರದು. ಕೋಟ ಶಿವರಾಮ ಕಾರಂತರು ನೂರು ವರ್ಷಗಳಿಗೆ ಹತ್ತಿರ ಬದುಕಿದರು; ಜೀವನದಲ್ಲಿ ನಿರಂತರ ಸಾಧನೆಗಳನ್ನು ನಡೆಸುತ್ತ ಬಂದರು; ಸಾಧನೆಗೆ ತಕ್ಕಂತಹ ಸಿದ್ಧಿಗಳನ್ನು ಪಡೆದು ಕೃತಾರ್ಥರಾದರು; ಅಳಿದರೂ ಜನಮನದಲ್ಲಿ ಶಾಶ್ವತವಾಗಿ ಉಳಿದರು.

ಶಿವರಾಮ ಕಾರಂತರನ್ನು ನಾನು ಸುಮಾರು ಅರವತ್ತು ವರ್ಷಗಳಿಂದ ಬಲ್ಲೆ; ಉಡುಪಿ ತಾಲ್ಲೂಕಿನ ಕೋಟ ಎಂಬುದು ಅವರು ಜನಿಸಿದ ಊರು; ಅವರ ಅಣ್ಣ ಕೋಟ ರಾಮಕೃಷ್ಣ ಕಾರಂತರು ನನಗೆ ಕಾರಂತರಿಗಿಂತ ಮೊದಲೇ ಪರಿಚಿತರು. ಮಂಗಳೂರಿನ ಖ್ಯಾತ ನ್ಯಾಯವಾದಿಗಳು; ಕಾಸರಗೋಡು, ಪುತ್ತೂರು ಪ್ರದೇಶದ ಜನಪ್ರತಿನಿಧಿಯಾಗಿ ಮದ್ರಾಸ್ ಶಾಸನ ಸಭೆಯಲ್ಲಿ ನಮ್ಮನ್ನು ಪ್ರತಿನಿಧೀಕರಿಸಿದವರು; ಅವರ ಆ ಚುನಾವಣೆಯ ಸಂದರ್ಭಗಳಲ್ಲಿ ನಾನೂ ಓರ್ವ ಸ್ವಯಂ

ಸೇವಕ–ಕಾರ್ಯಕರ್ತ; ಮದರಾಸಿನಲ್ಲಿ ಮಂತ್ರಿಯಾಗಿಯೂ ಹೆಸರು ಪಡೆದವರು; ಕರ್ನಾಟಕ ಏಕೀಕರಣ ಆಂದೋಲನದ ಅಖಿಲ ಕರ್ನಾಟಕ ಖ್ಯಾತಿಯ ಮುಂದಾಳು. ಸ್ವಾತಂತ್ರ್ಯ ಯೋಧರು ಕೂಡ; ಅವರ ಅಣ್ಣಂದಿರು ಶ್ರೀಗಳಾದ ಕೆ. ಎಲ್. ಕಾರಂತರು ಖ್ಯಾತ ಶಿಕ್ಷಣ ತಜ್ಞ; ಕೃಷಿ ತಜ್ಞ; ಇನ್ನೊಬ್ಬ ಅಣ್ಣ ಶ್ರೀ ವಾಸುದೇವ ಕಾರಂತರು ಪ್ರಸಿದ್ಧ ಇಂಜಿನಿಯರ್ ಹಾಗೂ ಆಧ್ಯಾತ್ಮವಾದಿ; ಅವರ ಓರ್ವ ಕಿರಿಯ ಸಹೋದರ ಶ್ರೀ ಪರಮೇಶ್ವರ ಕಾರಂತರೂ ನಾನು ಮಂಗಳೂರಲ್ಲಿ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸಿ ಜತೆಯಲ್ಲಿ ದುಡಿದವರು. ಇಂತು ಶಿವರಾಮ ಕಾರಂತರ ಕುಟುಂಬವೇ ಸಾರ್ವಜನಿಕ ಕಾರ್ಯಗಳಲ್ಲಿ ಸದಾ ಸೇವೆ ಸಲ್ಲಿಸುತ್ತಾ ಇದ್ದು ಹೆಸರುವಾಸಿಯಾದದ್ದು.

ಶಿವರಾಮ ಕಾರಂತರು, ೧೯೨೦ರ ಅವಧಿಯಲ್ಲಿ ಗಾಂಧೀಜಿಯ ಅಸಹಕಾರ ಆಂದೋಲನದ ಕರೆಗೆ ಓಗೊಟ್ಟು ಕಾಲೇಜಿನ ಶಿಕ್ಷಣವನ್ನು ತ್ಯಜಿಸಿದವರು: ಮುಂದೆ ಅವರ ನಿರಂತರ ಜೀವನ ಲೋಕ ಶಿಕ್ಷಣದಲ್ಲಿ ನಿರತವಾಯಿತು. ಖಾದಿ ಪ್ರಚಾರ ಕೈಗೊಂಡರು; 'ವಸಂತ' ಪತ್ರಿಕೆ ಪ್ರಾರಂಭಿಸಿದರು; ಸಮಾಜ ತಿರಸ್ಕೃತ ಮಹಿಳೆಯರ ಜೀವನೋದ್ಧಾರ ಕಾರ್ಯ ಪ್ರಾರಂಭಿಸಿದರು; ಪುತ್ತೂರಲ್ಲಿ ಬಂದು ನೆಲೆಸಿ 'ಬಾಲವನ' ಸ್ಥಾಪಿಸಿದರು. ಅಲ್ಲಿಯೂ ಅನಾಥರಾದ ಮಕ್ಕಳಿಗೆ ಶಿಕ್ಷಣವಿತ್ತರು. ದಸರಾವನ್ನು ಕನ್ನಡದ ನಾಡಹಬ್ಬವಾಗಿ ನಾಡಿನ ಸರ್ವತ್ರ, ಆಚರಿಸಬೇಕೆಂಬ ಕರ್ನಾಟಕದ ಮುಂದಾಳುಗಳ ಮಾತಿನಂತೆ, ಪುತ್ತೂರಲ್ಲಿ ಮೊಳಹಳ್ಳಿ ಶಿವರಾಯರಂತಹ ನೇತಾರರ ಸಹಕಾರದಿಂದ ಹತ್ತು ದಿನಗಳ ತನಕ ದಸರಾ ಮಹೋತ್ಸವವನ್ನು ವಿವಿಧ ಶಾರೀರಿಕ, ಸಾಂಸ್ಕೃತೀಕ, ಸಾಹಿತ್ಯಿಕ ಕಾರಣಗಳಿಂದ ಅಭೂತ ಪೂರ್ವ ರೀತಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಮುಂದಾದರು. ಆ ಪ್ರದೇಶದ ಶಾಲಾ ವಿದ್ಯಾರ್ಥಿಗಳು, ಅಧ್ಯಾಪಕರೂ ಪುತ್ತೂರಿಗೆ ಬಂದು ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಗಳಾಗುತ್ತಿದ್ದರು: ನಾಡಿನ ಹಿರಿಯ ವಿದ್ವಾಂಸರು ಕವಿಗಳು, ಸಾಹಿತಿಗಳು, ಬಿ.ಎಂ.ಶ್ರೀ., ಪಂಜೆ, ಮುಳಿಯ, ಡಿ.ವಿ.ಜಿ. ಉಗ್ರಾಣ, ಕಡೆಂಗೋಡ್ಲು, ಸೇಡಿಯಾಪು ಇಂತಹ ಕನ್ನಡದ ಹಿರಿಯರು ಪ್ರತಿವರ್ಷವೂ ಹಲವಾರು, ಬೆಂಗಳೂರು, ಮೈಸೂರು, ಧಾರವಾಡ, ಹುಬ್ಬಳ್ಳಿ, ಮಂಗಳೂರು, ಎಲ್ಲಾ ಕಡೆಗಳಿಂದಲೂ ಆಹ್ವಾನಿತರಾಗಿ ಆ ನಾಡಹಬ್ಬದಲ್ಲಿ ಭಾಷಣ ಮಾಡುತ್ತಿದ್ದರು. ಅದೇ ಸಂದರ್ಭದಲ್ಲಿ ಕಾರಂತರು, ನಾಡಿನಲ್ಲಿಯೇ ಪ್ರಥಮವಾಗಿ ಒಂದು ಮೂಕೀ ಚಲಚ್ಚಿತ್ರವನ್ನು ನಿರ್ಮಿಸಿದರು; ಅದರ ಹೆಸರು ಭೂತರಾಜ್ಯ ಎಂದು; ತನ್ನ ಗೀತನಾಟಕಗಳನ್ನು, ನರ್ತನಾದಿಗಳನ್ನೂ ಇತರ ಕಲಾವಿದರ ಜತೆಯಲ್ಲಿ ಪ್ರದರ್ಶಿಸಿದರು. ಪುತ್ತೂರಿನ ಈ ದಸರಾ ಮಹೋತ್ಸವ ಹಲವು ವರ್ಷಗಳವರೆಗೆ ಒಂದು ಮಹತ್ವದ ಸಮಾರಂಭವಾಗಿ ಕಾರಂತರ ಮುಂದಾಳುತನದಿಂದ ನಡೆಯಿತು. ಭಾರತದ–ಕರ್ನಾಟಕದ ಸಂಸ್ಕೃತಿ ನಾಡಿನ ಜನತೆಯ ಮನವನ್ನು ಮುಟ್ಟುವಂತೆ ಕಾರ್ಯಕ್ರಮಗಳನ್ನು ಆಗ ಏರ್ಪಡಿಸುತ್ತಿದ್ದರು.

ಈ ಸಂದರ್ಭದಲ್ಲಿ ನನಗೆ ಕಾರಂತರಿಂದಾಗಿ ಒದಗಿದ ನನ್ನ ಜೀವನದ ಸುಯೋಗವೊಂದನ್ನು ಎಂದೆಂದಿಗೂ ಮರೆಯಲಾರೆ, ಅದು ೧೯೩೩ರ ವರ್ಷ; ನಾನು ಎಡಬಿಡದೆ ಪುತ್ತೂರಿನ ದಸರಾಕ್ಕೆ ಪ್ರತಿ ವರ್ಷವೂ ತೀರ್ಥಯಾತ್ರೆಗೆ ಹೋಗುವ ಆಸಕ್ತಿಯಂತೆ ನಮ್ಮ ಊರಿಂದ ನಡೆದುಕೊಂಡೇ ಹೋಗುತ್ತಿದ್ದೆ. ಸುಮಾರು ೪೦ ಮೈಲಿಗಳ ದೂರ, ಅಲ್ಲಿನ ಎಲ್ಲಾ ಕಾರ್ಯಕ್ರಮಗಳನ್ನು ಕಂಡು ಆನಂದಿಸುತ್ತಿದ್ದೆ; ನಾನಾಗ ಸಂಸ್ಕೃತ ಕಾಲೇಜು ವಿದ್ಯಾರ್ಥಿ: ಒಂದು ಸಲ, ಬೇಂದ್ರೆಯರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ಏರ್ಪಟ್ಟಿತ್ತು; ನಾನು ಕಾರಂತರ ಬಳಿಗೆ ಹೋಗಿ, ಕವಿಗೋಷ್ಠಿಯಲ್ಲಿ ಒಂದು ಕವನ ಓದಲು ಬಯಸುವುದಾಗಿ ವಿನಂತಿಸಿದೆ; ಅಂಜುತ್ತಾ; ಕಾರಂತರು ನಿಷ್ಠುರ ಸತ್ಯವಾದಿಗಳೆಂದು ನನಗೆ ಗೊತ್ತಿತ್ತು. ಅವರಿಗೆ ಏನು ತೋರಿತೊ; ನನ್ನ ನೋಡಿದರು. ನಾನು ಅದೇ ಆಗ ರಚಿಸಿದ್ದ 'ಊರ್ವಿಳಾ' ಎಂಬ ಕವನ ಓದಿದೆ. ಮಹಾಕವಿ ವಾಲ್ಮೀಕಿ ರಾಮಾಯಣದಲ್ಲಿ ಚಿತ್ರಿಸದೆ ಇರುವ ಊರ್ವಿಳೆಯ ಜೀವನದ ಕುರಿತಾಗಿ ಆ ಕವಿತೆ; ಬೇಂದ್ರೆಯವರು ಅಧ್ಯಕ್ಷ ಭಾಷಣದಲ್ಲಿ ನನ್ನ ಆ ಕವನದ ಕುರಿತು ಅರ್ಧತಾಸು ಮಾತನಾಡಿ ನಾನು ಇನ್ನೊಂದು ಕವನವನ್ನು ಓದಬೇಕೆಂದರು. ಆ ದಿನದ ಕವಿಗೋಷ್ಠಿಯಲ್ಲಿ ಪಂಜೆ, ಉಗ್ರಾಣ, ಕಡೆಂಗೋಡ್ಲು, ಸೇಡಿಯಾಪು ಪ್ರಭೃತಿ ಮಹಾಕವಿಗಳೇ ಕವನ ಓದಿದ್ದರೂ ನನಗೆ ಬೇಂದ್ರೆಯವರು ಇನ್ನೊಂದು ಕವಿತೆ ಓದಲು ಹೇಳಿದ್ದು ನನ್ನಲ್ಲಿ ಅಂದಿನಿಂದ ಇಂದಿನವರೆಗೂ ಮರೆಯಲಾಗದ ಒಂದು ಘಟನೆಯಾಗಿದೆ. ಬಹುಶಃ ಮುಂದೆ ನಾನೂ ಓರ್ವ ಕವಿಯೆಂದು ಗುರುತಿಸಿಕೊಳ್ಳಲು ಆ ದಿನದ ಅಂತಹ ಆಶೀರ್ವಾದವೇ ಕಾರಣವೆಂದು ನೆನಪಿಟ್ಟುಕೊಂಡಿದ್ದೇನೆ. ಕಾರಂತರ ಮೂಲಕ ನನಗೆ ದೊರಕಿದ ಈ ಪ್ರೋತ್ಸಾಹ ನಾನು ಜೀವನ ಪರ್ಯಂತ ಮರೆಯಲಾರೆ. ಕಾರಂತರ ಹಿರಿಯ ಗುಣವನ್ನು ಸ್ಥಾಲೀಪುಲಾಕ ನ್ಯಾಯದಿಂದ ಈ ರೀತಿ ಹೇಳಿದ್ದೇನೆ; ಇಂತಹ ರಚನಾತ್ಮಕ ಕಾರ್ಯಗಳು ಅವರದು. ಹಲವಾರು ದಸರಾ ಮಹೋತ್ಸವದಲ್ಲಿ ನಾಡಿನ ಹಿರಿಯರ ಭಾಷಣಾದಿಗಳಲ್ಲದೆ, ಕವಿಗೋಷ್ಠಿ ಮೊದಲಾದವುಗಳಲ್ಲದೆ ಕ್ರೀಡೆ, ಸ್ಪರ್ಧೆಗಳೂ, ನಾಟಕ, ನೃತ್ಯ ವಿನೋದಾವಳಿಗಳೂ ಜರುಗುತ್ತಿದ್ದವು. ಕಾರಂತರು ಪ್ರತಿವರ್ಷವೂ ಹೊಸ ಹೊಸ ನಾಟಕಗಳನ್ನೂ, ಗೀತ ನಾಟಕಗಳನ್ನೂ ರಚಿಸಿ ಆ ಕಾಲದಲ್ಲಿ ಪ್ರದರ್ಶಿಸುತ್ತಿದ್ದರು: ಸ್ವತಃ ಅದರಲ್ಲಿ ಪಾತ್ರವಹಿಸುತ್ತಿದ್ದರು. ನರ್ತನ ಮಾಡುತ್ತಿದ್ದರು. ಒಂದು ಸಂದರ್ಭ, ಕಾರಂತರ ನೃತ್ಯವನ್ನೂ, ನಾಟಕವನ್ನು ನೋಡಿದ ಬಿ.ಎಂ.ಶ್ರೀ ಸಭೆಯಿಂದ ವೇದಿಕೆಯೇರಿ ಹೋಗಿ, ಕಾರಂತರ ಈ ಪ್ರದರ್ಶನ ಯೂರೋಪಿನಲ್ಲಿ ಜರುಗಿದ್ದರೆ, ಈಗಾಗಲೇ ಅವರಿಗೆ ಅಂತಾರಾಷ್ಟ್ರೀಯ ಖ್ಯಾತಿ ತರುತ್ತಿತ್ತು ಎಂದು ಪ್ರಶಂಸಿಸಿದ್ದರು.

ಶಿವರಾಮ ಕಾರಂತರು ಪುತ್ತೂರಿನ ಬಾಲವನದಲ್ಲಿ ವಾಸವಾಗಿದ್ದ ಆ ಕಾಲದಲ್ಲಿ ಶ್ರೀಮತಿ ಲೀಲಾರೊಡನೆ ಅಂತರ್ಜಾತೀಯ ವಿವಾಹವಾಗಿ ಒಂದು ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು. ಲೀಲಾರವರೂ ಉತ್ತಮ ಗೃಹಿಣಿಯಾಗಿ ಕಾರಂತರೊಡನೆ ಇರಲಾರಂಭಿಸಿದರು. ನೃತ್ಯ ನಾಟಕಾದಿ

ಗಳಲ್ಲೂ ಕಾರಂತರ ಜತೆ ಪಾತ್ರ ವಹಿಸಿದ್ದರು. ಸತ್ಪುತ್ರಪುತ್ರಿಯರನ್ನು ಪಡೆದ ಭಾಗ್ಯಶಾಲಿಗಳು; ಅವರ ಪ್ರಥಮ ಪುತ್ರ ಹರ್ಷ ಅಕಾಲ ನಿಧನ ಹೊಂದಿದ ವಿಷಯ ಶ್ರೀಮತಿ ಲೀಲಾ ಕಾರಂತರಿಗೆ ಕೊನೆಯ ತನಕವೂ ತುಂಬಾ ವ್ಯಥೆ ಉಂಟು ಮಾಡಿತ್ತು. ಶ್ರೀ ಉಲ್ಲಾಸ ಕಾರಂತ, ಶ್ರೀಮತಿ ಮಾಳವಿಕಾ ಮೊದಲಾದ ಇವರ ಪುತ್ರ ಪುತ್ರಿಯರೆಲ್ಲರೂ ಉತ್ತಮ ಉದ್ಯೋಗಗಳಲ್ಲಿ ಸಮೃದ್ಧ ಜೀವನ ನಡೆಸುತ್ತಿದ್ದಾರೆ; ಕೊನೆಯ ಪುತ್ರಿ ನಾಟ್ಯಕಲಾವಿದೆ ಕೂಡ ಆಗಿದ್ದಾರೆ.

ಶಿವರಾಮ ಕಾರಂತರು ಸಾಹಿತ್ಯದಲ್ಲಿ ಶ್ರೇಷ್ಠ ಕಾದಂಬರಿಕಾರರೆಂದೇ ಪ್ರಸಿದ್ಧ; ಆ ಪ್ರಸಿದ್ಧಿಗೆ ಅವರ 'ಮರಳಿ ಮಣ್ಣಿಗೆ' ಬೃಹತ್ ಕಾದಂಬರಿಯೂ ಒಂದು ಕಾರಣ; ಅದುವರೆಗೆ ಸಮಾಜದ ಉನ್ನತ ಸ್ತರದ ಸಾಮಾಜಿಕ ಜೀವನವನ್ನೇ ಹೆಚ್ಚಾಗಿ ಚಿತ್ರಿಸಿ ಕಾದಂಬರಿ ಬರೆಯುತ್ತಿದ್ದಾಗ, ಕಾರಂತರೇ ಮೊದಲಿಗರಾಗಿ—ಚೋಮನದುಡಿ, ಕುಡಿಯರಕೂಸು, ಸೂಳೆಯ ಸಂಸಾರ ಇಂತಹ ಅವಗಣಿತ ಸಮಾಜದ ಸುಂದರ ಚಿತ್ರಗಳನ್ನು ಕಾದಂಬರಿ ರೂಪದಲ್ಲಿ ಕೊಟ್ಟು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಕಾದಂಬರಿ, ಸಣ್ಣ ಕತೆ, ಕವಿತೆ, ನಾಟಕ, ಹರಟೆ, ಬಾಲ ಸಾಹಿತ್ಯ, ಸೃಜನ ಮತ್ತು ಸೃಜನೇತರ ಕೃತಿಗಳು, ಅನುವಾದಿತ ಪುಸ್ತಕಗಳು ನಾಡು ನುಡಿಗಳ ಪರಂಪರೆಯ ಕೃತಿಗಳು, ವಿಚಾರ ಸಾಹಿತ್ಯ, ವಿಜ್ಞಾನ ಸಾಹಿತ್ಯ, ವಯಸ್ಕರ ಶಿಕ್ಷಣ ಸಾಹಿತ್ಯ, ಕಲಾ ಪ್ರಬಂಧಗಳು. ಪ್ರವಾಸ ಕಥನಗಳು. ಆತ್ಮಕಥನಗಳು, ಸಹಾಯಕ ಸಾಹಿತ್ಯ, ಆಂಗ್ಲ ಭಾಷಾ ಕೃತಿಗಳು, ಬಿಡಿಬರಹಗಳು, ಸಂಪಾದಿತ ಕೃತಿಗಳ—ಹೀಗೆ ಒಟ್ಟು ಅವರು ಸುಮಾರು ೫೦೦ರಷ್ಟು ಪುಸ್ತಕಗಳ ಅಸಾಮಾನ್ಯವಾದ ಕೊಡುಗೆಯನ್ನು ನಾಡು–ನುಡಿಗಳಿಗೆ ನೀಡಿದ್ದಾರೆ; ಇಷ್ಟೊಂದು ವಿಶಾಲ ವಿಚಾರಗಳಲ್ಲಿ ವಿಪುಲವಾದ ಗ್ರಂಥರತ್ನಗಳನ್ನು ರಾಶಿಯಾಗಿ ಕನ್ನಡಕ್ಕೆ ನೀಡಿದ ಲೇಖಕರೆಂದರೆ ಕಾರಂತರೊಬ್ಬರೇ ಎಂದು ನಾವು ಅಭಿಮಾನದಿಂದ ಕೊಂಡಾಡಬೇಕಾಗಿದೆ.

ಕಾರಂತರ ಸಾಹಿತ್ಯ ಶೈಲಿ ಸರಳ, ಸುಂದರ ಮತ್ತು ಆತ್ಮೀಯ. ವಿದ್ಯಾರ್ಥಿದೆಸೆಯಲ್ಲಿಯೇ ಸಂಸ್ಕೃತ ಭಾಷೆಯ ಪ್ರಾಥಮಿಕ ಜ್ಞಾನ ಅವರಿಗೆ ಒದಗಿದೆ ಎಂದು ನಾನು ತಿಳಿದಿದ್ದೇನೆ. ಮುಂದೆ ಅವರ ಹೆಚ್ಚಿನ ಆಳವಾದ ಅಭ್ಯಾಸ ಆಂಗ್ಲ ಭಾಷೆಯ ಮೂಲಕವೇ. ಶಾಲೆ ಕಾಲೇಜುಗಳಲ್ಲಿ ಓದಿದುದಕ್ಕಿಂತ ಹೆಚ್ಚು ಅವರು ಸ್ವಂತ ಸಾಹಸದಿಂದ ಆಂಗ್ಲ ಭಾಷಾಭ್ಯಾಸ ಹೆಚ್ಚಿಸಿಕೊಂಡರು; ಅಲ್ಲಿನ ಸಾಹಿತ್ಯ ಕೃತಿಗಳೊಂದಿಗೆ ವೈಜ್ಞಾನಿಕವೇ ಮೊದಲಾದ ಇತರ ವಿಷಯಗಳನ್ನು ಕಲಿತು ಪರಿಣತಿ ಪಡೆದವರು. ಈ ಎಲ್ಲಾ ಅಭ್ಯಾಸ ಪರಿಣತಿಗಳಿಗೆ ಹೊಂದಿಸಿಕೊಂಡು ಮನೆಮಾತಾದ ಕನ್ನಡದ ಸೊಬಗನ್ನು ಬರವಣಿಗೆಯ ಮೂಲಕ ಚಿತ್ರಿಸಿದವರು. ಅವರ ಕಾದಂಬರಿ, ಕತೆಗಳು, ಒಬ್ಬನು–ಇನ್ನೊಬ್ಬನಿಗೆ ಕತೆ ಹೇಳುವ ಧಾಟಿಯಲ್ಲಿಯೇ ಇದೆ; ಕೆಲ ಕಾದಂಬರಿಕಾರರು, ಕತೆಗಾರರು ಮಧ್ಯೆ ವೈಯಕ್ತಿಕ ಸಂಭಾಷಣೆಯನ್ನು ತರುವ ನಾಟಕೀಯತೆ ಕಾರಂತರ ಬರಹಗಳಲ್ಲಿ ಕತೆ—

ಕಾದಂಬರಿಗಳಲ್ಲಿ ಇಲ್ಲದಿರುವುದು ವೈಶಿಷ್ಟ್ಯ ಅವರ ವಿಡಂಬನ ಬರಹಗಳು ಸಮಾಜದ ನವೋನ್ನತಿಯ ದೃಷ್ಟಿಯಲ್ಲಿ ಆಪ್ಯಾಯ ಮಾನವಾಗಿವೆ.

ಕನ್ನಡದಲ್ಲಿ ವಿಶ್ವಕೋಶವನ್ನು ಮೊತ್ತ ಮೊದಲಿಗೆ ಬರೆದವರು ಕಾರಂತರು; ಅದೇ "ಬಾಲಪ್ರಪಂಚ" ಜಗತ್ತಿನ ಹಲವಾರು ವಿವಿಧ ವಿಷಯಗಳನ್ನೆತ್ತಿಕೊಂಡು, ಆಂಗ್ಲ ಭಾಷೆಯಲ್ಲಿ ಸಮೃದ್ಧವಾಗಿರುವ ವಿಶ್ವ ಕೋಶದ ಮಾದರಿಯನ್ನು ಕನ್ನಡಕ್ಕೆ ಒದಗಿಸಿದರು; ಮುಂದೆ ಅವರೇ "ವಿಜ್ಞಾನ ಪ್ರಪಂಚ"ವೆಂಬ ವಿಶ್ವಕೋಶ ಸಂಪುಟಗಳನ್ನು ಬರೆದರು. ಈ ಪ್ರಕಾರದಲ್ಲಿ ಕಾರಂತರು ಮೊದಲಿಗರು ಹಾಗೂ ಅಭಿನಂದನೀಯರು. ಭಾರತಾದ್ಯಂತ ಆಗಾಗ ಹಲವಾರು ಕಾರ್ಯಕ್ರಮಗಳ ನಿಮಿತ್ತವೂ ವಿಸ್ತಾರವಾಗಿ ಸಂಚರಿಸಿದ್ದು ಮಾತ್ರವಲ್ಲ ವಿಶ್ವದ ಹಲವು ಕಡೆಗಳ ಪ್ರಯಾಣವನ್ನು ಮಾಡಿ ಅವರು ಪ್ರಾಪಂಚಿಕ ಪರಿಸ್ಥಿತಿ—ಜನಜೀವನವನ್ನು ಕಣ್ಣಾರೆ ಕಂಡುಕೊಂಡವರು. ಆದ್ದರಿಂದ ವಿಶಾಲಮತಿಗಳಾದರು. ಯಕ್ಷಗಾನ ಕಲೆ ಕನ್ನಡನಾಡಿನ ಮಹತ್ವವಾದೊಂದು ಸಂಪ್ರದಾಯ; ಅದರಲ್ಲಿ ಸಾಹಿತ್ಯವಿದೆ, ಸಂಗೀತವಿದೆ, ತಾಳಲಯಗಳಿವೆ, ವೇಷಭೂಷಣಗಳಿವೆ; ನೃತ್ಯನಟನೆಗಳಿವೆ; ಜನಮನವನ್ನು ಸಂಸ್ಕರಿಸುವ ಈ ಉತ್ತಮ ಕಲಾಪ್ರಕಾರವನ್ನು ವಿದೇಶೀಯರು ಮೆಚ್ಚುವಂತೆ ಅಲ್ಲಿಗೂ ಒಯ್ದು ಪ್ರದರ್ಶಿಸಿದವರು; ಯಕ್ಷಗಾನ ಕಲೆಯ ಉತ್ತಮ ಅಭ್ಯಾಸದಿಂದ ಒಳ್ಳೆಯ ಗ್ರಂಥಗಳನ್ನು ರಚಿಸಿ ಆ ಕಲಾಪ್ರಕಾರಕ್ಕೆ ಯೋಗ್ಯ ಸ್ಥಾನವನ್ನು ಕಲ್ಪಿಸಿದ ಮಹನೀಯರು.

ಪರಿಸರ ಪ್ರೇಮ ಕಾರಂತರ ಕೊನೆಯ ದಿನಗಳ ಸಾಧನೆಯಾಗಿತ್ತು. ಆ ಕ್ಷೇತ್ರದಲ್ಲಿಯೂ ಅವರು ಅಖಿಲ ಭಾರತ ಖ್ಯಾತಿಯನ್ನು ಗಳಿಸಿದರು. ಪ್ರಕೃತಿಯ ಚೆಲುವನ್ನು, ಪರಿಸರದ ಸೌಂದರ್ಯವನ್ನು ಕೆಡಿಸುವ ಯಾವ ಸರಕಾರದ ಅಥವಾ ದೇಶೀಯ ವಿದೇಶೀಯ ಬಂಡವಾಳಗಾರ ಕೆಲಸಗಳಿರಲಿ ಅವೆಲ್ಲವನ್ನೂ ನಿಷ್ಠುರ ಸತ್ಯವಾದಿಯಾಗಿ ಖಂಡಿಸುತ್ತಿದ್ದರು. ಜೀವನ ಕೃತಿ, ಯಾವಾಗಲೂ ಅದು ಸಹಜ ಸುಂದರವಾಗಿರಬೇಕೆಂಬುದೇ ಅವರ ಲೇಖನ ಭಾಷಣ ಹಾಗೂ ಇತರ ಎಲ್ಲಾ ನಿರಂತರ ಚಟುವಟಿಕೆಗಳ ಗುರಿಯಾಗಿತ್ತು; ಅದನ್ನು ಅತ್ಯುತ್ತಮವಾದ ರೀತಿಯಲ್ಲಿ ಕಾರಂತರು ಸಾಧಿಸಿರುವರು; ಸಾಧಿಸಿ ಜನ ಮನ್ನಣೆ ಪಡೆದಿರುವರು.

ಇಂತಹ ಶ್ರೇಷ್ಠ ಸಾಧನೆಗಳಿಗಾಗಿ ಶಿವರಾಮ ಕಾರಂತರಿಗೆ ದೊರೆತ ಪ್ರಶಸ್ತಿ ಗೌರವಗಳು ಅಸಂಖ್ಯ; ದೇಶ ವಿದೇಶಗಳ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಹಲವು ಡಾಕ್ಟರೇಟ್ ಬಿರುದು ನೀಡಿವೆ; ರಾಜ್ಯ, ಕೇಂದ್ರ ಸಾಹಿತ್ಯ ಅಕಾಡೆಮಿಗಳು ಗೌರವಿಸಿವೆ. ದೇವರಾಜಬಹದ್ದೂರ್ ಬಹುಮಾನ ದೊರಕಿದೆ. ಶಾಂತಿನಿಕೇತನದ ದೇಶಿಕೋತ್ತಮ ಡಾಕ್ಟರೇಟ್ ಸಿಕ್ಕಿದೆ; ಪಂಪ ಪ್ರಶಸ್ತಿ ಬಂದಿದೆ. ಪದ್ಮಭೂಷಣ ಪ್ರಶಸ್ತಿ ದೊರಕಿದೆ. ಜ್ಞಾನಪೀಠ ಪ್ರಶಸ್ತಿ ಪಡೆದಿದ್ದಾರೆ. ಇಂತು ಹಲವಾರು ಗೌರವ ಸನ್ಮಾನ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದು ಕೀರ್ತಿಶಾಲಿಗಳಾಗಿದ್ದಾರೆ. ದೇಶ ವಿದೇಶಗಳಲ್ಲಿಯೂ ಚಿರಸ್ಮರಣೀಯರಾಗಿದ್ದಾರೆ



೧೯೫೫ರಲ್ಲಿ ಮೈಸೂರಿನಲ್ಲಿ ನಡೆದ ೩೭ ನೇ ಸಾಹಿತ್ಯ ಸಮ್ಮೇಳನದ
ಅಧ್ಯಕ್ಷರಾಗಿದ್ದ ಕಾರಂತರು

ಇಂತು ಶಿವರಾಮ ಕಾರಂತರ ಬದುಕೂ ಪೂರ್ಣ, ಬರಹವೂ ಪೂರ್ಣ. ಕಳೆದು, ಕೂಡಿಸಿ, ಗುಣಿಸಿ, ಭಾಗಿಸಿ, ಹೇಗೆ ನೋಡಿದರೂ ಅವರ ಜೀವನ ಸಾಧನೆ ಸಿದ್ಧಿಗಳೆಲ್ಲವೂ ಪೂರ್ಣ. ಅವರ ಶತಮಾನ ಹತ್ತಿರದ ಜೀವನ ಯಾತ್ರೆಯೂ ಪೂರ್ಣವೇ.

* * * * *

೧೯೯೭ರ ಡಿಸೆಂಬರ್ ೧೧, ೧೨, ೧೩ ಹಾಗೂ ೧೪ ರಂದು ಮಂಗಳೂರಿನಲ್ಲಿ ಅಖಿಲ ಭಾರತ ೬೬ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ನಿಶ್ಚಯವಾಗಿತ್ತು; ವಯೋಗುಣಕ್ಕೆ ಅನುಗುಣವಾದ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಶುಶ್ರೂಷೆ ಪಡೆಯುತ್ತಿದ್ದವರು, ಸಮ್ಮೇಳನದ ಮೊದಲ ದಿನ ಕೀರ್ತಿಶೇಷರಾದರೆಂಬ ಅತ್ಯಂತ ವಿಷಾದದ ವಾರ್ತೆ ಬಂತು; ನಾಡಿನ ಸಮಸ್ತ ಜನತೆಯೂ ದುಃಖದಲ್ಲಿ ಮುಳುಗಿತು. ಸಮ್ಮೇಳನಕ್ಕೆ ಸಕಲ ಸಿದ್ಧತೆಗಳೂ ಆಗಿದ್ದವು. ಮರುದಿನವೇ ಪ್ರಾರಂಭವಾಗಬೇಕಿತ್ತು. ಕಾರಂತರು ೪೩ ವರ್ಷಗಳ ಹಿಂದೆ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮನ್ನಣೆ ಪಡೆದವರು. ಸಾಹಿತ್ಯ ಪರಿಷತ್ತಿನ ಅಧಿಕಾರಿಗಳು, ಸ್ವಾಗತ ಸಮಿತಿಯವರೂ, ಎಲ್ಲಾ ಸಿದ್ಧತೆ ಪೂರ್ಣವಾಗಿರುವಾಗ, ಸಮ್ಮೇಳನವನ್ನು ನಿಲ್ಲುವುದು ಸಾಧ್ಯವಾಗದೆ, ಮೆರವಣಿಗೆಯಲ್ಲಿ ಅವರ ಭಾವ ಚಿತ್ರವನ್ನೂ ಇರಿಸಿ ಗೌರವ ತೋರಿಸಲು ನಿಶ್ಚಯವಾಯಿತು.

ಮಂಗಳೂರು ಮೈದಾನಿನ ಒಂದು ತುದಿಯಿಂದ ಇನ್ನೊಂದು ತುದಿವರೆಗೆ ಅಂದು ಕನ್ನಡ ಭುವನೇಶ್ವರಿಯ ಶೋಭಾಯಾತ್ರೆ; ಆ ಯಾತ್ರೆಯ ಅಲಂಕರಿಸಿದ ಉನ್ನತ ವಾಹನದಲ್ಲಿ ಕಾರಂತರ ಭಾವಚಿತ್ರವೂ ಮೆರೆಯಿತು. ಸಮ್ಮೇಳನಾಧ್ಯಕ್ಷನಾಗಿ ಆಯ್ಕೆಯಾದ ನಾನು, ಮಂಗಳೂರು ನಗರಪಾಲಿಕೆ ಮೇಯರ್, ನಾವೆಲ್ಲರೂ ಪಾದಯಾತ್ರೆ ಮಾಡಿದೆವು; ಸುಮಾರು ಹತ್ತುಸಾವಿರ ಜನ ಮೆರವಣಿಗೆಯಲ್ಲಿತ್ತು. ಅಧ್ಯಕ್ಷನಾದ ನಾನು ಅಷ್ಟುದೂರದ ಅಧ್ಯಕ್ಷ ಮೆರವಣಿಗೆಯಲ್ಲಿ ನಡೆದುಕೊಂಡೇ ಬಂದೆನೆಂಬುದೂ—ನನ್ನೀ ವಯಸ್ಸಿನಲ್ಲಿ—ಜನತೆಗೆ ಅಭಿಮಾನ ಹೆಚ್ಚಿತು. ನನಗೂ ಕಾರಂತರ ಭಾವ ಚಿತ್ರದ ಕೆಳಗಡೆ ದಾರಿಯುದ್ದಕ್ಕೂ ನಡೆದುಬರುವಲ್ಲಿ ಹೆಚ್ಚಿನ ಸಮಾಧಾನವಾಯಿತು. ಅಧ್ಯಕ್ಷರ ಮೆರವಣಿಗೆಯೂ ಸರಿಯಾಗಿ ಆದಂತೆ, ಕನ್ನಡ ಭುವನೇಶ್ವರಿಯ ಶೋಭಾಯಾತ್ರೆಯೂ ಜರಗಿದಂತೆ, ಕೀರ್ತಿಶೇಷ ಕಾರಂತರಿಗೂ ಗೌರವ ತಂದಿತು ಎಂಬುದು ಆ ಗೌರವದ ಮೆರವಣಿಗೆಯಲ್ಲಿ ನಾಡಿನಾದ್ಯಂತಹ ಅಸಂಖ್ಯ ಹಿರಿಯರೂ ಕಿರಿಯರೂ, ಮಹಿಳೆಯರೂ, ಮಹನೀಯರೂ ಪಾಲ್ಗೊಂಡಿದ್ದರೆಂಬುದು ಅಭಿಮಾನಕರವಾಯಿತು.

ಕೀರ್ತಿಶೇಷರಾದ ಶಿವರಾಮ ಕಾರಂತರ ಮರಣ ಅಕಾಲಿಕವೆಂದು ಹೇಳುವಂತಿಲ್ಲ; ಆದರೆ ಅವರು ಜೀವಂತವಾಗಿಲ್ಲವೆಂಬ ಅಭಾವವು ಇಂದು ನಾಡಿನ ಜನತೆಯನ್ನು ಇನ್ನಷ್ಟು ಚಿಂತೆಗೆ ಗುರಿಮಾಡಿದೆ; ಅಂತಹ ಯೋಗ್ಯ ವ್ಯಕ್ತಿಯನ್ನು ನಾಡು ಪಡೆದೀತೆ? ಎಂದು ಎಲ್ಲರೂ ಚಿಂತಿಸುವಂತಾಗಿದೆ. ಇಂತಹ ಚಿಂತೆಯ ಕಾರಣದಿಂದಲೇ ಶಿವರಾಮ ಕಾರಂತರು ನಿಧನ ಹೊಂದಿದರೂ ಅಜರಾಮರರು.

ಶ್ರೀ ಶಿವರಾಮ ಕಾರಂತರೂ–ನೆನಪು

ಕೋಣಂದೂರು ಲಿಂಗಪ್ಪ

ಅಲ, ವಿನೋಬನಗರ
ಶಿವಮೊಗ್ಗ

ಸುಮಾರು ಮೂರು ದಶಕಗಳ ಹಿಂದಿನ ಮಾತು. ಆಗ ನನ್ನ ರಾಜಕೀಯ ಗುರು ಮಾನ್ಯ ದಿ|| ಶಾಂತವೇರಿ ಗೋಪಾಲ ಗೌಡರು, ನಮ್ಮ ರಾಜ್ಯದ ಅಂದಿನ ಪ್ರಜಾಸೋಷಿಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಆಗ ನಮ್ಮ ಪಕ್ಷದ ಅಧ್ಯಕ್ಷರಾಗಿದ್ದವರು! ಹಿಂದಿನ ಮದ್ರಾಸ್ ರಾಜ್ಯದಲ್ಲಿ ಸಚಿವರಾಗಿದ್ದ ದಿ|| ರಾಮಕೃಷ್ಣಕಾರಂತರು. ಶ್ರೀ ರಾಮ ಕೃಷ್ಣಕಾರಂತರು ಶ್ರೀ ಶಿವರಾಮಕಾರಂತರ ಅಣ್ಣ.

ಆ ವರ್ಷ ನಮ್ಮ ಪಕ್ಷದ ರಾಜ್ಯ ಸಮ್ಮೇಳನ ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರದಲ್ಲಿ ನಡೆಯಿತು. ಇದರ ಉದ್ಘಾಟನೆ ಮಾಡಿದವರು, ಶ್ರೀ ಜವಹರ ಲಾಲ್‌ನೆಹರೂ ಅವರ ಪ್ರಧಾನ ಮಂತ್ರಿತ್ವದ ಕಾಲದಲ್ಲೆ, ಮೊಟ್ಟ ಮೊದಲ ಬಾರಿ ಕಾಂಗ್ರೆಸ್ಸೇತರ ಪಕ್ಷದ ಪ್ರಪ್ರಥಮ ಮುಖ್ಯ ಮಂತ್ರಿ–ಕೇರಳ ರಾಜ್ಯದ ಮುಖ್ಯ ಮಂತ್ರಿ ಶ್ರೀ ಪಟ್ಟಂಥಾನುಪಿಳ್ಳೆ ಅವರು. ಶ್ರೀ ಗೌಡ ರೊಂದಿಗೆ ನಾನೂ ಸಮ್ಮೇಳನದಲ್ಲಿ ಭಾಗವಹಿಸಿದ್ದೆ.

ಶ್ರೀ ಪಿಳ್ಳೆಯವರು ಒಂದು ಗಂಟೆ ಹನ್ನೆರಡು ನಿಮಿಷಗಳ ಕಾಲ ಇಂಗ್ಲೀಷ್ ಭಾಷೆಯಲ್ಲಿ ಉದ್ಘಾಟನಾ ಭಾಷಣ ಮಾಡಿ ದರು. ಈ ಇಂಗ್ಲೀಷ್ ಭಾಷಣದ ಕನ್ನಡ ಅನುವಾದಕ್ಕೆ, ನಮ್ಮ ಪಕ್ಷದ ಸಕ್ರಿಯಾ ಸದಸ್ಯರಾಗಿದ್ದ ಶ್ರೀ ಶಿವರಾಮಕಾರಂತ ರನ್ನು ಮೊದಲೇ ಕೇಳಿಕೊಳ್ಳಲಾಗಿತ್ತು. ಶ್ರೀ ಕಾರಂತರು ವೇದಿಕೆ ಮೇಲೆ ಕುಳಿತು ಶ್ರೀ ಪಿಳ್ಳೆಯವರ ಭಾಷಣವನ್ನು ತದೇಕ ಚಿತ್ತರಾಗಿ ಆಲಿಸುತ್ತಾ ಕುಳಿತ್ತಿದ್ದರು.

ಶ್ರೀ ಪಿಳ್ಳೆಯವರ ಭಾಷಣದ ನಂತರ ಅನುವಾದ ಕಾರ್ಯಕ್ರಮ. ಶ್ರೀ ಶಿವರಾಮ ಕಾರಂತರು ಧ್ವನಿವರ್ಧಕ ಮುಂದೆ ಬಂದು ನಿಂತರು.


ನಾವೆಲ್ಲ ಶ್ರೀ ಕಾರಂತರು ಶ್ರೀ ಪಿಳ್ಳೆಯವರ ಭಾಷಣದ ಸಾರಾಂಶ ಹೇಳಬಹುದು ಎಂದು ಭಾವಿಸಿದ್ದೆವು.

ಆದರೆ ನಡೆದದ್ದೇ ಬೇರೆ. ಶ್ರೀ ಕಾರಂತರು ಮೊದಲು "ಶ್ರೀ ಪಟ್ಟಂಥಾನುಪಿಳ್ಳೆ ಯವರು ಈವರೆಗೆ ಹೀಗೆ ಹೇಳಿದರು . . ." ಎಂಬ ಒಂದು ಮಾತನ್ನು ಹೇಳಿ, ಮುಂದಿನ ಪ್ರತಿ ವಾಕ್ಯವನ್ನೂ ಶ್ರೀ ಪಿಳ್ಳೆಯವರು ಹೇಳಿದಂತೆಯೇ, ಒಂದು ಮಾತೂ ಕ್ರಮ ತಪ್ಪದೆ ವಾಕ್ಯದ ನಂತರ ವಾಕ್ಯಗಳನ್ನು ಕನ್ನಡದಲ್ಲಿ ಅನುವಾದಿಸಿದರು. ಅನುವಾದದ

ಅವಧಿ ಸರಿಯಾಗಿ ಒಂದು ಗಂಟೆ ಹನ್ನೆರಡು ನಿಮಿಷವಾಗಿತ್ತು. ಕಡೆಯಲ್ಲಿ ಕಾರಂತರು "ಇದಿಷ್ಟು ಮಾತುಗಳನ್ನೂ ಕ್ರಮವಾಗಿ ಶ್ರೀ ಪಿಳ್ಳೆಯವರು ಈವರೆಗೆ ಹೇಳಿದ್ದನ್ನು ನಾನು ನಿಮಗೆ ಕನ್ನಡದಲ್ಲಿ ಹೇಳಿದ್ದೇನೆ" ಎಂದು ಹೇಳಿ ಕುಳಿತರು.

ಅನುವಾದ ಮುಗಿದ ಕೂಡಲೇ ಶ್ರೀ ಪಿಳ್ಳೆಯವರು ತಮ್ಮ ಕೈಗಡಿಯಾರ ನೋಡಿ, ಕಾರಂತರ ಹತ್ತಿರ ಧಾವಿಸಿ ಅಪ್ಪಿ, ನಮಸ್ಕರಿಸಿದ ದೃಶ್ಯ ಈಗಲೂ ನನ್ನ ಕಣ್ಣ ಮುಂದೆ ನಡೆದಂತೆ ಕಾಣಿಸುತ್ತಿದೆ.

ಅಂದು ಸಂಜೆ ಮಾನ್ಯ ಗೋಪಾಲ ಗೌಡರು ಕಾರಂತರ ಅನುವಾದದ ವಿಷಯ ಪ್ರಸ್ತಾಪಿಸಿ, "ಶ್ರೀ ಶಿವರಾಮಕಾರಂತರು ಒಬ್ಬರೇ ಇಂದು ನಮ್ಮ ಕನ್ನಡದ ಜ್ಞಾನದ ಶಕ್ತಿ ಮಾತ್ರವಲ್ಲದೆ, ಜ್ಞಾಪಕದ ಶಕ್ತಿಯೂ ಹೌದೆಂದು ಇಂದು ಸಾಬೀತಾಗಿದೆ" ಎಂದು ಪ್ರಶಂಸಿಸಿದ್ದೂ, ನನಗಿನ್ನೂ ಕೇಳಿಸುತ್ತಿದೆ.



ಕಾರಂತರೇ ನಮ್ಮ ಕೊಂಬು ನಮ್ಮ ಕಹಳೆ
ಕಾರಂತರೇ ನಮ್ಮ ಧ್ರುವತಾರೆ
ಕಾರಂತರೇ ನಮ್ಮ ಉತ್ತರಮುಖಿ
ಕಾರಂತರನ್ನು ಪಡೆದ ಕನ್ನಡ ಪರಮಸುಖಿ

—ಎಸ್. ವಿ. ಪರಮೇಶ್ವರಭಟ್ಟ

ಕಾರಂತರನ್ನು ಕುರಿತು

ಡಾ|| ಸಿ. ಪಿ. ಕೃಷ್ಣಕುಮಾರ್
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

೧

ಆಧುನಿಕ ಕನ್ನಡ ಸಾಹಿತ್ಯವನ್ನು ಆವರಿಸಿ ನಿಂತ ಅನನ್ಯರು, ಬದುಕು ಬರಹ ಎರಡರಲ್ಲೂ ಶಿಖರಪ್ರಾಯರು ಇಬ್ಬರು : ಕುವೆಂಪು ಮತ್ತು ಶಿವರಾಮ ಕಾರಂತ. ಕುವೆಂಪು ತಮ್ಮ ಸಾಹಿತ್ಯದಲ್ಲಿ ಮಲೆನಾಡಿನ ಗಿರಿವನರಾಜಿಯನ್ನು ಸೆರೆಹಿಡಿದರೆ, ಕಾರಂತರು ದಕ್ಷಿಣ ಕನ್ನಡದ ಕಡಲನ್ನು ಹಿಡಿದಿಟ್ಟರು. ಅವರಿಗೆ ಅವರೇ ಸಮಾನರು—ಆಕಾಶಕ್ಕೆ ಆಕಾಶ, ಸಾಗರಕ್ಕೆ ಸಾಗರ ಹೇಗೊ ಹಾಗೆ!

ಶಿವರಾಮ ಕಾರಂತರನ್ನು ಕರ್ನಾಟಕದ ಲಿಯೊನಾರ್ಡೊ ಡಾ ವಿಂಚಿ ಎಂದು ಉತ್ಪ್ರೇಕ್ಷೆಯ ಅಂಜಿಕೆಯಿಲ್ಲದೆ ಕರೆಯಬಹುದು. ಅವರ ಪ್ರತಿಭೆಗೆ ಮತ್ತು ಧೀಶಕ್ತಿಗೆ ಬೆರಗು ತರುವಷ್ಟು ಹರಹು ಮತ್ತು ಬಹುಮುಖತೆ. ಅವರ ಪಾಲಿಗೆ 'ಬಾಳ್ವೆಯೆ ಬೆಳಕು'; ಆ ಬೆಳಕಿನಲ್ಲಿ ಅವರು ಬಾನಿನವರೆಗೂ ಬೆಳೆದರು; ಒಬ್ಬ ವ್ಯಕ್ತಿ ಇಷ್ಟೆಲ್ಲ ಕೆಲಸ ಮಾಡುವುದು ಸಾಧ್ಯವೆ ಎಂಬ ಪ್ರಶ್ನೆಗೆ ಎಡೆಯಾಗುವಷ್ಟು ದುಡಿದರು; ಯಾವೊಂದು ಕ್ಷೇತ್ರದಲ್ಲೂ ತಮ್ಮ ಮುದ್ರೆ ಮೂಡಿಸದೆ ಬಿಡಲಿಲ್ಲ.

ಸಾಹಿತ್ಯ ಕಾರಂತರ ಒಂದು ಆಸಕ್ತಿಯಾಗಿತ್ತಷ್ಟೆ; ವಸ್ತುತಃ ಅವರು ಸರ್ವಕುತೂಹಲಿ: ಜಂಗಮ ಜ್ಞಾನಕೋಶ; 'ಹಿಂಡನಗಲಿದ ಗಜ'ದಂತೆ ಜಗವನ್ನೆಲ್ಲ ಸುತ್ತಿದ ವಿಶ್ವಮಾನವ. ಅವರಲ್ಲಿ ಒಬ್ಬ ಕಲಾವಿದ ಮತ್ತು ಒಬ್ಬ ವಿಜ್ಞಾನಿ ವಿರಳ ರೀತಿಯಲ್ಲಿ ಸಂಗಮಿಸಿದ್ದರು. ಎಂತಲೇ ಅವರು ಒಂದರ್ಥದಲ್ಲಿ ಸೀಮಾಪುರುಷರೂ ಇನ್ನೊಂದರ್ಥದಲ್ಲಿ ನಿಸ್ಸೀಮರೂ ಆಗಿದ್ದರು.

ಉಳಿದ ಕಲೆಗಳ ಮಾತಿರಲಿ, ವಿಜ್ಞಾನದ ಮಾತಿರಲಿ, ಸಾಹಿತ್ಯವೊಂದನ್ನೆ ತೆಗೆದುಕೊಂಡರೂ ಕಾರಂತರ ಸಾಧನೆಯೊಂದು ಚೋದ್ಯ. ಯಾವೊಂದು ಪ್ರಕಾರವೂ ಅವರ ಲೆಕ್ಕಣಿಯಿಂದ ವಂಚಿತವಾಗಲಿಲ್ಲ; ತಮ್ಮ ಕೃತಿಗಳ ಸಂಖ್ಯೆ ಅವರಿಗೇ ಗೊತ್ತಿರಲಿಲ್ಲ! ಅವರ ಕಾದಂಬರಿಗಳಂತೂ ಜೀವನಾನುಭವದ ಸಮೃದ್ಧಿಯಿಂದ ತೊನೆಯುತ್ತಿವೆ. ಅನುಭವೈಕ ಪ್ರಾಮಾಣ್ಯ ಅವರದಾಗಿತ್ತು ಎಂಬುದೂ ಗಮನಾರ್ಹ.

ಮಾನವೀಯತೆ ಕಾರಂತರ ವ್ಯಕ್ತಿತ್ವ ಸಾಹಿತ್ಯಗಳ ಮೂಲ ಸೆಲೆ ಮತ್ತು ನೆಲ

ಅವರು ದೇವರನ್ನು ನಂಬದಿರಬಹುದು; ಆದರೆ ಮಾನವ್ಯವೆ ಅವರ ಭಾಗಕ್ಕೆ ದೇವರಾಗಿತ್ತು. ದೇವರನ್ನು ನಂಬುವವರನ್ನು ಕುರಿತು ಅವರಿಗೆ ತಿರಸ್ಕಾರವಿರಲಿಲ್ಲ. ಉಳಿದೆಲ್ಲ ವಿಷಯಗಳ ಬಗೆಗೆ ಎಂತೋ ಅಂತೆ ಅಧ್ಯಾತ್ಮದ ಬಗೆಗೂ ಅವರಲ್ಲಿ ಕುತೂಹಲವಿತ್ತು. ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯೊಂದನ್ನು ಅವರು ಕನ್ನಡಿಸಿದ್ದಾರೆ. ಸ್ವಾಮಿ ರಾಮ ಅವರ 'ಅಮಾಂಗ್ ದಿ ಹಿಮಾಲಯನ್ ಮಾಸ್ಟರ್ಸ್' (ಹಿಮಾಲಯದ ಮಹಾತ್ಮರೊಡನೆ) ಎಂಬ ಮಹದ್ಗ್ರಂಥವೊಂದರ ಪರಿಚಯವನ್ನು ಅವರು ಈಚೆಗೆ 'ಸುಧಾ' ಪತ್ರಿಕೆಯಲ್ಲಿ ಮಾಡಿಕೊಟ್ಟದ್ದುದು ನೆನಪಾಗುತ್ತದೆ. ಮೇಲುನೋಟಕ್ಕೆ ಮಹಾಪುರುಷರು ಲಭ್ಯರಲ್ಲ!

ಕಾರಂತರು ಅಹಂಕಾರಿ ಎಂದು ಯಾರಿಗಾದರೂ ಅನಿಸಿದ್ದರೆ ಅಶ್ಚರ್ಯವಿಲ್ಲ. ದಿಟವಾಗಿ ಅವರದು ಅಸೀಮ ಆತ್ಮಪ್ರತ್ಯಯ. ಆದರೆ ಅವರು ಅಷ್ಟೇ ವಿನಯಶೀಲರೆಂಬುದನ್ನು ಮರೆಯಬಾರದು. ಕನ್ನಡದಲ್ಲಿ ಮೊತ್ತ ಮೊದಲು ವಿಶ್ವಕೋಶ, ಅರ್ಥಕೋಶಗಳ ಪ್ರಯತ್ನವನ್ನು ಮಾಡಿದ ಕಾರಂತರು ತಮ್ಮ 'ಸಿರಿಗನ್ನಡ ಅರ್ಥಕೋಶ'ದ 'ಮುನ್ನುಡಿ'ಯಲ್ಲಿ ಆಡಿರುವ ಈ ಮಾತುಗಳನ್ನು ಅವಶ್ಯವಾಗಿ ಲಕ್ಷಿಸಬೇಕು: "....ಈ ಕೆಲಸಕ್ಕೆ ಬೇಕಾಗುವ ವಿದ್ವತ್ತು ನನಗೆ ಮೊದಲೇ ಇಲ್ಲ. ನಾನು ಭಾಷಾ ವಿಚಾರದಲ್ಲಿ ಕೇವಲ ವಿದ್ಯಾರ್ಥಿ. ಇಷ್ಟಿದ್ದರೂ ನಿಘಂಟು ರಚನೆಯ ಸಾಹಸಕ್ಕೆ ಕೈಯಿಕ್ಕಿದೆ. ಕಾರಣವಿಷ್ಟೆ—'ಕನ್ನಡ-ಕನ್ನಡ' ನಿಘಂಟಿನ ಕೊರತೆ ನಮ್ಮ ನಾಡಿನಲ್ಲಿದೆ....ಅದನ್ನು ನಿವಾರಿಸುವ ಸಾಹಸವನ್ನು ಒಂದು ಸಂಸ್ಥೆಯೋ, ನನಗಿಂತ ಶಕ್ತರಾದವರೋ ಮಾಡಬೇಕಾಗಿತ್ತು. ಯಾರೂ ಮುಂದುವರಿಯಲು ಸಾಹಸಮಾಡರಾದರೆ ನನ್ನಂಥವನು ಆ ರಾಜ್ಯದಲ್ಲಿ ಅಂಬೆಗಾಲಿಕ್ಕುವುದು ತಪ್ಪಲ್ಲ. ಯಾವನು ಕೆಲಸ ಮಾಡುವುದಾದರೂ ಅವನವನ ಮಿತಿ ಅವನವನ ಕೆಲಸಗಳಿಗೆ ಬಂದೇ ತೀರಬೇಕು. ಹಾಗಿರಲು ನನ್ನ ಕೊರತೆಗಳೆಲ್ಲ ನನ್ನ ಈ ಕೃತಿಯಲ್ಲಿ ಮೂಡುವುದು ಸ್ವಾಭಾವಿಕ." ವಿದ್ವಾಂಸರೆನಿಸಿಕೊಂಡವರಲ್ಲಿ ಇಂಥ ಅರಿವು ಎಷ್ಟು ಮಂದಿಗಿರುತ್ತದೆ? ಕಾರಂತಚೇತನ ಅಂಬೆಗಾಲ ಶಿಶುವಾಗಿ ಉಳಿಯಲಿಲ್ಲ, ತ್ರಿವಿಕ್ರಮನಾಗಿ ವಿಕಸಿಸಿತು ಎಂಬುದನ್ನು ನೆನೆಯಬೇಕು.

೨

ಶಿವರಾಮ ಕಾರಂತರದು "ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ" ಎನ್ನುವಂತಹ ವ್ಯಕ್ತಿತ್ವ; ಅದು ಮೇಲೆ ಗಟ್ಟಿ, ಒಳಗೆ ಮೃದು ಮತ್ತು ಸ್ವಾದು. ಅವರು ಅತಿಥಿಸತ್ಕಾರ ಪ್ರಿಯರಾಗಿದ್ದರು; 'ಅತಿಥಿದೇವೋಭವ" ಎಂಬ ಸೂಕ್ತಿಯನ್ನು ಪಾಲಿಸುತ್ತಿದ್ದರು. ಯಾರೋ ಒಬ್ಬರು ತಮ್ಮ ಲೇಖನವೊಂದರಲ್ಲಿ ತಿಳಿಸಿದ್ದ ವಿಶಿಷ್ಟ ಸಂಗತಿಯೊಂದು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ. ರಾತ್ರಿ ಕಾರಂತರು ತಮ್ಮ ಅತಿಥಿಗಳಿಗೆ ಸುಖನಿದ್ರೆ ಬಂದಿದೆ ಎಂಬುದನ್ನು ಖಚಿತಪಡಿಸಿಕೊಂಡ ನಂತರವೆ ತಾವು ಮಲಗುತ್ತಿದ್ದರಂತೆ!

ಬಹಳ ಹಿಂದೆ 'ಕಸ್ತೂರಿ' ಪತ್ರಿಕೆಯಲ್ಲಿ ಕಾರಂತರನ್ನು ಕುರಿತ ಸಂದರ್ಶನ ಲೇಖನ

ವೊಂದು ಪ್ರಕಟವಾಗಿತ್ತು. ಅದರಲ್ಲಿ ಸಂಪರ್ಶಕರು ಕಾರಂತರನ್ನು ಈ ಪ್ರಶ್ನೆ ಕೇಳಿದ್ದರು: "ನಿಮ್ಮ ಬದುಕಿನ ಅತ್ಯಂತ ಸ್ಮರಣೀಯವಾದ ಸಂಗತಿ ಯಾವುದು?" ಅದಕ್ಕೆ ಕಾರಂತರ ಉತ್ತರ: "ನನ್ನ ಹಿರಿಯ ಮಗ ಹರ್ಷ ಮುಂಬಯಿಯಲ್ಲಿ ತೀರಿಕೊಂಡಾಗ, ಅನೇಕ ಮಿತ್ರರು ನನಗಿತ್ತ ಸಾಂತ್ವನ, ಸಹಾನುಭೂತಿ!" ಅವರಿಗೆ ತಮ್ಮ ಮಗನ ಮರಣಕ್ಕಿಂತ ಜನ ವ್ಯಕ್ತಪಡಿಸಿದ ಅಂತಃಕರಣ ಮುಖ್ಯವಾಗಿ ಕಂಡಿತು! ಕಾರಂತರು ಸ್ವತಃ ಅಂತಃಕರಣಶಾಲಿಗಳಾಗಿದ್ದರು ಎನ್ನುವುದು ಮೂಲಭೂತ ವಿಷಯ.

ಕಾರಂತರ ನಿಕಟಸಂಪರ್ಕ ನನಗಿರಲಿಲ್ಲ. ಅವರನ್ನು ನಾನು ಮೊದಲಬಾರಿಗೆ ಕಂಡದ್ದು ಸುಮಾರು ನಲವತ್ತೈದು ವರ್ಷಗಳ ಹಿಂದೆ; ಶಿವಮೊಗ್ಗೆಯ ಆಗಿನ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ. ಕಾಲೇಜಿನ ಸಾಹಿತ್ಯ ಸಂಘದ ಕಾರ್ಯದರ್ಶಿಗಳಾಗಿದ್ದ ಪಿ. ಲಂಕೇಶ್ ಅವರು ಕಾರಂತರನ್ನು ಯಾವುದೋ ಕಾರ್ಯಕ್ರಮಕ್ಕೆ ಕರೆಸಿದ್ದರು. ತಮ್ಮ ಸ್ವಾಗತಭಾಷಣದಲ್ಲಿ ಅವರು "ನಾನು ಪತ್ರವಲ್ಲಿ ಬರೆದಿದ್ದಂತೆ ಕಾರಂತರು...." ಎಂದು ಏನೋ ತಲೆಹರಟೆಯ ಮಾತನ್ನಾಡಿದರು (ಅದೇನೆಂದು ಖಚಿತವಾಗಿ ನೆನಪಿಲ್ಲ.) ಕಾರಂತರು ತಮ್ಮ ಉಪನ್ಯಾಸದ ಆರಂಭದಲ್ಲಿ ಅದಕ್ಕೆ ಪ್ರತಿಕ್ರಿಯೆಯಾಗಿ ಒಂದು ವಾಗ್ಬಾಣವನ್ನು ಬಿಟ್ಟರು: "ಲಂಕೇಶರು ತಮ್ಮ ಪತ್ರದಲ್ಲಿ ಏನು ಬರೆದಿದ್ದರೋ ನನಗೇ ಗೊತ್ತಿಲ್ಲ; ನಾನು ಯಾವುದೇ ಪತ್ರದ ಆದಿ, ಅಂತ್ಯಗಳನ್ನು ಮಾತ್ರ ಓದುವವ!"

ಈಚಿನ ಒಂದು ನೆನಪು. ಕೆಲವು ವರ್ಷಗಳ ಹಿಂದೆ ನಾನು ಮಾನಸಗಂಗೋತ್ರಿಯ ಪಠ್ಯೇತರ ಚಟುವಟಿಕೆಗಳ ಸಂಘದ ಅಧ್ಯಕ್ಷನಾಗಿದ್ದೆ. ಆದರ ಸಮಾರೋಪ ಸಮಾರಂಭಕ್ಕೆ ಕಾರಂತರನ್ನು ಆಹ್ವಾನಿಸಿದೆವು. ಅವರು ಒಪ್ಪಿ, "ನನ್ನ ಮೋಟರು ವೆಚ್ಚವನ್ನು ನೀವು ಭರಿಸಬೇಕು" ಎಂಬ ಷರತ್ತು ಹಾಕಿ, ಸಮಾರಂಭಕ್ಕೆ ಬಂದರು. ನನಗೊಂದು ಸಣ್ಣ ಸಮಸ್ಯೆ ಹುಟ್ಟಿಕೊಂಡಿತು. ಸಂಘದ ಹಣ ಬಹುಪಾಲು ವ್ಯಯವಾಗಿ, ಕಾರಂತರ ಕಾರಿನ ವೆಚ್ಚಕ್ಕೆ ತುಸು ಕೊರೆ ಬಿದ್ದಿತ್ತು, ನನಗೋ ದಿಗಿಲು: ವ್ಯವಹಾರದಲ್ಲಿ ಕಟ್ಟುನಿಟ್ಟಿನ ಕರಾರುವಾಕ್ಕು ವ್ಯಕ್ತಿ ಎನಿಸಿದ ಕಾರಂತರು ಪೂರ್ತಿಹಣಬೇಕು ಎಂದರೇನು ಮಾಡುವುದು? ನೋಡೋಣ ಎಂದುಕೊಂಡು, ಕಡೆಯಲ್ಲಿ ಇದ್ದಬದ್ದ ಹಣವನ್ನೆಲ್ಲ ಕೊಟ್ಟು, ಇಷ್ಟು ಮೊತ್ತವಿದೆ ಎಂದು ಅಳುಕುತ್ತಲೆ ಹೇಳಿದೆ. ಕಾರಂತರು ಪ್ರತಿಕ್ರಿಯಿಸುವುದಿರಲಿ, ಹಣವನ್ನು ಎಣಿಸದೆಯೆ ಜೇಬಿಗೆ ಹಾಕಿಕೊಂಡರು! ನನಗೆ ಅಚ್ಚರಿಯಾಯಿತು; ಅಲ್ಲದೆ, ಅವರ ಬಗ್ಗೆ ನನಗಿದ್ದ ಪೂರ್ವಗ್ರಹಿಕೆಯೊಂದು ತೊಲ ಗಿತು.

ಹೀಗೆಯೆ ಕಾರಂತರ ವಿಷಯದಲ್ಲಿ ಅನೇ ತಪ್ಪು ತಿಳಿವಳಿಕೆಗಳು, ಪೂರ್ವಗ್ರಹಗಳ ಹಲವರಿಗೆ ಇದ್ದುವೆಂದು ತೋರುತ್ತದೆ ಎಲ್ಲದೊಡ್ಡವರ ವಿಷಯದಲ್ಲಿ ಇರುವಂತೆ ಆದರೆ ಅವೆಲ್ಲವನ್ನು ಮೀರಿದ ಘನ ಶಿವರಾಮ ಕಾರಂತರದಾಗಿತ್ತು. ಅವ ಕಣ್ಮರೆಯಿಂದ ನಾಡಿಗೆ ಎಂತಹ ನಷ್ಟ ಅಂಥವರು ಮತ್ತೆ ಹುಟ್ಟಿಬರುತ್ತಾರೆಯೆ?

ಏಕಾಂಗ ವೀರ

ದಿ|| ಎ. ಪಿ. ಸುಬ್ಬಯ್ಯ
'ಮರಿಕೆ ಮನೆ', ಆರ್ಯಾಪು
ಪುತ್ತೂರು.

ದಿವಂಗತ ಎ. ಪಿ. ಸುಬ್ಬಯ್ಯನವರು ಶಿವರಾಮ ಕಾರಂತರ ಸಹಪಾಠಿ—ಕಾಲೇಜಿನ ಆ ಕೆಲವು ದಿನಗಳಲ್ಲಿ. ಮುಂದೆ ಪುತ್ತೂರಿನಲ್ಲಿ ಕಾರಂತರ ನಿಕಟವರ್ತಿ, ಮಿತ್ರ ಮತ್ತು ಪುತ್ತೂರ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಕಾರಂತರ ಸಾಹಿತ್ಯಿಕ ಚಟುವಟಿಕೆಗಳಿಗೆ ಬೆಂಬಲವಾಗಿ ನಿಂತಿದ್ದ ಹಿರಿಯ ಚೇತನ.

ಶ್ರೀ ಶಿವರಾಮ ಕಾರಂತರ ಪ್ರಥಮ ಪರಿಚಯ ನನಗಾದದ್ದು ಮಂಗಳೂರಲ್ಲಿ–ಸಾಧಾರಣ ೧೯೧೯-೧೯೨೦ ರಲ್ಲಿ–ಗವರ್ನ್‌ಮೆಂಟ್ ಕಾಲೇಜಿನಲ್ಲಿ. ಆದರೆ ಅದು ಕೇವಲ ದೃಶ್ಯಪರಿಚಯ. ತನ್ನ ಕಾಲೇಜ್ ವ್ಯಾಸಂಗವನ್ನು ಹಠಾತ್ತಾಗಿ ತ್ಯಜಿಸಿ, ಗಾಂಧೀಜಿಯವರ ಅಂದಿನ ಚಳುವಳಿಯಲ್ಲಿ ಮತ್ತು ಗಾಂಧೀಜಿಯವರು ಮಂಗಳೂರಿಗೆ ಬರಲಿದ್ದ ಕಾರ್ಯಗಳ ಮಂಗಳೂರು ಚಟುವಟಿಕೆಗಳಲ್ಲಿ ಭಾಗವಹಿಸಲು ನಮ್ಮ ಕಾಲೇಜು ಅಂಗಳದಿಂದ ಅವರು ಸೀದಾ ರಸ್ತೆಗೆ 'ಧಾವಿಸಿದ' ದೃಶ್ಯ ಈಗಲೂ ನಾನು ಸ್ಪಷ್ಟವಾಗಿ ಕಾಣಬಲ್ಲೆ. ಇಬ್ಬದಿ ಹೆಗಲಲ್ಲಿ ಗುಂಡಿಗಳಿಂದ ಮುಚ್ಚಬೇಕಾಗಿದ್ದ ಮಾದರಿಯ, ದಪ್ಪ-ಕೊಳವೇ ರೂಪದ ಕೈಗಳ ಶರ್ಟನ್ನು ತೊಟ್ಟು, (ಮದುವೆಯಾಗದವರು ಮಾತ್ರ ಉಡಬೇಕೆಂದು ತಿಳಿದಿದ್ದು ಅಡ್ಡಪಂಚೆ ಮಾತ್ರ ಉಡುತ್ತಿದ್ದ–ಕಚ್ಚೆಪಂಚೆ ವರ್ಜಿಸುತ್ತಿದ್ದ–ಕೊಡಗಿನವನಾದ ನನಗೆ ಬಹು ಆಶ್ಚರ್ಯಕರವಾಗಿ ತೋರುತ್ತಿದ್ದ) ಎಂಟು ಮೊಳ ಉದ್ದದ ಧೋತ್ರವನ್ನುಟ್ಟು, ಸ್ವಲ್ಪ ಮುಂದಕ್ಕೆ ಬಾಗಿ, ಸೀದಾ ರಸ್ತೆಗೆ ಓಡಿ ಹೋದ ಉತ್ಸಾಹೀ, ಸುಂದರ, ಗಂಭೀರ ಮುಖಮುದ್ರೆಯ ಅಂದಿನ ಶಿವರಾಮ ಕಾರಂತರ ಚಿತ್ರವನ್ನು ಈಗಲೂ ಸ್ಪಷ್ಟವಾಗಿ ನೆನಪಿಸಬಲ್ಲೆ.

ವ್ಯಾಸಂಗ ಕ್ಷೇತ್ರದಿಂದ ಹಠಾತ್ತಾಗಿ ರಾಜಕೀಯಕ್ಕೆ ಧುಮುಕಿದ ಯುವಕ–ಒಂದು ವಿಧದಲ್ಲಿ, ಅಷ್ಟೇ ಹಠಾತ್ತಾಗಿ ತನ್ನ ಕುಟುಂಬಕ್ಷೇತ್ರದಿಂದ ಹೊರಗೆ, ಆಗಲೇ ಧುಮುಕಿರುತ್ತಾನೆಂದು ನಾವು ಅಂದುಕೊಳ್ಳಬಹುದು.

ಈ ಸಂದರ್ಭದಲ್ಲಿ ಅವರ ಹಿರಿಯರು (ತಂದೆಯವರು) ಕೊಡಲಿದ್ದ ಸ್ಥಿರ, ಚರ

'ಕಾರಂತ ಪ್ರಪಂಚ'ದಿಂದ ಉದ್ಧೃತ

ಆಸ್ತಿಗಳನ್ನು ಸದುದ್ದೇಶದಿಂದ ಮತ್ತು ವಿನಯದಿಂದ ತ್ಯಾಗಮಾಡಿದ ಪ್ರೇಮ-ಗೌರವಪೂರಿತ ಭಾಗ ಅಂಥ ಒಂದು ಸಂದರ್ಭವಾಗಿದೆ. ಗಾಂಧೀಜಿಯವರ ಜೀವನ ಕ್ರಮಕ್ಕನುಸಾರವಾಗಿ ಕಾರಂತರು ತನಗೆ ತನ್ನ ತಂದೆಯವರು ಆವರೆಗೆ ಸಂತೋಷ ಪೂರಿತ ತೃಪ್ತಿಮಟ್ಟದ ವಿದ್ಯಾಬುದ್ಧಿ ಒದಗಿ-ಸಿರುವುದನ್ನು ವಿಮರ್ಶಿಸಿ, ಎಲ್ಲ ಮಕ್ಕಳಿಗೂ ಕೊಡಲಿದ್ದ ಸ್ಥಿರ, ಚರ ಆಸ್ತಿಗಳಲ್ಲಿ ತನಗೆ ಯಾವ ಅಂಶವೂ ಬೇಡ, ಅದನ್ನೆಲ್ಲ ತನ್ನ ಸಹೋದರ ಸಹೋದರಿಯರಿಗೆ ತಮ್ಮಿಷ್ಟ ಕಂಡಂತೆ ವಿಚಾರಿಸಿ ಹಂಚಬಹುದೆಂದು ತನ್ನ ತಂದೆಯರಿಗೆ ಆಗ್ಗೆ ತಿಳಿಸಿದ್ದಾರೆಂದೂ, ಹಾಗೆಯೆ ಆ ಸಂಬಂಧದ ಮುಂದಿನ ಕಾರ್ಯ ಜರುಗಿದೆಯೆಂದೂ ಕೆಲವು ವರ್ಷಗಳ ನಂತರ ನಾನು ತಿಳಿದ್ದಿದ್ದೇನೆ.

ಅವರ ಔದಾರ್ಯದ ನಿದರ್ಶನಗಳು ಅನೇಕ ಇವೆ; ಲೌಕಿಕವಾಗಿ ಬೆಲೆಕಟ್ಟಲು ಹೊರಟರೆ ಅವು ಚಿಕ್ಕವೂ, ದೊಡ್ಡವೂ ಎಂದು ತೋರಬಹುದು. ಆದರೆ ಅವರ (ಕಡಲ ತೀರದ ಪರಶುರಾಮ ಎಂಬ ಕಾಠಿಣ್ಯ ಚಿತ್ರದ ಹಿಂದಿನ) ಹೃದಯದ ಸ್ವಭಾವವನ್ನು ಮಾತ್ರ, ಔದಾರ್ಯದ ಭಾಗವಲ್ಲಿ, ಹೇಗಿತ್ತೆಂದೆನ್ನಲು ಕೆಲವು ಚಿಕ್ಕ-ದೊಡ್ಡ ಘಟನೆಗಳನ್ನು ನಾನು ತಿಳಿಸ ಬಯಸುತ್ತೇನೆ.

ಅಡಿಕೆ ಬೇಸಾಯಗಾರರ ಒಂದು ಸಂಘದವರು ಕೃಷಿಕರ ಮೂಲಭೂತ ಹಕ್ಕುಗಳ ಉಳಿವಿಗಾಗಿ ಸುಪ್ರೀಂ ಕೋರ್ಟಿನಲ್ಲಿ ಒಂದು ರಿಟ್ ದಾವಾ ದಾಖಲು ಮಾಡಿದರು. ಅಡಿಕೆ ಕೃಷಿ ನಡೆಸುವವರಿಂದ ಈ ರಿಟ್ ದಾವಾ ಬಗ್ಗೆ (ಸಾಧಾರಣ ಅವರವರ ಕೃಷಿ ಉತ್ಪನ್ನ ಮಾನದ ಆಧಾರದಿಂದ) ಹಣ ಸಂಗ್ರಹ ಮಾಡಲು ಸಂಘ ಪ್ರಾರಂಭಿಸಿತು. ಈ ಹಣ ಸಂಗ್ರಹದ ಕಾರ್ಯವನ್ನು ಕಾರಂತರು ನೋಡುತ್ತಿದ್ದರು. ಸಂಗ್ರಹದ ವಿನಂತಿ-ಚರ್ಚಾದಿಗಳನ್ನು ಅವರು ಕೇಳುತ್ತಿದ್ದಿರಬೇಕು. ಒಂದು ದಿನ ಹಠಾತ್ತಾಗಿ—ಯಾರೂ ಕೇಳದೆ—ಅವರು ತುಂಬ ಹಣವನ್ನು (ಹತ್ತು, ಹನ್ನೆರಡು ಖಂಡಿ ಬೆಳೆಸುವವರು ಕೊಡದಿದ್ದಷ್ಟನ್ನು) ಸಂಘದ ಕಾರ್ಯದರ್ಶಿಗಳಿಗೆ ಕೊಡಹೋದರು. "ನೀವು ಅಡಿಕೆ ಬೇಸಾಯಗಾರರಲ್ಲವಷ್ಟೆ. ಕಾರಂತರೆ!" ಎಂದು ಕಾರ್ಯದರ್ಶಿಗಳು ಅಂದದಕ್ಕೆ, "ನಿಮ್ಮ ಸಾಹಸ ನ್ಯಾಯವಾದದ್ದು, ಅಗತ್ಯವಾದದ್ದು– ನಾನೂ ಅಡಿಕೆ ತಿನ್ನುವವನು ತಾನೆ?" ಎಂಬ ಉತ್ತರ ಕೊಡುತ್ತ, ಕಾರ್ಯದರ್ಶಿಗಳು ಆ ಹಣವನ್ನು ಸ್ವೀಕರಿಸುವಂತೆ ಮಾಡಿದರು! ಇಂಥ ಪ್ರತ್ಯಕ್ಷ ಸಹಾಯಗಳನ್ನು ಯಾರಿಗೂ ಗೊತ್ತಾಗದ ಉದಾರತೆಯಿಂದ ಅರ್ಹರಿಗೆ ಅವರು ಮಾಡಿದ್ದನ್ನು ನಾನು ನೋಡಿದ್ದೇನೆ. ವಿದ್ಯಾರ್ಥಿಗಳಿಗೆ – ಅರ್ಹತೆಯುಳ್ಳವರೆಂದು ತೋರಿದಾಗ–ಹತ್ತು, ನೂರರಂತೆ (ಒಂದೇ ಗಂಟಿನಿಂದಲೋ, ಕಂತುಗಳಲ್ಲಿಯೋ) ಅವರು ಕೊಟ್ಟದ್ದುಂಟು.

ಹಣದ ವಿಷಯವಿರಲಿ, ಕೇವಲ ಕರುಣೆ, ಅನುಕಂಪಗಳ ದೃಷ್ಟಿಯಲ್ಲೂ ಅವರು ನಡೆಸಿದ ಕಾರ್ಯಗಳು ಬಲು ಚಿಕ್ಕದರಿಂದ ಬಹು ದೊಡ್ಡ ಪ್ರಮಾಣದ ವರೆಗೂ ಇವೆ.

ಸರ್ವಸಾಧಾರಣವಾಗಿ ಪೋಲಿಸು ಜನ ಅವರ ನಡತೆ ಎಂದರೆ, ಯಾವುದೇ ಕಾರಣಗಳಿಂದಲಾದರೂ, ಜನರು ತಮಗೇಕೆ

ಎಂದು ದೂರ ನಿಲ್ಲುವರು. ಒಂದು ಪೋಲಿಸ್ ವಠಾರದ ಒಬ್ಬ ಹುಡುಗ. ಅವಸ್ಥಕ್ಕೆ ಸಾರ್ವಜನಿಕ ರಸ್ತೆ ಕೆರೆಯಲ್ಲಿ ಆಡುತ್ತಿದ್ದ ಎರಡು ಆಡುಗಳ ಮಧ್ಯೆ ಪ್ರವೇಶಿಸಿ ಕಲ್ಲೆಸೆದ. ಆಡುಗಳ ಪೈಕಿ ಒಂದು ಕೋಪ ದಿಂದ ಹುಡುಗನನ್ನು ಬೆರಸಿ ಹಾಯತೊಡ ಗಿತು. ಹುಡುಗ ಓಡಿಹೋದರೂ ಹುಡುಗನ ಮನೆ ಹೆಂಗಸೊಬ್ಬಳು ಆಡಿಗೆ ಹೊಡೆಯಲು ಹೋದಾಗ, ಇವನ್ನೆಲ್ಲ ನೋಡುತ್ತಿದ್ದ ಕಾರಂತರು, ಹೆಂಗಸನ್ನು ಕರೆದು ಸಂದರ್ಭ ವಿವರಣೆ ನೀಡಿ ಆಡಿನ ಪ್ರತಿಕ್ರಿಯೆಯನ್ನು ಸಮರ್ಥಿಸಿ, ಬಡ ಪ್ರಾಣಿಯನ್ನು ರಕ್ಷಿಸಿ ದ್ದನ್ನು ನಾನೆಂದೂ ಮರೆಯಲಾರೆ.

ಚಿಕ್ಕ ಶಾಲಾವಿದ್ಯಾರ್ಥಿಯೊಬ್ಬ ಸೈಕಲ್ಲಿ ನಲ್ಲಿ ಹೋಗುತ್ತಿದ್ದಾಗ, ದಾರಿಕರೆಯನ್ನು ಬಿಟ್ಟು, ಮಧ್ಯದಲ್ಲಿ ಅಲುಗಾಡಿಕೊಂಡು ನಡೆದು ಬರುತ್ತಿದ್ದ ಮುದುಕಿಯ ಮೈಬರಸಿ, ಮುದುಕಿ ಕುಳಿತುಹೋದ ಪ್ರಸಂಗವೂ ಒಂದಿದೆ. ಮುದುಕಿಗೆ ಏನೂ ಆಗಿರಲಿಲ್ಲ. ಆಕೆ ಕುಳಿತದ್ದು ಮಾತ್ರ. ಮುದುಕಿಯ ರಕ್ಷಣೆಗೆಂದು ದೂರದಲ್ಲಿದ್ದ ಕೆಲಜನ ಪ್ರಾಯಸ್ಥರು ಬಾಲಕನಿಗೆ ಮುತ್ತಿಗೆ ಹಾಕಿ ಹೆದರಿಸತೊಡಗಿದರು. ಇದನ್ನೆಲ್ಲ ರಸ್ತೆಯ ಅಂಚಿನ ಒಂದು ಮಹಡಿಯಲ್ಲಿ ಕುಳಿತು ನೋಡುತ್ತಿದ್ದ ಕಾರಂತರು ಆ ದೊಡ್ಡವ ರನ್ನು ಕರೆದು ವಿವರಿಸಿ ಬಾಲಕನನ್ನು ರಕ್ಷಿಸಿದರು!

ಒಂದು ವಕೀಲಿ ಆಫೀಸಿನಲ್ಲಿ ನಾನು ಕಂಡು ಕೇಳಿ, ಅನಂತರ ವಿಚಾರಿಸಿ ತಿಳಿದ ವಿಷಯವಿದು. ಮಾತು ನಡೆದದ್ದು ಪುತ್ತೂರಲ್ಲಿ. ಒಬ್ಬ ಹಿಂದೂ ಕಾರಂತರನ್ನು ಕಂಡು ಬಗ್ಗಿ ನಮಸ್ಕರಿಸಿ, "ಬಹಳ ಉಪ- ಕಾರವಾಯ್ತು, ಸ್ವಾಮಿಾ" ಅಂದರು.

"ನನ್ನನ್ನು ಜೈಲಿಗೆ ಕಳುಹಿಸುವ ನಿಮ್ಮ ಪ್ರಯತ್ನದಲ್ಲಿ ನಾನು ಗೆದ್ದದ್ದಕ್ಕೊ, ನಿಮ್ಮ ನಮಸ್ಕಾರ" ಅಂದರು ಕಾರಂತರು.

"ನನಗೆ ಅನುಭವವಿಲ್ಲದೆ ಹೇಳಿಕೆ ಕೊಟ್ಟುಬಿಟ್ಟೆ, ಸ್ವಾಮಿಾ, ಬೇಸರಿಸಬೇಡಿ. ಅಂತೂ. ಸಮಾಜಕ್ಕೆ ಶ್ರೇಯಸ್ಸು ತಾನೆ?" ಎಂದಂದರು ಅವರು.

"ನನಗೆ ಹಣ ನಷ್ಟ, ಅಂತೂ ಗೆದ್ದೆ. ನಿಮಗೆ ಮಗನೂ ಸಿಕ್ಕಿದ. ಹಣವೂ ಸಿಕ್ಕಿತಷ್ಟೆ" ಎಂದು ಕಾರಂತರು ಉತ್ತರ ಕೊಟ್ಟರು. ಅಲ್ಲಿಗೆ ಮಾತು ಮುಗಿದವು.

ಉಭಯ ಪಕ್ಷದವರೂ ನನ್ನ ಪರಿಚಿತರು. ನಡೆದುಹೋದ ವಿಷಯ ಇಷ್ಟೆ: ಆ ವಿನಯ ಸಂಪನ್ನರ ಮಗನನ್ನು ಇತರ ಮತಕ್ಕೆ ಪರಿ- ವರ್ತಿಸಲು ಕೆಲವರು ಅಪಹರಿಸಿ, ಅಡಗಿ ಕೆಲಸ ಮುಂದುವರಿಸಿದರು. ತಂದೆಯ ಅಲಸನಾಗಿರುತ್ತಾ, ಎಲ್ಲಿಯಾದರೇನು, ಬದುಕಿರುತ್ತಾನಲ್ಲ ಮಗ ಎಂದಾಗ ಕಾರಂತರು ವಿಷಯವನ್ನು ತಿಳಿದು, ವಿಚಾರಿಸಿ, ಕ್ರಿಮಿನಲ್ ವ್ಯವಹರಣೆ ಪ್ರಾರಂಭಿಸಿದರು. ಈ ಮಧ್ಯೆ ಮತಪರಿ ವರ್ತಕರು ವ್ಯವಹರಣೆಯ ಫಲಿತಾಂಶಕ್ಕೆ ಬೆದರಿ, ಮಗನನ್ನು ಕಳೆದುಕೊಂಡ ಗೃಹಸ್ಥ ನಿಗೆ ಸಂಭಾವನೆ ಕೊಟ್ಟು, ಕೋರ್ಟಿಗೆ ಒಂದು ವಿಧದ ರಾಜಿ ಅರ್ಜಿ ಸಲ್ಲಿಸಿದರು. ಪರಿವರ್ತನಾ ಪ್ರಯತ್ನ ಸೋತು ಒಂದು ಪಕ್ಷಕ್ಕೆ ದ್ವಿವಿಧ ಲಾಭವೂ, ಕಾರಂತರಿಗೆ ನಷ್ಟವೂ ಆಗಿ ಮುಗಿಯಿತು.

ಸರಕಾರದಿಂದ ಸಹಾಯಧನ ಪಡೆದು, ಸರಕಾರದ ಮೇಲ್ತನಿಖೆಗೆ ಒಳಪಟ್ಟು ನಡೆದು ಬರುವ ಕೆಲವು ಸಂಸ್ಥೆಗಳ ನೌಕರರ ಕಷ್ಟವನ್ನು ಆ ನೌಕರರೇ ಕಾರಂತರಲ್ಲಿ ದೂರುಕೊಟ್ಟು, ಅಂಥ ದೂರಿನಲ್ಲಿ ಸತ್ಯವಿದೆ. ನೌಕರರಿಗೆ ಅನ್ಯಾಯವಾಗಿದೆ ಎಂದು ತೋರಿದಾಗ—ನಾನು ತಿಳಿದ ಹಲವು ಸಂದರ್ಭಗಳಲ್ಲಿ—ಅವರು ಮೊದಲು ತಮ್ಮ ಅನುಭವ, ಪರಿಚಯ, ಸ್ಥಾನಗಳ ಆಧಾರದಿಂದ ಸಹಾಯವಿತ್ತು. ಆ ಸಹಾಯಗಳಿಂದ ಸಾಕಷ್ಟು ನ್ಯಾಯ ದೊರಕದಿದ್ದಾಗ ಕೋರ್ಟು, ಹೈಕೋರ್ಟುಗಳವರೆಗೂ ಮುಂದುವರಿಸಲು ಹಣ, ಅನುಭವ, ಸಮಯವನ್ನು ಹೇರಳವಾಗಿ ಖರ್ಚುಮಾಡಿ ಗೆದ್ದ ಉದಾಹರಣೆಗಳುಂಟು.

ಪುತ್ತೂರಿನ ದಸರಾ ಮಹೋತ್ಸವವೆಂದರೆ ಸಾಹಿತ್ಯ ಕಲೆ ಮೊದಲಾದುವುಗಳ ಗೋಷ್ಠಿಗಳಾಗಿದ್ದುವು. ಕೆಲವೊಮ್ಮೆ ನಾಟಕಗಳೂ, ಸಂಗೀತ ಕಚೇರಿಗಳೂ ಜರುಗುತ್ತಿದ್ದುವು. ಮೈಸೂರು ಪ್ರಾಂತ್ಯ—ಮುಖ್ಯತಃ ಕನ್ನಡ ಪ್ರಾಂತ್ಯದ—ಆದ್ಯಂತವಾದ ಪರಿಚಯ ಕಾರಂತರಿಗೆ ಇದ್ದಷ್ಟು ಇತರ ಯಾರಿಗೂ ಪುತ್ತೂರಲ್ಲಿ ಇರಲಿಲ್ಲ. ಭಾಷಣಕಾರರು, ಕವಿಗಳು ಮೊದಲಾದವರಲ್ಲಿ ಇವರ ಪರಿಚಯವಿದ್ದುದು ಮಾತ್ರವಲ್ಲ. ಪರಸ್ಪರವಾದ ಪ್ರಭಾವ, ಸ್ನೇಹ ಇದ್ದುವು. ಆ ಕಾರಣದಿಂದ ಅಂಥ ಕಲಾವಿದರನ್ನು ಆರಿಸುವುದರಲ್ಲಿ. ಆಮಂತ್ರಿಸುವುದರಲ್ಲಿ. ಆಮಂತ್ರಣದ ಯಶಸ್ವೀ ಪ್ರತಿಫಲದಲ್ಲಿ ಕಾರಂತರೊಬ್ಬರದೇ ಮಹತ್ವದ ಪಾತ್ರ. ಸ್ಥಳ, ವಸ್ತು, ಸೌಕರ್ಯಾದಿಗಳಲ್ಲೂ ಕಾರಂತರ ಚಾಲವನ ಒಂದು ಪವಿತ್ರ, ಗೌರವಾನ್ವಿತ ಕ್ಷೇತ್ರವಾಗಿ ನಡೆದುಬರುತ್ತಿತ್ತು. ಪುತ್ತೂರು ದಸರಾ ಮಹೋತ್ಸವದ ಮುಖ್ಯ ಆಡಳಿತದ್ವಾರರೂ ಅಗ್ರಮುಖಂಡರೂ ಎಂದರೆ ಮೊಳಹಳ್ಳಿಯವರು. ಆದರೆ ಕಾರಂತರು ಸಮಸ್ತ ಚಟುವಟಿಕೆಗಳಲ್ಲೂ, ಮೇಲೋಗರಕ್ಕೆ ಉಪ್ಪು ನೀರುಗಳಿದ್ದ ಹಾಗೆ, ಪಾಯಸಕ್ಕೆ ಸಕ್ಕರೆ ಹಾಲು ಇದ್ದ ಹಾಗೆ, ಸಮರಸವಾಗಿ ಬೆರೆತು ಚಟುವಟಿಕೆಗಳನ್ನು ನಡೆಸುತ್ತಿದ್ದರು. ಉತ್ಸವದಿಂದಾಗಿ ಇವರಿಗೆ ತುಂಬಾ ದೇಹಶ್ರಮ ಮಾತ್ರವಲ್ಲ ಹಣವೂ ಖರ್ಚಾಗುತ್ತಿತ್ತು.

೧೯೫೧ರ ಲೆಜಿಸ್ಲೇಟಿವ್ ಎಸೆಂಬ್ಲಿ ಚುನಾವಣೆಯಲ್ಲಿ ಕಾರಂತರು ಉಮೇದ್ವಾರನಾಗಿ ಸ್ಪರ್ಧಿಸಿದರು. ಅವರ ಚುನಾವಣಾ ಭಾಷಣಗಳನ್ನು ನಾನು ಸ್ವತಃ—ಹಾಜರಿದ್ದು ಕೇಳಿದ್ದೇನೆ. ಪ್ರತಿಸ್ಪರ್ಧಿಯ ವ್ಯಕ್ತಿತ್ವದ ಕುರಿತು ಎಂದೂ, ಎಲ್ಲೂ ಕೀಳು ವಿಧಾನದಿಂದ ಟೀಕೆ ಮಾಡಲಿಲ್ಲ. ಅವರ ಭಾಷಣಗಳೆಲ್ಲ ತತ್ವಗಳನ್ನು ಕುರಿತಾಗಿತ್ತು; ತಮ್ಮ ಪಕ್ಷದ ಸಮರ್ಥನೆ ಬಹು ವಿನಯ-ಗೌರವ-ಹಟದ, ಆದರೆ ಗಾಂಭೀರ್ಯದ ವಿಧಾನದಿಂದ ನಡೆಯುತ್ತಿತ್ತು. ನಾರಾಯಣ ಕಿಲ್ಲೆಯವರ ಮತ್ತು ಶಿವರಾಮ ಕಾರಂತರ ಚುನಾವಣಾ ಭಾಷಣಗಳು ಉತ್ತಮ ಶ್ರೇಣಿಯ ಕಲಾಕೃತಿಗಳೇ ಆಗಿರುತ್ತಿದ್ದುವು.

ಕಾರಂತರು ಚುನಾವಣೆಯಲ್ಲಿ ಹೇಗೋ—ಆ ವಿಷಯ ಇಲ್ಲಿ ಅಸಗತ್ಯ—ಸೋತರು. ಆದರೆ ಅವರ ಸೋಲು ಸಮಾಜದ ಸಾಹಿತ್ಯ ವಿಜ್ಞಾನ ವಿಷಯಕ ಪುಸ್ತಕ, ಪುರಾತನ ದೇವಸ್ಥಾನ, ಸಾಹಿತ್ಯ ಕೃತಿಗಳ ಪರಿಶೋಧನೆ, ಬಯಲಾಟದ ಪುನರುಜ್ಜೀವನ ಮುಂತಾದ ಕಾರ್ಯಗಳಿಗೆ ತುಂಬಾ ಲಾಭ

...ಯಿತು. ಪುಸ್ತಕ ಬರೆಯುವ ವಿಭಾಗ ...ಷ್ಟೇ ಮಹತ್ವದ–ಮತ್ತೂ ಖರ್ಚಿನ, ...ಷ್ಟದ ದೇಶವಿದೇಶ ಪರ್ಯಟನ, ನಮ್ಮ ...ಶದ ವಿವಿಧ ಕಾಡು, ಗುಡ್ಡ, ಗುಹೆಗಳಲ್ಲಿ ...ಹಸೀ, ಯಶಸ್ವೀ ಪ್ರಯಾಣಗಳನ್ನು ಈ ...ಶೋಧನೆಗಾಗಿ ಕಾರಂತರು ಮಾಡಿ ...ದ್ದಾರೆ. ಕೌಶಿಕ ರಾಮಾಯಣದ ಸಂಬಂಧ ...ಾಗಿ ಉತ್ತರ ಕನ್ನಡದ ಯಾಣ ಎಂಬ ...ರಣ್ಯ ಮಧ್ಯದ ಸ್ಥಳಕ್ಕೆ ಅವರು ನಡೆದು ...ೋಗಿ ನೋಡಿ, ಚರಿತ್ರೆ ಸಂಗ್ರಹಿಸಿ, ...ೋಟೋ ತೆಗೆದು ಬಂದ ವಿಷಯವನ್ನು ...ೇಳುವಾಗ ಸಂತೋಷದಿಂದ ರೋಮಾಂಚ ...ವೂ, ಭಯದಿಂದ ಮೈ ನಡುಕವೂ ...ುಂಟಾಗುತ್ತದೆ.

ಕಾರಂತರಿಗೆ ಪದ್ಮಭೂಷಣ ಬಿರುದು ...ೂರೆತಾಗ ಪುತ್ತೂರಲ್ಲಿ ನಡೆದ ಅಭಿನಂದನ ...ಮಾರಂಭವನ್ನು ಇಲ್ಲಿ ವಿವರಿಸುವುದು ...ಗತ್ಯ. ಸಮಾರಂಭದ ಏರ್ಪಾಡು, ...ೃವಸ್ಥೆ. ಖರ್ಚುಗಳೆಲ್ಲ ನಡೆದದ್ದು ...ುತ್ತೂರು ಸಮಸ್ತರಿಂದ, ಸಮಸ್ತ ಸಂಘ ...ಂಸ್ಥೆಗಳಿಂದ.

ಅಂದಿನ ಸಮಾರಂಭದಲ್ಲಿ ಸಂತೋಷ ...ಂದ ಭಾಗವಹಿಸಿ, ಮಾನಪತ್ರ ಸ್ವೀಕರಿಸಿ, ...ೂರವರಿಗೆ ಕಾರಂತರು ಹೇಳಿರುವ ...ಾಷಣದ ಮುಖ್ಯ ವಾಕ್ಯಗಳನ್ನು ನಾನು ... ದಿನವೇ ಬರೆದಿಟ್ಟಿದ್ದೇನೆ.

"....ನನ್ನ ಜೀವಮಾನದಲ್ಲಿ ಶಾಶ್ವತ ...ನೆನಪಿನಲ್ಲುಳಿಯುವ ಬಹು ಸಂತೋಷದ ...ಸಮಾರಂಭ ಹಿಂದೆ ನನ್ನ ಹುಟ್ಟೂರು ...ಕೋಟದಲ್ಲಿ ಒಮ್ಮೆ ನಡೆದದ್ದು, ಇಂದಿನ ...ಇಲ್ಲಿನದು ಅಂಥದ್ದೆ ಎರಡನೆ ಸಮಾರಂಭ."

"....ಬ್ರಾಹ್ಮಣ ಕುಲದಲ್ಲಿ ಹುಟ್ಟಿ, ಬ್ರಾಹ್ಮಣರ ಹೊರಗಿನವಳನ್ನು ಮದುವೆಯಾಗಿ, ಶ್ರೀ ಯಂ. ರಾಮನ್ ನಂಬ್ಯಾರರು, ಶ್ರೀ ಯಂ. ಶಿವರಾಯರು ಇವರುಗಳ ಪ್ರೋತ್ಸಾಹದಿಂದ ಪುತ್ತೂರಲ್ಲಿ ನೆಲಸಿ, ಜೀವನ ಸಾಗಿಸಿ, ಬಂದೆ. ನನ್ನ ಜೀವನದಲ್ಲಿ ನನಗೆ ಸಹಾಯ, ಸಂತೋಷವಿತ್ತವರು ಈ ಊರಲ್ಲಿ ಬಹು ಜನರಿದ್ದಾರೆ. ಅವರವರ ವೃತ್ತಿಯನ್ನು ಶಾಂತವಾಗಿ ಸಾಗಿಸುವಾಗ ಸಹಾಯಕೊಡುವ– ಸಹಾಯವಿಲ್ಲದಿದ್ದಲ್ಲಿ– ಶಾಂತವಾಗಿ ನಡೆಯಲು ಬೇಕಾದ ವಾತಾವರಣವನ್ನು ಬೆಳೆಸಿಕೊಟ್ಟು, ತಾವು ದೂರ, ಮೌನ ನಿಲ್ಲುವ ಜನರು ಈ ಊರಲ್ಲಿರುವಷ್ಟು, ಇದ್ದಷ್ಟು, ಇನ್ನೆಲ್ಲಿಯೂ ಇಲ್ಲ.

"ಸರಕಾರದ ತಪ್ಪುಒಪ್ಪುಗಳನ್ನು ಕಟುವಾಗಿ ವಿರೋಧಿಸುವವನೆಂದು ಗಣಿಸಿ ಬಂದಿದ್ದ ಮತ್ತು ರಾಜಕೀಯ ಪಕ್ಷಪಂಗಡಗಳನ್ನು ತಿಳಿದು, ಕೆಲವುಟ್ಟಿಗೆ ಸಮರ್ಥಿ-ಸಿಯೂ ಬಂದಿರುವ, ನನಗೆ ಸರಕಾರ ಬಿರುದು ಕೊಟ್ಟು ಸನ್ಮಾನಿಸುವುದರಲ್ಲಿ ಸರಕಾರದ ಸೌಹಾರ್ದ, ಸಾಹಿತ್ಯ, ಕಲೆ ಮೊದಲಾದುವುಗಳಲ್ಲಿನ ನಿಜವಾದ ಪ್ರೇಮ, ಔದಾರ್ಯಗಳು ಮಹತ್ವದ್ದೇ ಎಂದನ್ನುತ್ತೇನೆ...."

ಮಾನಪತ್ರ ಸಮರ್ಪಣ ಸಮಾರಂಭದ ದಿನ ಪುತ್ತೂರಿನ ಜನರು ಕಾರಂತರನ್ನು ತುಂಬಾ ಕಾರುಗಳ ಕೂಟದಿಂದ ಮೆರವಣಿಗೆ ಮಾಡಿಸಬೇಕೆಂದು ಹೊರಟಿದ್ದಾಗ, ಕಾರಂತರು ಹೇಗೋ ಅದನ್ನು ಮುಂದಾಗಿ ತಿಳಿದು, ಯಾರಿಗೂ ಮನಸ್ಸು ನೋಯದಾರದು. ಆದರೂ ಅಂಥ ಮೆರವಣಿಗೆ

ಯನ್ನು ವರ್ಜಿಸಬೇಕೆಂದು, ಸಭಾಂಗಣಕ್ಕೆ ನಿರ್ದಿಷ್ಟ ಸಮಯಕ್ಕೆ ಮೊದಲೇ ಬಂದು ಸೇರಿ ಮೆರವಣಿಗೆಯನ್ನು ತಪ್ಪಿಸಿಕೊಂಡರು.

ಕಾರಂತರಿಗೆ ದೈವದೇವರುಗಳ ಬಗ್ಗೆ ನಂಬಿಕೆಯಿದೆಯೇ ಎಂದು ಒಮ್ಮೆ ವಿಚಾರಿಸಿ ನೋಡಿದೆ. ಶ್ಮಶಾನದಲ್ಲಿ ಶವ ದಹನವಾಗುತ್ತಿದ್ದಾಗ ರಾತ್ರಿಯಿಡೀ ಒಬ್ಬಂಟಿಗನಾಗಿ ಪ್ರೇತಪಿಶಾಚಿಗಳಿಗಾಗಿ ಕಾದು ಕುಳಿತು ಏನೂ ಕಾಣದೆ ಅವರು ಸೋತಿದ್ದಾರೆ! ಆದರೆ, ಕುಟ್ಟಿಚ್ಚಾತನ ಬಾಧೆಯಲ್ಲಿ ಸಿಕ್ಕಿದ್ದ ಒಬ್ಬ ಬಾಲಕನ ಕಥೆಯನ್ನು ಹೇಳಬಲ್ಲರೇ ಹೊರತು ಸ್ಪಷ್ಟ ವಿವರಣೆಗಳನ್ನು—ತರ್ಕ ನಿರ್ಣಯಗಳನ್ನು—ಮಾಡಲಾರದ ಸಂದರ್ಭ ಆ ಕಥೆಯಲ್ಲಿವೆಯೆಂದು ಅವರೇ ಒಪ್ಪುತ್ತಾರೆ. ಇನ್ನು ದೇವರು, ದ್ವೈತಾದ್ವೈತ ಮೊದಲಾದುವನ್ನು ವಿಮರ್ಶಿಸಲು ಅವರು ಹೋಗುವುದಿಲ್ಲ. ದೇವರನ್ನೂ, ಹಿಂದೂ ಧರ್ಮವನ್ನೂ, ಅದರಲ್ಲಿನ ಉತ್ತಮ ತತ್ತ್ವಗಳನ್ನೂ ಅನುಷ್ಠಾನಕ್ಕೆ ತರುತ್ತಿದ್ದ, ದೇವರನ್ನು ನಂಬುವಂಥವರಷ್ಟೇ ಯೋಗ್ಯ ಮಟ್ಟದ ಸಂಪನ್ನ ಬದುಕು ಅವರದು.

ಶ್ರೀ ಶೃಂಗೇರಿ ಜಗದ್ಗುರುಗಳೊಡನೆ ಕೆಲವರು ನಡೆಸಿದ ಸಂವಾದಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸಿ ಪ್ರಿಂಟುಮಾಡಿಸಬೇಕಾಗಿತ್ತು. ನನಗೆ, ಕಾರಂತರ ಪ್ರೆಸ್ಸಿನಲ್ಲಿ ದೇವರು, ಧರ್ಮ, ಕರ್ಮಫಲ ಇತ್ಯಾದಿ ವಿಷಯದ ಆ ಪುಸ್ತಕವನ್ನು ಪ್ರಿಂಟುಮಾಡಿಸಿದರೆ ಅವರಿಗೆ ಒಪ್ಪಿಗೆಯಾದೀತೇ ಎಂದು ಅಳುಕುತ್ತಿದ್ದ ನಾನು ಕಾರಣಾಂತರಗಳಿಂದ ಕೊನೆಗೆ ಕಾರಂತರ ಪ್ರೆಸ್ಸಿಗೇ ಪ್ರಿಂಟು ಕೆಲಸ ಒಪ್ಪಿಸಿಕೊಟ್ಟೆ. ಕಾರಂತರು ಪ್ರೂಫ್ ಓದಿ,

ಪ್ರಿಂಟು ಮಾಡಿಸಿ, ಆ ಪುಸ್ತಕಗಳನ್ನ
ನನಗೆ ಕೊಡುವಾಗ "ಮಹಾತ್ಮರ ಮಾತ
ಗಳು ಮಹಾವಾಕ್ಯಗಳೇ ನಿಜ. ಸಂಭಾಷಣೆ
ಗಳಲ್ಲಿ ಗುರುಗಳ ಭಾಗ ಬಹು ಸುಂದ
ವಾಗಿ, ತಾರ್ಕಿಕವಾಗಿ, ಸ್ಪಷ್ಟವಾಗಿದೆ
ಎಂದು ಹೇಳಿದರು. ದೇವರು ಇಲ್ಲವೆಂದ
ಕಾರಂತರು ಎಂದೂ ಹೇಳಿದ್ದಿಲ್ಲ.

ಕಾರಂತರ ಈಚಿನ ಒಂದು ಮಹ
ಕಾರ್ಯವನ್ನು ತಿಳಿಸಲಿಚ್ಛಿಸುತ್ತೇನೆ.
ಮೊದಲು ಇದರಲ್ಲೇ ತಿಳಿಸಿರುವಂ
ಕಾರಂತರು ದಿವಂಗತ ಮೊಳಹಳ್ಳಿ ಶಿವರಾಯ
ರನ್ನು ಬಹು ಗೌರವದಿಂದ, ಪ್ರೇಮದಿಂದ
ಒಂದು ವಿಧದ ಪೂಜ್ಯತೆಯಿಂದಲೇ—ಕಾಣ
ತ್ತಿದ್ದರು. ಶಿವರಾಯರು ತೀರಿದ ನಂತ
ಕಾರಂತರೇ ಪುತ್ತೂರು ತಾಲ್ಲೂಕ
ಆದ್ಯಂತದ ಒಂದು ಸಭೆಯನ್ನು ಏರ್ಪಡಿ
ದರು. ಕಾರಂತರ ಅಧ್ಯಕ್ಷತೆಯಿಂದ ಕೂಡಿ
"ಶ್ರೀ ಮೊಳಹಳ್ಳಿ ಶಿವರಾವ್ ಸ್ಮಾರ
ಕಟ್ಟಡ ಸಮಿತಿ"ಯನ್ನು ರಚಿಸಿ, ಕಟ್ಟ
ಕಾರ್ಯ ನಡೆಸಿದರು. ಸಾಧಾರಣ ರು
೩೦,೦೦೦/–ಕ್ಕೆ ಬಹು ಸಮೀಪವಷ್ಟು ಹ
ಸಂಗ್ರಹಿಸಿ ಈ ಕಾರ್ಯ ನಡೆಸಿದರು.

ಈ ಸಮಿತಿಯ ಹಣಸಂಗ್ರಹದಲ್ಲಿ
ವಂಶ ಬೆಂಗಳೂರು, ಬೊಂಬಾಯಿ ನ
ಗಳಿಂದ, ಕಾರಂತರ ಏರ್ಪಾಡಿನ ಪ್ರ
ಕಲಾಪ್ರದರ್ಶನಗಳ ಮೂಲಕ ಸಂಗ್
ವಾಗಿದೆ. ಕಟ್ಟಡ ನಿರ್ಮಾಣ ಕಾರ್ಯಗ
ಶಾಲಾಧಿಕಾರಿಗಳ ವೈಯಕ್ತಿಕ ನೆಲೆಯ
ಕಾರಂತರ ಮೇಲ್ತನಿಖೆಯಿಂದಲೂ ಶಿಸ್
ನಿಯಮಬದ್ಧವಾಗಿ ನಡೆದಿವೆ. ವಿದ್ಯಾ
ಗಳು ಸಾವಿರಗಟ್ಟಲೆ ಹಣವಿತ್ತಿದ

ಂತೂ ಈ ಕಟ್ಟಡ ಸಂಬಂಧದ ಹಣ ಷ್ಟೊಂದು ಸ್ವಲ್ಪ ಸಮಯದಲ್ಲಿ, ಸ್ವಯಂ ್ರೇರಣೆಯಿಂದ ಸಂಗ್ರಹವಾಗಲು ನರಾಯರ ಹೆಸರು ಮತ್ತು ಕಾರಂತರ ್ರಯತ್ನ ಮುಖ್ಯ ಕಾರಣ.

ಒಂದು ದಿನ ಸಂಜೆ ಕಾರಂತರೂ ನಾನೂ ಂದು ಅಂಗಡಿಯಲ್ಲಿ ಕುಳಿತು ಮಾತಾಡು ದ್ದಾಗ ಮಂಗಳೂರಿನ, ೧೯೨೦ರ ನಮ್ಮ ಾಲೇಜಿನ ಕನ್ನಡ ಲೆಕ್ಚರರೊಬ್ಬರು ಅದೇ ಂಗಡಿಗೆ, ಅವರದೇ ವ್ಯಾಪಾರ ಕೆಲಸ ಮಿತ್ತ ಬಂದರು. ಅವರನ್ನು ಕಂಡೊಡ ಯೇ ಕಾರಂತರು ಎದ್ದು ನಿಂತು, ನಮಸ್ಕ ಸಿ, ಅವರನ್ನು ಒಳತಂದು ತನ್ನ ಕುರ್ಚಿ ಯಲ್ಲಿ ಕೂರಿಸಿ, ತಾನು ಎದ್ದು ನಿಂತಿರುತ್ತಾ ಕ್ಷೇಮ ಸಮಾಚಾರ ವಿಚಾರಿಸಿದರು. ನಂತರ, ಅಲ್ಲೇ ನಿಂತಿದ್ದ ನನ್ನೊಡನೆ, ವಿಯಲ್ಲಿ ಏನೋ ಹೇಳಿ ಹೊರಗೆ ಹೋದರು. ಬಹು ಸ್ವಲ್ಪ ಹೊತ್ತಿನಲ್ಲೆ, ಕೈಯ್ಯಲ್ಲೊಂದು ಚಿಕ್ಕ ಕಾಗದದ ಕಟ್ಟನ್ನು ತಂದು ನಮಗೆ ಕಾಣದಂತೆ ಕಟ್ಟುಬಿಚ್ಚಿ, ಕುಳಿತ್ತಿದ್ದ ಲೆಕ್ಚರರಿಗೆ ಒಂದು ರೇಶ್ಮೆ ಶಾಲನ್ನು ಅರ್ಪಿಸಿದರು.

ಆ ಲೆಕ್ಚರರನ್ನು ಕಾಣದೆ ೩೦-೩೫ ವರ್ಷಗಳಾಗಬಹುದೆಂದು ಅನಂತರ ತಿಳಿದೆ. ಅಂದಿನ ಗುರು-ಶಿಷ್ಯ ಭೇಟಿ ಬಹು ಪ್ರೀತಿ ಗೌರವ ಪೂರಿತವಾಗಿತ್ತು. ಆ ದಿನ ಕಾರಂತರು ತಮ್ಮ ೫೦ ದಾಟದ ಪ್ರಾಯದಿಂದ ೧೫ಕ್ಕೆ ಇಳಿದು ವಿನಯ-ಭಕ್ತಿಯ ಮೂರ್ತಿಯೇ ಆಗಿದ್ದರು. ಹಿರಿಯರೊಡನೆ, ಯೋಗ್ಯರೊಡನೆ ಬಹು ಸ್ವಾಭಾವಿಕವಾಗಿಯೇ, ಆದರ್ಶಪ್ರಾಯವಾಗಿ ಸುಸಂಸ್ಕೃತ ವಿಧಾನದಲ್ಲಿ ಅವರು ವರ್ತಿಸುವುದನ್ನು ನಾನು ತುಂಬಾ ಕಂಡಿದ್ದೇನೆ.

ಕಾರಂತರ ಆರೋಗ್ಯವನ್ನು ಕುರಿತು ನಾವು ವಿಚಾರಿಸುವ ಕ್ರಮವೇ ಇಲ್ಲ. ಅವರು ಅಸ್ವಸ್ಥವಾಗಿ ಮಲಗಿದ್ದನ್ನು—ನನ್ನ ೪೦ ವರ್ಷಗಳ ಪರಿಚಯದಲ್ಲಿ—ಒಮ್ಮೆಯೂ ನೋಡಿಲ್ಲ. ಸ್ವಲ್ಪ ಅಸೌಖ್ಯದಿಂದಿದ್ದಾಗ, ವಿಶೇಷ ಕೆಲಸ ಮಾಡದೆ, ಮಾತಾಡುತ್ತಾ ಕುಳಿತು ಇದ್ದ ಸಂದರ್ಭ ಒಂದೆರಡು ಮಾತ್ರ ನೋಡಿದ್ದೇನೆ. ಅವರ ಸಂಸಾರದ ಸುಖ ದುಃಖ, ಆರ್ಥಿಕ ಏಳು ಬೀಳುಗಳನ್ನು ಕೆಲವೊಮ್ಮೆ ಜೀವನದ ಅನುಭವಗಳಿಗಾಗಿ ಎಂಬಂತೆ ಅವರು ಹೇಳುವುದಿದೆ. ಅಂತೂ ಸಮಾಜದ ದುಃಖಕ್ಕೆ ತನ್ನದನ್ನು ಸೇರಿಸಿ ದುಃಖ ಭಂಡಾರವನ್ನು ವರ್ಧಿಸುವ ಕ್ರಮ ಅವರದಲ್ಲ. ಅವರ ಸಂಸಾರದಲ್ಲೂ ದುಃಖದ ವಿಷಯಗಳು ಬಂದಿವೆ.

ಸೂರ್ಯವ್ಯೂಹದಲ್ಲಿ ಸೂರ್ಯನು ತನ್ನೊಳಗೆ ಎಷ್ಟನ್ನೆಲ್ಲ ಹೊತ್ತು, ಜೀರ್ಣಿಸಿ, ತನ್ನ ಪ್ರಪಂಚಕ್ಕೆ ಬೆಳಕು, ಶಾಖ, ಚೇತನ ಕೊಡುತ್ತಿದ್ದಾನೋ ಆ ತೆರನಾಗಿ ಕಾರಂತರ ಸಾಮಾಜಿಕ ವ್ಯವಹಾರ ಕಾರಂತ ಪ್ರಪಂಚದಲ್ಲೇ ನಡೆಯುತ್ತಿದೆ.

ಕೊಡಗಿನ ಗೆಳೆಯ

ಜಿ. ಟಿ. ನಾರಾಯಣರಾವ್

ನಂ. ೮, 'ಅತ್ರಿ', ಕಾಮಾಕ್ಷಿ ಆಸ್ಪತ್ರೆ ರ
ಸರಸ್ವತೀಪುರ
ಮೈಸೂರು–೫೭೦ ೦೦೯

ದಿವಂಗತ ಜಿ. ಎಂ. ಮಂಜನಾಥಯ್ಯನವರು ಗಾಂಧೀ ಪಂಥದ ಒಬ್ಬ ಹಿರಿಯ ಆದರ್ಶವಾದಿ. ಅಗರ್ಭಶ್ರೀಮಂತ—ಆದರೆ ತಮ್ಮ ಸಿರಿತನವನ್ನು ನ್ಯಾಸವಾಗಿ ಭರಿಸಿ ಜನೋಪಯೋಗ ಕಾರ್ಯಗಳಿಗೆ ದಾನ ನೀಡಿದ ಕೊಡುಗೈ ಕರ್ಣ. ಕಾರಂತರ ಆತ್ಮೀಯ ಮಿತ್ರರ ಸಾಲಿನಲ್ಲಿ ಮಂಜನಾಥಯ್ಯನವರಿಗೆ ಮೊದಲ ಮಣೆ.

"ಕಾಡುಗಳನ್ನು ಸದಾ ಸುತ್ತಾಡುತ್ತಿದ್ದ ನನಗೆ ಆ ಆವರಣ ಪರಿಚಿತವಾದದ್ದು. ವ್ಯಕ್ತಿಗಳು ನವೀನರಲ್ಲ. ಹಳ್ಳಿಗೆ ಹೋಗಿ ಎಷ್ಟೋ ಗೆಳೆಯರ ಕೃಷಿಯ ಸಾಹಸದ ಕೆಲಸಗಳನ್ನು ನೋಡಿ ಮೆಚ್ಚಿದ್ದೇನೆ. ಅದರ ಚಿತ್ರ ಬರೆಯಬೇಕೆಂಬ ಆಸೆ ಮೂಡಿತ್ತು. ಒಮ್ಮೆ ನಾನು ಏನನ್ನಾದರೂ ಬರೆಯಬೇಕು ಎಂದು ಎಣಿಸಿಕೊಂಡು ಸ್ವಲ್ಪ ವಿಶ್ರಾಂತಿಯನ್ನರಸಿ ಕೊಡಗಿನ ಗೆಳೆಯರಾದ ಶ್ರೀ ಮಂಜನಾಥಯ್ಯನವರ ಮನೆಗೆ ಹೊರಟೆ. ಹೊರಟಾಗ ಏನನ್ನೋ ಬರೆಯಬೇಕೆಂದು ಅನಿಸಿತ್ತು. ಆ 'ಏನು' ಎಂಬುದು ನಿಶ್ಚಯವಾಗಲಿಲ್ಲ. ಸಂಪಾಜೆಯ ಘಟ್ಟವನ್ನೇರಿ ಮಡಿಕೇರಿಗೆ ನಾಲ್ಕು ಮೈಲು ದೂರವಿರುವಾಗ ಬಸ್ಸು ಹಾಳಾಯಿತು. ಅಲ್ಲಿಯೇ ಕುಳಿತಿರಲಾರದೆ ಮಡಿಕೇರಿಗೆ ನಡೆದು ಮುಂದುವರಿದೆ ಕಣ್ಣೆದುರಿಗೆ ನಿಂತಿದ್ದ ಗುಡ್ಡ ಮತ್ತು ಕಾಡುಗಳು 'ಬೆಟ್ಟದ ಜೀವ' ಎಂಬ ಹೆಸರನ್ನು ಸೂಚಿಸಿದುವು. ಮಡಿಕೇರಿಯಲ್ಲಿ ಮಂಜನಾಥಯ್ಯನವರ ಮೋಟರು ನನಗಾ ಕಾದಿತ್ತು. ಅವರ ಮನೆಯನ್ನು ಸೇರಿದಾಯಿತು. ಅದು ಕಾಫಿತೋಟಗಳಿಂದ ತುಂರುವ ಸುಂದರ ಗುಡ್ಡ ಬೆಟ್ಟಗಳ ನಡುವ ಸ್ಥಳ. ಅವರ ಮನೆಯಲ್ಲಿ ಕುಳಿತು, ಅ ದಿನಗಳ ಕಾಲ ಗೀಚಿ, ಬ್ರಾಹ್ಮಣರ ಕ ಯೊಂದನ್ನು ಬರೆದು ಮುಗಿಸಿದೆ."

* * *

"ಈ ಕಾದಂಬರಿಯನ್ನು (ಜಾರುವ ದಾ ಯಲ್ಲಿ) ನಮ್ಮ ಗೆಳೆಯರಾದ ಶ್ರೀ ಜಿ. ಯ ಮಂಜನಾಥಯ್ಯನವರ ಶುಂಠಿಕೊಪ್ಪ

ಶಿವರಾಮ ಕಾರಂತರ ಆಪ್ತಮಿತ್ರರಾಗಿರುವ ಶ್ರೀ ಜಿ. ಯಂ. ಮಂಜನಾಥಯ್ಯನವರನ್ನು ಅ ಪತ್ನಿ ಶ್ರೀಮತಿ ಮೀನಾಕ್ಷಮ್ಮನವರನ್ನು [ಶುಂಠಿಕೊಪ್ಪ, ಕೊಡುಗು] ಭೇಟಿಮಾಡಿ ವಿಷಯ ಸಂಗ್ರ ಲಸು ನಾನೂ ಶ್ರೀ ಜೆ. ಆರ್. ಲಕ್ಷ್ಮಣರಾಯರೂ ಹೋಗಿದ್ದೆವು.

'ಕಾರಂತ ಪ್ರಪಂಚ'ದಿಂದಲುದ್ಧೃತ.

ಮನೆಯಲ್ಲಿ ಕುಳಿತು ಹದಿನೆರಡು ದಿನಗಳಲ್ಲಿ ಬರೆದೆ."

ಶಿವರಾಮ ಕಾರಂತ

*   *   *

"ನಿಮಗೆ ಕಾರಂತರ ಪರಿಚಯ ಹೇಗಾಯಿತು?"

"೧೯೩೨ರ ದಿನಗಳು. ನಾನು ಕೆಲವು ಯೋಗಾಸನಗಳನ್ನು ಅಭ್ಯಾಸ ಮಾಡುತ್ತಿದ್ದೆ. ನೌಲಿಯ ಎರಡನೆಯ ಅಂಗವಾದ ಹೊಟ್ಟೆಯ ಸ್ನಾಯುಗಳ ಚಲನೆಯ ನಿಯಂತ್ರಣ ನನಗೆ ಸಿದ್ಧಿಸಿರಲಿಲ್ಲ. ಆಗ ಯಾರೋ ಅಂದರು ಶಿವರಾಮ ಕಾರಂತರು ಇದನ್ನು ಸಾಧಿಸಿದ್ದಾರೆ. ಅವರಿಂದ ಈ ರಹಸ್ಯ ತಿಳಿಯಬಹುದು ಎಂದು. ೧೯೩೨ರ ಮಡಿಕೇರಿಯ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ನಾನು ಹುಡುಕಿ ಪತ್ತೆ ಮಾಡಿದೆ. ಅವರನ್ನು ಮಾತಾಡಿಸಿದಾಗ ಅವರ ಬೌದ್ಧಿಕ ಪ್ರಾಮಾಣಿಕತೆ, ಸಹನೆ, ನೇರವಾಗಿ ವಿಷಯಕ್ಕೆ ಧುಮುಕುವ ಮಾತಿನ ಸರಣಿ ಇವುಗಳಿಂದ ಬಹುವಾಗಿ ಆಕರ್ಷಿತನಾದೆ."

"ಮತ್ತೆ ನೌಲಿಯ ಹಿಕ್ಮತ್ತು?"

"ಸ್ನಾಯುಗಳ ಆವರ್ತನೆ ತನಗೂ ಸಾಧ್ಯವಾಗಿರಲಿಲ್ಲ ಅಂದರು."

"ಮುಂದೇನಾಯಿತು?"

"ಹೀಗೆ ಆದ ಪ್ರಥಮ ಪರಿಚಯ ಮುಂದೆ ಭೇಟಿಗಳಿಂದ, ಮಾತುಕತೆಗಳಿಂದ ಮತ್ತು ಅವರ ಸಾಹಿತ್ಯ ವಾಚನದಿಂದ ಗಾಢಸ್ನೇಹವಾಗಿ ಪರಿಣಮಿಸಿತು. ಕಾರಂತರೂ ನಾವೂ ಒಂದೇ ಕುಟುಂಬದವರೆನ್ನುವಷ್ಟು ಅನ್ಯೋನ್ಯವಾಗಿ ಬೆಳೆದುಬಂದಿದ್ದೇವೆ."

"ಅಂದಮೇಲೆ ಅವರ ಒಡನಾಟದಲ್ಲಿ, ಮಾತುಕತೆಯಲ್ಲಿ ನೀವು ಕಂಡುಕೊಂಡ ವೈಶಿಷ್ಟ್ಯವನ್ನು—ರಸನಿಮಿಷಗಳು ಅನ್ನಿಬೇಕಾದರೆ — ನೆನಪು ಮಾಡಿ ಹೇಳುತ್ತೀರಾ?"

"ಬರುವ ಕಷ್ಟ ಅದು. ಗಾಳಿಯನ್ನು ಹಿಡಿದಿಡಲು ಸಾಧ್ಯವಿದೆಯೇ! ಬೆಳಕಿನ ಹೊನಲನ್ನು ಬೊಗಸೆಯಲ್ಲಿ ತೆಗೆದು ಇದು ನಾನು ಪಡೆದದ್ದು ಎಂದು ವಿವರಿಸುವಂತೆ ಆಗಿದೆ ನನ್ನ ಪರಿಸ್ಥಿತಿ. ಕೃತ್ರಿಮವರಿಯದ, ಅಸಾಧಾರಣ ಮೇಧಾವಿ, ಪ್ರತಿಭಾನ್ವಿತ, ಕರ್ತೃತ್ವಶಾಲಿಯಾದ ಕಾರಂತರಿಗೆ ಅವುಗಳ ವಿಚಾರ ಯಾವ ತೋರಿಕೆಯೂ ಇಲ್ಲ. ಎಳೆಯರಲ್ಲಿ ಎಳೆಯರಾಗಿ, ಬಂಧುಗಳಿಗೆ ಆತ್ಮೀಯರಾಗಿ ಯಾವ ಸನ್ನಿವೇಶಕ್ಕೂ ಅತಿ ಸಹಜವಾಗಿ ಹೊಂದಿಕೊಳ್ಳುವ ಕಾರಂತರ ಸಂಗದಲ್ಲಿ ನನಗೆ ಒದಗಿರುವ ರಸಾನುಭವವನ್ನು ವಿವರಿಸುವುದು ಆಗದ ಕೆಲಸ."

"ಎಳೆಯರಲ್ಲಿ ಎಳೆಯ ಎಂದಿರಲ್ಲ. ಅದನ್ನೇ ವಿವರಿಸಿ."

"ನೆನಪಾಯಿತು. ಒಂದು ಸಾಯಂಕಾಲ ನಾವು ಯಾರೂ ಮನೆಯಲ್ಲಿರಲಿಲ್ಲ. ಕಿರಿಯ ಮೊಮ್ಮಕ್ಕಳು ಮಾತ್ರ ಆಡಿಕೊಂಡಿದ್ದರು. ಮನೆಗೆ ನುಗ್ಗುತ್ತಿದ್ದಂತೆಯೇ ಒಳಗಿನಿಂದ ಕೇಳಿಸಿತು ಮಕ್ಕಳ ಕಿಲಕಿಲನಾದ. ಅತ್ಯುತ್ಸಾಹದ ಕೇಕೆ, ಎಂದಿಗಿಂತಲೂ ಜೋರಾಗಿ! ಆಶ್ಚರ್ಯದಿಂದ ಮುಂದೆ ನಡೆದ ನನಗೆ ಕಂಡದ್ದು ಮಕ್ಕಳ ನಡುವೆ ಕಾರಂತ. ಅದೇ ಹರ್ಷ, ಅದೇ ಹುರುಪು. ನಾವು ದೊಡ್ಡವರಿಲ್ಲದಿದ್ದದ್ದು ಕಾರಂತರಿಗೆ ಕೊರತೆ ಎನಿಸಿರಲಿಲ್ಲ."

"ಪುಸ್ತಕ ಒಂದೋ ಎರಡೋ ನಿಮ್ಮ ಮನೆಯಲ್ಲಿ ಕುಳಿತು ಬರೆದರಂತೆ. ಹೇಗೆ ಇತ್ತು ಅವರ ಕ್ರಮ?"

"ಹೌದು. ಮೊದಲು 'ಬೆಟ್ಟದ ಜೀವ' ಮತ್ತೆ 'ಜಾರುವ ದಾರಿಯಲ್ಲಿ'. ಪ್ರತಿದಿನ ಬೆಳಗ್ಗೆ ಸುಮಾರು ಮೂರು ಗಂಟೆ ಅವರು ಏಕಾಂತವಾಗಿ ಬರೆಯುತ್ತಿದ್ದರು. ಮುಗಿದ ಮೇಲೆ ಆ ಹಾಳೆಗಳನ್ನೆಲ್ಲ ಒಟ್ಟುಗೂಡಿಸಿ ನೇರವಾಗಿ ಅಡುಗೆಮನೆಗೋ ಊಟದ ಮನೆಗೋ ಬಂದು ಕುಳಿತುಬಿಡುತ್ತಿದ್ದರು. ಎರಡನೆಯ ಸಲದ ಕುದಿಕುದಿವ ಸ್ಟ್ರಾಂಗ್ ಕಾಫಿ ಹೀರುತ್ತ 'ಇಂದಿನ ಹೋಂ ವರ್ಕ್ ಮುಗಿಸಿದ್ದೇನಯ್ಯ! ಇದನ್ನು ಇನ್ನು ಅನುಭವಿಸಬೇಕಾದವರು ನೀವು' ಎಂದು ವಿನೋದವಾಗಿ ಹೇಳಿ ಬರೆದ ಭಾಗವನ್ನು ತನ್ಮಯತೆಯಿಂದ ಓದಿ ಹೇಳುತ್ತಿದ್ದರು. ನನ್ನ ಪತ್ನಿ ಮೀನಾಕ್ಷಮ್ಮ ಮತ್ತು ನಾನು ಇನ್ನಾರಾದರೂ ಮನೆಗೆ ಬಂದಿದ್ದ ಆತ್ಮೀಯರಿದ್ದರೆ ಅವರು ಶ್ರೋತೃಗಳು. ಹೊರಗೆ ಒಂದೆರಡು ಹನಿ ಮಳೆ ಕರೆದರೆ ನಮ್ಮ ಕಥಾ ವಾಚನ, ಶ್ರವಣಗಳಿಗೆ ಸ್ವಾರಸ್ಯ ಹೆಚ್ಚು. ಹಲಸಿನ ಬೇಳೆ ಸುಟ್ಟದ್ದೋ, ಕುರುಂ ಕುರುಂ ಚಕ್ಕುಲಿಯೋ ಜೊತೆಗೆ ಮೆಲ್ಲಲು."

"ಆ ದಿವಸದ ಮುಂದಿನ ಕೆಲಸ?"

"ಮತ್ತೆ ಆ ದಿವಸ ಬರವಣಿಗೆ ಇಲ್ಲ. ನಾನು ಕಂಡಂತೆ ಅವರಿಗೆ ಬರವಣಿಗೆ ಒಂದು ಆನಂದದಾಯಕ ಹವ್ಯಾಸವಾಗಿತ್ತು. ಬರೆಯಲೇಬೇಕೆಂಬ ಹಟದಿಂದ ಒಂದು ಹೊರೆ ಹೊತ್ತವರಂತೆ ವರ್ತಿಸುತ್ತಿರಲಿಲ್ಲ. 'ಜಾರುವ ದಾರಿಯಲ್ಲಿ' ಬರೆಯುತ್ತಿದ್ದಾಗ ಅವರ ಆರೋಗ್ಯ ಜಾರಿತು. ಕಠಿಣ ಜ್ವರ ಬಂದಿತು. ನನ್ನ ಹೆಂಡತಿಯ ಅಕ್ಕನ ಮಗ ಡಾ|| ವೆಂಕಟಸುಬ್ಬಯ್ಯನದೇ ಆರೈಕೆ. ವಿಶ್ರಾಂತಿ ಅಗತ್ಯ, ಮಲಗಿದಲ್ಲಿಂದ ಕದಲಬಾರದು—ಇದು ಅವನ ಆಜ್ಞೆ. ಆದರೆ ಕಾರಂತರು ಕೇಳಬೇಕಲ್ಲ—ಕಾರ್ಯಕ್ರಮ ತಪ್ಪಿಸಲಿಲ್ಲ. ಕಾದಂಬರಿಯನ್ನು ಬರೆದು ಮುಗಿಸಿಯೇಬಿಟ್ಟರು. ಇನ್ನು ಈ ಪಾದರಸ ನಿಂತೀತೆ? ಹೊರಟೇಬಿಟ್ಟರು. ಬೇಡ, ನಾಲ್ಕು ದಿನ ವಿಶ್ರಾಂತಿ ಪಡೆದು ಹೋಗಿ ಎಂದರೆ ಕೇಳಲಿಲ್ಲ. ಪುತ್ತೂರಿಗೆ ಹೋದವರಿಗೆ ನಿಮೋನಿಯ ಆಗಿ ತೊಂದರೆ ಆಯಿತು."

"ಅವರ ಈ ಅಸಹನೆಗೆ ಕಾರಣವೇನೆಂದು ನಿಮಗೆ ಅನ್ನಿಸದೆ?"

"ಅವರ ಈ ಗುಣವನ್ನು ಅಸಹನೆ ಎಂದು ಕರೆಯುವುದು ಸರಿಯೇ? ನಾನು ಹೇಳಲಾರೆ. ಒಂದು ಕೆಲಸ ನಡೆಯಬೇಕು, ಅದಕ್ಕೆ ನಿಗದಿಯಾದ ವೇಳೆಯಿಷ್ಟು ಎಂದು ಮುಂತಾಗಿ ಅವರ ಮನಸ್ಸಿನಲ್ಲಿ ಮೊದಲೇ ನಿರ್ಧಾರವಾಗಿರುವಂತೆ ತೋರುತ್ತದೆ. ಆ ಕಾರ್ಯಕ್ರಮವನ್ನು ವೈಯಕ್ತಿಕ ಕಷ್ಟ-ನಷ್ಟ ಏನೇ ಇದ್ದರೂ ಪರಿಗಣಿಸದೆ ಪೂರೈಸಿಯೇ ಬಿಡುವ ಪಣತೊಡುತ್ತಾರೆ ಎಂದು ಹೇಳಬಹುದು. ಇದು ಕಾರಂತರ ಮಾರ್ಗ, ರೀತಿ ಎಂದು ನನಗನ್ನಿಸಿದೆ. ಅದರ ಹೆಚ್ಚಿನ ವಿಶ್ಲೇಷಣೆ ನಿಮ್ಮಂಥ ಸಾಹಿತಿಗಳು, ವಿಮರ್ಶಕರು ಮಾಡಬೇಕು."

"ಮಿತ್ರರೊಡನೆ ಇರುವಷ್ಟು ಸಲುಗೆಯಿಂದ ಮನಬಿಚ್ಚಿ ಅವರು ಹೊಸಬರೊಡನೆ, ವಿಮರ್ಶಕರೊಡನೆ ಇರುವರೇ? ಆದ್ದರಿಂದ ನೀವು ಕಂಡುಕೊಂಡ ವಿವರ ಸಹಜವಾಗಿ ಲಭಿಸಿದ್ದು."

ಸಲುಗೆಯ ವಿಚಾರ ಹೇಳಿದಿರಿ. ಅವರು ಪರಿಚಯವಿಲ್ಲದವರೊಡನೆ ಔಪಚಾರಿಕವಾಗಿ ನಾಲ್ಕು ಮಾತಾಡಿ ಸುಮ್ಮನಿರಬಹುದು. ಆದರೆ ಮಾತಿಗೆ ಇಳಿದರೆ, ಇಳಿದಾಗ ತೀರ ಆತ್ಮೀಯವಾಗಿಯೇ ಇರುತ್ತಾರೆ. ದೊಡ್ಡವ, ಚಿಕ್ಕವ, ಪರಿಚಯಸ್ಥ, ಹೊಸಬ ಎಂಬ ಭಾವ ಅಲ್ಲಿ ಬಂದದ್ದು ನನ್ನ ಗಮನಕ್ಕೆ ಬರಲಿಲ್ಲ. ಸನ್ನಿವೇಶದ ಪ್ರಭು ಅವರಾಗಿರುತ್ತಾರೆ ಎಂದು ಮಾತ್ರ ನೋಡಿದ್ದೇನೆ."

"ಅವರ ಜೀವನದ ಏರಿಳಿತಗಳಲ್ಲಿ ಅವರ ಸ್ವಭಾವ ಹೇಗೆ ಮಾರ್ಪಾಟಾಗುತ್ತಿತ್ತು?"

"ಎರಡು ಪ್ರಸಂಗ ಹೇಳಿದರೆ ಸಾಕೆಂದು ತೋರುತ್ತದೆ. ಮೊದಲನೆಯದು ಅವರ ವೈಯಕ್ತಿಕ ಆಘಾತಕ್ಕೆ ಸಂಬಂಧಿಸಿದ್ದು. ಅವರ ಮಗ ಹರ್ಷ ಬೊಂಬಾಯಿಗೆ ಎದೆ ಗುಂಡಿಗೆಯ ಆಪರೇಷನ್ ಮಾಡಿಸಿಕೊಳ್ಳಲು ಹೋಗುವ ಮೊದಲು ಇಲ್ಲಿಗೆ ಬಂದಿದ್ದ. ನನ್ನ ಮಗ ಮೋಹನನ ಸ್ನೇಹಿತ. ಇಲ್ಲಿದ್ದ ಆ ನಾಲ್ಕು ದಿವಸ ಹರ್ಷನ ನೋವು ಸಂಕಟ ನೋಡಿದ್ದೆವು. ಬೊಂಬಾಯಿಗೆ ಹೊರಡುವ ದಿನ 'ಬದುಕಿದ್ದರೆ ನೋಡುವ ಮೋಕ' ಎಂದು ಮೋಹನನಿಗೆ ಹೇಳಿ ಹೋದ. ಅದೇ ನಾವು ಕೇಳಿದ ಅವನ ಕೊನೆಯ ಮಾತು. ಮುಂದೆ ನಮಗೆಲ್ಲ ತೀವ್ರ ದುಃಖವಾಯಿತು. ಕಾರಂತರು ಪುತ್ತೂರಿಗೆ ಮರಳಿದರು. ತಿಳಿದ ಕೂಡಲೆ ನಾವಿಬ್ಬರೂ ಅವರನ್ನು ಮಾತಾಡಿಸಿ ಬರಲು, ಸಮಾಧಾನ ಹೇಳಲು ಹೊರಡುವ ಸಿದ್ಧತೆ ನಡೆಸಿದ್ದೆವು. ಅಷ್ಟರಲ್ಲಿಯೇ ಕಾರಂತ ದಂಪತಿಗಳು ನಮ್ಮ ಮನೆಗೇ ಬಂದಿದ್ದರು. 'ನನ್ನ ಸ್ನೇಹಿತರಿಗೆ ನನ್ನ ವಿಷಯದಲ್ಲಿ ಎಷ್ಟು ಚಿಂತೆ, ಸಹಾನುಭೂತಿ ಇದೆ ಎಂದು ಗೊತ್ತಿದೆ. ಅದಕ್ಕೆ ನಾವೇ ಬಂದಿದ್ದೇವೆ' —ಇದು ಅವರ ಮಾತು."

ಅವರು ಈ ದುಃಖಪ್ರಸಂಗವನ್ನು ಕುರಿತು 'ಪ್ರಕೃತಿ ನಮಗೆ ಕೊಟ್ಟ ಬಳುವಳಿಯನ್ನು ಆ ಪ್ರಕೃತಿಯೇ ಮರಳಿ ಒಯ್ದಿತು' ಎಂದು ಬರೆದರಷ್ಟೆ. ಇನ್ನೊಂದು ಪ್ರಸಂಗ?"

"ಅದು ಅವರಿಗೆ ಗೌರವ ಪರಂಪರೆ ಬಂದಾಗ ನಡೆದದ್ದು. ನಾನು ಸಲುಗೆ, ಸಂತೋಷ, ಅಭಿಮಾನಗಳಿಂದ ೧೧–೩–೧೯೬೮ರಲ್ಲಿ ಒಂದು ಪತ್ರ ಬರೆದೆ. ಅದರ ಪ್ರತಿಯನ್ನೂ ಕಾರಂತರಿಂದ ನನಗೆ ಬಂದ ಉತ್ತರವನ್ನೂ ನಿಮಗೆ ಕೊಡುತ್ತೇನೆ, ನೋಡಿ—

"My dear Padmabhooshan Dr. Karanth,

I received a copy of ಇನ್ನೊಂದೇ ದಾರಿ, and I thank you very much ....In Beligeri estate (Moka's estate) 30 acres of best coffee is burnt yesterday due to forest fire. I got fire brigade in 2 hours from Mysore and the fire is under control. But for it, I am afraid the whole estate would have been burnt to ashes by now........"

ಕಾರಂತರ ಉತ್ತರ (೧೬-೩-೧೯೭೮)—

"........I read in the papers about the forest fire and the damage caused some 3 days ago when I was at Kota. I thought of writing you on my return. Your letter was waiting here. One has to take solace from the fact that much worse could have happened. If it is negligence on the part of workers then one has to be over-cautious."

"Now your way of addressing me as Dr., Padma Bhushan, — etc — is unforgivable. To friends I am and shall ever be 'Karanth' Mr. is more than enough. Don't punish your type-writer........"

"ದುಃಖದಿಂದ ಕುಗ್ಗದ ಸಂತೋಷದಿಂದ ಹಿಗ್ಗದ ದೊಡ್ಡ ಮನುಷ್ಯ ನಮ್ಮ ಕಾರಂತ."

"ಈ ಗುಣ ಅವರಿಗೆ ಸಹಜ ಪ್ರವೃತ್ತಿಯೇ ಅಥವಾ ಅವರು ಪ್ರಯತ್ನಪೂರ್ವಕ ಬೆಳೆಸಿಕೊಂಡು ಬಂದದ್ದೇ ?"

"ಇದಕ್ಕೆ ಉತ್ತರ ಹೇಳಬೇಕಾದವರು ನೀವೇ. ಅವರು ಹಿಡಿದಿರುವ ದಾರಿಯಲ್ಲಿ ಇಂಥ ನಡವಳಿಕೆ ಸಹಜವಾದದ್ದೇ ಎಂದೆನ್ನಿಸುವುದು."

"ಅವರು ಹಿಡಿದಿರುವ ದಾರಿ ಅಂದರೆ ?"

"ಜೀವನದ ಪ್ರತಿ ವಿವರದಲ್ಲಿಯೂ ಇರುವ ಅಪಾರ ಆಸಕ್ತಿ. ಒಮ್ಮೆ ಅವರು ಇಲ್ಲಿಗೆ ಬಂದಿದ್ದಾಗ ಕುಶಾಲನಗರದ ಜಾನುವಾರುಗಳ ಪ್ರದರ್ಶನಕ್ಕೆ ಕರೆದುಕೊಂಡು ಹೋಗಿದ್ದೆ. ಅಲ್ಲಿ ಸೇರಿದ ತಜ್ಞರು ಕಾರಂತರು ಭಾಷಣ ಮಾಡಬೇಕೆಂದು ಆಶಿಸಿದರು. ಜಾನುವಾರುಗಳ ಸಾಕಣೆ, ತಳಿ ಅಭಿವೃದ್ಧಿ, ಪರದೇಶಗಳಲ್ಲಿ ನಡೆದಿರುವ ಸಂಶೋಧನೆಗಳೇನು ಎಂದು ಕಾರಂತರು ವಿವರಿಸಿದಾಗ ತಜ್ಞರೂ ಕಲಿಯುವ ಪರಿಸ್ಥಿತಿಗೆ ಬಂದರು."

"ಅವರು ಸಂಭಾಷಣಾ ಚತುರರು ಎಂದೂ ಪ್ರಸಿದ್ಧರಾಗಿದ್ದಾರೆ. ಒಂದೆರಡು ಸ್ಯಾಂಪಲ್ ?"

"ನಾನೊಂದು ಹೇಳಲೇ ?" ಅಲ್ಲೇ ಕುಳಿತು ನಮ್ಮ ಸಂಭಾಷಣೆಯನ್ನು ಆಲಿಸು ತ್ತಿದ್ದ ಶ್ರೀ ಜೆ. ಆರ್. ಲಕ್ಷ್ಮಣರಾಯರ ಪ್ರಶ್ನೆ.

"ಕೇಳೋಣ."

ಶ್ರೀ ಲಕ್ಷ್ಮಣರಾಯರು ಮುಂದುವರಿ ದರು: "ಮೈಸೂರು ವಿಶ್ವವಿದ್ಯಾನಿಲಯ ಇಂಗ್ಲಿಷ್-ಕನ್ನಡ ನಿಘಂಟು ಪರಿಷ್ಕರ

ಸಮಿತಿ ತಿಂಗಳಿಗೊಮ್ಮೆ ಸಭೆಸೇರಿ ವಿವರಗಳನ್ನು ಚರ್ಚಿಸುವುದು. ಕಾರಂತರು ಆ ಸಭೆಯ ಜೀವಂತ ತಂತು. ಅವರಿದ್ದರೆ ಸಭೆಗೆ ಕಳೆ, ಕೆಲಸಕ್ಕೆ ಕೆಚ್ಚು ಮತ್ತು ಗುರಿ. ಇಂಥ ಒಂದು ಸಭೆಯಲ್ಲಿ ಒಂದು ಇಂಗ್ಲಿಷ್ ಪದದ ಸಮಾನ ಪದ ಚರ್ಚೆಗೆ ಬಂದಿತು. ಪು. ತಿ. ನರಸಿಂಹಾಚಾರ್ಯರು 'ಮೂರ್ಖತನ' ಎಂದು ಸೂಚಿಸಿದರು. "ಅದು ಬಹಳ ತೀವ್ರವಾಯಿತು" ನಾನೆಂದೆ. ರಾಮರಾಯರು "'ತಿಳಿಗೇಡಿತನ' ಆಗಬಹುದೇ?" ಎಂದರು. "ಅದು ಬಹಳ ಸಪ್ಪೆಯಾಯಿತು. 'ದಡ್ಡತನ' ಏಕಾಗಬಾರದು?" ನಾನೆಂದೆ. ಅಷ್ಟು ಹೊತ್ತು ಮೂಕರಂತೆ ಕುಳಿತಿದ್ದ ಕಾರಂತರು ಫಕ್ಕನೆ ಜಿಗಿದು "ಸರಿ! ಪು.ತಿ.ನರ ಮೂರ್ಖತನಕ್ಕೂ ರಾಮರಾಯರ ತಿಳಿಗೇಡಿತನಕ್ಕೂ, ಕಾಂಪ್ರೊಮೈಸ್ ಲಕ್ಷ್ಮಣರಾಯರ ದಡ್ಡತನ!" ಎಂದರು.

ನನ್ನ ಮಾತು: "ಒಂದು ದಿನ ನಾನು ಪುತ್ತೂರು ಪೇಟೆಯಲ್ಲಿ ಕಾರಂತರೊಡನೆ ಮಾತಾಡುತ್ತ ಕುಳಿತಿದ್ದೆ. ಒಬ್ಬ ತರುಣ ನಯವಿನಯ ಭಕ್ತಿಯಿಂದ ಬಂದು ಕಾರಂತರಿಗೆ ನಮಸ್ಕರಿಸಿ ತನ್ನ ಪರಿಚಯ ಹೇಳಿಕೊಂಡ. ಕಾರಂತರು 'ಬಹಳ ಸಂತೋಷ' ಎಂದರು. 'ನನಗೆ ಸಾಹಿತ್ಯಸೇವೆ ಮಾಡಬೇಕೆಂದು ತುಂಬ ಆಸೆ. ಅದಕ್ಕೆ ತಮ್ಮ ಆಶೀರ್ವಾದ ಬೇಕು' ಎಂದು ಬೇಡಿದ. ಕಾರಂತರು ಅವನನ್ನೊಮ್ಮೆ ತೀಕ್ಷ್ಣವಾಗಿ ನೋಡಿ 'ಹೌದಯ್ಯಾ! ನೀವು ಸಾಹಿತ್ಯಸೇವೆ ಮಾಡದಿದ್ದರೆ ಸಾಹಿತ್ಯಕ್ಕೇನಾದರೂ ಕೊರತೆ ಉಂಟೋ—ಮೊದಲು ಅದನ್ನು ಯೋಚನೆ ಮಾಡಿ ಮತ್ತೆ ಬನ್ನಿ' ಇಷ್ಟು ಹೇಳಿ ಮುಂದುವರಿಸಿದರು 'ನಿಮಗೆ ಬರೆಯಲೇಬೇಕೆಂಬ ತೀವ್ರ ಪ್ರೇರಣೆ ಬಂದರೆ ನಿಮ್ಮ ಅನುಭವಕ್ಕೆ ತಿಳಿದದ್ದನ್ನು ಬರೆಯಿರಿ; ಅಲ್ಲಿ ನಿಮಗೆ ದೊರೆಯುವ ಸಂತೋಷವೇ ಪ್ರತಿಫಲ'".

ಶ್ರೀ ಮಂಜನಾಥಯ್ಯನವರ ಮಾತು: "ಇಂಥ ಉದಾಹರಣೆಗಳು ಪ್ರತಿ ಸಲದ ಒಡನಾಟದಲ್ಲಿಯೂ ನಮಗೆ ಲಭಿಸಿದೆ. ಅತಿ ಕಷ್ಟವೆಂದು ನಾವು ತಿಳಿದ ವಿಷಯವನ್ನು ಸುಲಭವಾಗಿ ಸರಳವಾಗಿ ಬೇಕಾದರೆ ಸ್ವಲ್ಪ ವಿನೋದಮಿಶ್ರಿತ ಮಾತಿನಿಂದ ಹೇಳುವುದು ಅವರ ಪ್ರವೃತ್ತಿ. ಈಗ ಕೆಲವು ವರ್ಷಗಳ ಹಿಂದಿನ ಮಾತು. ಹೊಸ ಮೈಸೂರು ರಾಜ್ಯ ಸ್ಥಾಪನೆಯಾದ ಮೇಲೆ ನಡೆದದ್ದು. ಮೈಸೂರು ಸರ್ಕಾರ ಹರದೂರು ಮತ್ತು ಕಾವೇರಿ ಹೊಳೆಗಳಿಗೆ ಕೊಡಗಿನಲ್ಲಿ ಅಣೆಕಟ್ಟುಗಳನ್ನು ಕಟ್ಟಬೇಕು. ಹೀಗೆ ಸಂಗ್ರಹವಾಗುವ ನೀರನ್ನು ಸಮೀಪದ ಪೆರಿಯಾಪಟ್ಟಣ ಮುಂತಾದ ಜಿಲ್ಲೆಗಳಿಗೆ ಬೇಸಾಯಕ್ಕಾಗಿ ಸಾಗಿಸಬೇಕು, ಎಂಬ ಯೋಜನೆಯನ್ನು ಕಾರ್ಯಗತಗೊಳಿಸಲು ತೀವ್ರ ಆಸಕ್ತಿ ವಹಿಸಿತ್ತು. ನಿಂತ ನೀರಿನಿಂದ ಕೊಡಗು ಮುಳುಗುತ್ತದೆ. ಇಲ್ಲಿನ ಆಸ್ತಿಪಾಸ್ತಿಗಳು ನಾಶವಾಗುತ್ತವೆ. ತಗ್ಗಿನ ಜಿಲ್ಲೆಗಳಿಂದ ದೊರೆಯಬಹುದಾದ ಫಸಲು ಅಂಕೆಸಂಖ್ಯೆಗಳಲ್ಲಿ ಮಾತ್ರ! ಆ ಅನ್ಯಾಯವನ್ನು ಕಾನೂನುಬದ್ಧವಾಗಿ ಎದುರಿಸಬೇಕೆಂದು ಕೊಡಗಿನ ಹಲವಾರು ಮಂದಿ ಒಂದಾಗಿ ನಿರ್ಧರಿಸಿ 'ಕೊಡಗು ರಕ್ಷಣಾ ಸಮಿತಿ'ಯನ್ನು ಸ್ಥಾಪಿಸಿ ಚುರುಕಾಗಿ ಕಾರ್ಯಪ್ರವೃತ್ತರಾದೆವು. ನಮ್ಮ ಹೋರಾಟದಲ್ಲಿ ನ್ಯಾಯವಿದೆ, ಸತ್ಯವಿದೆ ಎಂದು ಮನಗಂಡ ಕಾರಂತರು ನಮ್ಮ ಒಂದು ದೊಡ್ಡ ಸಾರ್ವ-

ಜನಿಕ ಸಭೆಗೆ ದಯಮಾಡಿಸಿ 'ಕೊಡಗಿನ ಗುಡುಗಿಗೆ ಕಿವುಡರಾಗ ಬೇಡಿ' ಎಂದು ಭಾಷಣ ಮಾಡಿದರು. ಅವರ ಮಾತಿನ ಸರಣಿ ಹೀಗಿತ್ತು 'ಕರ್ಣಾಟಕದ ಇಲ್ಲವೆ ಮೈಸೂರಿನ ಹಿತಸಾಧನೆ ಮಾಡುತ್ತೇವೆಂಬ ಹಠಸಾಧನೆಯಲ್ಲಿ ನಮ್ಮ ನಾಡಿಗೆ ನಿಸರ್ಗಸೌಂದರ್ಯದ ಕಲಶದಂತಿರುವ ಕೊಡಗು ಪ್ರದೇಶವನ್ನು ಮತ್ತು ಅಲ್ಲಿನ ಜನತೆಯನ್ನು ಉಪೇಕ್ಷಿಸಿ ವರ್ತಿಸುವುದು ನಮಗೆ ಹಿತವನ್ನು ತರಲಾರದು....ಕೊಡಗು ಅನ್ಯಭಾಗಗಳಂತಿಲ್ಲ. ಇಲ್ಲಿನ ಮಲೆನಾಡು ಸುಮಾರು ೩,೦೦೦ ಅಡಿಗಳಿಗಿಂತಲೂ ಎತ್ತರವಾದ ಗುಡ್ಡಗಾಡು, ಹಲವು ಶತಮಾನಗಳಿಂದಲೂ ಕೊಡಗರೆಂಬ ಜನವರ್ಗ ಇದು ತಮ್ಮ ತಾಯ್ನಾಡೆಂದು ತಿಳಿದುಬಂದ ದೇಶ. ಇಲ್ಲಿನ ದಟ್ಟವಾದ ಅರಣ್ಯಗಳನ್ನು ಗೆದ್ದು, ತಲೆಮಾರುಗಳಿಂದ ಶ್ರಮಿಸಿ ಬೆಟ್ಟದ ಕೋಡುಗಳಲ್ಲೂ ಕಣಿವೆಗಳಲ್ಲೂ ಕಾಫಿ, ಕಿತ್ತಳೆ, ಏಲಕ್ಕಿತೋಟ, ಭತ್ತದ ಹೊಲಗದ್ದೆಗಳನ್ನು ಮಾಡಿಕೊಂಡು ಜನ ಸುಖಜೀವನ ಮಾಡಿಕೊಂಡು ಬಂದಿದ್ದಾರೆ. ಇಂಥ ಜನಜೀವನದ ರೀತಿ ನಾಲ್ಕು ದಿನಗಳಲ್ಲಿ ಕಟ್ಟಬಲ್ಲ ಸಂಸ್ಕಾರವಲ್ಲ. ತಲೆಮಾರುಗಳಿಂದ ಕಟ್ಟಿ ಬಂದ ಸಾಂಪತ್ತಿಕ ಸಾಂಸ್ಕೃತಿಕ ಜೀವನವಾಗಿದೆ. ಅವರ ನಾಡನ್ನು ಉಳಿದವರು ಸಾಂಪತ್ತಿಕ ಅಭಿವೃದ್ಧಿಗಾಗಿ ಅನುಕರಿಸುವ ಕಾಲವಿದು. ಅಂಥ ಪರಿಸ್ಥಿತಿಯಲ್ಲಿ ಬಯಲಸೀಮೆಯ ಕೃಷಿಗಾಗಿ ಕೊಡಗಿನ ನದಿಗಳಿಗೆ ಉನ್ನತ ನೀರ್ಕಟ್ಟೆಗಳನ್ನು ಕಟ್ಟಿ ನಾಡಿಗೆ ನಾಡನ್ನೇ ಬಲಿಹಾಕಲು ಹೊರಟರೆ ಕೊಡಗಿನ ಜನ ಮೌನರಾಗಿ ಕುಳಿತಿರಬಲ್ಲರೇ? ಮೈಸೂರಿನ ಈ ನೀರಾವರಿ ಯೋಜನೆ ಕನಿಷ್ಠ ೧೫ ಕೋಟಿ ರೂಪಾಯಿಗಳ ಹೊಸ ಹೊಂಗನಸು. ಈ ಕನಸು ಮಾತ್ರ ಚಿನ್ನದ ತತ್ತಿಯನ್ನು ಕೊಡುವ ಬಾತುಕೋಳಿಯನ್ನೇ ಕೊಂದ ಹುಂಬ ರೈತನ ಕತೆಯಂತಾದೀತು........'

—ಹೀಗೆ ಸತ್ಯನಿಷ್ಠುರರು ನಮ್ಮ ಕಾರಂತರು."

ಸಾಹಿತ್ಯ ಸಾರ್ಥಕವಾಗಬೇಕೆಂದರೆ ಅದು ಕಸ-ರಸ ಎರಡನ್ನು ಅರಿತು ಕಸವನ್ನು ಬಿಟ್ಟು ರಸವನ್ನು ಹಿಡಿಯಬೇಕು. ಶುಚಿ, ರುಚಿ ಎರಡನ್ನೂ ಸಾಧಿಸಬೇಕು. ಇಂಥ ಸಾಹಿತ್ಯವನ್ನು ರಚಿಸಬಯಸುವವರು ಒಂದು ಇಕ್ಕಟ್ಟಿನ ದಾರಿಯಲ್ಲಿ ನಡೆಯಬೇಕಾಗುತ್ತದೆ. ಶಿವರಾಮ ಕಾರಂತರು ಕ್ಷುರಧಾರೆಯಂಥ ಕ್ಲೇಶದ ಈ ಮಾರ್ಗದಲ್ಲಿ ನಡೆಯುವುದರಲ್ಲೇ ಸಂತೋಷ ಕಂಡಿದ್ದಾರೆ.

—ಶ್ರೀನಿವಾಸ

ಶಿವರಾಮ ಕಾರಂತರೊಡನೆ....

ಬಿ. ಮಾಲಿನಿ ಮಲ್ಯ
'ಮಾನಸ'
ಸಾಲಿಗ್ರಾಮ—೫೭೬ ೨೨೫

ಕನ್ನಡ ಸಾಹಿತ್ಯ ಚರಿತ್ರೆಗೆ ತನ್ನ ೨೦೦೦ ವರ್ಷಗಳ ದೀರ್ಘ ಇತಿಹಾಸದಲ್ಲಿ ಶಿವರಾಮ ಕಾರಂತರಂಥ ವಿಪುಲ ಸೃಷ್ಟಿಯ ಬರಹಗಾರನ ಹೆಸರನ್ನು ದಾಖಲಿಸಲು ಸಾಧ್ಯವಾಗಿಲ್ಲ ಎಂಬುದನ್ನು ಮೊದಲೇ ನಾನು ಹೇಳಿದರೆ, ಕನ್ನಡಕ್ಕೆ ಕಾರಂತರು ಅದೆಷ್ಟು ಮುಖ್ಯವಾಗಿದ್ದರು—ಎಂದು ಹೇಳಿದಂತಾಗುತ್ತದೆ. ಅವರ ಬರಹದಂತೆ ಅವರ ವ್ಯಕ್ತಿತ್ವವೂ ಅನನ್ಯ. ಕುರುಡು ಭಕ್ತಿಯನ್ನು ಬದಿಗಿಟ್ಟು, ಯಾವ ಮುಜಗರವೂ ಇಲ್ಲದೆ, ಕಾರಂತರನ್ನು ಎಷ್ಟುಬೇಕಾದರೂ ಪ್ರಶಂಸೆ ಮಾಡಬಲ್ಲ ಜೀವಂತ ಸಾಕ್ಷಿಗಳು ನನ್ನ ಬಳಿ ಹಲವಾರಿವೆ. ಎಂದಾದರೊಮ್ಮೆ ಮತ್ತೆ ಪುನಃ ಅವರ ಬಗ್ಗೆ ಸವಿಸ್ತಾರವಾಗಿ ಬರೆವೇನು.

೧೯೨೧ರಲ್ಲಿ ಹುಟ್ಟೂರನ್ನು ತೊರೆದು, ಹತ್ತೂರುಗಳನ್ನು ಸುತ್ತಾಡತೊಡಗಿದ ಕಾರಂತರು ೧೯೩೦ ರಿಂದ ೧೯೭೩ರ ತನಕ ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ "ಹತ್ತೂರು ಕೊಟ್ಟರೂ ಪುತ್ತೂರು ಬಿಡೆ" ಎಂಬ ಹಟದಿಂದ ಬದುಕನ್ನು ಸಾಗಿಸಿದವರು. ಇದ್ದಕ್ಕಿದ್ದಂತೆ ೧೯೭೩ರಲ್ಲಿ ಪುತ್ತೂರನ್ನು ತೊರೆಯಲು ನಿರ್ಧರಿಸಿದರು." ಈ ಊರಿನ ಜೀವನ ಸಾಕು ಅನಿಸಿದೆ. ಬರುವ ಮುಪ್ಪನ್ನು ನೆನೆದು, ಊರಿನ ಒಬ್ಬಿಬ್ಬರು ಬಂಧುಗಳಿಗೆ ಸಮೀಪವಾಗಿರುವ ಆಸೆಯಿಂದ ಹೋಗುತ್ತಿದ್ದೇನೆ" ಎಂದು ೭-೧-೧೯೭೩ರಂದು ತಮ್ಮ ಮಿತ್ರರೊಬ್ಬರಿಗೆ ಬರೆದಿದ್ದ ಪತ್ರ ಅವರು ಪುತ್ತೂರನ್ನು ಬಿಟ್ಟ ಕಾರಣವನ್ನು ಸೂಚ್ಯವಾಗಿ ತಿಳಿಸುತ್ತದೆ.

೧೯೭೪ರ ಜನವರಿಯಿಂದ ಅಂದರೆ, ತಮ್ಮ ೭೩ನೇ ವರ್ಷ ಪ್ರಾಯದಲ್ಲಿ ಪತ್ನಿ ಲೀಲಾ ಕಾರಂತರನ್ನೊಡಗೂಡಿ ಸಾಲಿಗ್ರಾಮದ "ಸುಹಾಸ"ದಲ್ಲಿ ತಮ್ಮ ವಾನಪ್ರಸ್ಥಾಶ್ರಮದ ಬದುಕನ್ನು ಕಾರಂತರು ಆರಂಭಿಸಿದರು. ಈ ಅವಧಿಯಲ್ಲಿ ನಾನು ಸ್ವಂತ ಅಧ್ಯಯನದ ಮೂಲಕ ಬಿ.ಎ. ಪರೀಕ್ಷೆ ಪಾಸುಮಾಡಿ, ಇಂಗ್ಲಿಷ್ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಊರಲ್ಲೇ ಪುಟ್ಟ ನೌಕರಿಯನ್ನು ಮಾಡುತ್ತ ಸರಕಾರಿ ನೌಕರಿಯನ್ನು ಅರಸುತ್ತ ಅಲೆದಾಡುತ್ತಿದೆ. ಪರೀಕ್ಷೆ, ಸಂದರ್ಶನ ಎಂದು ನೌಕರಿಯ ಬೇಟೆಯಲ್ಲಿ ಕಾಲ ತಳ್ಳುತ್ತಿದ್ದೆ. ಶಿವರಾಮ ಕಾರಂತರು ಸಾಲಿಗ್ರಾಮಕ್ಕೆ ನೆಲೆಸಲು ಬಂದಾಗ, ಅವರನ್ನು ಸ್ವಾಗತಿಸಲು ಊರಿಗೆ ಊರೇ ಸಜ್ಜಾದಾಗ, ನಾನು ದೂರದ ಬೆಂಗಳೂರಿನಲ್ಲಿದ್ದೆ—ಕೆನರಾ ಬ್ಯಾಂಕಿನ

ಉದ್ಯೋಗ ನೇಮಕಾತಿಯ ಪರೀಕ್ಷೆ, ಸಂದರ್ಶನಗಳ ದೆಸೆಯಿಂದ. ಹೀಗಾಗಿ, "ಮರಳಿ ಮಣ್ಣಿಗೆ" (ಹುಟ್ಟೂರಿಗೆ) ಆಗಮಿಸಿದ್ದ ಕಾರಂತರನ್ನು ದೂರದಿಂದ ನೋಡುವ ಅವಕಾಶವೂ ನನಗೆ ಒದಗಿರಲಿಲ್ಲ. ಕತೆ, ಕಾದಂಬರಿಗಳ ಬಗ್ಗೆ ಒಲವನ್ನು ತಳೆಯುದಿದ್ದ ನನಗೆ ಅಂದು ಕಾರಂತ ಸಾಹಿತ್ಯದ ಪರಿಚಯವೂ ಇರಲಿಲ್ಲ. ಹಾಗಾಗಿ, ಅಂದು ನನ್ನ ಮಟ್ಟಿಗೆ ಕಾರಂತರ ಆಗಮನ ಒಂದು ಸುದ್ದಿ ಹೆಚ್ಚೆಂದರೆ, ಒಂದು ವಿಶೇಷ ಸುದ್ದಿಯಾಗಿತ್ತು ಅಷ್ಟೆ. ಆದರೆ, ನಾನು ಕನಸಿನಲ್ಲಿಯೂ ಎಣಿಸಿರದ ಆಕಸ್ಮಿಕ ಘಟನೆ ನನ್ನನ್ನು ಕಾರಂತರ ಬಳಿಗೆ ಒಯ್ದಿತ್ತು ನೌಕರಿಯ ನೆಪದಿಂದ. "ನಾನು ಕಂಡ ಕಾರಂತರು" (೧೯೮೭) ಎಂಬ ಕೃತಿಯಲ್ಲಿ ಅದರ ವಿವರಗಳನ್ನೆಲ್ಲ ನಾನು ಈಗಾಗಲೇ ಬರೆದು ತಿಳಿಸಿರುವೆನಾದುದರಿಂದ ಚರ್ವಿತ ಚರ್ವಣಕ್ಕೆ ಹೋಗಲಾರೆ.

೧೯೭೪ನೇ ಇಸವಿಯ ಜನವರಿ ತಿಂಗಳ ಬದಲು, ಆದೇ ವರ್ಷದ ಅಕ್ಟೋಬರದಲ್ಲಿ ಅವರು ಸಾಲಿಗ್ರಾಮಕ್ಕೆ ಬಂದಿದ್ದರೆ, ನಾನು ಆದಾಗಲೇ ಜೀವವಿಮಾ ನಿಗಮದ ನೌಕರಳಾಗಿದ್ದು, ಅವರೊಂದಿಗೆ ಕೆಲಸ ಮಾಡುವ ಅವಕಾಶ ನನಗೆ ಸಿಗುತ್ತಿರಲಿಲ್ಲ. ಸಾಹಿತಿಗಳ ಕೃತಿಗಳನ್ನಷ್ಟೇ ನನ್ನಷ್ಟಕ್ಕೆ ಓದಿ, ತಣ್ಣಗೆ ಕುಳಿತಿರುವ ಅಭ್ಯಾಸವನ್ನು ಇಂದಿಗೂ ಬೆಳೆಸಿಕೊಂಡಿರುವ ನಾನು ಅವರನ್ನು ಹುಡುಕಿಕೊಂಡು ಹೋಗುವ ಪ್ರಶ್ನೆಯೇ ಬರುತ್ತಿರಲಿಲ್ಲ. ನಾನ್ಯಾರೋ? ಕಾರಂತರು ಯಾರೋ? ಎಂಬಂತಾಗುತ್ತಿತ್ತು ನಮ್ಮಿಬ್ಬರ ಸಂಬಂಧ. ನಾನು ಶಿವರಾಮ ಕಾರಂತರ ಬರಹಗಳ ಬಗ್ಗೆ ಮಾಡುತ್ತಿರುವ ಕೆಲಸಗಳನ್ನು ಕಂಡು ಮೆಚ್ಚಿದ ಕನ್ನಡದ ಹೆಸರಾಂತ ಲೇಖಕರಾಗಿರುವ ಪ್ರೊ|| ಜವರೇಗೌಡ, ಡಾ|| ಹಾ. ಮಾ. ನಾಯಕ ಮಾನ್ಯ ಗೌರೀಶ ಕಾಯ್ಕಿಣಿ—ಮೊದಲಾದವರೆಲ್ಲ "ಮಾಲಿನಿ ಮಲ್ಯರಂಥ ಸಹಾಯಕಿಯನ್ನು ಪಡೆದದ್ದು ಶಿವರಾಮ ಕಾರಂತರ ಅದೃಷ್ಟ" ಎಂಬುದಾಗಿ ಹೊಗಳಿದ್ದನ್ನು ಕೇಳಿದಾಗ ನನಗೆ—ಮುಹಮ್ಮದನನ್ನು ಬೆಟ್ಟವೇ ಅರಸಿಕೊಂಡು ಹೋದಂತೆ—ಪ್ರಾಯಶಃ ಶಿವರಾಮ ಕಾರಂತರು ಮಾಲಿನಿ ಮಲ್ಯಳನ್ನು ಅರಸಿಕೊಂಡೇ ಸಾಲಿಗ್ರಾಮಕ್ಕೆ ಬಂದಿರಬೇಕೆಂಬ ಗುಮಾನಿ ಹುಟ್ಟಿದೆ! ಇಲ್ಲವಾದರೆ —ಎತ್ತಣ ಕೋಗಿಲೆ; ಎತ್ತಣ ಮಾಮರ!

ಅನೇಕ ಕಾರಣಗಳಿಂದಾಗಿ, ಕಾರಂತರೊಡನೆ ನಾನು ಕಳೆದಿದ್ದ ೨೩ ವರ್ಷಗಳು ನನ್ನ ಪಾಲಿಗೆ—ವಸ್ತುಸ್ಥಿತಿಯ ಅರಿವಿಲ್ಲದ ಜನರು ಹೊಗಳುವಂತೆ "ನಿಮ್ಮ ಪುಣ್ಯ; ನಿಮ್ಮ ಅದೃಷ್ಟ" ಆಗಿರಲೇ ಇಲ್ಲ. ಅವರೊಂದಿಗೆ ಕೆಲಸಮಾಡಲು ಆರಂಭಿಸಿದಾಗಲೇ ನಮ್ಮಿಬ್ಬರ ಗುಣಸ್ವಭಾವಗಳಲ್ಲಿ ಪರಸ್ಪರ ವಿರೋಧಾಭಾಸಗಳಿರುವುದನ್ನು ಗ್ರಹಿಸಲು ನನಗೆ ಹೆಚ್ಚು ದಿನಗಳುಬೇಕಾಗಲಿಲ್ಲ. ಹಿಂದೆ ಮುಂದೆ ಯೋಚಿಸದೆಯೇ ಇದ್ದೊಂದು ಪುಟ್ಟ ನೌಕರಿಯನ್ನೂ ತೊರೆದಿದ್ದೆ—ಹೊಸ ಸೀರೆ ಬರುವ ಆಸೆಯಿಂದ ಹಳೆಯದನ್ನು ಸುಟ್ಟು ಕುಳಿತ ಬಡ ಹೆಣ್ಣುಮಗಳಂತೆ. ದಿಕ್ಕು ತೋಚದಾಯಿತು. "ಈಸಬೇಕು; ಇದ್ದು ಜಯಿಸಬೇಕು" ಎಂಬ ಸಂತವಾಣಿಯ ಉದಾಹರಣೆಯಿಂದ ಬದುಕನ್ನು ಇದಿರಿಸಲು ನಮ್ಮನ್ನು ಸಜ್ಜುಗೊಳಿಸಿದ್ದ ನನ್ನ ತಂದೆಯ ಉಪದೇಶ ಧುತ್ತೆಂದು ಕಣ್ಣೆದುರಿಗೆ ನಿಂತಾಗ, ಭಯ ದೂರ

ವಾಯಿತು; ಧೈರ್ಯ ತಾನೇ ತಾನಾಗಿ ಮುಂದೆ ಬಂದಿತು—ಎಳೆವರೆಯದ ಬಿಸಿ ರಕ್ತವೂ ತಾನು ಜತೆಯಲ್ಲಿದ್ದೇನೆ ಅಂದಿತು. ಆದರ್ಶ, ಆಕಾಂಕ್ಷೆಗಳು ಮುಗಿಲೆತ್ತರಕ್ಕೆ ಏರಿದ್ದರೂ, ಸಾಧನೆ ಕಲ್ಪನೆಯ ಕೂಸಲ್ಲ—ಎಂಬ ಸ್ಪಷ್ಟ ಜ್ಞಾನ ಆಗಲೇ ನನ್ನಲ್ಲಿ ಜಾಗೃತವಾಗಿತ್ತು. ಆರ್ಥಿಕ ಸ್ವಾವಲಂಬನೆಯ ಕನಸಲ್ಲದೆ, ಬೇರೆ ಯಾವ ದೊಡ್ಡ ಗುರಿಯೂ ನನ್ನ ಮುಂದಿರಲಿಲ್ಲ. ಇಂದಿಗೂ, ನಾನು ಮಾಡುವ ಕೆಲಸದಲ್ಲಿ ನಿಷ್ಠೆ, ಶ್ರಮ ಹೊರತು, ಅನ್ಯ ಆಕಾಂಕ್ಷೆಗಳು ನನ್ನ ಮುಂದೆ ಇರುವುದಿಲ್ಲ. ಕಾರಂತರೊಂದಿಗಿನ ನೌಕರಿಯ ನೆಪದಿಂದ ಮೆಲ್ಲಮೆಲ್ಲನೆ ಅವರ ಶಿಷ್ಯತ್ವವನ್ನು ಗಳಿಸಿಕೊಂಡೆ; ನನ್ನ ಬದುಕಿನಲ್ಲಿ ನಷ್ಟವಾಗಿದ್ದ ಓದುವ ಹಂಬಲವನ್ನು ಕಾರಂತರ ಸಾನ್ನಿಧ್ಯದಲ್ಲಿ ಪಡೆದುಕೊಂಡೆ. ಕೋಟ ಬ್ರಾಹ್ಮಣರ ಕುಲದೇವರಾದ ಉಗ್ರ ನರಸಿಂಹನ ಒಂದಂಶವನ್ನು ಮೈಗೂಡಿಸಿಕೊಂಡಿದ್ದ ಶಿವರಾಮ ಕಾರಂತರಿಗೆ ತಾಳ್ಮೆಯ ಪಾಠವನ್ನು ಬೋಧಿಸುವ ಗುರುಪಟ್ಟವನ್ನೂ ಕಸಿದುಕೊಳ್ಳತೊಡಗಿದೆ—ಸಮಯ, ಸಂದರ್ಭಕ್ಕೆ ಅನುಗುಣವಾಗಿ. ಅದು, ಅವರ "ಉದ್ಧಾರ"ಕ್ಕೆ ಅಲ್ಲ; ನಾನು ಅಂಥ ವಾತಾವರಣದಲ್ಲಿ ಬದುಕುವುದು ಅನಿವಾರ್ಯ ಎಂಬುದು ನನಗೆ ಅದಾಗಲೇ ಮನವರಿಕೆಯಾಗಿತ್ತು. ತಮ್ಮ ಬದುಕಿನ ಸಂಜೆಯಲ್ಲಿಯೂ, ಬದುಕಿಗಂಟಿದ್ದ ನಂಟಿನ ನಂಜನ್ನು ನುಂಗಲೇಬೇಕಾದ ಪರಿಸ್ಥಿತಿಯಲ್ಲಿ ಜೀವನ ಸಾಗಿಸಲು ಸಾಲಿಗ್ರಾಮಕ್ಕೆ ಬಂದಿದ್ದ ಕಾರಂತರ ಬಗ್ಗೆ ನನಗೆ ಅತೀವವಾದ ಮರುಕವಿತ್ತು. ನನ್ನ ತಪ್ಪಿಲ್ಲದೆ ಅವರೆಷ್ಟೇ ನೋವನ್ನು ಕೊಟ್ಟರೂ, ಧಾರಾಳವಾಗಿ ಅವರನ್ನು ಕ್ಷಮಿಸುವಷ್ಟು ಗೌರವವನ್ನು ಅವರ ಬಗ್ಗೆ ತಾಳಿದ್ದೆ. ನನ್ನ ಈ ಧಾರಾಳತನ ಅವರನ್ನು ನನ್ನ ಸಮೀಪಕ್ಕೆ ಸೆಳೆಯಿತು. ಅವರ ಬದುಕು, ಬರಹಗಳ ಬಗ್ಗೆ ನನಗಿದ್ದ ಅಪಾರವಾದ ಗೌರವ ಮತ್ತು ಅವರಿಗೆ ನನ್ನ ಮೇಲಿದ್ದ ವಿಶೇಷವಾದ ಪ್ರೀತ್ಯಾದರಗಳಿಂದಾಗಿಯೇ ನಾವಿಬ್ಬರೂ ೨೩ ವರ್ಷಗಳ ಕಾಲ ಒಟ್ಟಿಗೇ ದುಡಿಯಲು ಸಾಧ್ಯವಾಯಿತು. ಮನೆಯ ಹೊರಗೆ ಊರಿನ ಜನರೊಡನೆ ಮುಕ್ತವಾಗಿ ಬೆರೆಯಲು, ಸಂಭಾಷಿಸಲು ಒಗ್ಗದ ಸ್ವಭಾವದ ಕಾರಂತರಿಗೆ ಮನೆಯ ಒಳಗಿನ ವ್ಯಕ್ತಿಗಳೇ ಊರುಗೋಲಾಗಬೇಕಾದುದು ಅನಿವಾರ್ಯವಾಗಿತ್ತು. ಅವರ ನಿವಾಸದ ಒಂದುಭಾಗವೇ ಆಗಿದ್ದ ಅವರ ಆಫೀಸು ಕೋಣೆ ನನ್ನ ಪಾಲಿನ ದೇಗುಲವಾಯಿತು. ನನಗೆ ಅವರು ಒದಗಿಸುತ್ತಿದ್ದ, ಓದಲು ಹುರಿದುಂಬಿಸುತ್ತಿದ್ದ ಪುಸ್ತಕಗಳು—ಬಿಡುವಿನ ವೇಳೆಯಲ್ಲಿ ನನ್ನ ಸಂಗಾತಿಗಳಾದುವು. ಬೌದ್ಧಿಕ ಜಗತ್ತಿನ ಗಂಧಗಾಳಿಯೇ ಇರದಿದ್ದ ನನಗೆ—ಜ್ಞಾನಬ್ರಹ್ಮ ಕಾರಂತರ ಸಹವಾಸ, ಸಾನ್ನಿಧ್ಯ ಬುದ್ಧಿಪ್ರಚೋದಕವಾಗಿತ್ತು. ನನ್ನದು ತೀರ ಮಿತವಾದ ಜ್ಞಾನವಾದರೂ, ನಮ್ಮೊಳಗೆ ನಡೆಯುತ್ತಿದ್ದ ಸಂಭಾಷಣೆಗಳು ಗಂಟೆಗಟ್ಟಲೆ ಚರ್ಚೆಯ ರೂಪವನ್ನು ತಾಳುತ್ತಿದ್ದುವು. ಕೆಲಸವಿಲ್ಲದೆ ಕುಳಿತಿರುವುದೆಂದರೆ ಮಹಾಶಿಕ್ಷೆ ಎಂದು ಭಾವಿಸುತ್ತಿದ್ದ ಕಾರಂತರನ್ನು ಸುಮ್ಮನೆ ಕುಳಿತಿರಲು ನಾನು ಬಿಡುತ್ತಿರಲಿಲ್ಲ. ಅವರ ಅಸಹನೆ, ಅಸಂತೋಷಗಳಿಗೆ ನಾನು ಬಲಿಬಿದ್ದೇನೆಂಬ ಭಯದಿಂದ—ಏನಾದರೊಂದು ಕೆಲಸವನ್ನು ಅವರು ಮಾಡುವಂತೆ ಸತತವಾಗಿ ಅವರನ್ನು

ಪ್ರೇರೇಪಿಸತೊಡಗಿದೆ. ನನ್ನ ಈ ಉತ್ತೇಜನ ಅವರಿಗೆ ಹರ್ಷದಾಯಕವಾಗಿತ್ತು. "ಈ ಹುಡುಗಿ ನನ್ನನ್ನು ಸುಮ್ಮನೆ ಕುಳಿತಿರಲು ಬಿಡುವುದಿಲ್ಲ; ನನ್ನಿಂದ ಕೆಲಸ ಮಾಡಿಸುತ್ತಾಳೆ" ಎಂಬ ಹುಸಿಮುನಿಸನ್ನು ತಮ್ಮ ಸ್ನೇಹಿತರ ಬಳಿಯಲ್ಲಿ ಪ್ರಕಟಿಸಿ, ನನ್ನನ್ನು ಹೊಗಳಲು ಶುರು ಮಾಡುತ್ತಿದ್ದರು. ಕಾರಂತರು ತಾಳ್ಮೆಗೇಡಿಯಾದರೂ, ಅಹಂಕಾರಿಯಲ್ಲ ಎಂಬುದನ್ನು ನಾನು ಕಂಡುಕೊಂಡೆ; ಮಾತಿನಲ್ಲಿ ಒರಟುತನ ಎಂಬಂತೆ ಕಾಣಿಸಿದರೂ, ಅವರು ಅಸಂಸ್ಕೃತ ವ್ಯಕ್ತಿಯಾಗಿರಲಿಲ್ಲ. ಅವರಿಗಿಂತ ಐದು ದಶಕಗಳಷ್ಟು ಕಿರಿಯ ವಯಸ್ಸಿನವಳಾಗಿದ್ದ ನನ್ನ ಬಿಚ್ಚು ಮನಸ್ಸು, ಪ್ರಾಮಾಣಿಕತೆ, ನಿಸ್ವಾರ್ಥ ಸೇವೆಯ ಕಾರಣಕ್ಕಾಗಿ ನನ್ನ ಎಷ್ಟು ದೊಡ್ಡ ತಪ್ಪನ್ನೂ ಕ್ಷಮಿಸಬಲ್ಲಷ್ಟು ಆದರ ತಾಳಿದ್ದರು. ಸಿಟ್ಟುಬಂದಾಗ ಎಷ್ಟೇ ಗಟ್ಟಿಯಾಗಿ ಕಿರುಚಿದರೂ, ಕೆಟ್ಟ ಬೈಗುಳ ಅವರ ಬಾಯಿಂದ ಬರಲೇ ಇಲ್ಲ. ಏರುದನಿ, ರೌದ್ರಾವತಾರಕಂಡೇ ಇದಿರಾಳಿ ಬೆಚ್ಚಿ ಬೀಳುವಂಥ ಸಿಟ್ಟು. ಕೆಲವೊಮ್ಮೆ ಕೈಬೀಸಿ ಕೆನ್ನೆಗೆ ಬಾರಿಸಿದಾಗಲೂ, ಮುದುಕರಾಗಿದ್ದ ಅವರ ಕೈಯ ನರಗಳಿಗೇ ಒಂದಿಷ್ಟು ಹೆಚ್ಚು ಘಾಸಿಯಾಗುತ್ತಿದ್ದುದ್ದು! ಅರೆಗಳಿಗೆಯಲ್ಲಿ ಸಿಟ್ಟು ಇಳಿದು ಹೋಯಿತೆಂದರೆ—ಅವರಷ್ಟು ಸಾಧುಪ್ರಾಣಿ ಇಲ್ಲವೇ ಇಲ್ಲ. ಅವರ ಪ್ರಖರವಾದ ಸಿಟ್ಟಿಗೂ ನಾನು ಬಿರಿ(ಬ್ರೇಕ್) ಹಾಕಿದ್ದಿದೆ. ಅಂದರೆ, ಎಂಥ ದೌರ್ಬಲ್ಯವನ್ನೂ ಮೆಟ್ಟಿನಿಲ್ಲುವ ದೃಢವಾದ ಮನಸ್ಸು ಅವರಿಗಿತ್ತು. ದಶಕಗಳ ಕಾಲ ಅವ್ಯಾಹತವಾಗಿ ಸೇದುತ್ತಿದ್ದ ಸಿಗರೇಟನ್ನು ತ್ಯಜಿಸಬೇಕೆಂದು ವೈದ್ಯರು ಸೂಚಿಸಿದಾಗ, ತಕ್ಷಣವೇ ಅದರ ಸೇವನೆಯನ್ನು ಸಂಪೂರ್ಣವಾಗಿ ತ್ಯಜಿಸಿದಾಗ, ಅವರ ಮನೋಬಲವನ್ನು ಕಂಡು ಬೆಚ್ಚಿಬಿದ್ದ ಮಿತ್ರರಿದ್ದಾರೆ. ಯಾವ ವಿಷಯವೇ ಇರಲಿ—ಒಮ್ಮೆ ಅವರು ನಿರ್ಧಾರ ಕೈಕೊಂಡರೆಂದರೆ ಸರಿ—ಅದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಮಗುವಿಗಾದರೂ ಮಾತುಕೊಟ್ಟರೆಂದರೆ—ಕೊನೆಯವರೆಗೂ ಕಾಯಾವಾಚಾ ಮನಸಾ ಅದನ್ನು ನಡೆಯಿಸಿಕೊಂಡು ಹೋಗುವ ಸತ್ಯನಿಷ್ಠೆ ಅವರಲ್ಲಿತ್ತು. ಸತ್ಯ ಮತ್ತು ಸುಳ್ಳಿನ ನಡುವೆ ಅಂತರವನ್ನೇ ಕಾಣದ ಇಂದಿನ "ವ್ಯವಹಾರ ಪ್ರಪಂಚ"ದಲ್ಲಿ ಕಾರಂತರು ನಿಜವಾಗಿಯೂ ದೇವರಂಥ ಮನುಷ್ಯ. ಮುದಿತನದ ಮರವೆಯಿಂದಾಗಿ ಏನಾದರೂ ಒಂದಿಷ್ಟು ಲೋಪವಾದರೂ ಆಗಿರಬಹುದೇ ಹೊರತು, ಕಾರಂತರು ಸತ್ಯಹರಿಶ್ಚಂದ್ರನ ಅಪರಾವತಾರವಾಗಿದ್ದರು ಎಂಬುದು ಉತ್ಪ್ರೇಕ್ಷೆಯ ಮಾತಲ್ಲ. ತಮಾಷೆಗಾಗಿಯಾದರೂ ಸಟೆಯಾಡುವ ಸ್ವಭಾವದವರಲ್ಲ; ಅವರ ಸತ್ಯನಿಷ್ಠೆ ಅತ್ಯಂತ ಗಾಢವಾದುದು. ಸುಳ್ಳನ್ನು ನುಡಿಯುವುದೆಂದರೆ ಅವರ ಪಾಲಿಗೆ "ಕ್ರಿಮಿನಲ್ ಅಪರಾಧ"ವೇ ಆಗಿತ್ತು.

ಸ್ವಾತಂತ್ರ್ಯ ಹೋರಾಟಕ್ಕಾಗಿ ಸಾರ್ವಜನಿಕ ಜೀವನಕ್ಕೆ ಧುಮುಕುವಾಗ ಕಾರಂತರು ಕೋಟದ ಸಾಕಷ್ಟು ಶ್ರೀಮಂತ ಬ್ರಾಹ್ಮಣರ ಪುತ್ರರಾಗಿದ್ದರು. ಅಲ್ಲಿಯ ತನಕ ಬಡತನ, ಹಸಿವುಗಳ ಅನುಭವ ಅವರಿಗಿರಲಿಲ್ಲ. ಆದರೆ, ಸಾರ್ವಜನಿಕ ಬದುಕಿಗೆ ತಮ್ಮನ್ನು ಅರ್ಪಿಸಿಕೊಂಡ ಗಳಿಗೆಯಿಂದಲೇ ಅವರು ವಿರಾಗಿಯಂ ಬದುಕನ್ನು ಸಾಗಿಸಿದ ಕೆಲವು ಚಿತ್ರ

...ಳನ್ನು ಅವರ ಅಣ್ಣ ದಿ. ಕೆ. ಎಲ್. ...ರಂತರ ಆತ್ಮಕಥನದಲ್ಲಿ ಕಾಣಬಹುದು. ...ಂತ ಬಿಡಾರ, ಸ್ವಂತ ಸಂಸಾರದಲ್ಲಿ ...ಡಗಿದ ಬಳಿಕ ಜೀವನರಥವನ್ನು ...ಗಿಸಲು, ತಮ್ಮ ಹತ್ತುಹಲವು ಬೌದ್ಧಿಕ ...ಹಸಗಳನ್ನು ನಡೆಯಿಸಲು ಅವರು ಪಟ್ಟದ್ದ ...ಡನ್ನು ಅವರ ಆ ಕಾಲದ ಬರವಣಿಗೆಗಳು ...ರ್ಮಿಕವಾಗಿ ತಿಳಿಸುತ್ತವೆ. ಅನ್ನದ ...ಶ್ನೆಯು ಮುಂದೆ ಸಾಹಿತ್ಯಕೃಷಿಗೆ, ಅನ್ಯ ...ದ್ಧಿಕ ಸಾಹಸಗಳಿಗೆ ಮನಸ್ಸನ್ನು ತೊಡಗಿ ...ಲು ವ್ಯವಧಾನವೇ ಇಲ್ಲದ ಆರ್ಥಿಕ ಸಂಕಷ್ಟ ...ಳನ್ನು ಅವರು ಅನುಭವಿಸಿದ ಬಗ್ಗೆ ಅವರ ...ಂದಿನ ಪತ್ರವ್ಯವಹಾರಗಳು ಇಂದಿಗೂ ...ಾಕ್ಷಿಯನ್ನು ನುಡಿಯುತ್ತಿವೆ. ಅಂಥ ...ೊತ್ತಿನಲ್ಲೆಲ್ಲ ಅವರನ್ನು ಉತ್ತೇಜಿಸು ...ದ್ದುದು—ಹೆಸರಾಂತ ಸಾಹಿತಿ ದಿ. ವಿ. ...ೀತಾರಾಮಯ್ಯನಂಥವರು. ೧೯೫೮ ರಲ್ಲಿ ...ೌನ್ ಕ್ವಾರ್ಟೊ ಗಾತ್ರದ ೨೦೦೦ ಪುಟ ...ಳ "ವಿಜ್ಞಾನ ಪ್ರಪಂಚ" ರಚನೆಯ ...ಾಹಸಕ್ಕೆ ಕಾರಂತರು ಇಳಿದಾಗ, ಆರ್ಥಿಕ ...ಂಕಷ್ಟ ಕೌಟುಂಬಿಕ ಕಲಹಕ್ಕೆ ಕಾರಣ ...ಾದಾಗಲೂ, ದಿ. ವಿ. ಸೀತಾರಾಮಯ್ಯ ...ನವರು ಮಧ್ಯಸ್ತಿಕೆ ವಹಿಸಬೇಕಾಯಿತು. ...ನಿಮ್ಮ 'ಪತ್ರವನ್ನಾಕೆಗೆ ತೋರಿಸಿದ್ದೇನೆ. ...ದೊಡ್ಡದೊಂದು ಬಿರುಗಾಳಿ ಮತ್ತು ಚಿಂತೆ ...ದೂರವಾದುದಕ್ಕೆ ನನಗೆ ಸಂತಸವಾಗಿದೆ ..."ಎಂಬುದಾಗಿ ವಿ. ಸೀ. ಯವರಿಗೆ ...ಕಾರಂತರು ಮಾರುತ್ತರ(೨೬-೧೨-೧೯೫೮) ...ಬರೆದರು. "ಆರ್ಥಿಕ ಸಂಕಷ್ಟ ದಿನೇ ದಿನೇ ...ಏರುತ್ತಿದೆ; ಭವಿಷ್ಯ ತೀರ ಕತ್ತಲಾಗಿದೆ...." ...ಎಂಬೆಲ್ಲ ಅವರ ಪತ್ರಗಳ ಒಕ್ಕಣೆಗಳು ಅವರು ...ಪಟ್ಟಿರಬಹುದಾದ ಆರ್ಥಿಕ ಮುಗ್ಗಟ್ಟನ್ನು ತಿಳಿಸುತ್ತವೆ. ಸ್ವಂತಕ್ಕೆ ಸರಳ ಜೀವನ ಅಭ್ಯಾಸವಾಗಿದ್ದ ಕಾರಂತರಿಗೆ–ತನ್ನ ಬೌದ್ಧಿಕ ಚಟುವಟಿಕೆಗಳಿಗೆ ಬೇಕಾಗುವಷ್ಟು ಸಂಪತ್ತು ಎಂದೂ ಅವರಲ್ಲಿರಲಿಲ್ಲ–ಎಂಬುದಕ್ಕೆ ಆ ಕಾಲದ ಅವರ ಪತ್ರವ್ಯವಹಾರಗಳು ಸಾಕ್ಷಿಯಾಡುತ್ತವೆ. ರವೀಂದ್ರನಾಥ ಠಾಗೋರರಂತೆ ಶ್ರೀಮಂತ ಮನೆತನದಲ್ಲಿ ಹುಟ್ಟಿ, ತನಗಿಷ್ಟ ಬಂದಂತೆ ವ್ಯಯಿಸುವ ಸ್ವಾತಂತ್ರ್ಯ, ಸಂಪತ್ತನ್ನು ಕಾರಂತರು ಪಡೆದಿದ್ದರೆ—ಅವರು ಭಾರತ ದೇಶದಲ್ಲಿಯೇ ಅನನ್ಯವಾದುದನ್ನು ಸಾಧಿಸುತ್ತಿದ್ದರು. ಇದು ನಮ್ಮ ನಾಡಿನ ದುರಾದೃಷ್ಟ. ಹಲವಾರು ಸಂಕಷ್ಟಗಳು, ಸವಾಲುಗಳನ್ನು ಎದುರಿಸಿಯೂ— ಅಡ್ಡ ಹಾದಿ ಹಿಡಿಯದೆ, ಸರಕಾರದ ಅಥವಾ ಇನ್ನಿತರ "ಪುಕ್ಕಟೆ" ಗ್ರ್ಯಾಂಟುಗಳ ಆಮಿಷಕ್ಕೆ ಬಲಿಯಾಗದೆ— ಅತ್ಯಂತ ಕಷ್ಟದಿಂದ ಸಾಲಗಾರನಾಗಿಯೇ ಹಲವಾರು ಬೌದ್ಧಿಕ ಸಾಹಸಗಳನ್ನು ನಡೆಯಿಸಿದ ವ್ಯಕ್ತಿ ಕಾರಂತರು. ಸರಕಾರದಿಂದ ಪಡೆದ ಸಹಾಯಧನವನ್ನು ದೇವರ ಡಬ್ಬಿಯ ಕಾಣಿಕೆಯ ಹಣದಂತೆ— ಎಚ್ಚರದಿಂದ ವ್ಯಯಿಸಿದ ದೊಡ್ಡ ಮನುಷ್ಯ ಕಾರಂತರು.

ಬದುಕಿನ ಉದ್ದಕ್ಕೂ ಆರ್ಥಿಕ ಸಂಕಷ್ಟದಿಂದ ಬಳಲಿದ್ದುದಕ್ಕಿರಬೇಕು—೧೯೭೪ರಲ್ಲಿ ಅವರನ್ನು ನಾನು ತಿಳಿಯಲು ತೊಡಗಿದಾಗ —ಅವರ ದುಡ್ಡಿನ ಲೆಕ್ಕಾಚಾರ ಒಂದಿಷ್ಟು ಅತಿ—ಎಂಬಂತೆ ನನಗೆ ಭಾಸವಾಗಿತ್ತು. ಈ ಕುರಿತು ನೇರವಾಗಿ ಟೀಕೆಗಳನ್ನು ನಾನು ಹಲವಾರು ಬಾರಿ ಮಾಡಿದಾಗಲೂ, ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಬಾರದಷ್ಟು ಮರೆವು ಅವರಿಗಿತ್ತು—ಸ್ವಂತ ಸಾಹಸಗಳ ಬಗ್ಗೆಯೇ. ಅವರ ಬದುಕು, ಬರಹಗಳ ನಿಕಟ

ಪರಿಚಯು ಅವರನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನನಗೆ ನೆರವಾಯಿತು. ತನ್ನ ಆಯುಷ್ಯದ ೯೨ನೇ ವರ್ಷದ ನಂತರವಷ್ಟೇ ಒಂದಿಷ್ಟು ಹೆಚ್ಚಿಗೆ ರಾಯಧನವನ್ನು ಕಣ್ಣಿಂದ ಕಾಣಲು ಕಾರಂತರಿಗೆ ಸಾಧ್ಯವಾಗಿತ್ತು. ಕುಟುಂಬ ನಿರ್ವಹಣೆಗೆ ತೆರತೆರನ ಉದ್ಯೋಗದ ಅವಲಂಬನೆ ಅವರಿಗೆ ಅವರ ಜೀವನದುದ್ದಕ್ಕೂ ಅನಿವಾರ್ಯವಾಗಿತ್ತೆಂಬ ಸತ್ಯ ಗೋಚರಿಸಿದಾಗ, ಅವರ ಬಗ್ಗೆ ನನಗೆ ಅತೀವ ಮರುಕವಾಗಿತ್ತು. ಕನ್ನಡನಾಡಿನ ದುರಾದೃಷ್ಟವಿದು. ಅಂಥ ಆರ್ಥಿಕ ಸಂಕಷ್ಟಗಳ ನಡುವೆಯೂ ಅಲ್ಪಸ್ವಲ್ಪವಾದರೂ, ನಾಲ್ಕಾರು ಜನರಿಗೆ ಮಾಸಾಶನ, ಸಹಾಯ ಧನ ನೀಡುವ ಕೆಲಸದಲ್ಲಿ ಅವರು ಹಿಂದೆ ಬಿದ್ದವರಲ್ಲ. ಸ್ವಂತ ದುಡ್ಡಿನ ಬಗ್ಗೆ ಅವರ ಲೆಕ್ಕಾಚಾರ ಅತಿಯಾಯಿತೆಂದು ನಾನು ನೇರ ಟೀಕೆ ಮಾಡುತ್ತಿದ್ದರೂ, ಸಾರ್ವಜನಿಕ ಹಣದ ಕುರಿತು, ಸಾರ್ವಜನಿಕ ಸೊತ್ತಿನ ಬಗ್ಗೆ ಅವರು ವಹಿಸುತ್ತಿದ್ದ ಕಾಳಜಿ, ಎಚ್ಚರ, "ಶುದ್ಧ ಹಸ್ತ"ದ ಕುರಿತು ನನಗೆ ಅವರ ಮೇಲೆ ಅಪಾರವಾದ ಗೌರವವಿತ್ತು. ಅವರನ್ನು "ಭ್ರಷ್ಟ"ಗೊಳಿಸಲು ಯಾರಿಂದಲೂ ಆದದ್ದಿಲ್ಲ. ಅತ್ಯಂತ ದೀರ್ಘಾವಧಿಯ ಬಾಳ್ವೆಯಲ್ಲಿ—ತೆರತೆರನ ಸವಾಲು, ಸಂಕಷ್ಟಗಳನ್ನು ಇದಿರಿಸುವ ಸಂದರ್ಭಗಳಿದ್ದಾಗಲೂ, ಕಾರಂತರು ಪರಿಶುದ್ಧ ಜೀವನ ಸಾಗಿಸಿದ್ದು ಅತ್ಯಂತ ಆದರ್ಶಪ್ರಾಯ. ಅವರೆಂದೂ ದೌರ್ಬಲ್ಯಗಳ ದಾಸರಾಗಲಿಲ್ಲ. ಸ್ವಂತ ಲಾಭಕ್ಕಾಗಿ, ಸ್ವಪ್ರತಿಷ್ಠೆಯನ್ನು ಮೆರೆಯಿಸುವುದಕ್ಕಾಗಿ ಅವರು ತಮ್ಮ ಬದುಕಿನಲ್ಲಿ ಎಂದೂ ಮನಸ್ಸನ್ನು ತೊಡಗಿಸಿಕೊಂಡವರಲ್ಲ. ಪರಮ ಶತ್ರುಗಳ ಬಗ್ಗೆಯೂ ಅವರು "ಸೇಡು"

ತೀರಿಸಿಕೊಂಡವರಲ್ಲ; ಕುತ್ಸಿತ ಮಾರ್ಗವನ್
ತುಳಿದವರಲ್ಲ. ಕೊನೆಯ ಪಕ್ಷ ಅಂಥವರನ್
ಶಪಿಸುವಷ್ಟು ದ್ವೇಷ ಅವರಲ್ಲಿ ಉಂಟಾಗ
ತ್ತಿರಲಿಲ್ಲ. ಅವರದ್ದು ಆರೋಗ್ಯಪೂ
ಟೀಕೆ ಹೊರತು—ನಂಜಿನ ಬಾಣ, ದ್ವೇಷ
ಮೊನೆಯಿಂದ ಇದಿರಾಳಿಗಳನ್ನು ಚುಚ್ಚು
ಸ್ವಭಾವ ಅವರಲ್ಲಿ ಇರಲೇ ಇಲ್ಲ. ಅವ
ತಮ್ಮ ಸಿಟ್ಟನ್ನು ವ್ಯಕ್ತಪಡಿಸುತ್ತಿದ್ದ ಮಾಗ
ತುಂಬ ಸುಸಂಸ್ಕೃತವಾದುದು. ನ
ನಡೆನುಡಿ—ಕೇಳುಗರಿಗೆ ಕರ್ಕಶವಾಗಿ
ಬಹುದು. ಆದರೆ, ಅಂಥ ಮಾತಿನಲ್ಲಿ ಅ
ಆಳವಾದ ಕಳಕಳಿ, ಪರೋಕ್ಷ ಉಪದೇ
ವಿದ್ದೀತೇ ಹೊರತು—ಇದಿರಾಳಿಗಳನ್ನು ತು
ಯುವ ಅಟ್ಟಹಾಸವಾಗಲಿ, ಇತರರನ
ನೋಯಿಸುವ ಇಲ್ಲವೆ ಅವಮಾನಿಸು
ಉದ್ದೇಶವಾಗಲಿ ಇರಲಿಲ್ಲವೆಂಬುದು ಸ
ಸಂಗತಿ. ಹಟಮಾರಿತನ ಅವರ ಸ್ವಭಾ
ಕ್ಕಂಟಿದ್ದ ಒಂದು ಗುಣವಾಗಿತ್ತು. ಅದ
ಅಲ್ಲಿಯೂ ಅದನ್ನು ಸ್ವಪ್ರತಿಷ್ಠೆಗೆ ಅಥ
ಇತರರಿಗೆ ಯಾವುದೇ ರೀತಿಯಿಂದಲೂ ಹಾ
ಮಾಡಲು ಬಳಸುತ್ತಿರಲಿಲ್ಲ. ಸ್ವ
ಸಾಧನೆಯ ಬಗ್ಗೆ ಅವರು ತೃಪ್ತರಾಗಿದ್ದ
ಆದರೆ, ಆ ಕುರಿತು ಒಣಹೆಮ್ಮೆ, ಅಹಂಕ
ತಳೆದವರಲ್ಲ. ವ್ಯಕ್ತಿಯೊಬ್ಬನ ಸಾ
ಯನ್ನು ಅವರು ಅಳೆಯುತ್ತಿದ್ದುದು "ಬದು
ಸಾರ್ಥಕವಾಯಿತೇ ಇಲ್ಲವೇ" ಎಂಬ ಮ
ದಿಂದಲೇ ಹೊರತು—ವ್ಯಕ್ತಿಯೊಬ್ಬ ಗಳ
ಪ್ರಶಸ್ತಿ, ಪ್ರಚಾರ, ಯಶಸ್ಸುಗಳಿಂದ ಅ
ಅಲ್ಲ.

ಶಿವರಾಮ ಕಾರಂತರು ಬಾಯಿಮಾ
ಮಾನವತಾವಾದಿಯಾಗಿರಲಿಲ್ಲ. ತ
ಕಾಲದ ನಂತರವೂ ತಮ್ಮ ಹೆಸರು ಉ

ಬೇಕೆಂದು ತಾವು ಬದುಕಿದ್ದಾಗಲೇ ತಕ್ಕ ವ್ಯವಸ್ಥೆ ಮಾಡುವವರಿಗೆ ನಮ್ಮ ಸಮಾಜದಲ್ಲಿ ಕೊರತೆಯಿಲ್ಲ. ಆದರೆ, ಕಾರಂತರಿಗೆ ಸ್ವಂತ ಹೆಸರಿನಲ್ಲಿ ಸ್ವಪ್ರಯತ್ನದಿಂದ ಸಂಸ್ಥೆಯನ್ನು ಕಟ್ಟುವುದರಲ್ಲಿ ಅಥವಾ ಪ್ರಚಾರಕ್ಕಾಗಿ ಶಿಷ್ಯರನ್ನು ಕಟ್ಟಿಕೊಳ್ಳುವುದರಲ್ಲಿ ಎಂದೂ ಆಸಕ್ತಿ ಇರಲಿಲ್ಲ. ತಮ್ಮ ಜೀವಿತದ ಕೊನೆಯ ಆರೇಳು ವರ್ಷಗಳಲ್ಲಿ ತಮ್ಮ ಆದಾಯದ ಬಹುಪಾಲನ್ನು ದಾನಧರ್ಮಗಳಿಗಾಗಿಯೇ ವ್ಯಯಿಸುತ್ತಿದ್ದರು. ಬಡತನ, ರೋಗರುಜಿನ, ವಿದ್ಯಾಭ್ಯಾಸ, ಮದುವೆ, ಮನೆ, ಬರಗಾಲ, ನೆರೆಪರಿಹಾರ ಮುಂತಾದ ಮನುಷ್ಯನ ತುರ್ತು ಅಗತ್ಯಗಳಿಗೆ ಅವರು ನೆರವಾಗುತ್ತಿದ್ದರು. ಅಳಿದ ಶ್ರೇಷ್ಠ ಸಾಹಿತಿಗಳ ಬರಹಗಳ ಪ್ರಕಟಣೆಗೆ, ಅಂಥವರ ಸ್ಮಾರಕ ಪ್ರತಿಷ್ಠಾನ ಸ್ಥಾಪನೆಯ ಕೆಲಸಕ್ಕೆ ಪರಿಸರ ಹೋರಾಟಗಳಿಗೆ, ಅನಾಥಾಶ್ರಮಗಳಿಗೆ, ಅಂಗವಿಕಲ ವ್ಯಕ್ತಿ, ಸಂಸ್ಥೆಗಳಿಗೆ, ಜಾನಪದ ಕಲೆಯ ಪುನರುತ್ಥಾನ ಇಲ್ಲವೆ ಅಭಿವೃದ್ಧಿ—ಮುಂತಾದ ಸಾರ್ವಜನಿಕ ಮತ್ತು ವ್ಯಕ್ತಿಗತ ಆರ್ಥಿಕ ಅಗತ್ಯಗಳಿಗೆ ಕಾರಂತರು ಲಕ್ಷಗಟ್ಟಲೆ ರೂಪಾಯಿಗಳನ್ನು ಯಾವ ಪ್ರಚಾರವೂ ಇಲ್ಲದೆ ದಾನಮಾಡಿದ್ದಾರೆ.

ನಾವಿಬ್ಬರೂ ೨೩ ವರ್ಷಗಳ ಕಾಲ ಒಟ್ಟಿಗೇ ದುಡಿದಿದ್ದೇವೆ; ಚರ್ಚೆ, ಸಂಭಾಷಣೆ, ಜಗಳವನ್ನೂ ಸಾಕಷ್ಟು ಮಾಡಿದ್ದೇವೆ. ನನ್ನದು ತೀರ ಮಿತವಾದ ಕಾರ್ಯಕ್ಷೇತ್ರವಾದರೂ, ಪ್ರಾಮಾಣಿಕ ನಡವಳಿಕೆಗಳಲ್ಲಿ ನಮ್ಮಿಬ್ಬರಲ್ಲಿ ಪೈಪೋಟಿ ನಡೆಯುವಷ್ಟು ಸಮಾನ ಅಂಶಗಳಿದ್ದುದರಿಂದ ನಾವು ಕೊನೆಯವರೆಗೂ ಒಗ್ಗಟ್ಟಿನಿಂದ ದುಡಿಯಲು ಸಾಧ್ಯವಾಯಿತು. ವಯಸ್ಸು, ದೇಹ ಮತ್ತು ಮನಸ್ಸಿನ ಮೇಲೆ ಕಾಲಕಾಲಕ್ಕೆ ಬಿದ್ದ ಆಘಾತಗಳ ದೆಸೆಯಿಂದ—ನಿಷ್ಕ್ರಿಯರಾಗಿ, ಎಂದೋ ತಮ್ಮ ಬೌದ್ಧಿಕ ಚಟುವಟಿಕೆಗಳಿಗೆ ತಿಲಾಂಜಲಿಯನ್ನು ಕೊಡಬೇಕಾಗಿದ್ದ ಪರಿಸ್ಥಿತಿಗಳು ಕಾರಂತರ ಬದುಕಿನ ಮುಸ್ಸಂಜೆಯಲ್ಲಿ ಹಲವು ಬಾರಿ ಎದುರಾಗಿದ್ದುವು. ಅವರ ಬದುಕು, ಬರಹ, ಮನೋಧರ್ಮ, ಭಾವನೆ, ಆದರ್ಶ, ಹಂಬಲಗಳ ನಿಕಟ ಪರಿಚಿತಿಯಿಂದಾಗಿ—ಅವರು ನಿಷ್ಕ್ರಿಯರಾಗದಂತೆ ನಾನು ತೆರೆಯ ಮರೆಯಿಂದಲೇ ಅವರ ಬದುಕು ಕೊನೆಗೊಳ್ಳುವ ತನಕವೂ ವಿಶೇಷವಾದ ಪ್ರಯತ್ನ, ಸಾಧನೆ ಮಾಡಿ ಯಶಸ್ವಿಯಾಗಿದ್ದೇನೆಂಬ ತೃಪ್ತಿ ನನಗಿದೆ. ಅವರ ಕೆಲವೇ ಕೆಲವು ಆಪ್ತರೊಡನೆ, ಅಭಿಮಾನಿಗಳೊಂದಿಗೆ ಸ್ವತಃ ಕಾರಂತರೇ ಈ ಬಗ್ಗೆ ನನಗೆ ಕೃತಜ್ಞತೆ ತಿಳಿಸಿದ್ದಿದೆ. ೨೩ ವರ್ಷಗಳ ನಮ್ಮಿಬ್ಬರ ಬಾಂಧವ್ಯದಲ್ಲಿ ಕಾರಂತರೇ ಅದೃಷ್ಟಶಾಲಿ ಲೇಖಕರು ಎಂದು ನನಗೂ ಅನಿಸಿದೆ; ಅವರೂ ಅದನ್ನು ತಮ್ಮ ಆತ್ಮಕಥನದಲ್ಲಿ ಅನುಮೋದಿಸಿದ್ದಾರೆ. "ನಮ್ಮ ಹಳೆಗಾಲದ ಆಟ, ನಾಟಕ ಸಮಾರಂಭಗಳೇನೇ ಇರಲಿ, ಅವನ್ನು ಮುಗಿಸುವ ಕಾಲಕ್ಕೆ ಯಾವತ್ತು ಶುಭಾಶುಭಗಳು ಸರಿದ ಮೇಲೆ, ಮನಶ್ಶಾಂತಿಗಾಗಿ ಮಂಗಳ ಪದ ಹಾಡುವ ಪರಿಪಾಠವಿದೆ; ಮಂಗಳಾರತಿ ಎತ್ತುವ ಸಂಪ್ರದಾಯವಿದೆ. ಅಸಂಪ್ರದಾಯಕನಾದ ನಾನೇ ಆ ಕೆಲಸವನ್ನು ಮಾಡಲು ಹೊರಟಿದ್ದೇನೆ—ಈ ಕೊನೆಯ ಆವೃತ್ತಿಯ ಆತ್ಮಕಥನದಲ್ಲಿ.... ಆ ಮಂಗಳಾರತಿಯನ್ನು ಬೆಳಗಿದವಳು ಮಾಲಿನಿ ಮಲ್ಯ. ಇಂಥದೊಂದು ಸಾಹಸಕ್ಕೆ ತನ್ನನ್ನು ಅರ್ಪಿಸಿಕೊಂಡವಳು

ಅವಳು. ಯಾವ ಲೇಖಕನೂ, ನನಗೆ ತಿಳಿದಂತೆ ಇಷ್ಟೊಂದು ಭಾಗ್ಯಶಾಲಿಯಾಗಿಲ್ಲ ಎನ್ನಬಲ್ಲೆ" (ಹುಚ್ಚು ಮನಸ್ಸಿನ ಹತ್ತು ಮುಖಗಳು, ೧೯೯೫) ಎಂಬ ಕಾರಂತರ ಉದ್ಗಾರ ನನ್ನ ನಿಸ್ಸ್ವಾರ್ಥ ಸೇವೆಗೆ ಸಂದ ನಿಜವಾದ ಕಾಣಿಕೆ; ಪ್ರಶಸ್ತಿ. ಮಹಾತ್ಮಾ ಗಾಂಧೀಜಿಯವರಿಂದ 'ಸ್ವಾತಂತ್ರ್ಯ ಹೋರಾಟದ ಕರೆ'—ಎಂಬ ಅಕ್ಷತೆಯನ್ನು ತಳಿಸಿಕೊಂಡು ಸಾರ್ವಜನಿಕ ಬದುಕಿನಲ್ಲಿ ತೊಡಗಿದ ಕಾರಂತರು ತಮ್ಮ 'ಮಾನಸ ಪುತ್ರಿ' ಮಾಲಿನಿ ಮಲ್ಯಳಿಂದ ತಮ್ಮ ವಿಶಾಲ ಬದುಕಿಗೆ "ಮಂಗಳಾರತಿ"ಯನ್ನು ಬೆಳಗಿಸಿಕೊಳ್ಳಲು ಬಯಸಿದ್ದರು! ಅವರ ಇಚ್ಛೆ ಕೈಗೂಡಿದ್ದೂ ಆಶ್ಚರ್ಯಕರ ವಿದ್ಯಮಾನ.

ಇಷ್ಟೊಂದು ಚಂದದ ಬದುಕನ್ನು ಬಾಳಿದ ಶಿವರಾಮ ಕಾರಂತರಿಗೆ ಪ್ರಕೃತಿಯೂ—ಬೇನೆಯಿಲ್ಲದ, ದೈನ್ಯವಿಲ್ಲದ ಸಾವನ್ನು ಒದಗಿಸಿದೆ. ಸುತ್ತಲೂ ಕೊಳೆತು ನಾರುತ್ತಿರುವ ಇಂದಿನ ಸಮಾಜದಲ್ಲಿ ಬದುಕಿರುವುದೇ ಕಾರಂತರಂಥ ವ್ಯಕ್ತಿಗೆ ಜೀವನ್ಮೃತಾವಸ್ಥೆ—ಎಂಬ ಸಂಗತಿಯನ್ನು ಅವರು ಬದುಕಿದ್ದಾಗಲೇ ನೆನೆದು ನಾನು ಸಂಕಟಪಟ್ಟಿದ್ದೇನೆ. ಅವರ ಅಗಲಿಕೆ ವೈಯಕ್ತಿಕವಾಗಿ ನನಗೆ ವಿಶೇಷವಾದ ಆಘಾತಕ್ಕೆ, ಶೇಷಾಯುಷ್ಯದಲ್ಲಿ ತುಂಬಿ ಬಂದ ನಷ್ಟಕ್ಕೆ ಕಾರಣವಾದರೂ—ಅವರು ಅಗಲಿದ ರೀತಿ ಮಾತ್ರ "ಶರಣನ ಗುಣವನ್ನು ಮರಣದಲ್ಲಿ ಕಾಣ
ಬಹುದು" ಎಂಬ ನುಡಿಮುತ್ತಿಗೆ ಅತ್ಯುತ್ತಮ
ಉದಾಹರಣೆಯಾಗಿದೆ. ತಾವು ಹೋದಲ್ಲೆಲ್ಲ
—ನನ್ನನ್ನು ನನ್ನ ಕೆಲಸವನ್ನು ವಿಶೇಷವಾಗಿ
ಹೊಗಳುತ್ತಿದ್ದರು ಎಂಬುದಾಗಿ ಇತರರಿಂದ
ಕೇಳಿದ್ದೆ. "ಮಾಲಿನಿ ನನ್ನ ತಾಯಿ; ನನ್ನ
ಮಗಳು" ಎಂದು ಭಾವಪೂರ್ಣವಾಗಿ ಅವರು
ನುಡಿಯುತ್ತಿದ್ದುದನ್ನೂ ನಾನು ಕೇಳಿದ್ದೇನೆ
ತಮ್ಮನ್ನು ಸಂದರ್ಶಿಸುತ್ತಿದ್ದ ಅನೇಕ ಜನ
ರೊಂದಿಗೂ ತಮ್ಮ ಈ ಭಾವನೆಯನ್ನು
ಅವರು ಹಂಚಿಕೊಂಡಿದ್ದರ ವರದಿಯೂ ನನ
ಸಿಗುತ್ತಿತ್ತು. "ನನಗೂ ನಿನಗೂ ಅಂಟಿ
ನಂಟಿನ ಕೊನೆ ಬಲ್ಲವರಾರು?" ಎಂದು
ಹಲವಾರು ವರ್ಷಗಳಿಂದ ಆಗಾಗ ಅನ್ನುತ್ತಿದ
ಕಾರಂತರು—ವೈದ್ಯರು ಮತ್ತು ದಾದಿಯ
ಸಮಕ್ಷಮದಲ್ಲಿಯೇ ನನ್ನ ತೋಳಿನ ಮೇ
ಪ್ರಜ್ಞಾಹೀನರಾದವರು ಮತ್ತೆ ಚೇತರಿಸಲ
ಇಲ್ಲ. ಮಹಾತ್ಮಾ ಗಾಂಧೀಜಿಯವರ
"ನಾನು ಘನಶ್ಯಾಮದಾಸ ಬಿರ್ಲಾ
ತೊಡೆಯ ಮೇಲೆ ಸಾಯಬೇಕು" ಎಂದ
ಬಯಸಿದ್ದರೂ, ಅದು ಸಾಧ್ಯವಾಗದೆ—
ಬಿರ್ಲಾರ ನಿವಾಸದಲ್ಲಿ ಗತಿಸಿದರು—ಎಂಬ
ದಾಗಿ ಕಾರಂತರು ಇತ್ತೀಚೆಗೆ ತಾವು ಹೋ
ಲ್ಲೆಲ್ಲ ಭಾಷಣದಲ್ಲಿ ಹೇಳುತ್ತಿದ್ದರು. ಆದ
ಶಿವರಾಮ ಕಾರಂತರು ಸಾವಿನಲ್ಲಿಯ
ಅದೃಷ್ಟಶಾಲಿ!

ಡಾ|| ಕೋಟಾ ಶಿವರಾಮ ಕಾರಂತರು

ಡಾ|| ಸಿ. ಎನ್. ರಾಮಚಂದ್ರನ್

ಇಂಗ್ಲಿಷ್ ಪ್ರಾಧ್ಯಾಪಕರು (ನಿ)
೫, ಪ್ರೇಮ್‌ಸಾಗರ್ ಅಪಾರ್ಟ್‌ಮೆಂಟ್ಸ್
ಮಣ್ಣಗುಡ್ಡ, ಮಂಗಳೂರು–೫೭೫ ೦೦೩

ಡಾ|| ಕೋಟಾ ಶಿವರಾಮ ಕಾರಂತರ ಅಪೂರ್ವ ವ್ಯಕ್ತಿತ್ವವನ್ನು ಮತ್ತು ಅಗಣಿತ ಸಾಧನೆಗಳನ್ನು ಕಲಾವಿದ ಡಾ|| ಕೆ. ಕೆ. ಹೆಬ್ಬಾರ್ ಅವರು ಬಗೆದಿರುವ ಒಂದು ರೇಖಾಚಿತ್ರ ಪರಿಣಾಮಕಾರಿಯಾಗಿ ಸೆರೆ ಹಿಡಿಯುತ್ತದೆ. ಕಲಾವಿದರು ಈ ಚಿತ್ರದಲ್ಲಿ ಕಾರಂತರಿಗೆ ನಾಲ್ಕು ಮುಖಗಳನ್ನೂ ಐದು ಕೈಗಳನ್ನೂ ಕೊಟ್ಟಿದ್ದಾರೆ. ಸುದೃಢ ನರ್ತಕನ ಭಂಗಿಯಲ್ಲಿರುವ ಕಾರಂತರ ಒಂದು ಕೈ ಚಂದ್ರನನ್ನು ಮುಟ್ಟಿದ್ದರೆ ಮತ್ತೊಂದು ಕೈ ಬರೆಯುವ ಸಾಧನವಾದ ಹಕ್ಕಿಯ ಗರಿಯನ್ನು ಹಿಡಿದಿದೆ. ಉಳಿದ ಮೂರು ಕೈಗಳಲ್ಲಿಯೂ ಹೊತ್ತಿಗೆಗಳಿವೆ. ಸೊಂಟದಲ್ಲಿ ಬಿಗಿಯಾಗಿ ಕಟ್ಟಿದ ವಸ್ತ್ರವಿದ್ದರೆ, ಎರಡೂ ಪಾದಗಳು ನೆಲವನ್ನು ಗಟ್ಟಿಯಾಗಿ ಮೆಟ್ಟಿವೆ. "ಕಡಲ ತೀರದ ಭಾರ್ಗವ"ರೆಂದೇ ಪ್ರಸಿದ್ಧರಾದ ಕಾರಂತರ ಅಸಾಧಾರಣ ಆತ್ಮವಿಶ್ವಾಸ ಮತ್ತು ಕೆಚ್ಚು, ಬಹುಮುಖೀ ಸಾಧನೆ, ಅದಮ್ಯ ಜೀವನೋತ್ಸಾಹ ಮತ್ತು ಗಾಢ ವಾಸ್ತವ ಪ್ರಜ್ಞೆ ಇವುಗಳನ್ನು ಈ ರೇಖಾಚಿತ್ರ ಯಶಸ್ವಿಯಾಗಿ ದಾಖಲಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಕೋಟಗ್ರಾಮದಲ್ಲಿ ಅಕ್ಟೋಬರ್ ೧೦, ೧೯೦೨ರಲ್ಲಿ ಜನ್ಮತಾಳಿದ ಕಾರಂತರು ಕಡಲ ಬದಿಯಲ್ಲಿಯೇ ಕಡಲಿನಷ್ಟು ವಿಸ್ತಾರವಾಗಿ ಬೆಳೆದರು. ಹತ್ತಿರದ ಕುಂದಾಪುರದಲ್ಲಿ ಹೈಸ್ಕೂಲ್ ಶಿಕ್ಷಣವನ್ನು ಮುಗಿಸಿ ಅನಂತರ ಮಂಗಳೂರಿನಲ್ಲಿದ್ದ ಸರ್ಕಾರಿ ಕಾಲೇಜಿಗೆ ಉನ್ನತ ಶಿಕ್ಷಣಕ್ಕಾಗಿ ಸೇರಿದರು. ಆದರೆ, ಆಗ (೧೯೨೧ರಲ್ಲಿ) ಗಾಂಧೀಜಿಯವರ ಅಸಹಕಾರ ಆಂದೋಳನದ ಕರೆಗೆ ಓಗೊಟ್ಟು, ಕಾಲೇಜು ಬಿಟ್ಟು ಹೊರ ಬಂದರು. ಅಂದಿನಿಂದ ಖಾದೀ ಪ್ರಚಾರ, ಸಮಾಜ ಸುಧಾರಣೆ, ನೂತನ ಶಿಕ್ಷಣ ಪ್ರಯೋಗಗಳು ಇವುಗಳಲ್ಲಿ ತಮ್ಮನ್ನು ಆಳವಾಗಿ ತೊಡಗಿಸಿಕೊಂಡು, ಬದುಕಿನುದ್ದಕ್ಕೂ ಸಾಹಿತ್ಯ–ಸಮಾಜಗಳಿಗಾಗಿ ಅವಿಶ್ರಾಂತವಾಗಿ ದುಡಿದರು. ದೇಶದ ಉದ್ದಗಲಕ್ಕೂ ಅಲ್ಲದೆ ಅನೇಕ ವಿದೇಶಗಳಿಗೂ ಸಂಚರಿಸಿ ವಿವಿಧ ಸಂಸ್ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಎಂದಿಗೂ ನುಡಿದಂತೆಯೇ ನಡೆಯುತ್ತಿದ್ದ ಅವರು ಅಂದಿನ ಕಾಲದಲ್ಲಿಯೇ ಜಾತಿ ಪದ್ಧತಿಯನ್ನು ವಿರೋಧಿಸಿ ಅನ್ಯಜಾತಿ ಯುವಳನ್ನು ಮದುವೆಯಾದದ್ದೇ ಅಲ್ಲದೆ, ಹರಿಜನೋದ್ಧಾರ ಮತ್ತು ವೇಶ್ಯಾಪದ್ಧತಿಯ ನಿರ್ಮೂಲನಕ್ಕಾಗಿ ವಿಶೇಷವಾಗಿ ದುಡಿದರು. ತಮ್ಮ ಬದುಕಿನ ಕೊನೆಯ ಮೂರು ದಶಕ

ಗಳಲ್ಲಿ ಪರಿಸರ ರಕ್ಷಣೆಯ ಹೋರಾಟದಲ್ಲಿ ಗಾಢವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಅವರು ೧೯೯೭ರಲ್ಲಿ, ತಮ್ಮ ೯೬ನೆಯ ವರ್ಷದಲ್ಲಿ ಸಾವನ್ನಪ್ಪಿದರು.

ಕಾರಂತರದು ಬಹುಮುಖೀ ಸಾಧನೆ ಎಂದರೆ ಏನೂ ಹೇಳಿದಂತಾಗುವುದಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿಯೇ ಅಲ್ಲದೆ, ಯಕ್ಷಗಾನ, ಜಾನಪದ ಸಂಶೋಧನೆ, ಶಿಕ್ಷಣ, ಅಭಿನಯ ಸಂಶೋಧನೆ ಇತ್ಯಾದಿ ಅನೇಕ ಕ್ಷೇತ್ರಗಳಲ್ಲಿ ಕಾರಂತರಿಂದ ಸಂದಿರುವ ಸೇವೆ ಅಪಾರ. ಇವರ ಒಟ್ಟು ಕೃತಿಗಳ ಮತ್ತು ಲೇಖನಗಳ ಸಂಖ್ಯೆ ಯಾರನ್ನೂ ದಿಗ್ಭ್ರಮೆಗೊಳಿಸುವಷ್ಟಿದೆ. ನಲವತ್ತೈದು ಕಾದಂಬರಿಗಳು, ಮೂವತ್ತೊಂದು ನಾಟಕಗಳು, ಎರಡು ಕವನ ಸಂಕಲನಗಳು ಮತ್ತು ನಾಲ್ಕು ಸಣ್ಣ ಕತೆಗಳ ಸಂಕಲನಗಳು, ಮಕ್ಕಳಿಗಾಗಿ ವಿಶೇಷವಾಗಿ ರಚಿಸಿದ ೨೩೧ ಪುಸ್ತಿಕೆಗಳು, ಒಂಭತ್ತು ವಿಶ್ವಕೋಶಗಳು, ಒಂದು ನಿಘಂಟು, ಬಿಡಿ ಬರಹಗಳ ಎಂಟು ಸಂಪುಟಗಳು, ಆರು ಪ್ರವಾಸ ಕಥನಗಳು, ಕಲೆಯನ್ನು ಕುರಿತು ಹದಿಮೂರು ಗ್ರಂಥಗಳು, ಒಂಭತ್ತು ವೈಚಾರಿಕ ಕೃತಿಗಳು, ಎಂಟು ವೈಜ್ಞಾನಿಕ ಕೃತಿಗಳು....ಮುಂದಿನ ಪೀಳಿಗೆಯವರು ಇಷ್ಟನ್ನೂ ಒಬ್ಬ ವ್ಯಕ್ತಿಯೇ ರಚಿಸಿದರೆ ಎಂದು ಸಂದೇಹಿಸಿದರೆ ಆಶ್ಚರ್ಯವೇನಲ್ಲ. ಒಟ್ಟು ಕೃತಿಗಳ ಸಂಖ್ಯೆ ನಾನೂರಕ್ಕೂ ಹೆಚ್ಚಾಗುತ್ತದೆ.

ಕಾರಂತರ ಸಾಧನೆಗಳನ್ನು ಗುರುತಿಸುವ ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿ ಸನ್ಮಾನಗಳು ಅವರನ್ನು ಅರಸಿ ಬಂದುವು. ಇವುಗಳಲ್ಲಿ ಮುಖ್ಯವಾದವುಗಳೆಂದರೆ: ರಾಜ್ಯ ಮಟ್ಟದಲ್ಲಿ, ಪಂಪಪ್ರಶಸ್ತಿ (೧೯೯೨, "ಮೈಮನಗಳ ಸುಳಿಯಲ್ಲಿ"), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೫೯, "ಕಲಾ ಪ್ರಪಂಚ"), ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ (ಭಾರತೀಯ ಶಿಲ್ಪ-ಕಲೆ", ೧೯೮೮), ನಾಡೋಜ ಪ್ರಶಸ್ತಿ (೧೯೯೭), ಇತ್ಯಾದಿ; ರಾಷ್ಟ್ರೀಯ ನೆಲೆಯಲ್ಲಿ, ಪದ್ಮಭೂಷಣ ಪ್ರಶಸ್ತಿ (೧೯೬೮ ಈ ಪ್ರಶಸ್ತಿಯನ್ನು ಇಂದಿರಾ ಗಾಂಧಿಯವರ ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿದುದನ್ನು ಪ್ರತಿಭಟಿಸಿ ೧೯೭೫ರಲ್ಲಿ ಮರಳಿಸಿದರು) ತುಲಸೀ ಸಂಮಾನ್ ("ಯಕ್ಷರಂಗದ ಮೌಲಿಕ ಕಾರ್ಯವನ್ನು ಗುರುತಿಸಿ ಮಧ್ಯಪ್ರದೇಶ ಸರಕಾರದ ಗೌರವ) ಇಂದಿರಾಗಾಂಧಿ ಪರ್ಯಾವರಣ ಪುರಸ್ಕಾ (೧೯೯೨); ಮತ್ತು ಭಾರತೀಯ ಸಾಹಿತಿ ಸಿಗುವ ಅತ್ಯುನ್ನತ "ಜ್ಞಾನಪೀಠ ಪ್ರಶಸ್ತಿ (೧೯೭೮, "ಮೂಕಜ್ಜಿಯ ಕನಸುಗಳು") ಅಂತಾರಾಷ್ಟ್ರೀಯ ನೆಲೆಯಲ್ಲಿ, ಯಕ್ಷಗಾನ ಬಗ್ಗೆ ಬರೆದ ಸಂಶೋಧನಾತ್ಮಕ ಕೃತಿ "ಲಾ ಆರ್ಕೈವ್ಸ್ ಲಾ ಇಂಟರ್‌ನ್ಯಾಶನಲ್ ಸ್ಟಾಕ್ ಹೋಮ್" ಸಂಸ್ಥೆಯ ಪ್ರಶಸ್ತಿ (೧೯೫೮), "ಜಾಪಾನೀಸ್ ಡಾನ್ಸ್ ಕ್ರಿಟಿಕ್ಸ್ ಸೊಸೈಟಿ ಅವಾರ್ಡ್" (೧೯೮೧ ಲಯನ್ಸ್ ಅಂತಾರಾಷ್ಟ್ರೀಯ ಗೌರ ಸದಸ್ಯತ್ವ (೧೯೯೬), ಇತ್ಯಾದಿ. ಇಷ್ಟೆ ಅಲ್ಲದೆ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಆರು ವಿಶ್ವವಿದ್ಯಾನಿಲಯಗಳು ಕಾರಂತರಿಗೆ ಗೌರವ ಡಾಕ್ಟರೇಟ್ ಪದ ಕೊಟ್ಟು ಗೌರವಿಸಿವೆ.

* * * * * *

ಕಾರಂತರ ಎಲ್ಲಾ ಸೃಜನಾತ್ಮಕ ಹಾಗೂ ವೈಚಾರಿಕ ಕಾರ್ಯಗಳಲ್ಲಿ ನಾವು ಪ್ರಧಾನವಾಗಿ ಗುರುತಿಸಲು ಸಾಧ್ಯವಾಗುವ ಅಂಶವೆಂದರೆ ಎರಡು: ಪ್ರಯೋಗಶೀಲತೆ ಮತ್ತು ಬಂಡುಕೋರುತನ. ಬದುಕಿನುದ್ದಕ್ಕೂ ಕಾರಂತರು "ವ್ಯವಸ್ಥೆ"ಯ ಎಲ್ಲಾ ಮುಖಗಳನ್ನೂ ನಿರ್ದಾಕ್ಷಿಣ್ಯವಾಗಿ ವಿರೋಧಿಸುತ್ತಾ, ತಮ್ಮ ತತ್ವಗಳೊಡನೆ ಎಲ್ಲಿಯೂ ಯಾವ ಕಾರಣಕ್ಕೂ ರಾಜಿಮಾಡಿಕೊಳ್ಳದೆ, ಸದಾ ಹೊಸತನಕ್ಕಾಗಿ, ಹೊಸ ಮೌಲ್ಯಗಳಿಗಾಗಿ ತಡಕಾಡುತ್ತಿದ್ದರು, ಹೋರಾಡುತ್ತಿದ್ದರು.

ಮೊದಲಿಗೆ, ಕಾರಂತರ ಸಾಹಿತ್ಯೇತರ ಚಟುವಟಿಕೆಗಳನ್ನು ಗಮನಿಸೋಣ. ಯಕ್ಷಗಾನ ಕಲೆ ದಕ್ಷಿಣ ಕನ್ನಡ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ನರ್ತನ, ಸಂಗೀತ, ಮಾತುಗಾರಿಕೆ ಇವು ಮೂರನ್ನೂ ಒಳಗೊಂಡ ಯಕ್ಷಗಾನ ಕಲೆಗೆ ಕನಿಷ್ಠ ಪಕ್ಷ ನಾಲ್ಕುನೂರು ವರ್ಷಗಳ ಇತಿಹಾಸವಿದೆ. ಈ ಕಲೆ ಬೆಳೆಯುತ್ತಾ ಬಂದಂತೆ, ಈ ಶತಮಾನದಲ್ಲಿ ನರ್ತನ ಹಾಗೂ ಸಂಗೀತ ನೇಪಥ್ಯಕ್ಕೆ ಸಾಗಿ ಮಾತುಗಾರಿಕೆಗೆ ಅತಿ ಎನ್ನಬಹುದಾದ ಪ್ರಾಮುಖ್ಯತೆ ಬಂದಿರುವುದನ್ನು ಕಾರಂತರು ಗಮನಿಸಿದರು. ದೇಶ-ವಿದೇಶಗಳ ನಾಟಕ–ನರ್ತನ ಪ್ರಕಾರಗಳಲ್ಲಿ ಅಪಾರ ಆಸಕ್ತಿ ಹೊಂದಿದ್ದ ಕಾರಂತರು ಯಕ್ಷಗಾನವನ್ನು ಪಾಶ್ಚಾತ್ಯ 'ಬ್ಯಾಲೆ'ಯಂತೆ ರೂಪಿಸಲು ಸಾಧ್ಯವೇ ಎಂದು ವಿಚಾರಿಸುತ್ತಾ, ಅನೇಕ ವರ್ಷಗಳ ಅಧ್ಯಯನ ಚಿಂತನೆಗಳ ಫಲವಾಗಿ 'ಯಕ್ಷರಂಗ' ಎಂಬ ಕಲಾ ಪ್ರಭೇದವನ್ನು ರೂಪಿಸಿದರು. ಈ ಪ್ರಭೇದದಲ್ಲಿ ಸಂಗೀತ ಹಾಗೂ ನೃತ್ಯಗಳಿವೆಯೇ ಹೊರತು ಮಾತುಗಾರಿಕೆ ಇಲ್ಲವೇ ಇಲ್ಲ ಮತ್ತು ಸಂಗೀತದಲ್ಲಿಯೂ ಹಿಂದೆ ಯಕ್ಷಗಾನದಲ್ಲಿ ಪ್ರಯೋಗವಾಗುತ್ತಿದ್ದ (ಆದರೆ ಆಧುನಿಕ ಕಾಲದಲ್ಲಿ ಚಾಲ್ತಿಯಲ್ಲಿಲ್ಲದ) ಅನೇಕ ರಾಗಗಳನ್ನು ಸಂಶೋಧಿಸಿ ಅವುಗಳನ್ನು ಪ್ರಯೋಗಿಸಿದರು. ಮುಖ್ಯವಾಗಿ, ಇಡೀ ರಾತ್ರಿ ನಡೆಯುತ್ತಿದ್ದ ಯಕ್ಷಗಾನಕ್ಕೆ ಬದಲಾಗಿ ಕೆಲವೇ ತಾಸುಗಳ ಅವಧಿಗೆ ಪ್ರದರ್ಶನವನ್ನು ಅಡಕಗೊಳಿಸಿದರು. ಇಂತಹ ಪ್ರಯೋಗಾತ್ಮಕ 'ಯಕ್ಷರಂಗ'ದ ತಂಡವನ್ನು ಸ್ವತಃ ಕಟ್ಟಿ, ನಾಡಿನಾದ್ಯಂತ ಅಲ್ಲದೆ ವಿದೇಶಗಳಲ್ಲೂ ಅದರ ಪ್ರದರ್ಶನಗಳನ್ನು ಕೊಟ್ಟು, ಮೂಲತಃ ಜಾನಪದ ಕಲೆಯಾದ ಯಕ್ಷಗಾನಕ್ಕೆ ಅಂತಾರಾಷ್ಟ್ರೀಯ ಮನ್ನಣೆ ಗಳಿಸಿಕೊಟ್ಟರು. ಈ ಸಂದರ್ಭದಲ್ಲಿ ಕೂಡಲೇ ಹೇಳಬೇಕಾದ ಒಂದು ಅಂಶವೆಂದರೆ ಕಾರಂತರು ಸ್ವತಃ ಬಣ್ಣ ಹಚ್ಚಿಕೊಂಡು, ವೇಷಧರಿಸಿ, ಯಕ್ಷರಂಗದ ಪ್ರದರ್ಶನಗಳಲ್ಲಿ ಕುಣಿಯುತ್ತಿದ್ದುದು. ಐವತ್ತರ ದಶಕದಲ್ಲಿ ಉಡುಪಿಯಲ್ಲಿ 'ಯಕ್ಷರಂಗ'ವೆಂಬ ಸಂಸ್ಥೆಯನ್ನು ಕಟ್ಟಿ, ಅದರ ಮೂಲಕ ಅನೇಕ ಕಲಾವಿದರಿಗೆ ಕಾರಂತರು ಸ್ವತಃ ತರಬೇತಿ ಕೊಟ್ಟರು. (ಇವರ ಯಕ್ಷಗಾನ ಪ್ರಿಯತೆ ಎಷ್ಟಿತ್ತೆಂದರೆ, ಇವರ ೯೦ನೆಯ ಹುಟ್ಟು ಹಬ್ಬದ ದಿನ ಉತ್ಸಾಹದಿಂದ ಯಾವುದೋ ಒಂದು ಭಾವವನ್ನು ಸ್ಪಷ್ಟಪಡಿಸಲು ಅಲ್ಲೇ ಕುಣಿಯಲು ಪ್ರಾರಂಭಿಸಿ, ಅನೇಕ ಪ್ರೇಕ್ಷಕರ ಹೃದಯದ ಬಡಿತ ಹೆಚ್ಚಾಗುವಂತೆ ಮಾಡಿದ್ದರು.)

ಕಾರಂತರು ಅಪಾರ ಆಸಕ್ತಿ ವಹಿಸಿದ್ದ ಮತ್ತೊಂದು ಕ್ಷೇತ್ರವೆಂದರೆ ಶಿಕ್ಷಣ-

ಆದರಲ್ಲೂ ಪ್ರಾಥಮಿಕ ಶಿಕ್ಷಣ. ಪ್ರಾಥಮಿಕ ಶಿಕ್ಷಣವು ಮಕ್ಕಳ ಮಾತೃಭಾಷೆಯಲ್ಲಿಯೇ ಅಗಬೇಕೆಂದು ಪದೇ ಪದೇ ಪ್ರತಿಪಾದಿಸುತ್ತಿದ್ದ ಕಾರಂತರು, ಇಂದಿನ ಯಾಂತ್ರಿಕ ಶಿಕ್ಷಣ ಕ್ರಮದ ಬಗ್ಗೆ ಜಿಗುಪ್ಸೆ ತಾಳಿದ್ದರು. ಈ ಹಂತದಲ್ಲಿ ಶಿಕ್ಷಣವೆಂಬುದು ಮಕ್ಕಳಿಗೆ ಒಂದು ದೊಡ್ಡ ಹೊರೆಯಾಗಬಾರದು—ಅದು ಆಟವಾಗಬೇಕು; ಆಟವಾಡುತ್ತಲೇ ಮಕ್ಕಳು ತಮ್ಮ ನಾಡು-ನುಡಿಗಳ ಬಗ್ಗೆ, ಸಮಾಜದ ಬಗ್ಗೆ, ಪಶು-ಪಕ್ಷಿಗಳ ಬಗ್ಗೆ, ನಿಸರ್ಗದ ಬಗ್ಗೆ ಅರಿಯುವಂತಾಗಬೇಕು; ಶಿಕ್ಷಣ ಮಕ್ಕಳಅದಮ್ಯ ಕುತೂಹಲ ಮತ್ತು ಪ್ರತಿಭೆಗೆ ಯೋಗ್ಯ ಅವಕಾಶಗಳನ್ನು ಒದಗಿಸಿ ಕೊಡಬೇಕು ಎಂಬುದು ಅವರ ಸೈದ್ಧಾಂತಿಕ ನಿಲುವು. ಇಂತಹ ನಿಲುವನ್ನು ವಾಸ್ತವಿಕವಾಗಿ ಕಾರ್ಯರೂಪಕ್ಕಿಳಿಸಲು ಕಾರಂತರು ತಮ್ಮ ಮಹತ್ವಪೂರ್ಣ 'ಬಾಲವನ'ವೆಂಬ ಶಿಕ್ಷಣ ಕೇಂದ್ರವನ್ನು ಪುತ್ತೂರಿನಲ್ಲಿ ೧೯೩೪ರಲ್ಲಿ ಸ್ಥಾಪಿಸಿದರು. ಇದೊಂದು ಕ್ರಾಂತಿಕಾರಕ ಪ್ರಯೋಗವಾಗಿದ್ದಿತು. ಪ್ರತಿಯೊಂದು ಪಾಠವೂ 'ಆಟ'ವಾಗಲು ಕಾರಂತರು ಮತ್ತು ಅವರ ಸಹಾಯಕರು ಅನೇಕ ಅಸಾಂಪ್ರದಾಯಿಕ ಕ್ರಮಗಳನ್ನು ಕೈಗೊಂಡರು: ಪ್ರತಿಯೊಂದು ಶಬ್ದದ ಅರ್ಥವನ್ನು ಸ್ಪಷ್ಟಪಡಿಸುವ ಚಿತ್ರಗಳೇ ಅಲ್ಲದೆ ಶಾಲೆಯ ಹತ್ತಿರವೇ ಒಂದು ಮೃಗಾಲಯವನ್ನು ಸ್ಥಾಪಿಸಿದರು. ಮಕ್ಕಳು ಪ್ರತಿದಿನವೂ ಇಲ್ಲಿಗೆ ಬಂದು ಜಿಂಕೆ, ನವಿಲು, ಹಾವು, ಕೋತಿ ಇವುಗಳನ್ನು ನೋಡುತ್ತಾ ಆ ಮೂಲಕ ಅವುಗಳ ಬಗ್ಗೆ (ಮತ್ತು ಪರೋಕ್ಷವಾಗಿ ಅಕ್ಷರಜ್ಞಾನ) ಅರಿಯುತ್ತಿದ್ದರು. ಮಕ್ಕಳ ಉತ್ಸಾಹವನ್ನು ಹೆಚ್ಚಿಸಲು ಅಲ್ಲಿಯೇ ಒಂದು ಚಿಕ್ಕ ರೈಲು ಕೂ… ಇದ್ದಿತು. ಮಣ್ಣಿನ ಪಾಠವನ್ನು ಮಾ… ವಾಗ ಮಕ್ಕಳೇ ಹುಡುಕಿ ತಂ… ಹತ್ತೊಂಭತ್ತು ಬಗೆಯ ಮಣ್ಣುಗಳ… ಪ್ರತ್ಯಕ್ಷವಾಗಿ ನೋಡುತ್ತಾ, ಮುಟ್ಟುತ… ಮಕ್ಕಳು ಕಲಿಯುತ್ತಿದ್ದರು. ಆದ… ಆರ್ಥಿಕ ಅಡಚಣೆಯಿಂದಾಗಿ ಕೆಲವು ವರ… ಗಳ ನಂತರ 'ಬಾಲವನ'ವನ್ನು ಮು… ಬೇಕಾಗಿ ಬಂದಿತು.

ಶಿಕ್ಷಣ ಮಕ್ಕಳ ಕುತೂಹಲವನ… ತಣಿಸುವ ಮತ್ತು ಅವರ ಸೃಜನಶೀಲ… ಯನ್ನು ಬೆಳೆಸುವ ಮಾಧ್ಯಮವಾಗಬೇಕೆಂ… ತಾತ್ವಿಕ ನೆಲೆಯಲ್ಲಿ ಕಾರಂತರು ಪ್ರಾಥಮಿ… ಶಿಕ್ಷಣದ ಆರೂ ಹಂತಗಳಿಗೆ ಉಪಯೋ… ವಾಗುವ "ಓದುವ ಆಟ" (ಆರು ಭಾ… ಗಳು) ಎಂಬ ಪಠ್ಯಮಾಲಿಕೆಯನ್ನು ರ… ದರು. ಒಂದೆಡೆ ಇಂದಿನ ಯಾಂತ್ರಿಕ ಹಾ… ಮಾಹಿತಿ–ಆಧಾರಿತ ಶಿಕ್ಷಣದ ಬಗ್ಗೆ ಕ… ವಾಗಿ ಕಾರಂತರು ಹೀಗೆ ಬರೆಯುತ್ತಾ… "ಜೀವಂತ ಭಾಷೆಯನ್ನು ಪುಸ್ತ… ಮೂಲಕ ಕಲಿಸುತ್ತಿದ್ದೇವೆ. ಏನು? ಏ… ಎಂದು ತಿಳಿಯುವ ಮೊದಲು ಗಣಿತವ… ಡೊಂಬರಾಡಿಸುತ್ತೇವೆ .... ನಮ್ಮ ಶಿಕ್ಷ… ಕ್ರಮದ ಮುಖ್ಯ ಲಕ್ಷಣ–ವಿದ್ಯಾರ್ಥಿ… ತಲೆಯಲ್ಲಿ ಹಿರಿಯರು ಸಂಗ್ರಹಿಸಿಟ್ಟ… ಜ್ಞಾನ ಭಂಡಾರವನ್ನು ತುರುಕಿಸು… ಪ್ರಯತ್ನ; ಈ ಪ್ರಯತ್ನದಲ್ಲಿ ಅವ… ಜಿಗುಪ್ಸೆ ಬರಿಸುವ ಎಲ್ಲಾ ಕೆಲಸಗಳನ… ಮಾಡುತ್ತಿದ್ದೇವೆ. ಹಾಗೆಂದೇ ಮು… ಅವರು ಕಾಲೇಜನ್ನು ಬಿಟ್ಟ ಬಳಿಕ ಪುಸ… ಸನ್ಯಾಸದ ದೀಕ್ಷೆ ತೊಡುತ್ತಾರೆ" (ಮನೆ… ದೇಹಿಯಾದ ಮಾನವ", ೧೯೭೫.)

ಸಾಧಾರಣವಾಗಿ, ಜನಸಾಮಾನ್ಯರು 'ಇದು ವಿಜ್ಞಾನ', 'ಇದು ಸಾಹಿತ್ಯ', 'ಇದು ತತ್ತ್ವಶಾಸ್ತ್ರ' ಎಂಬಂತಹ ವರ್ಗೀಕರಣಗಳನ್ನು ಮಾಡುತ್ತಾರೆ. ಆದರೆ, ಕಾರಂತರ ದೃಷ್ಟಿಯಲ್ಲಿ ಜ್ಞಾನಸಾಹಿತ್ಯ, ಸಾಂಸ್ಕೃತಿಕ ಸಾಹಿತ್ಯ, ವಿಜ್ಞಾನಸಾಹಿತ್ಯ ಇವುಗಳೆಲ್ಲವೂ ಪರಸ್ಪರ ಪೂರಕವಾದವುಗಳು— ಪರಸ್ಪರಾವಲಂಬಿಗಳು. ಕೇವಲ ಯಾವುದೇ ಒಂದು ಕ್ಷೇತ್ರದಲ್ಲಿ ನಾವು ಆಸಕ್ತಿ ಬೆಳೆಸಿಕೊಂಡರೆ, ಇತರ ಕ್ಷೇತ್ರಗಳ ಜ್ಞಾನವನ್ನು ನಿರಾಕರಿಸಿದರೆ, ನಮ್ಮ ಅರಿವು ಅಪರಿಪೂರ್ಣವಾಗಿರುತ್ತದೆ—ಬದುಕನ್ನು ನಾವು ಗ್ರಹಿಸುವ ಕ್ರಮ ದೋಷಯುಕ್ತವಾಗಿರುತ್ತದೆ. ಕಾರಂತರ ಇಂತಹ ಆರೋಗ್ಯಪೂರ್ಣ ಚಿಂತನೆಯನ್ನು ನಾವು ಅವರ "ವಿಚಾರ ಸಾಹಿತ್ಯ ನಿರ್ಮಾಣ" (೧೯೬೮) ಎಂಬ ಗ್ರಂಥದಲ್ಲಿ ಕಾಣುತ್ತೇವೆ. ಆದ್ದರಿಂದಲೇ ಕಾರಂತರಿಗೆ ಭೌತವಿಜ್ಞಾನ, ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ ಈ ಕ್ಷೇತ್ರಗಳ ಜ್ಞಾನ, ಮಾನವವಿಜ್ಞಾನ, ಇತಿಹಾಸ, ಪ್ರಾಕ್ತನ ಶಾಸ್ತ್ರ ಇವುಗಳ ಜ್ಞಾನದಷ್ಟೇ ಮುಖ್ಯ ಎಂದು ಕಂಡಿತು.

ಹಾಗಾಗಿ, ಕಾರಂತರು ಸಾಹಿತ್ಯಕೃತಿಗಳನ್ನಷ್ಟೇ ಅಲ್ಲದೆ, ವೈಜ್ಞಾನಿಕ–ವೈಚಾರಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಗ್ರಂಥಗಳನ್ನು ಮತ್ತು ಲೇಖನಗಳನ್ನು ಬರೆದರು; ಇತರ ಭಾಷೆಗಳಿಂದ ಅನುವಾದಿಸಿದರು. ನಾಲ್ಕು ಸಂಪುಟಗಳ "ವಿಜ್ಞಾನ ಪ್ರಪಂಚ" (೧೯೫೯–೬೪), ಮೂರು ಸಂಪುಟಗಳ "ಬಾಲ ಪ್ರಪಂಚ" (೧೯೩೬), ಇವುಗಳೇ ಅಲ್ಲದೆ "ಪ್ರಾಣಿ ಪ್ರಪಂಚ" (೧೯೭೦), "ವಿಚಿತ್ರ ಖಗೋಲ" (೧೯೬೫), "ವಿಶಾಲ ಸಾಗರಗಳು" (೧೯೪೪) ಮುಂತಾದ ಬಹು ಮುಖ್ಯ ಕೃತಿಗಳನ್ನು ರಚಿಸಿದರು. ಈ ಸಂದರ್ಭದಲ್ಲಿ ಕಾರಂತರ ಈ ಮಾತುಗಳು ತುಂಬಾ ಅರ್ಥಪೂರ್ಣವಾಗುತ್ತವೆ: "ನಾವು ಬದುಕಿರುವ ಜೋಪಡಿ ಇಲ್ಲವೆ ಬಂಗಲೆಗಳ ನೂರಡಿ ದೂರದಿಂದ ಹಿಡಿದು ನೂರಾರು ಮೈಲು ದೂರದ ದಿಗಂತದ ಅಂಚಿನ ತನಕ ನಮಗಿದಿರಾಗುವ ಬಾಹ್ಯಪ್ರಪಂಚ ಚಾಚಿಕೊಂಡಿದೆ. ಅದನ್ನು ಇಣುಕಿ ನೋಡಬಲ್ಲ ಸೂಕ್ಷ್ಮಶಕ್ತಿ ನಮ್ಮ ಇಂದ್ರಿಯಗಳಿಗಿರಬೇಕು. ಅವು ಒದಗಿಸುವ ಸಂವೇದನೆಗಳಲ್ಲಿ ಚಕಿತಗೊಂಡು ನಲಿಯಬಲ್ಲ ಬುದ್ಧಿಶಕ್ತಿ ನಮ್ಮ ತಲೆಯಲ್ಲಿರಬೇಕು. ಅವೆರಡರ ಸಹಾಯದಿಂದ ಈ ಜೀವನಯಾತ್ರೆ ತಾತ್ಕಾಲಿಕವಾಗಿದ್ದರೂ ಪರಮ ಮೋಹಕವಾಗಿ ಕಾಣಿಸುವುದು ಸಾಧ್ಯವಾದೀತು."

* * * * *

ಡಾ॥ ಶಿವರಾಮ ಕಾರಂತರು ಈ ಶತಮಾನದ ಕನ್ನಡದ ಅತಿ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರು. ತಮ್ಮ ಬದುಕಿನುದ್ದಕ್ಕೂ ಕ್ರಿಯಾಶೀಲರಾಗಿದ್ದ ಕಾರಂತರು ಕಾದಂಬರಿ, ನಾಟಕ, ಪ್ರವಾಸಕಥನ, ಆತ್ಮಚರಿತ್ರೆ, ಜೀವನಚರಿತ್ರೆ, ಇತ್ಯಾದಿ ಎಲ್ಲಾ ಸಾಹಿತ್ಯ ಪ್ರಭೇದಗಳನ್ನೂ ತಮ್ಮ ಅಭಿವ್ಯಕ್ತಿಗಾಗಿ ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ, ಸ್ಥಳಾಭಾವದ ಕಾರಣದಿಂದ ಕೇವಲ ಅವರ ಕೆಲವು ಪ್ರಮುಖ ಕಾದಂಬರಿಗಳನ್ನು ಪರಿಚಯಿಸುವುದು ಮಾತ್ರ ಸಾಧ್ಯ.

ಕಾರಂತರು ಒಟ್ಟು ೪೫ ಕಾದಂಬರಿಗಳನ್ನು ಬರೆದಿದ್ದಾರೆ. ಇವುಗಳನ್ನು ಸ್ಥೂಲವಾಗಿ, ಸಾಧಾರಣಾವಾದಿ ಕಾದಂಬರಿಗಳು, ಮಾನವ–ನಿಸರ್ಗ ಘರ್ಷಣೆ ಕೇಂದ್ರಿತ ಕಾದಂಬರಿಗಳು, ವಿಡಂಬನೆಗಳು, ಕುಟುಂಬ-ವ್ಯವಸ್ಥೆಯನ್ನು ವಿಶ್ಲೇಷಿಸುವ ಕಾದಂಬರಿಗಳು ಎಂದು ವರ್ಗೀಕರಿಸಬಹುದು.

ಕನ್ನಡದಲ್ಲಿ, ವಸಾಹತುಶಾಹಿ ಸಂದರ್ಭದಲ್ಲಿ ಎರಡು ಸಂಸ್ಕೃತಿಗಳ ಮುಖಾಮುಖಿಯಿಂದ ಮೂಡಿಬಂದ ಸುಧಾರಣವಾದಿ ಕಾದಂಬರಿಯು ಒಂದು ಶ್ರೀಮಂತ ಪರಂಪರೆಯೇ ಇದೆ. ಕನ್ನಡದ ಮೊದಲ ಸಾಮಾಜಿಕ ಕಾದಂಬರಿ "ಇಂದಿರಾಬಾಯಿ" ಯಿಂದ (೧೯೦೦) ಪ್ರಾರಂಭವಾಗಿ ದೇವನೂರರ "ಒಡಲಾಳ" (೧೯೮೧)ರ ವರಿಗೆ ಈ ಪರಂಪರೆ ಬೆಳೆದಿದೆ. ಒಂದು ದಿಕ್ಕಿನಲ್ಲಿ ಆರ್ಯಸಮಾಜ ಮತ್ತು ರಾಜಾರಾಮ್ ಮೋಹನ್‌ರಾಯ್ ಅವರ ಪ್ರಭಾವ, ಇನ್ನೊಂದು ಕಡೆ ಆಧುನಿಕ ಇಂಗ್ಲೀಷ್ ಶಿಕ್ಷಣದ ಪ್ರಭಾವ ಇವುಗಳಿಂದ ರೂಪುಗೊಂಡ ಸುಧಾರಣಾವಾದಿ ಕಾದಂಬರಿ ಆರ್ಷೇಯ ಹಿಂದೂ ಸಮಾಜದ ಅನಿಷ್ಟ ಪದ್ಧತಿಗಳನ್ನು ಮತ್ತು ಅಮಾನವೀಯ ಆಚರಣೆಗಳನ್ನು ಬಯಲಿಗೆಳೆದು ಹಿಂದೂ ಸಮಾಜವನ್ನು ಪುನಃಶ್ಚೇತನಗೊಳಿಸಲು ಪ್ರಯತ್ನಿಸುತ್ತಿದೆ. ಈ ವರ್ಗದಲ್ಲಿ "ಸರಸಮ್ಮನ ಸಮಾಧಿ", "ಚೋಮನದುಡಿ", "ಸನ್ಯಾಸಿಯ ಬದುಕು", "ಜಗದೋದ್ಧಾರ–ನಾ" ಮುಂತಾದ ಅನೇಕ ಕಾದಂಬರಿಗಳು ಬರುತ್ತವೆ.

೧೯೩೩ರಷ್ಟು ಹಿಂದೆಯೇ ಬಂದ "ಚೋಮನ ದುಡಿ" ಒಂದು ಮಹತ್ವಪೂರ್ಣ ಕೃತಿ. ಹಿಂದಿಯಲ್ಲಿ ಪ್ರೇಮ್‌ಚಂದರ "ಗೋದಾನ್" ಕೃತಿಯನ್ನು ವಸ್ತುವಿನಲ್ಲಿ ಹೋಲುವ ಈ ಕಾದಂಬರಿ ಹಿಂದೂ ಸಮಾಜದ ಪಳೆಯುಳಿಕೆಯಾಗಿ ಬಂದಿರುವ ಜಾತಿ ಸಮಸ್ಯೆ ಮತ್ತು ಭೂಮಿಯ ಒಡೆತನದ ಪ್ರಶ್ನೆ ಇವೆರಡನ್ನೂ ಒಟ್ಟಾಗಿ ವಿಶ್ಲೇಷಿಸುತ್ತಾ ಅವುಗಳ ಸಂಕೀರ್ಣ ಸ್ವರೂಪವನ್ನು ನಮ್ಮೆದುರು ಮಾಡಿಸುತ್ತದೆ. ಅತ್ಯಂತ ಕೆಳಜಾತಿಗೆ ಸೇರಿದ ಚೋಮ ಬ್ರಾಹ್ಮಣ ಸಂಕಪ್ಪಯ್ಯನ ಹೊಲದಲ್ಲಿ ಕೂಲಿ ಕೆಲಸ ಮಾಡಿ ತನ್ನ ಸಂಸಾರವನ್ನು ಸಾಗಿಸುತ್ತಾನೆ. ಇವನಿಗೆ ಬದುಕಿನಲ್ಲಿರುವ ಒಂದೇ ಒಂದು ಆಸೆಯೆಂದರೆ ತನ್ನದೇ ಆದ ಒಂದು ತುಂಡು ಜಮೀನು ತನಗಿರಬೇಕೆಂದು. ಆದರೆ ಕೆಳಜಾತಿಯವರಾದ 'ಹೊಲೆಯರಿಗೆ' ಭೂಮಿಯ ಒಡೆತನದ ಹಕ್ಕಿಲ್ಲವೆಂದು ಪರಂಪರಾಗತ ಹಿಂದೂಸಮಾಜ ನಿರ್ಣಯಿಸಿರುವುದರಿಂದ ಕೊನೆಗೂ ತನ್ನ ಆಸೆ ತೀರದೆಯೇ ಚೋಮ ಸಾಯುತ್ತಾನೆ. ಜಾತ್ಯಾಧಾರಿತ ಶ್ರೇಣೀಕೃತ ಸಮಾಜದ ಕ್ರೌರ್ಯವನ್ನು, ಕೆಳಜಾತಿಗೇ ಸೇರಿದವರ ಬಡತನ ಮತ್ತು ಕಷ್ಟ–ನಷ್ಟಗಳನ್ನು ಮತ್ತು ಸಮಾಜದ ಅಂಧವಿಶ್ವಾಸದ ಸುಳಿಗೆ ಸಿಕ್ಕಿ ಸಾಯುವ ಚೋಮನಂತಹವರ ದುರಂತವನ್ನು ಈ ಕಾದಂಬರಿ ಹೃದಯಸ್ಪರ್ಶಿಯಾಗಿ ಚಿತ್ರಿಸುತ್ತದೆ. ಇಂಗ್ಲೀಷ್ ಸೇರಿದಂತೆ ಭಾರತದ ವಿವಿಧ ಭಾಷೆಗಳಿಗೆ ಈ ಕೃತಿ ಅನುವಾದಗೊಂಡಿದೆ.

ಕಾರಂತರಿಗೆ ಇಂದಿನ ಈ ಬದುಕು ಮುಖ್ಯ—ನಾಳೆಯ ಪರಲೋಕವಲ್ಲ. ಸಂಸಾರದ ಕಷ್ಟಕೋಟಲೆಗಳಲ್ಲಿಯೇ ತೊಡಗಿಸಿಕೊಂಡು, ಸವೆದು ಮಾಗುವ ಚೇತನವನ್ನು

ಅವರು ಗೌರವಿಸುತ್ತಾರೆ—ಸಂಸಾರವನ್ನು ಮಾಯೆ ಎಂದು ಕರೆದು ಅದರಿಂದ ದೂರ ಓಡಿಹೋಗುವವರನ್ನು ಕಾರಂತರು ತಮ್ಮ ಅನೇಕ ಕಾದಂಬರಿಗಳಲ್ಲಿ ಖಂಡಿಸುತ್ತಾರೆ. ಆದ್ದರಿಂದಲೇ "ಸನ್ಯಾಸಿಯ ಬದುಕು" ಮುಂತಾದ ಅನೇಕ ಕಾದಂಬರಿಗಳಲ್ಲಿ ಕಾರಂತರು ಸನ್ಯಾಸಗಳನ್ನು ಮತ್ತು 'ಪಾರಮಾರ್ಥಿಕ ಚಿಂತನೆ'ಯನ್ನು ಗೇಲಿ ಮಾಡುತ್ತಾರೆ. ತಮ್ಮ ಕರ್ತವ್ಯವನ್ನು ಮರೆತು ಎಲ್ಲೆಲ್ಲೋ ತಿರುಗುತ್ತಾ, ವೈಭವದ ಜೀವನ ನಡೆಸುವ ಸನ್ಯಾಸಿಗಳು, ಸ್ವಾಮಿಗಳು, ಮಠಾಧಿಪತಿಗಳು ಇವರುಗಳಿಗಿಂತ ಸಂಸಾರದಲ್ಲಿಯೇ ಬೇಯುವ ಮುದಿ ಹೆಂಗಸರು ಮತ್ತು ಅಜ್ಜಿಯರು ಇವರನ್ನು ಕಾರಂತರು ಮೆಚ್ಚುತ್ತಾರೆ. "ನಾನು ಬದುಕಿನ ನಾಳೆಯ ಎಂದರೆ ಪರದ ಚಿಂತೆಯನ್ನು ಆತ್ಮ, ಪ್ರಾರಬ್ಧಕರ್ಮ, ಪರಲೋಕಗಳ ನಂಬಿಕೆಗಳನ್ನು ಬೆಳೆಯಿಸಿ, ಇಂದನ್ನು ತಾತ್ಸಾರದಿಂದ ಕಂಡವರೂ ಅಲ್ಲ" ಎಂದು ಕಾರಂತರು ತಮ್ಮ ಆತ್ಮಕಥೆಯಲ್ಲಿ ("ಹುಚ್ಚು ಮನಸ್ಸಿನ ಹತ್ತು ಮುಖಗಳು") ಹೇಳುತ್ತಾರೆ.

ಮಾನವ ಮತ್ತು ನಿಸರ್ಗ ಪರಸ್ಪರ ಶತ್ರುಗಳೂ ಹೌದು, ಮಿತ್ರರೂ ಹೌದು. ತನ್ನ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ, ಮುಖ್ಯವಾಗಿ ಕೃಷಿಗಾಗಿ ಮಾನವ ನಿಸರ್ಗವನ್ನು ಜಯಿಸುವ, ವಶಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಲೇ ಇರುತ್ತಾನೆ. ಈ ಕೆಲಸದಲ್ಲಿ ಅವನಿಗೆ ಕೆಚ್ಚು, ಶಕ್ತಿ ಮತ್ತು ಸಾಧನಗಳು ಅಪರಿಮಿತವಾಗಬೇಕು ಮತ್ತು ಈ ಸಂಘರ್ಷದಲ್ಲಿ ಅವನೇ ಯಾವಾಗಲೂ ಗೆಲ್ಲುತ್ತಾನೆಂಬುದೂ ಇಲ್ಲ. ಇಂತಹ ನೆಲೆಯಲ್ಲಿ ಮೂಡಿಬಂದಿರುವ "ಬೆಟ್ಟದ ಜೀವ" (೧೯೪೩) ಒಂದು ಗಮನಾರ್ಹ ಕೃತಿ. ಈ ಕಾದಂಬರಿ ಮಾನವ×ನಿಸರ್ಗ ಸಂಘರ್ಷವನ್ನು ನಾಟಕೀಯವಾಗಿ ಚಿತ್ರಿಸುತ್ತದಲ್ಲದೆ (ಹೆಮಿಂಗ್‌ವೆ ಕಾದಂಬರಿಕಾರನ 'ಓಲ್ಡ್ ಮ್ಯಾನ್ ಅಂಡ್ ದ ಸೀ" ಕೃತಿಯಂತೆ) ಆಧುನಿಕ ಸಮಾಜದಲ್ಲಿ ಬದಲಾಗುತ್ತಿರುವ ಮೌಲ್ಯ ವ್ಯವಸ್ಥೆಯನ್ನು ಮತ್ತು ಪೀಳಿಗೆಗಳ ಅಂತರವನ್ನು ದಾಖಲಿಸುತ್ತದೆ.

ಈ ವರ್ಗಕ್ಕೆ ಸೇರುವ "ಮರಳಿ ಮಣ್ಣಿಗೆ" ಕಾರಂತರ ಪ್ರಮುಖ ಕೃತಿಗಳಲ್ಲೊಂದು (೧೯೪೧). ಪಾಶ್ಚಾತ್ಯ ಸಂಪರ್ಕದಿಂದ ಬದಲಾಗುತ್ತಿರುವ ಭಾರತೀಯ ಸಮಾಜ ಮತ್ತು ಅದರ ಮೌಲ್ಯಗಳು, ದೇಶದುದ್ದಕ್ಕೂ ಅಂದು ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಸಾಫಲ್ಯ-ವೈಫಲ್ಯಗಳು, ನಿಸರ್ಗದೊಡನೆ ಮಾನವನಿಗಿರುವ ಅವಿನಾ ಸಂಬಂಧ—ಇತ್ಯಾದಿ ಅನೇಕ ನೆಲೆಗಳಲ್ಲಿ ಈ ಕಾದಂಬರಿ ಕ್ರಿಯಾಶೀಲವಾಗಿದೆ. ಮೂರು ಪೀಳಿಗೆಗಳನ್ನೊಳಗೊಳ್ಳುವ ಈ ಕಾದಂಬರಿಯಲ್ಲಿ ಮೊದಲನೆಯ ಪೀಳಿಗೆಗೆ ಮಣ್ಣಿನೊಡನೆ (ಮತ್ತು ಪಾರಂಪರಿಕ, ಪುರುಷಕೇಂದ್ರಿತ ಹಿಂದೂ ಸಮಾಜದ ಆಚರಣೆ–ನಂಬಿಕೆಗಳೊಡನೆ) ಆತ್ಮೀಯ ಸಂಬಂಧವಿದೆ. ಆದರೆ ಎರಡನೆಯ ಪೀಳಿಗೆ ಇಂಗ್ಲೀಷ್ ಶಿಕ್ಷಣದ ಕಾರಣದಿಂದಾಗಿ ನಗರವಾಸಿಯಾಗಿ ಈ ಸಂಬಂಧಗಳನ್ನು ಕಳೆದುಕೊಳ್ಳುತ್ತದೆ. ಮೂರನೆಯ ಪೀಳಿಗೆ ನಗರ ಜೀವನವನ್ನು ಅನುಭವಿಸಿ, ಅದರ ಕೃತಕತೆಗೆ ಬೇಸತ್ತು ಮತ್ತೆ ಮಣ್ಣಿಗೆ (ತಾಯಿಯ ಸಂಸ್ಕೃತಿಗೆ) ಮರಳುತ್ತದೆ. (ಒಂದು ನೆಲೆಯಲ್ಲಿ ಪರ್ಲ್ ಎಸ್. ಬಕ್ ಅವರ "ಗುಡ್

ಅರ್ಥ್" ಕಾದಂಬರಿಯನ್ನು ಇದು ನೆನಪಿಗೆ ತರುತ್ತದೆ.) ವಿಸ್ತಾರವಾದ ಕ್ಯಾನ್‌ವಸ್ ಮೇಲೆ, ವ್ಯಾಪಕವಾಗಿ ಹಾಗೂ ದಟ್ಟವಾಗಿ, ನಗರೀಕರಣಗೊಳ್ಳುತ್ತಿರುವ, ಕೃಷಿಯಿಂದ ವ್ಯಾಪಾರದತ್ತ ಹೊರಳುತ್ತಿರುವ, ದಾಸ್ಯದಿಂದ ಸ್ವಾತಂತ್ರ್ಯದೆಡೆಗೆ ನಡೆಯುತ್ತಿರುವ, ಸಂಕ್ರಮಣಕಾಲದ ಭಾರತೀಯ ಸಮಾಜದ ತಲ್ಲಣವನ್ನು ಚಿತ್ರಿಸುವ "ಮರಳಿ ಮಣ್ಣಿಗೆ" ಯಂತಹ ಮತ್ತೊಂದು ಕಾದಂಬರಿಯನ್ನು ನಾವು ನೋಡಬೇಕೆಂದರೆ ಕಾರಂತರ ಸಮಕಾಲೀನರಾದ ಕುವೆಂಪು ಅವರ ಕಾದಂಬರಿಗಳಲ್ಲಿ ಮಾತ್ರ ಸಾಧ್ಯ. ಈ ಕಾದಂಬರಿಯ ಎರಡು ಇಂಗ್ಲೀಷ್ ಅನುವಾದಗಳಿದ್ದು, ಇತರ ಭಾರತೀಯ ಭಾಷೆಗಳಿಗೆಲ್ಲಾ ಅನುವಾದವಾಗಿದೆ.

ಅವಿಭಕ್ತ ಹಿಂದೂ ಕುಟುಂಬ ವ್ಯವಸ್ಥೆ ಆರ್ಷೇಯ ಕಾಲದಿಂದಲೂ ಭಾರತೀಯ ಸಮಾಜದ ಮತ್ತು ಅದರ ಮೌಲ್ಯ ವ್ಯವಸ್ಥೆಯ ಅಡಿಗಲ್ಲಾಗಿದೆ. ಇಂತಹ ವ್ಯವಸ್ಥೆ ಸಮಾಜದ ಭದ್ರತೆಗಾಗಿ ಅವಶ್ಯಕ; ಆದರೆ ಈ ವ್ಯವಸ್ಥೆಯಲ್ಲಿ ವ್ಯಕ್ತಿಗೆ ಏನೂ ಸ್ವಾತಂತ್ರ್ಯವಿಲ್ಲ. ಆಧುನಿಕ ಯುಗದಲ್ಲಿ ಅನೇಕ ಕಾರಣಗಳಿಂದ ಈ ವ್ಯವಸ್ಥೆ ಹೇಗೆ ಬದಲಾಗುತ್ತಿದೆ? ಮತ್ತು ಈ ಬದಲಾವಣೆಯ ಸಾಧಕ-ಬಾಧಕಗಳೇನು? — ಈ ಪ್ರಶ್ನೆಗಳನ್ನು ಕಾರಂತರು ಅನೇಕ ಕಾದಂಬರಿಗಳಲ್ಲಿ ಎತ್ತುತ್ತಾರೆ. ಈ ವರ್ಗದಲ್ಲಿ ಬರುವ ಮುಖ್ಯ ಕಾದಂಬರಿಗಳೆಂದರೆ "ಮೈ ಮನಗಳ ಸುಳಿಯಲ್ಲಿ", "ಕೇವಲ ಮನುಷ್ಯರು", "ಧರ್ಮರಾಯನ ಸಂಸಾರ" ಇತ್ಯಾದಿ.

ವ್ಯಕ್ತಿವಾದದ ನೆಲೆಯಲ್ಲಿ ಹಿಂದೂ ಕುಟುಂಬ ವ್ಯವಸ್ಥೆಯನ್ನು ಗಮನಿಸುವ ಧರ್ಮಶಾಸ್ತ್ರ ಇತ್ಯಾದಿಗಳನ್ನೆಲ್ಲಾ ಒಳಗೊಳ್ಳುತ್ತದೆ. ಅತೀಂದ್ರಿಯ ಶಕ್ತಿಯುಳ್ಳ, ಕಾರಂತರು ಮೊಟ್ಟಮೊದಲು ದಾಖಲಿಸುವುದು ಈ ವ್ಯವಸ್ಥೆಯಲ್ಲಿ ಸ್ತ್ರೀ ಹೇಗೆ ಯಾವ ವಿಧದ ಸ್ವಾತಂತ್ರ್ಯವೂ ಇಲ್ಲದೆ ಬದುಕಿನುದ್ದಕ್ಕೂ ಕಣ್ಣೀರಿನಲ್ಲಿಯೇ ಕೈತೊಳೆಯುತ್ತಾಳೆ ಎಂಬುದನ್ನು. ಸಂಸಾರದ ಜವಾಬ್ದಾರಿ ಮತ್ತು ಲೈಂಗಿಕ ಕಟ್ಟುಪಾಡುಗಳು ಕೇವಲ ಸ್ತ್ರೀಗೆ ಮಾತ್ರ ಅನ್ವಯವಾಗುತ್ತವೆ; ಪುರುಷನಿಗಾದರೋ ಸಂಪೂರ್ಣ ಆರ್ಥಿಕ—ಸಾಮಾಜಿಕ—ಲೈಂಗಿಕ ಸ್ವಾತಂತ್ರ್ಯವಿದೆ. ಕುಟುಂಬ ವ್ಯವಸ್ಥೆಯ ಇಂತಹ ಕ್ರೌರ್ಯವನ್ನು ವೇಶ್ಯೆಯ ದೃಷ್ಟಿಕೋನದ ಮೂಲಕ "ಮೈಮನಗಳ ಸುಳಿಯಲ್ಲಿ" ದಾಖಲಿಸಿದರೆ, "ಕೇವಲ ಮನುಷ್ಯರು" ಮತ್ತು "ಧರ್ಮ-ರಾಯನ ಸಂಸಾರ" ನತದೃಷ್ಟ ಗೃಹಿಣಿಯರ ನೆಲೆಯಲ್ಲಿ ವಿಶ್ಲೇಷಿಸುತ್ತವೆ ಮತ್ತು ಇವೆಲ್ಲಾ ಕೃತಿಗಳಲ್ಲಿಯೂ ಲೇಖಕರು 'ಪುರುಷನಿಗೊಂದು ಮಾನದಂಡ ಸ್ತ್ರೀಗೆ ಬೇರೆಯೇ ಅದ ಮಾನದಂಡ' ಇರುವ ಸ್ಥಿತಿಯನ್ನು ತಿರಸ್ಕರಿಸಿ. ಸ್ತ್ರೀ ಪುರುಷರಿಬ್ಬರಿಗೂ ಸಮಾನ ಆರ್ಥಿಕ—ಲೈಂಗಿಕ ಸ್ವಾತಂತ್ರ್ಯವಿರಬೇಕೆಂದು ವಾದಿಸುತ್ತಾರೆ. ಕೂಡಲೇ ಇಲ್ಲಿ ನಮೂದಿಸಬೇಕಾದ ಅಂಶವೆಂದರೆ, ಕಾರಂತರು ಕುಟುಂಬ ವ್ಯವಸ್ಥೆಯ ಕ್ರೌರ್ಯವನ್ನು ತಿರಸ್ಕರಿಸುತ್ತಾರೆಯೇ ಹೊರತು ಕುಟುಂಬವನ್ನೇ ಅಲ್ಲ ಎಂಬುದನ್ನು.

ಜ್ಞಾನಪೀಠ ಪ್ರಶಸ್ತಿಗೆ ಹೆಸರಿಸಲಾದ "ಮೂಕಜ್ಜಿಯ ಕನಸುಗಳು" (೧೯೬೮) ಒಂದು ವಿಶಿಷ್ಟ ಕಾದಂಬರಿ. ಕಾದಂಬ

ಪ್ರಭೇದದ ಎಲ್ಲೆಗಳನ್ನೇ ವಿಸ್ತರಿಸುವ ಈ ಕಾದಂಬರಿ ಇತಿಹಾಸ, ಪ್ರಾಕ್ತನಶಾಸ್ತ್ರ, ಕಾದಂಬರಿಯ ಕೇಂದ್ರ ಪಾತ್ರವಾದ, ಮೂಕಜ್ಜಿಯ ಮೂಲಕ ಈ ಕೃತಿಯಲ್ಲಿ ಕಾರಂತರು ಇಡೀ ಮಾನವಜನಾಂಗದ ಸಾಮಾಜಿಕ–ನೈತಿಕ ಇತಿಹಾಸವನ್ನು ದಾಖಲಿಸುತ್ತಾರೆ. ನಾಗರೀಕತೆಯ ದಾರಿಯಲ್ಲಿ ಮಾನವ ಬೆಳೆಸಿಕೊಂಡ ಆಚರಣೆಗಳು, ನಂಬಿಕೊಂಡ ಮತ–ಧರ್ಮಗಳು, ಲೈಂಗಿಕ ತೃಪ್ತಿಗಾಗಿ ಕಂಡುಕೊಂಡ ಮಾರ್ಗಗಳು ಇವೆಲ್ಲವನ್ನೂ ಒಬ್ಬ ವಿಚಾರವಾದಿಯ ನೆಲೆಯಲ್ಲಿ ವಸ್ತುನಿಷ್ಠವಾಗಿ ವಿಶ್ಲೇಷಿಸುತ್ತಾರೆ. ಕೃತಿಯ ಒಟ್ಟಾರೆಯಾದ ದನಿಯೆಂದರೆ "ಎಷ್ಟು ಕತೆ, ಎಷ್ಟು ಪುರಾಣ, ಎಷ್ಟು ದೇವರು, ಎಷ್ಟು ಕಲ್ಪನೆ, ಎಷ್ಟು ವಿಕಲ್ಪನೆ? ಅವುಗಳಲ್ಲಿ ಕಸಯಾವುದು, ರಸಯಾವುದು, ಸತ್ಯಯಾವುದು, ಸುಳ್ಳುಯಾವುದು ಎಂಬುದನ್ನೇ ತಿಳಿಯುವುದು ಕಷ್ಟ!"

ರಾಜಕೀಯವಾಗಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕಾರಂತರಿಗೆ ಸಂಪೂರ್ಣ ವಿಶ್ವಾಸವಿದ್ದರೂ, ಆ ವ್ಯವಸ್ಥೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತದಲ್ಲಿ ಕಾರ್ಯಗತವಾಗುತ್ತಿರುವುದರ ಬಗ್ಗೆ ಕಾರಂತರಿಗೆ ಅತೀವ ಖೇದ–ನಿರಾಸೆಗಳುಂಟಾಗಿದ್ದುವು. "ನಾವು ಕಟ್ಟಿದ ಸ್ವರ್ಗ", "ಮೂಜನ್ಮ", "ಗೊಂಡಾರಣ್ಯ", "ನಷ್ಟ ದಿಗ್ಗಜಗಳು" ಮುಂತಾದ ಕಾರಂತರ ರಾಜಕೀಯ ಕಾದಂಬರಿಗಳು ಈ ನೆಲೆಯಿಂದ ಹೊರಟು ಸಮಕಾಲೀನ ಭಾರತದಲ್ಲಿ ವ್ಯಾಪಕವಾಗಿರುವ ಅನೈತಿಕತೆ, ಅಧಿಕಾರ ದಾಹ, ನಾಯಕರ ಮೋಸ–ವಂಚನೆಗಳು, ಜನಸಾಮಾನ್ಯನ ದುಃಸ್ಥಿತಿ ಇವುಗಳನ್ನು ತೀವ್ರವಾಗಿ ವಿಡಂಬಿಸುತ್ತವೆ. ಒಂದು ಕಾದಂಬರಿಯಲ್ಲಿ ದೇಶಭಕ್ತನೊಬ್ಬ ಹೀಗೆ ಅತ್ಯಂತ ವಿಷಾದದಿಂದ ನುಡಿಯುತ್ತಾನೆ: "ನಾವು ತಂದುದು ರಾಮರಾಜ್ಯವಲ್ಲ—ಹರಾಮರಾಜ್ಯ"

* * * * *

ವ್ಯವಸ್ಥೆಗಳನ್ನು ಮತ್ತು ಅವುಗಳಲ್ಲಿ ಅಂತರ್ಗತವಾಗಿರುವ ಅಮಾನವೀಯತೆಯನ್ನು ಸದಾ ವಿರೋಧಿಸುತ್ತಿದ್ದ, ಯಾವ ಕಾರಣಕ್ಕೂ ತಮ್ಮ ತತ್ವಗಳೊಡನೆ ರಾಜಿ ಮಾಡಿಕೊಳ್ಳದಿದ್ದ, ಈ ಶತಮಾನದುದ್ದಕ್ಕೂ ಸಾಮೂಹಿಕ ಅಂತಃಸಾಕ್ಷಿಯಂತಿದ್ದ ಕಾರಂತರು ಇಂದು ದೈಹಿಕವಾಗಿ ನಮ್ಮೊಡನಿಲ್ಲ. ಆದರೆ, ಅವರ ಅಪಾರ ಸಾಹಿತ್ಯ, ವೈಚಾರಿಕತೆ, ಚಿಂತನೆ ನಮ್ಮೊಡನಿವೆ—ಅವುಗಳ ಬೆಳಕು ನಮಗೆ ದಾರಿತೋರಬಹುದು.

ಬದುಕಿನ ಬಗೆಗೆ ಕಾರಂತರ ದೃಷ್ಟಿಕೋನ

ಡಾ|| ನಿ. ಮುರಾರಿ ಬಲ್ಲಾಳ
ಮಾನಸ
ಅಂಬಲಪಾಡಿ–೫೭೬ ೧೦೩

ಹತ್ತೊಂಭತ್ತನೆಯ ಶತಮಾನದ ಅಂತ್ಯ ಮತ್ತು ೨೦ನೇ ಶತಮಾನದ ಆರಂಭದ ಕಾಲ ಧರ್ಮವನ್ನು, ಭಾರತ ತನ್ನನ್ನು ತಾನು ಕನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದ ಸ್ವಯಂ ಜಾಗೃತಿಯ ಪ್ರಮುಖ ಕಾಲ ಘಟ್ಟವೆಂದು ಗುರುತಿಸಬಹುದು. ಕೈಗಾರಿಕೀಕರಣ ಮತ್ತು ಅದರ ಜತೆ ಅಧುನೀಕರಣದ ಶಿಖೆ ಆಗ ತಾನೇ ಭಾರತಕ್ಕೆ ತಟ್ಟಲು ಆರಂಭವಾಗಿತ್ತು. ಇದರ ಪರಿಣಾಮವಾಗಿ, ಭಾರತವು ಆತ್ಮಾಭಿಮಾನದಿಂದ ಮತ್ತು ಆತ್ಮಾವಹೇಳನದ ಮೂಲಕ ಒಟ್ಟೊಟ್ಟಗೇ ತನ್ನ ನೆಲೆಯನ್ನು ಕಂಡುಕೊಳ್ಳಲು ಚಡಪಡಿಸುತ್ತಿತ್ತು. ಭಾರತದ ದೀರ್ಘ ಇತಿಹಾಸ-ಸಂಸ್ಕೃತಿಗಳ ಸ್ಮೃತಿಯ ಬಗ್ಗೆ (ಸೆಲ್ಫ್-ಕಾನ್‌ಷಿಯಸ್) ಆದ ಚಿಂತಕರ, ಸಾಹಿತಿಗಳ ಒಂದು ವರ್ಗ, ಭಾರತವನ್ನು ರೋಮಾಂಚನದಿಂವ, ವಿಸ್ಮಯದಿಂದ, ಆತ್ಮರತಿಯಿಂದ ನೋಡುತ್ತಿದ್ದರೆ, ಜತೆ ಜತೆಗೇ ಇನ್ನೊಂದು ವರ್ಗ ಭಾರತವನ್ನು ಹಸಿವು, ರೋಗ, ಅಜ್ಞಾನ, ಧಾರ್ಮಿಕ ಅಂಧ ಶ್ರದ್ಧೆಗಳ ಕೂಪವೆಂದು ಗುರುತಿಸುತ್ತಾ ಅಸಹ್ಯಪಟ್ಟುಕೊಂಡು ಆತ್ಮಾವಹೇಳನದ ಮೂಲಕ ನೋಡುತ್ತಿತ್ತು. ಅದ್ದರಿಂವಲೇ, ೧೯ನೆಯ ಶತಮಾನದಲ್ಲಿ ರಾಮಕೃಷ್ಣ ಪರಮ

ಹಂಸರೂ, ರಾಜಾರಾಮಮೋಹನರಾಯ್
ಅವರೂ ಒಟ್ಟೊಟ್ಟಗೆ ಇರುವುದು ಸಾಧ್ಯ
ವಾಯಿತು. ಪ್ರಾಯಃ ಪರಮಹಂಸರ
ಅನುಭವ ದರ್ಶನದಲ್ಲಿ ಈ ಎರಡರ ಸಮ್ಮಿಲ
ನವೂ ಇದೆ. ಅದಕ್ಕೇ ಪರಮಹಂಸರಿಗೆ
ರಾಜಾರಾಮಮೋಹನ್‌ರಾಯ್ ಅವರ
ಬಗ್ಗೆ ಒಂದು ನೆಲೆಯಲ್ಲಿ ಬಹಳಷ್ಟು
ಕುತೂಹಲವಿದೆ. ಆದರೆ, ಅದೇ ಸಮಯಕ್ಕೆ
'ಭಾರತವು ಆಧುನೀಕರಣಗೊಳ್ಳಲೇ
ಬೇಕಾಗಿರುವುದು ಅನಿವಾರ್ಯ' ಎಂಬ
ರಾಜಾರಾಮಮೋಹನರಾಯ್ ಅವರ
ಕಲ್ಪನೆ, ಅವರಿಗೆ ನಗಣ್ಯವಾಗಿ, ಕುಬ್ಜವಾಗಿ
ಕೂಡ ಕಾಣುತ್ತದೆ. ತನ್ನ ಮಿಸ್ಟಿಕಲ
ಜರ್ನಿಯಲ್ಲಂತೂ, ಪರಮಹಂಸರು ರಾಜಾ
ರಾಮಮೋಹನರಾಯ್ ಅವರ ಬಗ್ಗೆ ತ
ಗಿದ್ದ ಕುತೂಹಲವನ್ನು ಮೀರಿಬಿಡುತ್ತಾರೆ
ಮಾತ್ರವಲ್ಲದೆ ಭಾರತದ ಸಾಂಸ್ಕೃತಿ
ಸಂದರ್ಭದಲ್ಲಿ ರಾಯ್ ಅಪ್ರಾಮುಖ್ಯ
ಅಂತ ತಿಳಿಯುತ್ತಾರೆ. ಅಂಥ 'ಅನ್
ರಿಬ್ಬರೂ ಒಟ್ಟೊಟ್ಟಗೇ ಇರಲು ಸಾ
ವಾದ್ದು, ಅವರ ನಡುವೆ ಸಂವಾದ ಸಾ
ವಾದ್ದು, ಅಂದಿನ ಕಾಲಧರ್ಮ ವಿಶೇಷ.

ಪ್ರಾಯಃ ವಿವೇಕಾನಂದ ಮತ
ಗಾಂಧಿ, ಭಾರತದ ಈ ರೀತಿಯ ಎರ

ವಿಭಿನ್ನ ತುಡಿತಗಳ ಒಂದು 'ಸಿಂಥೆಸಿಸ್' ಎಂದು ಹೇಳಬಹುದೋ ಏನೊ. ಗಾಂಧೀಜಿ ವರ್ಣಾಶ್ರಮ ಧರ್ಮವನ್ನು ಒಂದು ನೆಲೆಯಲ್ಲಿ ತಿರಸ್ಕಾರ ಮಾಡುತ್ತಲೇ, ಇನ್ನೊಂದು ನೆಲೆಯಲ್ಲಿ ವರ್ಣಾಶ್ರಮ ಧರ್ಮವನ್ನು ಸಮರ್ಥಿಸಿಯೂ ಮಾತಾಡುತ್ತಾರೆ. ವಿವೇಕಾನಂದರು ಭಾರತದ ಪ್ರಾಚೀನ ಸ್ಮೃತಿಯ ಬಗ್ಗೆ ರೋಮಾಂಚನಗೊಳ್ಳುತ್ತಿರುವಾಗಲೇ ಆ ಸ್ಮೃತಿಯಿಂದ ಉದ್ಭವಿಸಿದ ಅಜ್ಞಾನ, ದಾರಿದ್ರ್ಯ, ಅಂಧಶ್ರದ್ಧೆ, ಜಾಡ್ಯ, ಜಾತಿ ಪದ್ಧತಿಗಳಿಗೆ ಹೇಸಿ, ಅವನ್ನು ಉಗ್ರವಾಗಿ ಪ್ರತಿಭಟಿಸುತ್ತಾರೆ. ಈ ದ್ವಂದ್ವ ೧೯ ನೇ ಶತಮಾನದ ಅಂತ್ಯದಿಂದ ೧೯೫೦ ರ ವರೆಗಿನ ನವೋದಯ ಕಾಲದಲ್ಲಿದ್ದ ಟಾಗೋರ್, ಪ್ರೇಮಚಂದ್ರ, ಶರಚ್ಚಂದ್ರ, ಗಾಂಧಿ, ನೆಹರೂ ಮತ್ತು ನಮ್ಮ ಕನ್ನಡ ನೆಲದ ಕಾರಂತ, ಪುಟ್ಟಪ್ಪ ಮಾಸ್ತಿ, ಬೇಂದ್ರೆ ಮುಂತಾದ ಭಾರತದ ಎಲ್ಲಾ ಪ್ರಮುಖ ಚಿಂತನಶೀಲರನ್ನೂ ಕಾಡುತ್ತಿತ್ತು. ಆ ಅವಧಿಯಲ್ಲಿ ನಡೆದ ತೀವ್ರ ಆರ್ಥಿಕ ಬದಲಾವಣೆ, ಸಾಮಾಜಿಕ–ಸಾಂಸ್ಕೃತಿಕ ಚಳವಳಿ, ಸ್ವದೇಶಿ ಚಳುವಳಿ, ರಷ್ಯದ ಕಮ್ಯೂನಿಸ್ಟ್ ಕ್ರಾಂತಿ, ಕೈಗಾರಿಕೀಕರಣ, ತಾಂತ್ರಿಕ ಪ್ರಗತಿ, ಮುಂತಾದ ಎಲ್ಲಾ ರೀತಿಯ ಯುಗ ಪರಿವರ್ತಕ ಬದಲಾವಣೆಗಳಿಗೆ, ಈ ಎಲ್ಲ ಅಸಾಮಾನ್ಯರೂ ತೀವ್ರವಾಗಿ ಸ್ಪಂದಿಸುತ್ತ ಬಂದರು. ಆಗುತ್ತಿದ್ದ ಬದಲಾವಣೆಗಳಿಂದ ತಾವು ಪ್ರಭಾವಿತರಾಗುತ್ತಲೇ, ದೇಶದ ಸಾಹಿತ್ಯ, ರಾಜಕೀಯ, ಆರ್ಥಿಕ ಚಿಂತನೆ, ಅಕಾಡೆಮಿಕ್ ಪರಿಸರದಲ್ಲಿ ಬದಲಾವಣೆಗೂ ಕಾರಣರಾದರು. 'ಇದು' ಅಥವಾ 'ಅದು' ಎಂಬ ರೀತಿಯಲ್ಲಿ ನೋಡಲು ಇವರಿಗೆ ಆಗುತ್ತಿರಲಿಲ್ಲ. ಎಲ್ಲವನ್ನೂ ಇಳಿಸಿ ಸಂಕೋಚಗೊಳಿಸಿ ನೋಡುವುದರ ಅಪಾಯದ ಬಗ್ಗೆ ಈ ಮಂದಿಗೆ ಎಚ್ಚರವಿತ್ತು. ಯಾವುದೇ ಸಂಗತಿ ಒಂದಿದ್ದರೆ ಇನ್ನೊಂದಿಲ್ಲ ಎನ್ನುವ ವಿಶ್ಲೇಷಣೆ ಮೂಡುವಷ್ಟು ಸಂಗತಿಗಳು ಸರಳವಲ್ಲ ಎಂಬ ಎಚ್ಚರವಿದ್ದದ್ದರಿಂದಲೇ ಸಂಕೀರ್ಣತೆಯಲ್ಲಿರುವ ದ್ವಂದ್ವ ಮತ್ತು ವಾಗ್ವಾದಗಳನ್ನು ಒಟ್ಟೊಟ್ಟಿಗೇ ಗ್ರಹಿಸುವ ಅನಿವಾರ್ಯತೆ ಆ ಕಾಲಧರ್ಮಕ್ಕಿತ್ತು. ಆತ್ಮರತಿ–ಆತ್ಮಾವಹೇಳನಗಳನ್ನು ಜತೆಜತೆಗೆಯೇ ಗ್ರಹಿಸುವ ರೀತಿಯನ್ನು ಆ ಕಾಲದ ಪ್ರಮುಖ ಚಿಂತಕರಲ್ಲಿ, ಸಾಹಿತಿಗಳಲ್ಲಿ ನಾವು ಗಮನಿಸಬಹುದು. ಹಾಗಾಗಿಯೇ ಆಧುನಿಕ ಭಾರತದ ಸಂಸ್ಕೃತಿಯ ಪ್ರಮುಖ ಒತ್ತು ಅಥವಾ ಹುಡುಕಾಟ ಇದ್ದದ್ದು—ಮನುಷ್ಯನಿಗೆ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಕಂಡುಕೊಳ್ಳುವುದರಲ್ಲಿ.

ನವೋದಯದ ದೈತ್ಯರು :

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ೧೯ನೆಯ ಮತ್ತು ೨೦ ನೆಯ ಶತಮಾನದ ಆರಂಭದ ಈ ದ್ವಂದ್ವದ ಪ್ರಮುಖ ಪ್ರತಿನಿಧಿಗಳೆಂದರೆ ನವೋದಯ ಕಾಲದ ಮಹಾನ್ ಲೇಖಕರಾದ ಬೇಂದ್ರೆ, ಕಾರಂತ, ಪುಟ್ಟಪ್ಪ, ಮಾಸ್ತಿ ಮತ್ತು ಶ್ರೀರಂಗರು. ಇವರೆಲ್ಲರೂ ಆ ಕಾಲದ ಮನೋಧರ್ಮವನ್ನು ಪ್ರತಿಬಿಂಬಿಸುವ ಸಮಾನ ಗುಣಗಳನ್ನು ಹೊಂದಿದ ಅಸಾಮಾನ್ಯರು. ಇವರು ಅಸಾಮಾನ್ಯ ಲೇಖಕರಾಗಿದ್ದರಿಂದಲೇ ಅವರ ಬರಹಗಳಲ್ಲಿ ಪ್ರಧಾನವಾದ ಸಮಾನ ಅಂಶಗಳಿದ್ದುವು. ಅದೇ ಕಾರಣಕ್ಕೆ ಅವರು ಪ್ರತ್ಯೇಕರೂ

ಆಗಿದ್ದರು. ಕವಿಗಳಾಗಿ, ಕಾದಂಬರಿಕಾರರಾಗಿ, ಸಣ್ಣ ಕತೆಗಾರರಾಗಿ, ನಾಟಕಕಾರರಾಗಿ ಬೇರೆ ಬೇರೆ ಬರವಣಿಗೆಯ ಪ್ರಕಾರಗಳಲ್ಲಿ ಪ್ರಸಿದ್ಧರಾಗಿದ್ದ ಈ ಮಹಾನುಭಾವರ ತಾತ್ವಿಕತೆಗಳಲ್ಲೂ ಕೂಡ ಸ್ಪಷ್ಟ ವ್ಯತ್ಯಾಸಗಳನ್ನು ಗುರುತಿಸಬಹುದು.

ಆದರೂ ಈ ಐದೂ ಲೇಖಕರಲ್ಲಿ ಅನನ್ಯತೆಯ ಬಗ್ಗೆ ತೀವ್ರ ತುಡಿತವೂ ವ್ಯಕ್ತವಾಗುತ್ತದೆ. ಅವರು ಅನನ್ಯರಾಗಿದ್ದರಿಂದಲೇ ಕೈಗಾರಿಕೀಕರಣ ಮತ್ತು ಪಾಶ್ಚಾತ್ಯ ಪ್ರಭಾವದಿಂದ ಸಮಗ್ರ ಭಾರತವೇ ತನ್ನನ್ನು ತಾನು ನೋಡಿಕೊಳ್ಳುವ ನವೋದಯ ಕಾಲಧರ್ಮದ ಪ್ರಮುಖ ಲಕ್ಷಣವಾದ ಭಾರತದ ಬಗ್ಗೆ ಅಭಿಮಾನ ಮತ್ತು ಜಿಗುಪ್ಸೆ ಏಕಕಾಲದಲ್ಲಿ ಇವರೆಲ್ಲರಿಗೆ ಇದ್ದುವು.

ನವೋದಯ ಕಾಲದಲ್ಲಿ ಕನ್ನಡ ನೆಲದಲ್ಲಿ ಹೇಳಿಕೊಳ್ಳುವ ರೀತಿಯ ಬೃಹತ್ ಕೈಗಾರಿಕೀಕರಣ ಆಗಿರದಿದ್ದರೂ ಕೂಡ, ಆದ ಬದಲಾವಣೆಗಳಿಗೆ ಕನ್ನಡ ಲೇಖಕರು ತಮ್ಮದೇ ಆದ ರೀತಿಯಲ್ಲಿ ಸ್ಪಂದಿಸಿದ್ದಾರೆ. ಹುಬ್ಬಳ್ಳಿಗೆ ಮೊದಲು ಜವುಳಿ ಗಿರಣಿ ಬಂದಾಗ, ಅದಕ್ಕೆ ಶಿಶುನಾಳ ಶರೀಫರ ಪ್ರತಿಕ್ರಿಯೆ ದ್ವಂದ್ವಾತ್ಮಕವಾಗಿತ್ತು. ಹೊಸತರ ಬಗ್ಗೆ ಕುತೂಹಲ–ಆಕರ್ಷಣೆಯ ಜತೆಜತೆಯೇ ಆ ಬಗ್ಗೆ ಹಿಂಜರಿಕೆ ಜಿಗುಪ್ಸೆಯೂ ಅವರಿಗಿತ್ತು. ಶಿಶುನಾಳರ ಈ ಪ್ರತಿಕ್ರಿಯೆಯು, ಕೈಗಾರಿಕೀಕರಣದ ಆರಂಭದ ಹಂತದಲ್ಲಿ ನವೋದಯ ಸಾಹಿತಿಗಳಿಗಿದ್ದ ವಿದೇಶೀ ಮೂಲದ ತಂತ್ರಜ್ಞಾನ ಸಂಸ್ಕೃತಿಯ ವಿರುದ್ಧ ಸ್ವದೇಶೀ ಅಭಿಮಾನ ಒಂದೆಡೆ ಮತ್ತು ಕೈಗಾರಿಕೀಕರಣದ ಸ್ವಾಗತ, ಕುತೂಹಲ ಇನ್ನೊಂದೆಡೆ–ಈ ಎರಡನ್ನೂ ಪ್ರತಿಬಿಂಬಿಸುತ್ತದೆ ಮಾತ್ರವಲ್ಲದೆ, ಆಧುನಿಕೋತ್ತರ ಬುದ್ಧಿಜೀವಿಗಳಿಗೆ ತಾಂತ್ರಿಕತೆಯ ಬಗ್ಗೆ ಒಟ್ಟೊಟ್ಟಗೇ ಇರುವ ಹಂಬಲ ಮತ್ತು ನಿರಾಕರಣೆಯನ್ನೂ ಪ್ರತಿನಿಧಿಸುತ್ತದೆ.

ನವೋದಯ ಕಾಲದ ಗಣ್ಯರಲ್ಲಿ ಮುಖ್ಯರಾಗಿ ಕುವೆಂಪು–ಕಾರಂತ–ಮಾಸ್ತಿಯವರಲ್ಲಿ ಈ ಜಾಡನ್ನು ನಿಖರವಾಗಿ ಗುರುತಿಸಬಹುದು. ಬೇಂದ್ರೆಯವರಲ್ಲಿ ಮಾತ್ರ ಈ ಜಾಡು ಪ್ರಧಾನವಾಹಿನಿಯಾಗಿ ವ್ಯಕ್ತವಾಗುವುದಿಲ್ಲ. ಪು. ತಿ. ನರಸಿಂಹಾಚಾರ್ಯರು ಮತ್ತು ನವ್ಯದ ಚಂದ್ರಶೇಖರ ಕಂಬಾರರು ಆಧುನಿಕತೆಯ ಸ್ವೀಕಾರಕ್ಕಿಂತ ಹಳೆಯ ಸ್ಮೃತಿಗೆನೇ ಹೆಚ್ಚು ಒತ್ತು ಕೊಟ್ಟಂತೆ ಕಾಣುತ್ತದೆ. ಆದರೆ ನವ್ಯರಲ್ಲಿ ಪ್ರಮುಖರಾದ ಲಂಕೇಶ್, ಅನಂತಮೂರ್ತಿಯವರಲ್ಲಿ ಈ ಆಕರ್ಷಣೆ–ಜಿಗುಪ್ಸೆಯ ದ್ವಂದ್ವವನ್ನು ಸ್ಪಷ್ಟವಾಗಿ ಕಾಣುತ್ತೇವೆ.

ಕಾರಂತ–ಪುಟ್ಟಪ್ಪನವರು ತಮ್ಮ ಈ ದ್ವಂದ್ವವನ್ನು ಅನೇಕ ಬಾರಿ ಹಳ್ಳಿ ಜನರ ವ್ಯಕ್ತಿ ಚಿತ್ರಗಳ ಮೂಲಕ ಪ್ರತಿಬಿಂಬಿಸಿದರು. ಕಾದಂಬರಿಗಳ ಮೂಲಕ ಸೃಷ್ಟಿಸಿದರು. ನಿಯೋಕಲ್ಚರಲ್ ಡಾಮಿನೆನ್ಸ್‌ನಲ್ಲಿ ಪೇಟೆಯು ಒಂದು 'ಆರ್ಕಿಟೈಪ್' ಆಗುತ್ತಾ ಹೋಗುವಾಗ, ಪೇಟೆಯಿಂದ ಪ್ರಭಾವಿತನಾದ ಒಬ್ಬ ಸೂಕ್ಷ್ಮ ಮನಸ್ಸಿನ ವ್ಯಕ್ತಿ ಹಳ್ಳಿಯನ್ನು ಮತ್ತು ಹಳ್ಳಿಯವನನ್ನು ನೋಡುವ ಕ್ರಮದಲ್ಲೇ ಆತ್ಮವಿಮರ್ಶೆಯ ಅಂಶಗಳನ್ನು ಕಾಣಬಹುದು.

ಸಹಜ ಸೌಂದರ್ಯಾನುಭೂತಿ :

ಕುವೆಂಪು ಅವರು ನವೋದಯುದವರೆಲ್ಲರಿಗಿಂತ, ಕಾರಂತರಿಗಿಂತಲೂ ವಿಶಿಷ್ಟರಾಗಿ ನಿಲ್ಲುವುದು ಕೆಳಸ್ತರದ ಜೀವನದ ಬಗ್ಗೆ ಅವರಿಗಿರುವ ಕಾಳಜಿಯಿಂದ. ಸಮಾಜದ ಕೆಳಸ್ತರದ ಬದುಕಿನ ಬಗ್ಗೆ ಕುವೆಂಪು ಅವರಿಗೆ ಕಾರಂತರಿಗಿಂತಲೂ ಹೆಚ್ಚು 'ಅಥೆಂಟಿಕ್' ಆಗಿ ಗೊತ್ತಿತ್ತು. ಆದರೆ ಕಾರಂತರು ನವೋದಯ ಕಾಲದ ಇತರ ಅಸಾಮಾನ್ಯರಿಗಿಂತ ವಿಶಿಷ್ಟರಾಗುವುದು, ಯಾವ ಆದರ್ಶದ ಕಡೆಯೂ ವಾಲದೆ, ಅನುಭವಜನ್ಯ ಕಟು ವಾಸ್ತವವನ್ನು ಚಿತ್ರಿಸುವ ಅವರ ನೈಜ ಬರಹದ ಮೂಲಕ. ಬದುಕಿನ ಮೂಲಭೂತ ಪ್ರವೃತ್ತಿಗಳನ್ನು ಹಾಗಾಗೇ ಶೋಧಿಸುವುದರಲ್ಲೇ ಆಸಕ್ತರಾದ ಕಾರಂತರು, ಆದರ್ಶವನ್ನೇ ನಿಜವೆಂದು ಭ್ರಮಿಸಿಕೊಂಡು ದಿನನಿತ್ಯದ ಬದುಕಿಗೆ ಸ್ಪಂದಿಸದ ಕಾಲದ ರಾಷ್ಟ್ರೀಯವಾದಿಗಳಿಗಿಂತ ಭಿನ್ನರಾಗಿದ್ದರು.

ನವೋದಯುದ ಕಾಲವೇ ಆದರ್ಶಗಳ ಕಾಲ. ಆದರ್ಶವು ಅನೇಕ ಬಾರಿ ಭಾವತೀವ್ರತೆಯಿಂದ ಸತ್ಯದರ್ಶನದ ವಿಭಿನ್ನ ಮುಗ್ಗಲುಗಳನ್ನು ಹೊಳೆಯಿಸದೆ ಹೋಗಿಬಿಡುವ ಸಂಭವವಿದೆ. ಕಾರಂತರಿಗೆ ಅನುಭವಗಳು ಬಾಹ್ಯ ಇಂದ್ರಿಯಗಳ ಮೂಲಕ ನೇರವಾಗಿ ಸಾಕಾರಗೊಳ್ಳುವುದು ಮುಖ್ಯ. ಹಾಗಾಗಿ ಅವರು ಬಹಿರ್ಮುಖರು ಎಂಬ ಅಪವಾದವೂ ಅವರ ಮೇಲಿದೆ. ಅವರು ಮನುಷ್ಯನ ಸತ್ವಕ್ಕೆ ತಟ್ಟುವ ಅನುಭಾವೀ ಆಧ್ಯಾತ್ಮಿಕ, ಧಾರ್ಮಿಕ ಅಂತರ್‌ದರ್ಶನಗಳಿಗೆ ಅಷ್ಟಾಗಿ ಮಹತ್ವ ಕೊಡುವುದಿಲ್ಲ. ಹಿಂದೂ ಧರ್ಮದ ಮುಖ್ಯ ಸಂಗತಿಗಳಾದ ಕರ್ಮ–ಪ್ರಾರಬ್ಧಗಳನ್ನು ವ್ಯಾಖ್ಯಾನಿಸುತ್ತಾ ಕಾರಂತರು, ಪಾವರ್ಟಿ ಈಸ್ ಎ ಕಲೆಕ್ಟೀವ್ ಇವಿಲ್ ಎಂದು ಕೆಯಿನ್ಸ್ ಹೇಳುವಂತೆ, ಕರ್ಮ–ಪ್ರಾರಬ್ಧಗಳು ಒಟ್ಟು ಸಮಾಜಕ್ಕೆ ಅನ್ವಯಿಸುತ್ತದೆಯೇ ವಿನಾ ಪ್ರತ್ಯಪ್ರತ್ಯೇಕ ವ್ಯಕ್ತಿಗತವಾಗಿ ಅಲ್ಲ ಎಂದು ಹೇಳುತ್ತಾರೆ. ಕಾರಂತರ ಪ್ರತಿಭೆ ಮೂಲತಃ ಸಾಮಾಜಿಕ ನೆಲೆಯಿಂದ ಪುಟಿಯುವುದರಿಂದ ಅವರಿಗೆ ಮನುಷ್ಯನ ವ್ಯಕ್ತಿತ್ವ, ಬಾಳು, ಸುಖ–ದುಃಖಗಳೇ ಮಹತ್ವದ್ದಾಗುತ್ತದೆ. ಅನುಭಾವ–ಆಧ್ಯಾತ್ಮಿಕತೆ–ನಿಗೂಢಗಳು ಸಂದೇಹಾಸ್ಪದ ವಿಷಯಗಳಾಗುತ್ತವೆ. ಕುವೆಂಪು ಈ ದೃಷ್ಟಿಯಲ್ಲಿ ಕಾರಂತರಿಗಿಂತ ಭಿನ್ನರು. ಅವರಿಗೆ ಜೀವನದ ಆಧ್ಯಾತ್ಮಿಕ ಆಯಾಮದ ಬಗ್ಗೆ ಕುತೂಹಲವಿದೆ. ಅಗಮ್ಯದ ಬಗ್ಗೆ ಚಿಂತನೆಯಿದೆ. ಕುವೆಂಪುರವರದ್ದು ಹಾಗಾಗಿ ಸಮಾಧಾನದಬರವಣಿಗೆ. ಕಾರಂತರಿಗೆ ತನ್ನ ಬೃಹತ್ತಾದ 'ಕ್ಯಾನ್‌ವಾಸ್'ನಲ್ಲಿ ಅಷ್ಟಕ್ಕೆಲ್ಲ ಪುರುಸೊತ್ತು ಇಲ್ಲ. ವಿಭೂತಿ–ಸೌಂದರ್ಯಾನುಭೂತಿಯನ್ನು ದೇವಾಲಯಗಳಿಗಿಂತ ಹೆಚ್ಚು ನಿಸರ್ಗದ ಮಡಿಲಲ್ಲಿ ಕಂಡಿದ್ದೇನೆ ಎನ್ನುವ ಕಾರಂತರು ಮೆಚ್ಚುವುದು, ಧಾರ್ಮಿಕ–ಆಧ್ಯಾತ್ಮಿಕ ಆಟಾಟೋಪವಿಲ್ಲದ ಸಹಜ ಬದುಕನ್ನು. ಅಲ್ಲಿ ದುಡಿಮೆಗೆ ಹೆಚ್ಚು ಪ್ರಾಶಸ್ತ್ಯ. ಪ್ರಕೃತಿಯ ಜತೆ ಸಾಮರಸ್ಯದ ಸಹಜ ಜೀವನಕ್ಕೆ, ಸಾಮಾನ್ಯ ಜನರ ಅಸಮಾನ್ಯ ಜೀವನ ಕ್ರಮಕ್ಕೆ ಕಾರಾಂತರು ಸಾರ್ಥಕ ಅಭಿವ್ಯಕ್ತಿಯನ್ನು ಕೊಡುತ್ತಾರೆ. ಸಮಾಜ ರಚನೆಯ ಪ್ರಮುಖ ಘಟಕವಾದ

ಸಾಂಸಾರಿಕ ಜೀವನದ ಸೌಂದರ್ಯಾನುಭೂತಿ, ಬಗ್ಗೆ ಕಾರಂತರಿಗೆ ಇರುವ ಗೌರವ ಅವರ ಬಹುತೇಕ ಕಾದಂಬರಿಗಳಲ್ಲಿ ಎದ್ದು ಕಾಣುತ್ತದೆ.

ವಾಸ್ತವದ ಬದುಕು :

ಪ್ರಾಮಾಣಿಕತೆ ಕಾರಂತರ ಬರವಣಿಗೆಯ ಮೂಲ ವೈಶಿಷ್ಟ್ಯವಾದ್ದರಿಂದ ಅವರ ಭಾಷೆಯಲ್ಲಿ ಆಡಂಬರ-ಅಬ್ಬರಗಳು ಕಾಣುವುದಿಲ್ಲ; ಅಲ್ಲದೆ, ತನ್ನ ಅನುಭವದ ನುಡಿಗಳನ್ನು ನೇರವಾಗಿ ಹೇಳುವ ಬಗ್ಗೆ ಅವರಿಗೆ ಹಿಂಜರಿಕೆಯಿಲ್ಲ. ಪ್ರೀತಿ-ಸಿಟ್ಟು-ಆಸಕ್ತಿಗಳಿಲ್ಲದ ಜಾಳು ಜಾಳಾದ ನೀರಸ ಬದುಕನ್ನು ಅವರು ನಿರಾಕರಿಸುತ್ತಾರೆ. ಹಾಗಾಗಿ, ಕಾರಂತರಷ್ಟು ಗಾಢವಾಗಿ ನಮ್ಮ ಪ್ರದೇಶದ ಜನಜೀವನವನ್ನು ಪ್ರೀತಿ-ಕುತೂಹಲಗಳಿಂದ ನೋಡಿದ ಇನ್ನೊಬ್ಬ ಕನ್ನಡ ಲೇಖಕ ಇಲ್ಲವೆಂದೇ ಹೇಳಬಹುದು. ಜೀವನದಲ್ಲಿ ಎಂದೂ ಹಿಂದೆ ನೋಡದ ಕಾರಂತರು ಜಿಂಕೆಯಂತೆ ಒಂದು ರೀತಿಯಲ್ಲಿ ಭೂತವನ್ನು ಅಲ್ಲಗಳೆಯುತ್ತಾರೆ. 'ಈಗ', 'ಇಲ್ಲಿ' 'ಏನು' ಎಂಬುದು ಅವರಿಗೆ ಮುಖ್ಯವಾಗಿಬಿಡುತ್ತದೆ.

ಮನುಷ್ಯ ಮತ್ತು ಆತನ ಬದುಕು ಅವರ ಪ್ರಥಮ ಆಸಕ್ತಿ. ಹಾಗಾಗಿ ಅವರ ಬಹುತೇಕ ಕಾದಂಬರಿಗಳು ಸಮಾಜ ಶಾಸ್ತ್ರೀಯ 'ಥೀಸಿಸ್'ಗಳಂತೆ ಕಾಣುತ್ತವೆ. ಅವರ ಸಾಹಿತ್ಯೇತರ ಆಸಕ್ತಿಗಳಲ್ಲಿ ಕೂಡ, ಸಮಾಜ ಶಾಸ್ತ್ರ, ಸಾಮಾಜಿಕ ಮಾನವಶಾಸ್ತ್ರಗಳ ಬಗ್ಗೆ ಕಾರಂತರಿಗಿರುವ ಒಲವು ವ್ಯಕ್ತವಾಗುತ್ತದೆ; ಸಂಶೋಧನಾತ್ಮಕ ಮನೋಭಾವ ಕಾಣುತ್ತದೆ. ವಾಸ್ತವ್ಯದ ಚಿತ್ರಣವನ್ ಕಾರಂತರು ತನ್ನ ಅನುಭವದ ಪಾತಳಿಯಿಂ ಹೊರನೂಕುತ್ತ ಬರೆಯುತ್ತಾರೆ. ಅ ಪ್ರಜ್ಞಾಪೂರ್ವಕವಾಗಿ ತಾನು ಆಯ್ ಮಾಡಿದ, ಆದರ್ಶ ಮೌಲ್ಯಗಳನ್ನು ಹೊ ಪಾತ್ರಗಳ ಸೃಷ್ಟಿ ಕಡಿಮೆ. ಕುವೆಂಪು ಸೃ ಸಿದ ಹೂವಯ್ಯನಂತಹ ಆದರ್ಶ ಪಾತ್ರಗ ಚಿತ್ರಣಗಳು ವಿರಳವೆಂದೇ ಹೇಳಬಹುದ ಕಾರಂತರು ಹೀರೋಗಳನ್ನು ಚಿತ್ರಸಲಿ ಹೋಗಲಿಲ್ಲ. ರಾಮರಾವ್, ರಾಮಐತಾಳ ಮೊದಲಾದವರು ಮಣ್ಣಿನ ಸಹ ಮನುಷ್ಯರೇ. ರಾಮಐತಾಳರಲ್ಲಿ ಕ್ರಾಂ ಕಾಣುತ್ತದೆ. ಆದರೆ ಆದರ್ಶ ಹೀರೋ ಲಕ್ಷಣ ಕಾಣುವುದಿಲ್ಲ. ಕನ್ನಡದ ಇನ್ನೊಂದ ಶ್ರೇಷ್ಠ ಕಾದಂಬರಿಯಾದ ಗ್ರಾಮಾಯ ದಲ್ಲೂ ರಾವ್ ಬಹದ್ದೂರ್ ಅವರು ಹೀರೋ ವನ್ನು ಸೃಷ್ಟಿಸಿಲ್ಲ ಎಂಬುದನ್ನು ಗಮನಿ ಬಹುದು.

ಮೌಲ್ಯಗಳ ಬಗ್ಗೆ ಸಹಜ ನಿರ್ಲಿಪ್ತ ಯನ್ನು ವಹಿಸುವ ಕಾರಂತರು ಕುಡುಕು ವನ್ನು ಕೂಡ ತಟಸ್ಥರಾಗಿ ಹೇಳಬ ತ್ತಾರೆ. ಗಂಡು-ಹೆಣ್ಣಿನ ಆದರ್ಶ ಪ್ರಣಯ ಒಲವುಗಳನ್ನು ಕೇಂದ್ರವಾಗಿಟ್ಟುಕೊಂ ಅವರು ಕಾದಂಬರಿಯನ್ನು ಹೆಣೆದು ಕಡಿಮೆ, ಕೌಟುಂಬಿಕ ಮೌಲ್ಯಗ ಮಹತ್ವ ಕೊಡುವ ಕಾರಂತರು, ಸಾಂಸಾ ಚೌಕಟ್ಟಿನೊಳಗೇ ಗಂಡು-ಹೆಣ್ಣಿನ ಪ್ರೇ ವಾತ್ಸಲ್ಯಗಳನ್ನು ಚಿತ್ರಿಸುತ್ತಾರೆ. ಕಾರಂ ಒಟ್ಟು ಮನೋಭಾವದಲ್ಲೇ ಭಾವಕ್ ಬುದ್ಧಿಗೆ ಜಾಸ್ತಿ ಒತ್ತು ಕಾಣುತ್ತ ಹಾಗಾಗಿ ಅವರ ಇತರ ಬೌದ್ಧಿಕ ಬರವ ಗಳಂತೆ ಕಾದಂಬರಿಗಳಲ್ಲೂ ಕ

ಭಾವಕ್ಕಿಂತ ಬೌದ್ಧಿಕತೆ ಹೆಚ್ಚು ಕೆಲಸ ಮಾಡುತ್ತದೆ. ಈ ಬೌದ್ಧಿಕ ಎಚ್ಚರದಿಂದಾಗಿ ಕಾರಂತರು ಮಾತಿನಲ್ಲಿ ಎಲ್ಲೂ ತೇಲಿಹೋಗುವುದಿಲ್ಲ. ಪರಮಹಂಸ-ಗಾಂಧಿ ಮುಂತಾದವರಿಂದ ತನ್ನ ಜೀವನದ ಒಂದು ಕಾಲಘಟ್ಟದಲ್ಲಿ ಪ್ರಭಾವಿತರಾಗಿ, ಸೋಶಲಿಸ್ಟ್ ಆಗಿ, ಖಾದಿ ಚಳುವಳಿಯಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದವರಾದರೂ ಕೂಡ ಕೊನೆಯಲ್ಲಿ ಯಾವುದನ್ನೂ ಅಂತಿಮವಾಗಿ ಹಾಗಾಗೇ ಒಪ್ಪಿಕೊಳ್ಳದ, ಯಾವುದೊಂದು ಸಿದ್ಧಾಂತಕ್ಕೂ ಆತು ಬೀಳದ, ಅತ್ಯಂತ ಸ್ವತಂತ್ರ ಮನಸ್ಸು ಕಾರಂತರದ್ದು. ಸ್ವಾತಂತ್ರ್ಯ, ನಿರ್ಭಯತೆಯ ಮರಿ. ಕಾರಂತರು ನಿರ್ಭಯತೆಯ ಸಾಕಾರ ರೂಪ. ಹಾಗಾಗಿ 'ಮರಳಿ ಮಣ್ಣಿಗೆ' ಅಥವಾ ಇನ್ಯಾವುದೇ ಕಾದಂಬರಿಯ ಮೂಲಕ ಅವರ ನಿಲುವನ್ನು ವ್ಯಾಖ್ಯಾನ ಮಾಡುವುದು ಕಷ್ಟ. ಮರಳಿ ಮಣ್ಣಿಗೆಯಲ್ಲಿ, ಪ್ರತಿ ೩೦-೪೦ ಪುಟಗಳಲ್ಲಿ ಅವರ ಕಥನ ಶೈಲಿ-ನಿಲುವುಗಳು ಬದಲಾಗುವುದನ್ನು ಗಮನಿಸಬಹುದು. ತನಗೆ ದಕ್ಕಿದ ಖಚಿತ ಅನುಭವದ ಆಧಾರದಲ್ಲೇ ಬರೆಯುವ ಹಠದಿಂದಾಗಿ, ಪರಂಪರೆ-ಆಧುನಿಕತೆಗಳ ಬಗ್ಗೆ ಕಾರಂತರಲ್ಲಿ 'ಆಂಬಿಗ್ಯುವಸ್' (ದ್ವಂದ್ವಾತ್ಮಕ) ಆದ 'ಆ್ಯಂಬಿವ್ಯಾಲಂಟ್' ಆದ ನಿಲುವುಗಳು ಕಾಣುತ್ತದೆ. ಹಳತರ ಪರಿಚಯ ಹಾಗೂ ಹೆಣಭಾರ ಮತ್ತು ಹೊಸತರ ಆಕರ್ಷಣೆ ಮತ್ತು ರಾಕ್ಷಸೀ ಸಾಧ್ಯತೆಗಳ ಬಗ್ಗೆ ಕಾರಂತರಿಗೆ ಎಚ್ಚರವಿತ್ತು, ಇದಕ್ಕೆ ಕಾರಣವಿದೆ. ಆ ಕಾಲದ ಮುಂದಿಗೆ ಆಧುನಿಕತೆ, ಕೈಗಾರೀಕರಣಗಳು ವಸಾಹತುಶಾಹೀ ಬ್ರಿಟಿಷರ ಮುಖಾಂತರ ಪರಿಚಯವಾಯಿತು. ಹಾಗಾಗಿ, ತಂತ್ರಜ್ಞಾನದ ಮೂಲಕ ಬ್ರಿಟಿಷರು ಭಾರತವನ್ನು ಶೋಷಿಸಿದ ರೀತಿಯ ಬಗ್ಗೆ ನವೋದಯದ ಅಂದಿನ ಅನೇಕ ಪ್ರಮುಖ ಲೇಖಕರಿಗೆ ತಿರಸ್ಕಾರವಿತ್ತು. ಗಾಂಧಿ-ನೆಹರೂ-ಠಾಗೋರರಂಥವರಿಗೂ, ಈ ತಿರಸ್ಕಾರವಿತ್ತು. ಆದರೆ ಇಂದು ನಮಗೆ ಅಮೆರಿಕಾದ ಮೂಲಕ ಬರುವ ಆಧುನಿಕತೆಯ ಬಗ್ಗೆ ಎಚ್ಚರದ ವಿಮರ್ಶೆಯೇ ಇಲ್ಲದ ಆರಾಧನಾ ಮನೋಭಾವ ಇದೆ. ಕಾರಣ, ನಾವು ಅಮೆರಿಕಾದಿಂದ ನೇರವಾಗಿ ಕಣ್ಣಿಗೆ ಕಾಣುವ ರೀತಿಯಲ್ಲಿ ಪೀಡಿಸಿಕೊಂಡಿಲ್ಲ. ಹಾಗಾಗಿ ನಮಗೆ ಅಮೇರಿಕಾದಲ್ಲಿದ್ದ ಎ.ಕೆ. ರಾಮಾನುಜನ್, ಹಾರ್ವರ್ಡ್ ವಿಶ್ವವಿದ್ಯಾಲಯದ ಶ್ರೇಷ್ಠತೆ, ಅಮೆರಿಕಾದ ತಂತ್ರಜ್ಞಾನದ ಹಿರಿಮೆಗಳ ಬಗ್ಗೆ ಗೌರವ, ಬೆರಗು ಇದೆ. ಇಂದಿನ ಜಾಗತೀಕರಣ ಮಂತ್ರವನ್ನು ಕೂಡ ಯಾವೊಂದೂ ವಿಮರ್ಶೆಯೂ ಇಲ್ಲದೆ ನಾವು ಒಪ್ಪಿಕೊಂಡು ಬಿಡುತ್ತೇವೆ.

ಮೌಲ್ಯಗಳ ದ್ವಂದ್ವ:

ಕಾರಂತರ ಒಟ್ಟು ಬರವಣಿಗೆಯನ್ನು ಗಮನಿಸುವಾಗ, ಅವರ ಬಹಿರ್ಮುಖತೆಯ ಕೆಲವೊಂದು ಮಿತಿಗಳ ಅರಿವು ನಮಗಾಗದಿರದು. ಅನೇಕ ವಿಷಯಗಳನ್ನು ಅವರು ನೇರ ರೇಖೆಯಲ್ಲಿ ನೋಡುವ ಮೂಲಕ ಸರಳೀಕರಣ ಮಾಡಿ ಬಿಡುತ್ತಾರೋ ಎಂಬ ಅನುಮಾನ ಬರುತ್ತದೆ. ತಾನು ಸ್ವತಃ 'ಪ್ಯೂರಿಟಾನಿಸ್ಟ್' ಆಗಿ ನೀತಿನಿಷ್ಠರಾಗಿ ಸಾಮಾಜಿಕ ಶಿಸ್ತು, ಆರ್ಥಿಕ ಶಿಸ್ತನ್ನು

ಚಾಚೂ ತಪ್ಪದೆ ಅನುಸರಿಸುವ ಅಪ್ಪಟ ಮನುಷ್ಯ. ನೈತಿಕ ತತ್ತ್ವಗಳಿಗೆ ಬಹಳ ಮಹತ್ವ ಕೊಡುವವರು. ಆದರೆ ಈ ಔಪಚಾರಿಕ ನೈತಿಕ ತತ್ವದ ಆಂತರ್ಯದಲ್ಲಿ ಹುದುಗಿರುವ ಸಂಕೀರ್ಣ ಮನಸ್ಸನ್ನು ಗ್ರಹಿಸುವ ಬಗ್ಗೆ ಈ ಔಪಚಾರಿಕ ನೈತಿಕತೆಯ ಹಿಂದಿರುವ ಕ್ರೂರತೆಯ ಬಗ್ಗೆ ಅಷ್ಟೊಂದು ಗಮನಹರಿಸುವ ವ್ಯವಧಾನ ತೋರಿಸಿಲ್ಲ ಅಂತ ಅನ್ನಿಸುತ್ತದೆ. ಯಾಕೆಂದರೆ, ಔಪಚಾರಿಕ ನೈತಿಕತೆಯ ಸೋಗನ್ನು ಶಿಷ್ಟ ಸಮಾಜದಲ್ಲಿ ಬಹಳಷ್ಟು ಕಾಣುತ್ತೇವೆ. ಅದರ ಹಿಂದೆಯಿರುವ ಆಷಾಢಭೂತಿತನ ಮತ್ತು ಮಾನಸಿಕ ಹೊರೆಯನ್ನು ನಾವು ನಿರ್ಲಕ್ಷಿಸುತ್ತೇವೆ. ಪ್ರಾಮಾಣಿಕತೆ, ಸತ್ಯ ಸರಳಜೀವನ, ದುಡಿಮೆ, ಋಣಭಾವದ ಬಗ್ಗೆ ಅಲ್ಲಲ್ಲಿ ಕಾರಂತರು ಉಲ್ಲೆಖಿಸುತ್ತಾರೆ. ಇಂದಿನ ಸಂಕೀರ್ಣ ಆರ್ಥಿಕ ಪ್ರಕ್ರಿಯೆಯ ಬಗ್ಗೆ ಕಾರಂತರ ಪರಿಹಾರಗಳು ಸರಳೀಕೃತವಾದುದು. ವ್ಯಕ್ತಿಗತ ಗುಣಮಟ್ಟಕ್ಕೆ ಅತಿ ಒತ್ತು ಕೊಡುವ ಕಾರಂತರು "ಮೊದಲು ಎಲ್ಲರೂ ದುಡಿಯಬೇಕು, ದುಡಿದು ಉತ್ಪಾದನೆ ಜಾಸ್ತಿ ಆದರೆ ಅಲ್ಲವೇ ಪಾಲು ಮಾಡುವ ಕೆಲಸ. ಕೆಲಸಗಾರರು, ಸೋಮಾರಿಗಳು, ಸಂಘಟನೆಯ ಬಲದಿಂದ ದುಡಿಮೆಗೆ ಮೀರಿ ವೇತನ ಕೇಳುತ್ತಾರೆ. ಕರ್ತವ್ಯ ಬಿಟ್ಟು ಹಕ್ಕುಗಳ ಬಗ್ಗೆಯೇ ಜಾಗೃತರು" ಮುಂತಾಗಿ ದುಡಿಯುವ ವರ್ಗದ ದುರ್ಗುಣಗಳ ಬಗ್ಗೆ ಕಾರಂತರು ಉಲ್ಲೇಖಿಸುತ್ತಾರೆ. ಈ ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೂಲಿಗಳ, ಮಹಿಳಾ ಕಾರ್ಮಿಕರ, ಬಾಲಕಾರ್ಮಿಕರ ಶೋಷಣೆ,
ದುಃಸ್ಥಿತಿಯ ಬಗ್ಗೆ ಕಾರಂತರು ಮಾತ
ಡಿದ್ದು ಕಡಿಮೆ. ಅಂಥ ವಿಚಾರದಲ್ಲಿ
ಯಾಥಾ ಸ್ಥಿತಿವಾದಿಯಂತೆ ಕಾಣು
ಕಾರಂತರು, ಹಲವುಬಾರಿ ಈ ಅಸಮಾ
ಸಮಾಜ ವ್ಯವಸ್ಥೆಯನ್ನು ಹಾಗಾಗೇ ಒಪ್ಪಿ
ಕೊಳ್ಳುತ್ತಾರೇ ಎಂಬ ಸಂಶಯ ಬರುತ್ತದೆ
ಗೇಣಿದಾರನಿಗೆ ಭೂಮಿಯ ಹಕ್ಕನ್ನು ಕಿತ್ತು
ಕೊಳ್ಳಲು ಏನು ಹಕ್ಕಿದೆ ಎಂದು ಸಾಂಪ್ರ
ದಾಯಿಕ ನ್ಯಾಯ ಕಲ್ಪನೆಯಿಂದ ಪ್ರಶ್ನಿ
ಸುವ ಕಾರಂತರು, ಭೂಸುಧಾರಣೆಯನ್ನ
ಪ್ರಶ್ನೆ ಮಾಡುವಂತಿದೆ. ಈ ಭೂಮಿಯ
ಹಂಚುವಿಕೆಯಲ್ಲಿ ಅಸಮಾನತೆ ಯಾ
ಬಂತು ಎಂದು ಪ್ರಶ್ನಿಸಿದ್ದು ಕಡಿಮೆ. ಅದ
ಈ ನೇರ ರೇಖೆಯ ಊರ್ಧ್ವ ಮುಖ
ಬೆಳವಣಿಗೆಯ ಜತೆ ಜತೆಯೇ ಅಥವಾ
ಮೊದಲೇ ಸಮಾನ ಹಂಚುವಿಕೆ, ಸಮಾ
ಸಾಮಾಜಿಕ ವ್ಯವಸ್ಥೆಯ ನಿರ್ಮಾಣ ಮತ್ತು
ಎಲ್ಲ ಸ್ತರಗಳಲ್ಲೂ ಆಯ್ಕೆಯ ಸ್ವಾತಂತ್ರ್ಯ
ಗಳಿಗೆ ಸರಿಸಮಾನ ಮಹತ್ವ ಕೊಡದಿದ್ದ
ಈ 'ಫ್ಯೂಡಲ್' ವ್ಯವಸ್ಥೆಯಲ್ಲಿ ಬೆಳವ
ಗೆಯ ಲಾಭವು ಉಳ್ಳವರಿಗೆ ಮಾತ್ರ ಸಲ್ಲು
ಹೋಗುತ್ತದೆ. ವರ್ಗ ವಿಷಮತೆ ಹೆ
ಅಗಾಧ ಜನಸ್ತೋಮ ಬಡತನದ ಕೂ
ದಲ್ಲಿ ನರಳುತ್ತಾರೆ. ಮಾತ್ರವಲ್ಲ ಒಟ್ಟು
ದೇಶವೇ ದುರ್ಬಲವಾಗುವ ಸಂಭವವಿ
ಈ ನಿಟ್ಟಿನಲ್ಲಿ ಕಾರಂತರ ಆರ್ಥಿಕ ಚಿಂತ
ಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅ
ಗಾಂಧೀಜಿಯ ಆರ್ಥಿಕ ಚಿಂತನೆಯ
ಸರಳೀಕೃತ ಮಾದರಿಯೆಂದು ಅನ್ನಿಸುತ್ತದೆ

ಕಾರಂತರ ರಾಜಕೀಯ-ಸಾಮಾಜಿ
ಸಿದ್ಧಾಂತಗಳೂ ಹಾಗೆ. ಔದ್ಯೋಗ

...ಕ್ರಾಂತಿಯಿಂದ ಬಂದ ವ್ಯಕ್ತಿನಿಷ್ಠವಾದ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡವರು ...ವರು. ನೀತಿನಿಷ್ಠರಾದ ಕಾರಂತರು ಪ್ರಚಲಿತ ಕಾನೂನು ವ್ಯವಸ್ಥೆಯ ವ್ಯಾಖ್ಯಾ...ವೇ ತನಗೆ ಮುಖ್ಯ ಎಂಬ ರೀತಿಯಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸು...ತ್ತಾರೆ. ಪ್ರಚಲಿತ ಶಿಷ್ಟ ಕಾನೂನು ಎಲ್ಲ ವರ್ಗಕ್ಕೂ ನ್ಯಾಯ ಒದಗಿಸಬಲ್ಲುದು ಎಂಬ ...ಕೋರ್ಟುಗಳ ಪರ 'ಅನ್‌ಕ್ರಿಟಿಕಲ್' ಧೋರಣೆಯನ್ನು ನಾವು ಅನೇಕ ಬಾರಿ ಅನುಮಾನ...ದಿಂದ ನೋಡಬೇಕಾಗುತ್ತದೆ. ಡಕಾಯಿತ...ರಾಣಿ ಫೂಲನ್ ದೇವಿಗೆ ಶಿಕ್ಷೆ ಕೊಡಲು ಆತುರದಿಂದಿರುವ ಈ ಶಿಷ್ಟ ಕಾನೂನು ವ್ಯವಸ್ಥೆ; ಅವಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಆಕೆ ಡಕಾಯಿತಳಾಗುವುದಕ್ಕೆ ಪರೋಕ್ಷವಾಗಿ ಕಾರಣರಾದ ...ಬರ್ಬರರ ಬಗ್ಗೆ ಚಕಾರ ಎತ್ತುವುದಿಲ್ಲ; ಮಾತ್ರವಲ್ಲ ಫೂಲನ್ ತರದ ಕೆಳವರ್ಗದ ಮಹಿಳೆಯರಿಗೆ ರಕ್ಷಣೆ ಕೊಡುವ ಬಗ್ಗೆ ಈ ಕಾನೂನು ವ್ಯವಸ್ಥೆ ಕಾಳಜಿ ವಹಿಸುವುದಿಲ್ಲ. ಶಿಷ್ಟ ಕಾನೂನಿಂದುದ್ಭವಿಸಬಹುದಾದ ವರ್ಗವಿಷಮತೆ-ಅಸಮಾನತೆಯ ಶೋಷಣೆಯ ಮುಗ್ಗುಲನ್ನು ನಾವು ಬಹಳ ಸೂಕ್ಷ್ಮವಾಗಿ ಗ್ರಹಿಸಬೇಕಾಗುತ್ತದೆ.

ಆದರೆ, ಕಾರಂತರ ವ್ಯಕ್ತಿತ್ವದ ಹರವು ಇಷ್ಟು ಸುಲಭದಲ್ಲಿ ನಮ್ಮ ವಿಶ್ಲೇಷಣೆಗೆ ಸಿಗುವಂಥದಲ್ಲ. ಕೆಲವೇ ಉದಾಹರಣೆಗಳಿಂದ ಅವರ ನಿಲುವನ್ನು ಸರಳೀಕರಿಸಲು ಸಾಧ್ಯವಿಲ್ಲ. ಅವರಲ್ಲಿ ಪ್ರತಿಗಾಮೀ ಮನೋಭಾವವಿಲ್ಲ. ಸಮಾಜ ಸುಧಾರಕರಾಗಿ, ಅನ್ಯಾಯದ ವಿರುದ್ಧ ಕ್ರಾಂತಿಕಾರರಾಗಿ ಕಾರಂತರು ತಾನೇ ಸ್ವತಃ ಬಹಳಷ್ಟು ಕೆಲಸ ಮಾಡಿದ್ದಾರೆ. ಕೆಲವು ದಶಕಗಳ ಹಿಂದೆಯೇ ಹರಿಜನರ ದುರಂತದ ಬಗ್ಗೆ ಬರೆದಿದ್ದಾರೆ. ದುರ್ಬಲರ, ಹೆಂಗಸರ, ಮುದುಕಿಯರ ಪರ ಅವರ ನಿಲುವುಗಳು ಅವರ ಬರಹಗಳಲ್ಲಿ ಸ್ಪಷ್ಟವಾಗುತ್ತದೆ. ಹಾಗಾದರೆ, ಅವರಲ್ಲಿ ಈ ದ್ವಂದ್ವ ಯಾಕೆ? ಪ್ರಾಯಃ ಕಾರಂತರು ಒಳನೋಟದಿಂದ, ನ್ಯಾಯ-ಅನ್ಯಾಯಗಳ ಸಂಕೀರ್ಣತೆಯನ್ನು ಸೂಕ್ಷ್ಮವಾಗಿ ಗಮನಿಸುವ ಸಮಾಧಾನ-ಧ್ಯಾನದ ಸ್ಥಿತಿಗೆ ಹೋಗದೆ, ಸಾಮಾಜಿಕವಾದ ಸರಳೀಕೃತ ಮೌಲ್ಯಗಳನ್ನೇ ನಂಬಿದ್ದರಿಂದಲೊ ಏನೊ. ಅಥವಾ ನೂರಾರು ಆಸಕ್ತಿಗಳಲ್ಲಿ ತನ್ನನ್ನು ತಾನು ತೀವ್ರವಾಗಿ ತೊಡಗಿಸಿಕೊಂಡದ್ದರಿಂದ ಬಂದ 'ಓವರ್ ಕಾನ್ಫಿಡೆನ್ಸ್' ಮತ್ತು ಹಠದಿಂದಲೋ ಏನೊ.

ಮಕ್ಕಳ ಶಿಕ್ಷಣದ ಬಗ್ಗೆ ಕಾರಂತರಷ್ಟು ಆಳವಾಗಿ ಚಿಂತಿಸಿದವರು ಪ್ರಾಯಃ ನಮ್ಮ ಸಾಹಿತ್ಯ ವಲಯದಲ್ಲಿ ಕಡಿಮೆ. ಮಕ್ಕಳ ಶಿಕ್ಷಣದಲ್ಲಿ ಸೃಜನಾತ್ಮಕ ಗುಣಮಟ್ಟವನ್ನು ಕಾಪಾಡುವ ಬಗ್ಗೆ ಅವರಲ್ಲಿ ಉತ್ಕಟ ಕಾಳಜಿ ಕಾಣುತ್ತದೆ. ಆದರೆ ಉನ್ನತ ಗುಣಮಟ್ಟದ ಶಿಕ್ಷಣ ಎಲ್ಲ ಸ್ತರಗಳಿಗೂ ಸಿಗುವ ರೀತಿಯಲ್ಲಿ ಸಮತಲದಲ್ಲಿ ಪಸರಿಸಿಕೊಳ್ಳುತ್ತ ಹೋಗಬೇಕು. ಕೇವಲ ಕೆಲವೇ ಮಂದಿಗೆ ಶ್ರೇಷ್ಠ ವಿದ್ಯಾಭ್ಯಾಸ ದಕ್ಕುವುದಕ್ಕಿಂತ, ಸ್ವಲ್ಪ ಕಡಿಮೆ ಗುಣಮಟ್ಟದಲ್ಲಾದರೂ ಸಮಸ್ತ ಜನಸಮುದಾಯಕ್ಕೆ ಶಿಕ್ಷಣ ಸೌಲಭ್ಯ ಲಭಿಸುವಂತಾಗಬೇಕು. ಇದು ದೇಶದ ಒಟ್ಟು ಬೌದ್ಧಿಕ ಶ್ರೀಮಂತಿಕೆಯನ್ನು ಹೆಚ್ಚಿಸುತ್ತದೆ, ಇಲ್ಲದಿದ್ದರೆ,

ಉತ್ಪಾದನಾ ಹೆಚ್ಚಳದ ಬಗ್ಗೆ ಕಾರಂತರಿಗೆ ಆಕರ್ಷಣೆಯಿದೆ. ಆದರೆ ಅದರ ಜತೆಗೆಯೇ ಕೈಗಾರಿಕೀಕರಣದ ವಿಧ್ವಂಸಕಾರೀ ಪರಿಣಾಮಗಳ ಮೇಲೆ ಸಿಟ್ಟೂ ಇದೆ. ಕಾರಂತರಿಗೆ ವಿಜ್ಞಾನ, ತಂತ್ರಜ್ಞಾನ ಮತ್ತು ಕೈಗಾರಿಕೀಕರಣಗಳ ವ್ಯತ್ಯಾಸಗೊತ್ತಿದೆ. ವಿಜ್ಞಾನದ ಬಗ್ಗೆ ಕುತೂಹಲ ತೋರಿಸುತ್ತಾರೆ. ಜತೆಗೆಯೇ ವಿಜ್ಞಾನದ ಮಾನವೀಕರಣದ ಬಗ್ಗೂ ಮಾತಾಡುತ್ತಾರೆ. ತಂತ್ರಜ್ಞಾನದ ರಾಕ್ಷಸ ಮುಖ ಮತ್ತು ವಿವೇಚನೆಯಿಲ್ಲದ ಒಟ್ಟಾರೆ ಬೆಳವಣಿಗೆಯು ಜೀವ ವಿರೋಧಿ–ಪ್ರಕೃತಿ ವಿರೋಧಿ ಆಗುವ ಸಾಧ್ಯತೆಗಳ ಬಗ್ಗೆ ಅವರಿಗೆ ಎಚ್ಚರವಿದೆ ಕೂಡ. ಪ್ರಾಕೃತಿಕ ಸಂಪತ್ತನ್ನು ಸೂರೆ ಮಾಡುವ ಪರಿಸರ ಮಾಲಿನ್ಯವನ್ನು ಹೆಚ್ಚಿಸುವ ಕೈಗಾರಿಕೆಯನ್ನು ಅವರು ವಿರೋಧಿಸುತ್ತಾರೆ. ಆದರೆ ಮನುಷ್ಯನ ಬದುಕನ್ನು ಶ್ರೀಮಂತಗೊಳಿಸುವ ಪರಿಸರದ ಜತೆ ಹೊಂದಿಕೊಳ್ಳುವ ಕೈಗಾರಿಕೆಗಳನ್ನು, ತಂತ್ರಜ್ಞಾನವನ್ನು ಸ್ವೀಕರಿಸುತ್ತಾರೆ. ತಾಂತ್ರಿಕ ಪ್ರಗತಿಯ ವಿವಿಧ ಹಂತಗಳ ಬಗ್ಗೆ ಚೆನ್ನಾಗಿ ತಿಳಿದಿರುವ ಕಾರಂತರು, ವಿಭಿನ್ನ ತಂತ್ರಜ್ಞಾನದ ಬಳಕೆಯಲ್ಲಿರುವ ವಿಭಿನ್ನ ಪರಿಣಾಮಗಳ ವ್ಯತ್ಯಾಸವನ್ನೂ ತಿಳಿದು, ಉತ್ಪಾದನಾ ವಿಧಾನ ಮತ್ತು ಉತ್ಪಾದನಾ ಪ್ರಕ್ರಿಯೆಗಳ ಸೂಕ್ಷ್ಮ ವಿಭಿನ್ನತೆಯನ್ನು ಗುರುತಿಸಿ, ತುಂಬ ಜವಾಬ್ದಾರಿಯಿಂದ ಪರಿಸರ ಚಳವಳಿಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದಾರೆ. ಹಾಗಾಗಿ ಕಾರಂತರ ಪರಿಸರದ ನಿಲುವು ಸಾರಾಸಗಟಾಗಿ ವಿಜ್ಞಾನವಿರೋಧಿ, ತಂತ್ರಜ್ಞಾನ ವಿರೋಧಿ, ಕೈಗಾರಿಕಾ ವಿರೋಧಿ ಆಗದೆ, ಪರಿಸರ ರಕ್ಷಣೆಯ ಅಖಂಡ ದೃಷ್ಟಿಯು
ಹೊಂದಿದ್ದು ಹೆಚ್ಚು ಆರೋಗ್ಯಪೂ
ವಾಗಿದೆ.

ಬತ್ತದ ಜೀವನೋತ್ಸಾಹ :

ತೊಂಭತ್ತೈದರ ವಯಸ್ಸಿನ
ಕೊನೆಯಕಾಲದವರೆಗೂ, ಕಾರಂ
ಜೀವನೋತ್ಸಾಹ ಬತ್ತಿಲ್ಲ, ಬದುಕ
ಹುಮ್ಮಸ್ಸು ಕುಗ್ಗಿಲ್ಲ, ಅನ್ಯಾಯದ ವಿರ
ಹೋರಾಡುವ ಕೆಚ್ಚು ಕಡಿಮೆ ಆಗಿಲ್ಲ.
ಪಕ್ಷಪಾತಿಯಾದ, ಹರಿತ ಲೇಖನ
ಕಾರಂತರು ಸಾಮಾಜಿಕವಾಗಿ ಕೊನೆ
ತನಕವೂ ಪ್ರಸ್ತುತರಾಗಿ ಉಳಿದರು. ಪರಿ
ನಾಶದ ಬಗ್ಗೆ ಕೊನೆಯತನಕವೂ ಕ
ಆವೇಶದಿಂದ ಮಾತಾಡುತ್ತಿದ್ದರು. ದೇ
ಯಾವ ಮೂಲೆಯಲ್ಲಿ ನಡೆಯುವ ಚಳ
ಯಲ್ಲೂ ಭಾಗವಹಿಸುತ್ತಿದ್ದರು.
ಕಾಲೀನ ಬದುಕಿಗೆ ಇರುವ ಅವರ ಸ್ಪಂ
ಮತ್ತು ಅವರಲ್ಲಿ ಉಕ್ಕುತ್ತಿದ್ದ ಅನುಕಂ
ಇವು ನಿದರ್ಶನಗಳು. ಸಾಮಾನ್ಯ ಜ
ಬದುಕಿನ ಬಗ್ಗೆ ಅಪಾರ ಅನುಕಂಪವ
ಕಾರಂತರು ಅನ್ಯಾಯ–ಅಕ್ರಮಗಳ
ಕಂಡಾಗ ಉಗ್ರವಾಗಿ ಪ್ರತಿಭಟಿಸುತ್ತಿದ್ದ
ಆದರೆ ಅವರ ಸಿಟ್ಟು ಸ್ವಾರ್ಥ, ಅಹಂ
ಗಳಿಂದ ಹುಟ್ಟಿದ್ದಲ್ಲ. ನ್ಯಾಯಪರತೆ–ಸ
ದಾರಿಯಿಂದ ಉದ್ಭವಿಸಿದ್ದು. ಪರರ
ಅನುಕಂಪದಿಂದ ಹುಟ್ಟಿದ್ದು. ದೇವ
ಪದ್ಧತಿಯ ಬಗ್ಗೆ ಅವರ ಹೋರಾ
ಪರಿಸರ ನಾಶದ ವಿರುದ್ಧ ಪ್ರತಿಭಟ
ಸಾಮಾನ್ಯ ಜನರಿಗೆ ಜ್ಞಾನ ಮುಟ್ಟಿಸ
ಸಲುವಾಗಿ ಬರೆದ ಮತ್ತು ಭಾಷಾ
ಸಿದ ವಿಜ್ಞಾನ, ಕಲೆ, ಸಂಗೀ

ಯಕ್ಷಗಾನ, ಗ್ರಂಥಗಳು, ಮಕ್ಕಳಿಗಾಗಿ ಬರೆದ ಪತ್ಯ ಪುಸ್ತಕಗಳು, ವಿಶ್ವಕೋಶಗಳು, ನಾಟಕಗಳು, ಹೋರಾಟಗಳು, ತಾಯಿಗಾಗಿ ಬರೆದ ಪರಮಹಂಸರ ಬಗೆಗಿನ ಪುಸ್ತಕ— ಇವೆಲ್ಲವೂ ಕಾರಂತರ ಗಾಢ ಅನುಕಂಪ, ಕನ್ನಡ ಜನರು ಬೌದ್ಧಿಕವಾಗಿ ಶ್ರೀಮಂತ ರಾಗಬೇಕೆಂಬ ಹಂಬಲವನ್ನು ತೋರಿಸುತ್ತದೆ. ಪರಿಸರ ಮಾಹಿತಿಯ ಬಗ್ಗೆ ಅನೇಕ ಇಂಗ್ಲಿಷ್ ಪುಸ್ತಕಗಳನ್ನು (ಸಿಟಿಜನ್ಸ್ ರಿಪ್ರೋರ್ಟ್ ಮುಂತಾದ) ಭಾಷಾಂತರಿಸಿದ್ದಾರೆ. ತನ್ನ ಕೊನೆಯ ಕಾಲದಲ್ಲಿ ಕನ್ನಡದ ಮಕ್ಕಳಿಗೆ ಪಕ್ಷಿಗಳ ಬಗ್ಗೆ ಒಳ್ಳೆಯ ಪುಸ್ತಕ ಇಲ್ಲ ಎಂಬುದನ್ನು ಮನಗಂಡ ಕಾರಂತರು ಮಕ್ಕಳಿಗಾಗಿ ಹಕ್ಕಿಗಳ ಸಚಿತ್ರ ವಿಶ್ವಕೋಶ ಬರೆಯುತ್ತಿದ್ದರು. ಈ ಕೆಲಸಗಳಲ್ಲೆಲ್ಲ ತನ್ನನ್ನು ತಾನು ತೊಡಗಿಸಿಕೊಳ್ಳುವಾಗ ಅವರಿಗೆ ಯಾವ ಸ್ವಪ್ರತಿಷ್ಠೆಯೂ ಆಡಂಬರವೂ ಇಲ್ಲ. "ಕನ್ನಡದಲ್ಲಿ ಒಳ್ಳೆಯ ಪುಸ್ತಕ ಇಲ್ಲ, ತಾನು ಕನ್ನಡ ಜನಕ್ಕೆ ಆ ಜ್ಞಾನ ಕೊಡಬೇಕು ಅಥವಾ ಭಾಷಾಂತರ ಮುಖಾಂತರ ದಾಟಿಸಬೇಕು"—ಇದಿಷ್ಟೇ ಅವರ ಕಾಳಜಿ ಆಗಿತ್ತು. ಅವರು ಜೀವನದಲ್ಲಿ ಮಾಡಿದ ಈ ಅಖಂಡ ಸಾಧನೆ, ಒಂದು ವಿಶ್ವವಿದ್ಯಾನಿಲಯದ ಅಕಾಡೆಮಿಯ ಹತ್ತಾರು ಜನ ಒಟ್ಟು ಸೇರಿ ಮಾಡುವ ಕೆಲಸಕ್ಕಿಂತ ಹೆಚ್ಚು. ಅವರು ಕೈಯಾಡಿಸಿದ ಕ್ಷೇತ್ರಗಳು ಒಂದಲ್ಲ, ಎರಡಲ್ಲ. ಟಿ.ವಿ., ಸಿನಿಮ ಮುಂತಾದ ಸಂವಹನ ಮಾಧ್ಯಮಗಳ ಹಾವಳಿ ಮತ್ತು ಇತರ ಉಪಭೋಗ ವಸ್ತುಗಳ ಆಕರ್ಷಣೆಗಳಿಂದ ಬದುಕೇ ಜಾಳುಜಾಳಾಗುತ್ತಾ, ಗಾಬರಿ ಪಡುವ ರೀತಿಯಲ್ಲಿ ಸಮಾಜದಲ್ಲಿ 'ಮೀಡಿಯಾ-ಕ್ರಿಟಿ'ಯ ವೇಗದಿಂದ ಪಸರಿಸುತ್ತಿರುವ ಈ ಕಾಲದಲ್ಲಿ, ಕಾರಂತರು ಮಾಡಿದ ಸಾಧನೆಯು ವಿಶಾಲ ಬೀಸು ಜನರನ್ನು ನಿಬ್ಬೆರಗುಗೊಳಿಸುವಂಥದು, ಮಾತ್ರವಲ್ಲ, ಮುಂದಿನ ಜನಾಂಗ 'ಇಷ್ಟೆಲ್ಲವನ್ನೂ ಒಬ್ಬ ಮನುಷ್ಯ ತನ್ನ ಜೀವಿತದಲ್ಲಿ ಸಾಧಿಸಲು ಸಾಧ್ಯವೇ' ಎಂದು ಆಶ್ಚರ್ಯ ಪಡುವಂಥದು.

ಸಮಾಜಶಾಸ್ತ್ರ ವಿದ್ವಾಂಸರಿಗೆ ಗ್ರಾಸ :

ಕೇವಲ ಸಾಹಿತ್ಯ, ಕೇವಲ ವಿಜ್ಞಾನ, ಕೇವಲ ಅರ್ಥಶಾಸ್ತ್ರಕ್ಕೆ ಸೀಮಿತರಾದ ವಿದ್ವಾಂಸರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಎಷ್ಟೇ ಮುಂದೆ ಹೋದರೂ, ಬದುಕಿನ ಬಗೆಗೆ ಸಮಗ್ರ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲಾರರು ಅಂತ ಅನ್ನಿಸುತ್ತದೆ. ಚಿಂತಕರಿಗೆ, 'ಇಂಟರ್ ಡಿಸಿಪ್ಲಿನರಿ ಎಪ್ರೋಚ್'ಬೇಕು ಎಂದು ಆಧುನಿಕೋತ್ತರ ಲೇಖಕರು ಅಭಿಪ್ರಾಯಪಡುತ್ತಾರೆ. ಆದರೆ ಕಾರಂತರು ಈ ಶತಮಾನದ ಆದಿಯ ನವೋದಯದ ಕಾಲದಲ್ಲೇ ಹತ್ತಾರು ಕ್ಷೇತ್ರಗಳಲ್ಲಿ ಕೈಯ್ಯಾಡಿಸಿದ್ದರಿಂದ ಅವರಿಗೆ ಸಾಹಿತ್ಯ ರಚನೆ ಸಮಾಜ ಶಾಸ್ತ್ರೀಯ ಅಧ್ಯಯನವೂ ಆಗಿ ಪರಿವರ್ತನೆ ಆಗಿದೆ. ಅಂತರ್ಶಿಸ್ತುಗಳ ನಡುವೆಯಿರುವ ಅಂತರ್ ಸಂಬಂಧ ಮತ್ತು ಅಂತರ್ ಪ್ರಭಾವಗಳ ಬಗ್ಗೆ ಅವರ ಅಂತರ್ಯದಲ್ಲಿದ್ದ ಒಟ್ಟಂದದ ದೃಷ್ಟಿಯೇ ವಿಭಿನ್ನ ಕ್ಷೇತ್ರಗಳ ಬಗೆಗಿನ ಅವರ ಆಸಕ್ತಿಗೆ ಪ್ರೇರಕ ಶಕ್ತಿ ಎನ್ನಬಹುದು. ಆದಕ್ಕೇ ಅವರು ತನ್ನ ಜೀವನದ ಕೊನೆಯ ಕಾಲದಲ್ಲಿ 'ತಾನು ಸಾಹಿತಿ ಅಲ್ಲ, ಒಬ್ಬ ಸಮಾಜಶಾಸ್ತ್ರ ವಿದ್ಯಾರ್ಥಿ' ಅಂತ ತನ್ನನ್ನು

ತಾನೇ ಗುರುತಿಸಿಕೊಳ್ಳುತ್ತಿದ್ದರು. ಅವರ ಕಾದಂಬರಿಗಳು ಕರಾವಳಿ ಕರ್ನಾಟಕ ಮತ್ತು ಮಲೆನಾಡಿನ ಪ್ರಾದೇಶಿಕ ಬದುಕಿನ ಸಮಾಜ ಶಾಸ್ತ್ರೀಯ ಅಧ್ಯಯನಕ್ಕೆ ಮುಂದಿನ ಪೀಳಿಗೆಗೆ ಆಕರ ಗ್ರಂಥಗಳಾಗಬಹುದು, ಎನ್ನುವುದೂ ಅಷ್ಟೇ ಸತ್ಯ.

ಕಾರಂತರ ಕಾದಂಬರಿಗಳ ತುಲನಾತ್ಮಕ ವಿಮರ್ಶೆಯನ್ನು ಸಾಹಿತ್ಯ ವಿಮರ್ಶಕರ ಜತೆ, ಇತರ ಕ್ಷೇತ್ರದ ವಿದ್ವಾಂಸರು, ಮುಖ್ಯವಾಗಿ ಸಮಾಜಶಾಸ್ತ್ರದ ವಿದ್ವಾಂಸರು ಕೈಗೊಳ್ಳುವ ಅಗತ್ಯವಿದೆ. ಈ ರೀತಿಯ ಅಧ್ಯಯನ ಕ್ರಮದಿಂದ ಕಾರಂತರ ಬರಹಗಳ ಬಗ್ಗೆ ಹೊಸ ವ್ಯಾಖ್ಯೆಯೇ ಮೂಡಬಹುದು. ಆದರೆ ಕಾರಂತರು ಯಾವ ವಿದ್ವಾಂಸರ, ಸಾಹಿತಿಗಳ ವಿಶ್ಲೇಷಣೆಗೂ ಸಿಗದ ಈ ಭೂಮಿಯಲ್ಲಿ ಜೀವಿಸಿದಷ್ಟು ದಿನ ಇಂತಹ ಬಾಳನ್ನು ಉತ್ಕಟವಾಗಿ ಪ್ರೀತಿಸುತ್ತಾ, ಉಲ್ಲಾಸದಿಂದ ಕೊನೆಯ ತನಕವೂ ಬದುಕಿದ ಒಬ್ಬ ಅಪರೂಪದ ಜೀವಂತ ಮನುಷ್ಯ.

ಕಾರಂತರು ಕಾದಂಬರಿಗಳನ್ನು ರಚಿಸಿದ್ದಾರೆ; ವ್ಯಕ್ತಿಚಿತ್ರ ಜೀವನ ವಿಮರ್ಶೆಗಳನ್ನು ಮಾಡಿದ್ದಾರೆ. ಇದೆಲ್ಲದರಲ್ಲೂ ಅವರ ದೃಷ್ಟಿ ಆಳವಾದ್ದು ; ಪ್ರಾಮಾಣಿಕವಾದ್ದು, ಸತ್ವಶಃ ಭಾರತ ಮೂಲ ಸಂಪ್ರದಾಯದಲ್ಲಿ ಬೇರೂರಿದ್ದು, ಇತರರ ಕಣ್ಣಿಗೆ ಬೀಳುವುದಕ್ಕಿಂತ ಹೆಚ್ಚು ಸಂಗತಿ ಅವರ ಕಣ್ಣಿಗೆ ಬೀಳುತ್ತದೆ. ಹೆಚ್ಚು ಆಳಕ್ಕೆ ಹೋಗಿ ಲೋಕವನ್ನು ಕಾಣುತ್ತದೆಯಾಗಿ ಅವರ ಜೀವನ ದರ್ಶನದಲ್ಲಿ ಒಂದು ವಿಶಿಷ್ಟವಾದ ತುಂಬಿದೆ ; ಸಂಪತ್ತಿಯಿದೆ ; ಹೆಚ್ಚು ವಿವರಾಂಶಗಳಿರುತ್ತವೆ. ಕಲ್ಲು ಅವರಿಗೆ ಕತೆ ಹೇಳುತ್ತದೆ.

—ವಿ. ಸೀತಾರಾಮಯ್ಯ

ಕಾರಂತ ನಮನ

ಡಾ|| ತಾಳ್ತಜೆ ವಸಂತಕುಮಾರ
ಮುಖ್ಯಸ್ಥರು–ಕನ್ನಡ ವಿಭಾಗ
ಮುಂಬಯಿ ವಿಶ್ವವಿದ್ಯಾಲಯ
ವಿದ್ಯಾನಗರಿ, ಮುಂಬಯಿ–೪೦೦೦೯೮

ಹಿರಿಯರೆಲ್ಲ ಒಬ್ಬರ ಹಿಂದೆ ಒಬ್ಬರಂತೆ ಹೆಜ್ಜೆ ಮೂಡದ ಹಾದಿಯಲ್ಲಿ ನಡೆದು ಮರೆಯಾಗುತ್ತಿರುವಂತೆ "ಕಾಲಕ್ಕೆ ಯಾರ ಮೇಲೂ ಕರುಣೆಯಿಲ್ಲ; ಅದು ಯಾರಿಗೂ ಕಾಯುವುದೂ ಇಲ್ಲ" ಎನ್ನುವ ವಿಶ್ವನಿಯಮಕ್ಕೆ ಅಪವಾದಗಳಿರಬಾರದಿತ್ತೇ ಎನ್ನುವ ಹಳಹಳಿಕೆಯುಂಟಾಗುತ್ತದೆ. ಇತ್ತೀಚೆಗೆ ತಮ್ಮನ್ನು ಅಪಾರವಾಗಿ ಪ್ರೀತಿಸುತ್ತಿದ್ದ ನಮ್ಮೆಲ್ಲರನ್ನು, ತಮಗೆ ತುಂಬ ಪ್ರಿಯವಾಗಿದ್ದ ಭಾರತದ, "ಗಿಡಮರ, ಹೂಹಕ್ಕಿ, ಗುಡ್ಡಬೆಟ್ಟ, ಆಕಾಶ, ಸಮುದ್ರ, ಋತುಗಳನ್ನು ಗಣನೀಯ ಪ್ರಮಾಣದಲ್ಲಿ ತಾವು ಹಾಕಿಕೊಂಡಿದ್ದ ವಿಧಾಯಕ ಯೋಜನೆಗಳನ್ನು, ಮತ್ತೆ ಏನೇನನ್ನೋ ಹಿಂದೆ ಬಿಟ್ಟು ಹೋದ ಡಾ|| ಕೋಟ ಶಿವರಾಮ ಕಾರಂತರು ಒಂದರ್ಥದಲ್ಲಿ ಕಾಲವನ್ನು ಗೆದ್ದವರು, ಅಳಿದ ಮೇಲೆಯೂ ಉಳಿದವರು.

> "ನಾವು ನಿಜತ್ವದಿಂದ ಕನಸಿಗೆ ಸುಲಭವಾಗಿ ಜಿಗಿಯಬಹುದು. ಹಾಗೆ ಹಾರುವವರೂ ಇದ್ದಾರೆ. ಅದು ನಿಜಸ್ಥಿತಿಯಿಂದ ತಪ್ಪಿಸಿಕೊಳ್ಳುವುದಕ್ಕೆ. ಈತನಿಗೆ ಅದು ಹಾಗೆ ತಪ್ಪಿಸಿಕೊಳ್ಳುವುದಕ್ಕಲ್ಲ. ಈತ ಬಾನಿನಿಂದ ನೆಲಕ್ಕೆ ನೆಲದಿಂದ ಬಾನಿಗೆ ಬೇಕಾದಂತೆ ಜಿಗಿಯಬಲ್ಲವ್ಯಕ್ತಿ."

ಎಂದು ಶಿವರಾಮ ಕಾರಂತರು ತಮ್ಮ ಪಾತ್ರವೊಂದರ ಬಗೆಗೆ ಬರೆಯುತ್ತಾರೆ. ಇದು ಬಹಳ ಸಮರ್ಪಕವಾಗಿ ಕಾರಂತರ ವ್ಯಕ್ತಿತ್ವಕ್ಕೂ ಅನ್ವಯವಾಗುತ್ತದೆ. ಈ ಅನನ್ಯವಾದ ಲಾಘವ ಶಕ್ತಿಯಿದ್ದುದರಿಂದಲೇ ಪತ್ರಿಕೋದ್ಯಮದಿಂದ ಹಿಡಿದು ಭಾರತದ ಸಾಂಸ್ಕೃತಿಕ ಚರಿತ್ರೆಯವರೆಗಿನ ಜ್ಞಾನಸಂಪತ್ತಿನ ಪಕ್ಷಿನೋಟವನ್ನಾದರೂ ಸಾಧಿಸಿಕೊಳ್ಳುವುದು ಅವರಿಗೆ ಸಾಧ್ಯವಾಯಿತು.

ಕಾರಂತರು ಬಹಳ ದೊಡ್ಡ ರೀತಿಯಲ್ಲಿ ಬದುಕಿದರು. ಇಡಿಯ ಬದುಕನ್ನೇ ಪ್ರಕೃತಿಯ ವರದಾನದಾಗಿ ಸ್ವೀಕರಿಸಿ, ಅದರ ಅರೆ ಕೊರೆಗಳನ್ನು ಶ್ರದ್ಧೆಯಿಂದ, ವಿವಿಧ ಆಯಾಮಗಳಿಂದ ತಿದ್ದಿ ತೀಡಿ ಅದಕ್ಕೆ ಕಲಾಕೃತಿಯೊಂದರ ಸ್ವರೂಪವನ್ನು ಕೊಟ್ಟರು. ಕುಶಲ ಅರ್ಥನೀತಿಜ್ಞನೊಬ್ಬನ ತೀಕ್ಷ್ಣಮತಿಯಿಂದ ಅದರ ಪ್ರತಿ ಕ್ಷಣದ ಗರಿಷ್ಠ ಪ್ರಯೋಜನವನ್ನೂ ಪಡೆದುಕೊಂಡರು.

ಅವರು ತಮ್ಮ ದೀರ್ಘವಾದ ಬಾಳಿನ ಉದ್ದಕ್ಕೂ ಕ್ರಿಯಾತ್ಮಕತೆಯನ್ನೂ ಪ್ರಯೋಗಶೀಲತೆಯನ್ನೂ ಪ್ರತಿಪಾದಿಸಿದರು. ಅಳವಡಿಸಿಕೊಂಡರು. ಪರಂಪರೆಯ

ಸತ್ವ-ಸ್ವತ್ವಗಳು, ವರ್ತಮಾನದ ಸಂವೇದನೆಗಳು. ಹಾಗೂ ಭವಿಷ್ಯದ ಸಾಧ್ಯತೆಗಳ ಸಂಗಮವಾಗಿಯೇ ಬದುಕಿಗೆ ಅರ್ಥವನ್ನು ಕಲ್ಪಿಸಿಕೊಂಡರು.

> "ಜಡವಾಗಿ ಯಾರು ಒಂದು ಕಾಲದ ಜನಕ್ಕೆ ಅಂಟಿಕೊಂಡ ಯಾವುದೇ ಸಾಂಪ್ರದಾಯಿಕ ಸಾಧನ, ಶೈಲಿಗಳನ್ನು ಅನುಕರಿಸುತ್ತಾರೋ ಅಂಥ ಜನರ ಸಮಾಜ ಜೀವನವು ಚೈತನ್ಯಮಯವಾಗಿ ಸಾಗಿಲ್ಲವೆಂದು ಹೇಳಬೇಕು .... ಮಾರ್ಪಾಟು ಹೊಸ ಜೀವನದ ಒಂದು ಮುಖ್ಯ ಕುರುಹು."

ಎನ್ನುವ ಪ್ರಜ್ಞೆಯಿದ್ದುದರಿಂದಲೇ ೯೫ರ ಇಳಿವಯಸ್ಸಿನವರೆಗೂ ಬೆಳೆಯುತ್ತಲೇ ಇರುವುದು ಅವರಿಗೆ ಸಾಧ್ಯವಾಯಿತು. ಅವರ ಮಟ್ಟಿಗೆ "ಜೀವನದ ಸಂಧ್ಯೆ"ಯೆಂಬ ಪ್ರಯೋಗವು ಅರ್ಥವನ್ನು ಕಳೆದುಕೊಂಡಿತ್ತು. ಹೊಸತಿನ ಅನ್ವೇಷಣೆಗೆ ತೊಡಗುವಾಗ, ಸಾಂಸ್ಕೃತಿಕ-ಭಾವನಾತ್ಮಕ ಪರಿಸರದ ಮೇಲಿನ ಆಕ್ರಮಣವನ್ನು ಪ್ರತಿಭಟಿಸುವಾಗ, ಕಿರಿಯರನ್ನು ಹುರಿದುಂಬಿಸುವಾಗ ಅವರಲ್ಲಿ ಪ್ರಧಾನವಾಗಿ ಕಾಣುವುದು ಹದಿಹರಿಯದ ಹುಮ್ಮಸ್ಸು ಅವರ ಜೀವಪ್ರೀತಿ, ಜೀವನಪ್ರೀತಿ, ಅಭಿವ್ಯಕ್ತಿಯ ಯಾವುದೇ ಮಾಧ್ಯಮದಲ್ಲೂ ವೃದ್ಧಾಪ್ಯದ ಸ್ಖಾಲಿತ್ಯ ತಲೆ ಹಾಕದ ನಿಖರತೆಗಳನ್ನು ಕಂಡಾಗ ಅವರ ಬಗೆಗೆ ಗೌರವ ಮಿಶ್ರಿತವಾದ ಅಭಿಮಾನವು ಮೂಡುತ್ತದೆ. ಇಂಥವರು ನಮ್ಮ ಸಮಕಾಲೀನರಾಗಿದ್ದರು ಎನ್ನುವ ಹೆಮ್ಮೆಯು ಅನಿಸಿಕೆಯು—ಅಪ್ರಯತ್ನವಾಗಿಯೇ—ಬೆಳೆಯುತ್ತದೆ.

> "ನೋಡಿದಷ್ಟೂ ಕಣ್ಣು ತಿದ್ದುತ್ತದೆ. ನೋಡುತ್ತಿರಬೇಕು. ಚಿಂತಿಸಬೇಕು. ತಿಳಿದುಕೊಳ್ಳಬೇಕು. ಮನಸು ಸಂಸ್ಕಾರಗೊಳ್ಳಬೇಕು.

ಎನ್ನುವ ಧ್ಯೇಯವಾಕ್ಯವು ಅವರಿಗೆ ಬರಿಯ ಪದಗಳ ಪುಂಜವಾಗಿರಲಿಲ್ಲ. ಬದಲಿಗೆ ಜೀವನದ ದರ್ಶನವಾಗಿತ್ತು. ಲೋಕದ ಹಂಗಿಲ್ಲದೆ, ತನಗೆ ಸರಿಯೆನಿಸಿದ್ದನ್ನು ನಂಬುವ, ನಂಬಿದುದನ್ನು ಆಚರಿಸುವ ವಿರಳರ ಪಂಕ್ತಿಗೆ ಸೇರಿದವರು ಕಾರಂತರು. ಆದುದರಿಂದಲೆ ಅವರ ಬದುಕು ಏಕಕಾಲಕ್ಕೆ 'ಅನುಕರಣೀಯವಾದ ಆದರ್ಶ'ವೂ 'ಅನುಕರಿಸಲಾರದ ಸವಾಲೂ ಆಗಿ ನಮ್ಮ ಮುಂದಿದೆ.

ತಮ್ಮ "ಕುಟುಂಬದ ಕೂಸು" ಶಿವರಾಮ ಕಾರಂತರ ಬಗೆಗೆ ಅವರ ಅಣ್ಣ ರಾಮಕೃಷ್ಣ ಕಾರಂತರು.

> "ನಮ್ಮ ಶಿವರಾಮನಾದರೋ ಜನ್ಮತಃ ಪ್ರತಿಭಾವಂತ. ಅವನು ಯಾವ ಪರಿಸರದಲ್ಲಿ ಯಾವ ಮನತನದಲ್ಲಿ ಹುಟ್ಟಿ ಬೆಳೆದಿದ್ದರೂ ಈಗಿನ ನೆಲೆಗೆ ಬಂದೇ ಬರುತ್ತಿದ್ದ."

ಎಂದು ಬಹಳ ವಿಶ್ವಾಸದಿಂದ ಬರೆಯುತ್ತಾರೆ. ಆದರೆ, ಸ್ವತಃ ಕಾರಂತರು ತಾವು ಹುಟ್ಟಿ, ಬೆಳೆದ ಕೋಟ ಪರಿಸರದ ಪ್ರಭಾವವು ತಮ್ಮ ಬದುಕು-ಬರೆಹಗಳ ಮೇಲೆ ಆಗಿದೆಯೆನ್ನುವುದನ್ನು ಕೃತಜ್ಞತೆಯಿಂದ ನೆನೆಯುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ 'ಕೋಟ' ಎನ್ನುವ ಪುಟ್ಟ ಗ್ರಾಮದಲ್ಲಿ ೧೯೦೨, ಅಕ್ಟೋಬರ್ ೧೦ರಂದು ಶಿವರಾಮ ಕಾರಂತರು ಜನಿಸಿದರು. ಅಲ್ಲಿಯ ಶೇಷ ಕಾರಂತರು ಹಾಗೂ ಲಕ್ಷ್ಮೀ ದಂಪತಿಗಳ ಒಂಭತ್ತು ಮಂದಿ ಮಕ್ಕಳಲ್ಲಿ ಕಾರಂತರು ಒಬ್ಬರು.

ಕಾರಂತರ ಎಳವೆಯು ಸಮೃದ್ಧಿಯದಾಗಿರದಿದ್ದರೂ, ಕಾರ್ಪಣ್ಯರಹಿತವಾದ್ದದಾಗಿತ್ತು. ತೀರಾ ಚಿಕ್ಕ ವಯಸ್ಸಿನಲ್ಲಿಯೇ ತನ್ನ ಪರಿಸರ, ಅದರಲ್ಲೂ 'ಬೊಬ್ಬುಳಿ ತೆರೆ'ಗಳನ್ನು ದಡಕ್ಕೆ ಹೊಮ್ಮಿಸುವ ಕಡಲು ಮತ್ತು ಹಿನ್ನೆಲೆಗೆ ನಿಂತ ಪಶ್ಚಿಮ ಘಟ್ಟದ ಸಾಲುಗಳು ತಮ್ಮ ಮೇಲೆ ಬೀರಿದ ವಿಶೇಷ ಪ್ರಭಾವವನ್ನು ಕಾರಂತರು ಪದೇ ಪದೇ ಪ್ರಸ್ತಾಪಿಸುತ್ತಿದ್ದುದಿದೆ.

ಶಿಕ್ಷಣದ ರಂಗದಲ್ಲಿ ಬಾಲಕ ಶಿವರಾಮ ಅಂತಹ ಮೇಧಾವಿಯೇನಾಗಿರಲಿಲ್ಲ. ಉರು ಹೊಡೆಯುವ ಆ ಪರಿಗೆ ಈ ಹುಡುಗ ಬೇಸತ್ತಿದ್ದ. ಕೋಟ, ಕುಂದಾಪುರಗಳ ಶಾಲೆಗಳಲ್ಲಿ ಕಲಿತು ಮೆಟ್ರಿಕ್ಯುಲೇಶನ್ ಮುಗಿಸಿದ ಬಳಿಕ ಮಂಗಳೂರಿನ ಸರಕಾರಿ ಕಾಲೇಜು ಸೇರಿ, ಇಂಟರ್‌ಮೀಡಿಯೇಟ್ ತರಗತಿಗೆ ಸ್ವಲ್ಪ ದಿನ ಎಡತಾಕಿ ಆ ಬಳಿಕ ಲೋಕ ಶಿಕ್ಷಣ ರಂಗಕ್ಕೆ ಧುಮುಕಿದ್ದು ಅವರ ಸಾಹಸ ಗಾಥೆ, ಈಗ ಇತಿಹಾಸ.

ಶ್ರೀಮತಿ ಲೀಲಾ ಅವರು, ಕಾರಂತರು ಮನ ಮೆಚ್ಚಿ ಅಂತರ್ಜಾತಿಯವಾಗಿ ಮದುವೆಯಾದ ಮಹಿಳೆ. ಹರ್ಷ, ಮಾಲವಿಕಾ, ಕ್ಷಮಾ ಹಾಗೂ ಉಲ್ಲಾಸ ಇವರ ನಾಲ್ವರು ಮಕ್ಕಳು. ಇವರಲ್ಲಿ ಹರ್ಷ ಇನ್ನೂ ಯುವಕನಾಗಿದ್ದಾಗಲೇ ತೀರಿಕೊಂಡ. ಆ ಕಾಲದಲ್ಲಿ ಸಾಂತ್ವನದ ನಾಲ್ಕು ಸಾಲು ಬರೆದ ಹಿರಿಯರೊಬ್ಬರಿಗೆ ಪ್ರತಿಕ್ರಿಯಿಸುತ್ತಾ ಕಾರಂತರು.

> "ಬಂದಿರುವ ವಿಪತ್ತು ಘನತರದ್ದಾಗಿದ್ದರೂ, ಅನೇಕಾನೇಕ ತಂದೆ ತಾಯಿಗಳಿಗೆ ಬಂದುದೇ ನಮಗೂ ಬಂತು."

ಎನ್ನುವ ಮಾನಸಿಕ ಸ್ಥೈರ್ಯವನ್ನು ತೋರಿಸಿದ್ದಾರೆ. ತಂತ್ರಜ್ಞಾನ ಬರಿಯ ಆಡುವುದಕ್ಕಲ್ಲ. ಅನುಷ್ಠಾನಕ್ಕೆ ತರುವುದಕ್ಕೆ ಎನ್ನುವುದಕ್ಕೆ ನಿದರ್ಶನವಾಗಿದ್ದಾರೆ.

ಪುತ್ತೂರಿನ ಬಾಲವನದಲ್ಲಿ ಸುಮಾರು ನಲ್ವತ್ತು ವರ್ಷಗಳನ್ನು ಕಳೆದ ಬಳಿಕ ಕಾರಂತರು ಮತ್ತೆ ಸಾಲಿಗ್ರಾಮಕ್ಕೆ ಹೋಗಿ ನೆಲೆ ನಿಂತರು. ಬಾಳಿನ ಉದ್ದಕ್ಕೂ ನಿರಂತರವಾದ ಪ್ರಯೋಗಶೀಲತೆಯೇ ಅವರ ಕ್ರಿಯಾಶಕ್ತಿಯಾಗಿತ್ತು. ಇದನ್ನವರು ಮೊನ್ನೆಯವರೆಗೂ ಉಳಿಸಿಕೊಂಡೂ ಇದ್ದರು.

ಕನ್ನಡ ಗೀತನಾಟಕಗಳು, ರಂಗಭೂಮಿ, ಯಕ್ಷಗಾನ, ಪರಿಸರದ ಕಾಳಜಿ, ರಾಜಕೀಯ ವಿವೇಚನೆ....ಈ ಎಲ್ಲವೂ ಅವರ ಕಣ್ಣಾಲಿಯಿಂದ ಪುರಸ್ಕೃತವಾಗಿವೆ.

ಬದುಕು ಮತ್ತು ಬದುಕಿಗೆ ಆಧಾರವಾಗಿರುವ ಸಮಾಜದ ಬಗೆಗಿನ ಆಸ್ಥೆಗಳೇ ಅವರನ್ನು ಬೆಳೆಸಿದುವು. ದೇಶದ ಶ್ರೇಷ್ಠ ಸನ್ಮಾನಗಳೆಲ್ಲವೂ ಅವರಿಗೆ ದೊರಕುವಂತೆ ಮಾಡಿದುವು. ಜ್ಞಾನಪೀಠ ಪ್ರಶಸ್ತಿ, ಅನೇಕ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕದ ಪ್ರತಿಷ್ಠಿತ ಪಂಪ

ಪ್ರಶಸ್ತಿ ಮತ್ತು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಇವುಗಳು ಅವುಗಳಲ್ಲಿ ಹೆಸರಿಸಲೇಬೇಕಾದವುಗಳು.

ಅನೇಕ ಬಾರಿ ಕಾರಂತರು ತಮ್ಮ ಹರಿತವಾದ ಮಾತುಗಳಿಂದಾಗಿ ವಿವಾದದ ಸುಳಿಗಳಿಗೆ ಸಿಕ್ಕಿದ್ದಿದೆ. ವಿಶ್ವಕನ್ನಡ ಸಮ್ಮೇಳನದ ಸಂದರ್ಭದ ಅವರ ಭಾಷಣವು ಅಂತಹವುಗಳಲ್ಲೊಂದು. ಅದೇನೇ ಇದ್ದರೂ ಅವರದು ನಿಜದ ನೇರಕ್ಕೆ ನಡೆದ ನಿಶ್ಚಲತೆ, ಬಂದುದನ್ನೆದುರಿಸುವ ಛಲ.

ತಮ್ಮ ಸುತ್ತಲಿನ ಜನರನ್ನು ಗಾಢವಾಗಿ ಪ್ರೀತಿಸಿದುದರಿಂದ, ವ್ಯಕ್ತಿ ಗೌರವವನ್ನು ಎತ್ತಿ ಹಿಡಿಯುವ ಪ್ರವೃತ್ತಿಯಿದ್ದುದರಿಂದಲೇ, ತಮ್ಮ ಪದ್ಮಭೂಷಣ ಪ್ರಶಸ್ತಿಯನ್ನು ಭಾರತ ಸರ್ಕಾರಕ್ಕೆ ಹಿಂತಿರುಗಿಸುವ ನಿರ್ಲಿಪ್ತಿಯು ಅವರಿಗೆ ಸಾಧ್ಯವಾಯಿತು. ತುರ್ತು ಪರಿಸ್ಥಿತಿಯನ್ನು ಪ್ರತಿಭಟಿಸಿದ ಅವರ ಕೆಲವು ಸಾಲುಗಳು ಹೀಗಿವೆ:

> "ಯಾವನೇ ವ್ಯಕ್ತಿಗೂ ಯಾವುದೇ ನೆಪದಿಂದ ಅನ್ಯಪ್ರಜೆಗಳ ವ್ಯಕ್ತಿ ಸ್ವಾತಂತ್ರ್ಯವನ್ನು ಅಪಹರಿಸಲು ಹಕ್ಕಿದೆ ಎಂದು ನಾನು ತಿಳಿಯುವುದಿಲ್ಲ....ಲೇಖಕನಾದ ನಾನು, ಭಾರತದ ಜನಗಳಿಗಾಗಿರುವ ಈ ಅಪಚಾರಗಳನ್ನು ಪ್ರತಿಭಟಿಸಲೇಬೇಕಾಗಿದೆ. ಏನಿಲ್ಲದೆ ಹೋದರೂ ನನ್ನ ಆತ್ಮಸಾಕ್ಷಿಗೆ ಸಮಾಧಾನ ಕೊಡುವ ಸಲುವಾಗಿ ನನಗೆ ಸಲ್ಲಿಸಿದ ಬಿರುದನ್ನು ಹಿಂತಿರುಗಿಸುತ್ತಿದ್ದೇನೆ. ಸತ್ಯವು ಅಸತ್ಯವನ್ನು ಜಯಿಸಲಿ.

ಈ ಮೌಲ್ಯನಿಷ್ಠೆಯಿಂದ ಅವರ ವ್ಯಕ್ತಿತ್ವವು ಮತ್ತಷ್ಟು ಎತ್ತರಕ್ಕೆ ಬೆಳೆಯುತ್ತದೆ.

"ನಾನು ಪರಿಪೂರ್ಣನೂ ಆಗಿಲ್ಲ. ಪೂರ್ಣತೆಯ ಒಂದಂಶವೂ ಆಗಿಲ್ಲ" ಎಂದು ಬರೆದುಕೊಂಡಿರುವ ಕಾರಂತರ ಕೆಲವು ಸಾಹಿತ್ಯಿಕ ನಿಲುವುಗಳನ್ನು ನಾನು ಇಲ್ಲಿ ನೆನೆದುಕೊಳ್ಳುತ್ತಿದ್ದೇನೆ. ಅವರ ಬರೆಹಗಳ ಆಳ-ಅಗಲಗಳನ್ನು ಈ ಲೇಖನದ ಸೀಮಿತ ಭಿತ್ತಿಯಲ್ಲಿ ಚಿತ್ರಿಸುವುದು ಅಸಾಧ್ಯ. ಆದುದರಿಂದ ಅವರ ಕೆಲವು ಅಭಿವ್ಯಕ್ತಿಗಳನ್ನೂ ಆಧುನಿಕ ಸಂದರ್ಭದಲ್ಲಿ ಅವುಗಳ ಪ್ರಸ್ತುತತೆಯನ್ನೂ ಪರಿಚಯಿಸುವ ಪ್ರಯತ್ನವನ್ನು ಮಾತ್ರವೇ ಇಲ್ಲಿ ಮಾಡುತ್ತಿದ್ದೇನೆ.

> "ನನ್ನದು ಯಾವೊಂದು ಸಿದ್ಧಾಂತ
> ವನ್ನು ಕುರಿತೂ ಬದ್ಧವಾದ
> ಸಾಹಿತ್ಯಿಕ ರೀತಿಯಲ್ಲ ನಾನು ನನ
> ಅನುಭವಕ್ಕೂ, ಆತ್ಮಸಾಕ್ಷಿಗೂ
> ಬದ್ಧನು."

ಎಂದು ಕಾರಂತರೇ ತಮ್ಮ ಬರೆಹಗ
ಸ್ವರೂಪವನ್ನು ಸ್ಪಷ್ಟಪಡಿಸಿದ್ದಾರೆ. ಎಂದ
ಅನುಭವ ಪ್ರಾಮಾಣ್ಯ-ಅಂತಃಕರ
ಪ್ರಮಾಣಗಳು ಅವರ ಬರೆಹಗಳ ಮೂ
ದ್ರವ್ಯಗಳಾಗಿದ್ದುವು. ನಿರ್ದೇಶಕ ಶಕ್ತಿ
ಗಳಾಗಿದ್ದುವು.

ಕಾರಂತರ ಸೃಷ್ಟಿಶೀಲ ಬರೆಹಗಳ
ಒಂದು ರೀತಿಯ ಏಕಸೂತ್ರವನ್ನು ನಾ
ಗುರುತಿಸಬಹುದು. ಈ ತಂತುವಿನ ಮೂಲ
ಕಾರಂತರು ವ್ಯಷ್ಟಿಯಿಂದ ಸಮಷ್ಟಿಯೆಡ
ಬೆಳೆಸುವ ಪ್ರಯಾಣವಿದೆಯಲ್ಲ, ಅದ

ನಾನು ಅನನ್ಯವೆನ್ನುತ್ತೇನೆ. ಮನುಷ್ಯನ ವೈಯಕ್ತಿಕ ಬದುಕು ಸಹ ಬಾಂಧವರೊಂದಿಗಿನ ಕರುಳ ಬಳ್ಳಿಯ ಸಂಬಂಧಗಳನ್ನು ಹರಿದುಕೊಂಡು ಅತಂತ್ರವಾಗುತ್ತಿರುವ, ವ್ಯಕ್ತಿಗಳ ಮಧ್ಯೆ ಕಂದಕಗಳನ್ನು ಅಗೆಯುತ್ತಿರುವ, ಸ್ವಾರ್ಥಮೂಲವಾಗಿರುವ ವಾಣಿಜ್ಯಾಸಕ್ತಿಯನ್ನಷ್ಟೆ ಉಳಿಸಿಕೊಳ್ಳುತ್ತಿರುವ ಆಧುನಿಕ ಸಂದರ್ಭದಲ್ಲಿ ಇದಕ್ಕೆ ಹೆಚ್ಚಿನ ಮಹತ್ವವು ಬರುತ್ತದೆ.

ಈ ಅನ್ವೇಷಣೆಯ ಮೂಲದಲ್ಲಿ, ಸ್ವಂತದ ಬಗೆಗೆ ತಿಳಿದುಕೊಳ್ಳುವ ಹಂಬಲವಿದೆ. ವಸ್ತು ಹಾಗೂ ತಂತ್ರಗಳ ದೃಷ್ಟಿಯಿಂದ ಪ್ರತ್ಯೇಕವಾಗಿ ನಿಲ್ಲುವ ಕಾರಂತರ ಕಾದಂಬರಿ, 'ಅಳಿದ ಮೇಲೆ' ಈ ವ್ಯಕ್ತಿಗತವಾದ ನೆಲೆಯ ಶೋಧವನ್ನು ಹಲವು ಮಗ್ಗುಲುಗಳಿಂದ ನಡೆಸುತ್ತದೆ. ತೀರಾ ವೈಯಕ್ತಿಕವಾದ, ವ್ಯಕ್ತಿಯೊಂದಿಗೇ ಮಣ್ಣಾಗಿ ಹೋಗಬಹುದಾದ ಆಪ್ತ ಅನುಭವಗಳು, ಸ್ಮೃತಿಗಳು. ಸ್ಪಷ್ಟಾಸ್ಪಷ್ಟ ಸಂಬಂಧಗಳ ಮೂಲಕವೇ ಕಾರಂತರು ಬದುಕಿನ ಅರ್ಥಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಇವುಗಳ ಸಾತತ್ಯದಲ್ಲೇ 'ಪುನರ್ಜನ್ಮ'ದ ಅಸ್ತಿತ್ವವನ್ನು ಗುರುತಿಸುತ್ತಾರೆ.

> "ವ್ಯಕ್ತಿ ಚಿಹ್ನೆ ಉಳಿಯುವುದೂ, ಅಳಿಯುವುದೂ ಅವನ ಚರಿತ್ರೆಯಿಂದ. ಆ ಚರಿತ್ರೆ ನಮ್ಮ ನಮ್ಮ ಸ್ಮರಣೆಗಳನ್ನು ಚೇತನಗೊಳಿಸಿ, ನಮ್ಮ ಬದುಕಿನ ಮೂಲಕ ಜೀವಂತವಾಗಿ ಉಳಿದರೆ, ಬೆಳೆದರೆ ಅದೇ ಪುನರ್ ಜನ್ಮ."

ಎಂದರೆ, ಯಾರ–ಯಾವುದರ ಸ್ಮೃತಿಗಳಲ್ಲಿ ನಾವು ಉಳಿಯುತ್ತೇವೆ ಎನ್ನುವುದೇ "ಅಮೂರ್ತವಾದ ವ್ಯಕ್ತಿತ್ವವು ಉಳಿಯುವ, ಬೆಳೆಯುವ, ವ್ಯಕ್ತವಾಗುವ, ಫಲಿಸುವ ರೀತಿ" ಎನ್ನುವ ತೀರ್ಮಾನಕ್ಕೆ ಅವರು ಬರುತ್ತಾರೆ. ಈ ಸಂದರ್ಭದಲ್ಲಿ ಅವರ ಬದುಕೇ ಅವರ ಹೇಳಿಕೆಗೆ ನಿದರ್ಶನವಾದ ರೀತಿಯು ನನ್ನಲ್ಲಿ ತೀವ್ರವಾದ ಸಂವೇದನೆಗಳನ್ನು ಹುಟ್ಟಿಸುತ್ತದೆ. ಕೃತಿ ಶರೀರಿಯಾದ ಕಾರಂತರ ಸ್ಮೃತಿಗಳನ್ನು ಉಜ್ವಲಗೊಳಿಸುತ್ತದೆ.

ಕಾರಂತರು ಚಿತ್ರಿಸುವ ಮಾನವೀಯ ಸಂಬಂಧಗಳಿಗೆ ಹಲವು ಸ್ರೋತಗಳಿವೆ. ಪರಿಸರದ ಪ್ರೀತಿ, ಔದಾರ್ಯ, ಅನುಕಂಪ, ಸ್ಪಂದನಶೀಲತೆ, ಭಾವುಕ ಪ್ರಪಂಚದ ಪುನಶ್ಚೇತನ, ಮನೋದೈಹಿಕ ಜಾಗೃತಿಗಳ ಬಿಡಿ ಎಳೆಗಳನ್ನು ವ್ಯವಸ್ಥಿತವಾಗಿ ಸಂಯೋಜಿಸುತ್ತ, ಸಂಬಂಧಗಳನ್ನು ಬೆಸೆಯುವ, ಸಂಸ್ಕರಿಸುವ ಪ್ರಕ್ರಿಯೆಯು ಕಾರಂತರಿಗೇ ವಿಶಿಷ್ಟವಾದುದು. ಪ್ರತಿ ವ್ಯಕ್ತಿಯ ಸಾಧನೆಯು ಸಫಲವಾಗುವುದು ಸಮಷ್ಟಿಯ ಸಂದರ್ಭದಲ್ಲೇ ಎನ್ನುವ ಲೋಕದೃಷ್ಟಿಯ ಪ್ರತಿಪಾದಕರಾಗಿಯೂ ಕಾರಂತರು ನಮಗೆ ಮಾನ್ಯರಾಗುತ್ತಾರೆ.

> "ಮನುಷ್ಯ ತಾನು ನೆಲಸಿದ ನೆಲದಿಂದ ಪ್ರಕೃತಿ ಮತ್ತು ಅದರಲ್ಲಿ ಜೀವಿಸುತ್ತಿರುವ ಜೀವಕೋಟಿಗಳಿಂದ ತನ್ನ ವ್ಯಕ್ತಿತ್ವವನ್ನ ಪ್ರತ್ಯೇಕಿಸಿ ಬೇರೆಯಾಗಿಯೇ ಇರಿಸಿಕೊಂಡು ನೋಡುವ ದೃಷ್ಟಿಯೇ ಅವನ ಸ್ವಾರ್ಥವು ಬೆಳೆಯಲು ಕಾರಣ....

ಸಮಷ್ಟಿ ಸುಖಕ್ಕೂ ಅವನ ಸುಖಕ್ಕೂ ಸಂಬಂಧವು ಇದ್ದೇ ಇದೆ."

ಎನ್ನುವ ಕಾರಂತರು ಮನುಷ್ಯತ್ವವನ್ನು ಇನ್ನಿಲ್ಲದಂತೆ ಪ್ರೀತಿಸುತ್ತಾರೆ. ಇತರರಿಂದಲೂ ಅದನ್ನೇ ನಿರೀಕ್ಷಿಸುತ್ತಾರೆ. ತಾವು ಮೊದಲು ಮನ್ನಿಸುವುದು "ಮನುಷ್ಯರೆನಿಸಿಕೊಂಡವರನ್ನು" ಎನ್ನುವುದನ್ನು ಹಲವು ಸಂದರ್ಭಗಳಲ್ಲಿ ಅವರು ಹೇಳಿಕೊಂಡಿದ್ದಾರೆ. ಮನುಷ್ಯತ್ವವಿಲ್ಲದ ವಿದ್ವತ್ತು, ಸೃಜನ ಸಾಮರ್ಥ್ಯ. ವಿಚಾರ ಶ್ರೀಮಂತಿಕೆಗಳು ಅವರಿಗೆ ಅರ್ಥಹೀನವಾಗಿ ಕಾಣುತ್ತವೆ.

ಕಾರಂತರು ಮನುಷ್ಯನ ದೌರ್ಬಲ್ಯಗಳನ್ನು, ಮಿತಿಗಳನ್ನು, ಪತನಗಳನ್ನು ಅನುಕಂಪದಿಂದ ಕಾಣುತ್ತಾರೆ.

"ಮನುಷ್ಯನಿಗೆ ಮನುಷ್ಯಬೇಕು. ಎಡ-ಬಲ, ಕಪ್ಪು-ಬಿಳುಪು, ಶುದ್ಧ-ಅಶುದ್ಧಗಳು ವಾಸ್ತವಿಕ ಸತ್ಯಗಳಲ್ಲ. ಮಾನವನ ಶೀಲ ಒಳಿತು-ಕೆಡುಕುಗಳು ಕಲಬೆರಕೆಗೊಂಡ ಒಂದು ವಿಚಿತ್ರ ಮುದ್ದೆ. ಒಂದನ್ನು ಬಿಟ್ಟು ಇನ್ನೊಂದನ್ನು ಆರಿಸುವಲ್ಲಿ ಮನುಷ್ಯ ಎಂಬ ಪದಾರ್ಥವೇ ಉಳಿಯಲಾರದು."

ಈ ಸಹಾನುಭೂತಿಪರವಾದ ನಿಲುವನ್ನು ಬೆಳೆಸಿಕೊಂಡುದರಿಂದಲೇ, ನೈತಿಕ ಮೌಲ್ಯಗಳನ್ನು ಹೊಸ ದೃಷ್ಟಿಯಿಂದ ಕಾಣುವುದು. 'ಮೈ ಮನಗಳ ಸುಳಿಯಲ್ಲಿ' 'ಧರ್ಮ, ಯಮುನ ಸಂಸಾರ'ಗಳಂಥ ಕಾದಂಬರಿಗಳನ್ನು ಬರೆಯುವುದು ಅವರಿಗೆ ಸುಲಭ[...]ವಾಯಿತು. ನ್ಯಾಯಾಧೀಶನ ಪಾತ್ರವನ್ನು ವಹಿಸಿಕೊಳ್ಳುವ ಮೊದಲು ನಮ್ಮ[...] ಯೋಗ್ಯತೆಗಳನ್ನು ಒರೆಗೆ ಹಚ್ಚಿಕೊಳ್ಳ[...] ಬೇಕೆಂಬ ಸಾಮೂಹಿಕ ಎಚ್ಚರವನ್ನು ಮೂಡಿಸುವುದು ಸಾಧ್ಯವಾಯಿತು.

ಕೃತಿಯಿಂದ ಕೃತಿಗೆ ಈ ಮಾನವೀಯ[...] ಸಂಬಂಧಗಳ ಪರಿಧಿಯನ್ನು—ಕಲಾತ್ಮಕ[...] ವಾಗಿ—ಕಾರಂತರು ವಿಸ್ತರಿಸಿಕೊಳ್ಳುತ್ತಾರೆ.

"ಬದುಕಿನಲ್ಲಿ ರಸಾಸ್ವಾದನೆಯು ಜೇನ[...] ನಮಗೆ ದೊರೆಯಬೇಕಾದರೆ ನಮ[...] ಮನಸ್ಸು ಆ ಬದುಕನ್ನು ಕುರಿತ[...] ಅನುಕಂಪವನ್ನು ತಾಳಬೇಕಾಗ[...]ತ್ತದೆ....ನಮ್ಮಂತಿರುವ ಇತರ ಮಾ[...]ವರು ನಮ್ಮ ಕುತೂಹಲವನ್ನು[...] ಕೆರಳಿಸಬೇಕು. ಈ ಕುತೂಹ[...] ದಿಂದಲೇ ನಂಟುತನವು ಬೆಳೆಯ[...]ತ್ತದೆ. ಭಾವಗಳು ವಿವಿಧ ಮುಖ[...]ಗಳನ್ನೂ, ತೀಕ್ಷ್ಣತೆಯನ್ನೂ ಪ[...]ಯುತ್ತವೆ.

ಎನ್ನುವ ಜಾಗೃತಿಯೊಂದಿಗೇ ಅವರು ತಮ[...] ಸುತ್ತಲಿನ ಬದುಕನ್ನು ಗ್ರಹಿಸುತ್ತಿದ್ದರ[...] ಸ್ವಂತದ ಬಗೆಗಿನ ಜಿಜ್ಞಾಸೆ, ಇತರರೊಂ[...]ಗಿನ ಸಂಬಂಧಗಳ ಘನಿಷ್ಠತೆ, ಸಮಾ[...]ದೊಂದಿಗಿನ ಅನುಭವಗಳ ಬೇರುಗ[...] ಆಳಕ್ಕೆ ಇಳಿಯುವ ಸಾಧ್ಯತೆಗಳು ವಿಸ್ತಾ[...]ಗೊಳ್ಳುತ್ತ ಜಗತ್ತಿನ ಬಗೆಗೆ ಕೃತಜ್ಞನಾ[...]ತ್ತದೆ. ಈ ತಿಳಿವಿನೊಂದಿಗೆ ತಮ್ಮ ಬದುಕ[...] ಬರೆಹಗಳನ್ನು ರೂಪಿಸಲು ಆದಷ್ಟು ವ್ಯ[...]ಗಳು, ಶಕ್ತಿಗಳು, ಸನ್ನಿವೇಶಗಳು, ಪ್ರೇ[...]

ಗಳು ಕ್ರಿಯಾಶೀಲವಾಗಿದ್ದುವೆನ್ನುವುದನ್ನು ಅವರು ನೆನೆಯುತ್ತಾರೆ ಮಾತ್ರವಲ್ಲ. ಯಾವಾತನೇ ಆಗಲಿ, ಎಷ್ಟು ದೊಡ್ಡವನೇ ಆಗಲಿ, ಎಂಥ ಸಾಹಸಿಯೆ ಆಗಲಿ ತನ್ನ ಬದುಕು ಬೆಳೆದು ಬಂದ ಬಗೆಯನ್ನು ನಿರೀಕ್ಷಿಸಿ ನೋಡಿದನಾದರೆ ಈ ಅರಿವು, ಇವು ತನಗೆ ದೊರೆಯದೆ ಹೋಗುತ್ತಿದ್ದಲ್ಲಿ ತನ್ನ ಬೆಳೆವಣಿಗೆಯೂ ಸಾಗುತ್ತಿರಲಿಲ್ಲವೆಂಬ ಎಚ್ಚರವು ಮೂಡುತ್ತದೆಂದೂ ಸೂಚಿಸುತ್ತಾರೆ.

ನಮ್ಮ ಪ್ರಾದೇಶಿಕ ಕಾದಂಬರಿಗಳಿಗೆ ಒಂದು ಸ್ಪಷ್ಟ ರೂಪವನ್ನು ಕೊಟ್ಟ ಹೆಗ್ಗಳಿಕೆಯೂ ಕಾರಂತರದಾಗಿದೆ. ಅವರು ಕೊಡುವ ಸಮಕಾಲೀನ ದಕ್ಷಿಣ ಕನ್ನಡದ ಗ್ರಾಮೀಣ ಬದುಕಿನ ಚಿತ್ರವು ತುಂಬ ನೈಜವಾದುದು ; ಅಪೂರ್ವವಾದುದು. ಸ್ವಯಂಪೂರ್ಣವಾದುದು. ಇಲ್ಲಿ ಪುನರಾವರ್ತನೆಯಿಲ್ಲ. ಬದಲಿಗೆ ಅದರ ವಿವಿಧ ಮುಖಗಳನ್ನು ಪರಿಚಯಿಸುವ ಆಸ್ಥೆಯಿದೆ. ಆ ಸಂಸ್ಕೃತಿಯ ತಿರುಳನ್ನು ಸಂವಹಿಸುವ ಕಾಳಜಿಯಿದೆ. ಸ್ವಂತದ ಅಧಿಕೃತತೆಯ ಮೇಲಿನ ಭರವಸೆಯಿದೆ.

> "ತನ್ನ ನಾಡಿನಲ್ಲಿ ಬಾಳಿ, ಬದುಕಿ, ಅದರ ನೆಲದಲ್ಲಿ ನಡೆದು ನೀರಿನಲ್ಲಿ ಈಸಾಡಿ, ಗಾಳಿಯಲ್ಲಿ ಉಸಿರಾಡಿ, ಅಲ್ಲಿನ ಆವರಣವು ತನಗೆ ಒದಗಿಸುವ ಯಾವತ್ತೂ ಅನುಭವಗಳಿಂದ ತನ್ನ ಮನಸ್ಸನ್ನು ಬೆಳೆಯಿಸಿಕೊಂಡು ಪ್ರಬುದ್ಧನಾಗಬೇಕು"

ಎಂದು ಹೇಳುವ ಕಾರಂತರು ತಮ್ಮ ಬರವಣಿಗೆಯಲ್ಲೂ ಅದೇ ಪ್ರಬುದ್ಧತೆಯನ್ನು ರೂಢಿಸಿಕೊಂಡವರು. ಪ್ರಾದೇಶಿಕ ಸಂಸ್ಕೃತಿಯನ್ನು, ಎಲ್ಲಾ ಸಂಕೀರ್ಣತೆಯ ಪದರಗಳೊಂದಿಗೆ ಅದರ ಗಡಿಗಳಿಂದಾಚೆಗೆ ಒಯ್ದುವರು. ಅವರ ನೆಲದ ಪ್ರೀತಿಗೆ ಅವರ 'ಬೆಟ್ಟದ ಜೀವ', 'ಮರಳಿ ಮಣ್ಣಿಗೆ' ಮೊದಲಾದ ಕಾದಂಬರಿಗಳು ದನಿ ನೀಡಿವೆ.

ಎಲ್ಲೂ ಆವೇಶಕ್ಕೆ ಒಳಗಾಗದೆ ಸ್ತ್ರೀತ್ವದ ಆಂತರಿಕ ಸಂಘರ್ಷಗಳನ್ನು ಬಹಳ ಆಪ್ತವಾದ ರೀತಿಯಲ್ಲಿ ಕಾರಂತರು ಕಂಡರಿಸಿದ್ದಾರೆ. ಅವರ ಪಾರೋತಿ, ಸರಸೋತಿಯರ ಒಳದನಿಗಳಿಗಿರುವ ಸತ್ವವು "ಸ್ತ್ರೀ ವಿಮೋಚನೆ"ಯ ಶಕ್ತಿಯುತವಾದ ಬರೆವಣಿಗೆಗಳಿಗೂ ಇರಬಹುದೇ ಎನ್ನುವ ಸಂದೇಹವು ನನಗಿದೆ. ಇದೇ ಮಟ್ಟದ ಸಂವೇದನಾಶೀಲತೆಯಿಂದಲೇ ಅವರ 'ಚೋಮ'ನೂ ಜೀವಂತಿಕೆಯನ್ನು ಪಡೆಯುತ್ತಾನೆ. ದಲಿತ ಪ್ರಜ್ಞೆಯ ವಿಕಾಸದ ಪಥದಲ್ಲಿ 'ಚೋಮನ ದುಡಿ' ಕೃತಿಗೆ ವಿಶಿಷ್ಟವಾದ ಸ್ಥಾನವೊಂದು ಪ್ರಾಪ್ತವಾಗುತ್ತದೆ.

ಈ ಸಂದರ್ಭದಲ್ಲಿ ಕಾದಂಬರಿಕಾರ ಕಾರಂತರ ಎರಡು ಮುಖಗಳು ನಮ್ಮ ಮುಂದೆ ಬರುತ್ತವೆ.

> "ಮೊದಲನೆಯ ಕಾರಂತರು ನಮ್ಮನ್ನು ಚಾವಟಿಯಿಂದ ಹೊಡೆದು ಎಚ್ಚರಿಸುತ್ತಾರೆ. ಎರಡನೆಯವರು ನಮ್ಮನ್ನು ನೋಡಿ, ಅರ್ಥಮಾಡಿಕೊಂಡು ಮರುಗಿ ಕಣ್ಣೀರನ್ನು ತಡೆದುಕೊಳ್ಳುತ್ತಾರೆ ; ಸುರಿಸುವುದಿಲ್ಲ. ಏಕೆಂದರೆ ಅವರು ಭಾವ-ದೌರ್ಬಲ್ಯಕ್ಕೆ ಎಡೆಗೊಡಲೊಲ್ಲರು.

ಇದೇ ಸಂಯಮವು ಅವರ ಪಾತ್ರ ಚಿತ್ರಣದಲ್ಲಿ, ಸನ್ನಿವೇಶ ನಿರ್ಮಿತಿಯಲ್ಲಿ, ನಿರೂಪಣಾ ವಿಧಾನದಲ್ಲಿ ಕಂಡುಬರುತ್ತದೆ. ಭಾವ–ಬುದ್ಧಿಗಳು ಅವರ ನಿಯಂತ್ರಣದೊಳಗೇ ಉಳಿಯುತ್ತವೆ.

'ಸ್ವಪ್ನದ ಹೊಳೆ' 'ಮೂಕಜ್ಜಿಯ ಕನಸುಗಳು' ಕೃತಿಗಳಲ್ಲಿ 'ಪ್ರಜ್ಞಾ ಪ್ರವಾಹ ತಂತ್ರ'ದ ಜ್ಞಾತಿಗಳನ್ನು ಕಾಣುತ್ತೇವೆ. ಒಂದು ರೀತಿಯ ಭ್ರಾಮಕ ಕಲ್ಪನೆ–ವಾಸ್ತವ ಜಗತ್ತುಗಳ ಲಾಳಿಯಾಡಿಸುತ್ತಲೇ ಅವರು ಮೂಕಜ್ಜಿಯನ್ನು ಮಾತಾಡಿಸುತ್ತಾರೆ. ಅಪಾರವಾದ ಕನಸುಗಳ ಆರ್ದ್ರತೆಯಲ್ಲಿ ನಿಜದ ಬದುಕಿನ ತೇವರಾಹಿತ್ಯವನ್ನು ಮರೆಸುತ್ತಾರೆ.

ಕನ್ನಡದಲ್ಲಿ ಪ್ರವಾಸ ಸಾಹಿತ್ಯದ ಪರಿಕಲ್ಪನೆಗೆ ಹೊಸ ತಿರುವನ್ನು ಕೊಟ್ಟ ಶ್ರೇಯಸ್ಸೂ ಕಾರಂತರಿಗೆ ಸಲ್ಲುತ್ತದೆ.

> "ಕೇವಲ ಜ್ಞಾನಾಪೇಕ್ಷೆ ಅಥವಾ ಜ್ಞಾನ ಪ್ರಸಾರದ ಉದ್ದೇಶದಿಂದ ಅಲೆಯುವವರನ್ನು ಭಾರತೀಯ ಸಂಪ್ರದಾಯವು ಪರಿವ್ರಾಜಕರೆಂದು ಗೌರವಿಸುತ್ತದೆ. ಕಾರಂತರು ಈ ಬಿರುದಿಗೆ ಅತ್ಯಂತ ಅರ್ಹರು.... (ಅವರ ಪ್ರವಾಸ ಕಾಲದಲ್ಲಿ) ಅವರ ಮಾತುಗಳನ್ನು ಬರೆದಿಡುವ ಒಬ್ಬ ವಿನಾಯಕನೋ, ಬಾಸ್ವೆಲ್ಲನೋ ದೊರೆತಿದ್ದರೆ ಕಾರಂತರ ಸಾಹಿತ್ಯದಲ್ಲೂ ಸಿಗದಂಥ ವಿಲಕ್ಷಣ ವಿಚಾರಗಳು ಕನ್ನಡ ಸಾರಸ್ವತ ಲೋಕಕ್ಕೆ ದೊರೆಯುತ್ತಿದ್ದುವು"

ಎನ್ನುವ ಮಾತುಗಳನ್ನು ಇಲ್ಲಿ ಗಮನಿಸಬೇಕು. ಅವರು ಬರೆದುದು ಅಲ್ಲ, ಬರೆಯದೆ ಉಳಿಸಿದುದು ಅಧಿಕ. ಆದರೆ ಬರೆದುದೆಲ್ಲವೂ ಪಾದರಸದ ಚುರುಕಿನ ಓಡಾಟವು ಗ್ರಹಿಸಿಕೊಂಡ ಹೊಸ ಹೊಸ ಪ್ರದೇಶಗಳ ಅನುಭವಗಳಿಂದ ಪುಷ್ಟವಾದವುಗಳು. ತಾವು ಕಂಡ ಭೂ ಭಾಗದ ಚಾರಿತ್ರಿಕ ವಿವರಗಳು. ವಾಸ್ತು ವರ್ಣನೆ, ಭೌಗೋಳಿಕಾಂಶಗಳಾಚೆಗೂ ತಮ್ಮ ಬರೆಹಗಳ ವ್ಯಾಪ್ತಿಯನ್ನು ಕಾರಂತರು ಗುರುತಿಸಿಕೊಂಡಿದ್ದರು. ಪ್ರದೇಶವೊಂದನ್ನು ನೋಡಬೇಕಾದುದು ಬರಿಯ ಕಣ್ಣುಗಳ ಮೂಲಕವಲ್ಲ, ಒಂದು ಸಾಂಸ್ಕೃತಿಕ ವಲಯವು ಇನ್ನೊಂದನ್ನು ಸಂಧಿಸುವ ಭಾವುಕ ಮಟ್ಟದಲ್ಲಿ ಎನ್ನುವ ನಿಲುವು ಕಾರಂತರ ಪ್ರವಾಸ ಸಾಹಿತ್ಯದಲ್ಲಿ ಕಂಡು ಬರುತ್ತದೆ. "ಅಪೂರ್ವ ಪಶ್ಚಿಮ" "ಅಬೂವಿನಿಂದ ಬರಾಮಕ್ಕೆ" "ಪೂರ್ವದಿಂದ ಅತ್ಯಪೂರ್ವಕ್ಕೆ" "ಪಾತಾಳಕ್ಕೆ ಪಯಣ" "ಅರಸಿಕರಲ್ಲಿ" ಮುಂತಾದ ಕೃತಿಗಳು ಆಯಾ ಪ್ರದೇಶಗಳ ಸಾಂಸ್ಕೃತಿಕಾಂಶಗಳ ದಾಖಲೆಗಳಾಗಿಯೂ ಮಹತ್ವವನ್ನು ಪಡೆಯುತ್ತವೆ.

ಯಕ್ಷಗಾನದಂಥ ಪ್ರಾದೇಶಿಕ ಕಲೆಯೊಂದರ ಸಾಗರೋಲ್ಲಂಘನದಲ್ಲಿ, ಬಾಲಪ್ರಪಂಚದ ವೈಜ್ಞಾನಿಕ ಬರೆಹಗಳಲ್ಲಿ, ಚಿತ್ರಶಿಲ್ಪ ಮುಂತಾದ ಸೃಷ್ಟಿಶೀಲ, ಕಲೆಗಳ ಜಿಜ್ಞಾಸೆಯಲ್ಲಿ, ಪರಿಸರವಾದದಲ್ಲಿ, ಶಿಕ್ಷಣ ವಿಚಾರಗಳಲ್ಲಿ, ಕಾರಂತರ ಸ್ವಸ್ಥ ಮನಸ್ಸಿನ ಹಲವು ಮುಖಗಳನ್ನು ಕಾಣಬಹುದಾಗಿದೆ. ತಮ್ಮ ನಿಡುಬಾಳಿನ ಸಿಹಿಕಹಿಗಳನ್ನು, ಒಳತೋಟಗಳನ್ನು ಕಾರಂತರು ತಮ್ಮ ಕಣ್ಣುಗಳಿಂದಲೇ ನೋಡಿದುದ

ಫಲವಾಗಿ 'ಸ್ಮೃತಿ ಪಟಲದಿಂದ' 'ಹುಚ್ಚು ಮನಸ್ಸಿನ ಹತ್ತು ಮುಖಗಳು' ರೂಪು ತಾಳಿವೆ.

"ಕಾರಂತ ಪ್ರಪಂಚ"ವು ಅವರಿಗೆ ಸಂದ ಅಭಿನಂದನ ಗ್ರಂಥವಾಗಿದೆ.

ಕಾರಂತರ ಭೌತಿಕ ದೇಹವು ನಮ್ಮಿಂದ ಮರೆಯಾಗಿರಬಹುದು. ಆದರೆ ಅವರು ತಮ್ಮ ಆದರ್ಶಗಳನ್ನು, ಕೃತಿ ಲೋಕವನ್ನು ನಮಗಾಗಿ ಬಿಟ್ಟು ಹೋಗಿದ್ದಾರೆ. ಇಚ್ಛಾಶಕ್ತಿಯೊಂದಿದ್ದರೆ ಮನುಷ್ಯನೊಬ್ಬ ತನ್ನ ಬದುಕಿನಲ್ಲಿ ಏನನ್ನೆಲ್ಲ ಸಾಧಿಸಬಲ್ಲನೆಂಬುದರ ನಿದರ್ಶನವನ್ನು ಉಳಿಸಿ ಹೋಗಿದ್ದಾರೆ. ಅಮೂಲ್ಯ ಚಿಂತನ ದ್ರವ್ಯವನ್ನು ನಮ್ಮ ಸಾಂಸ್ಕೃತಿಕ ಭಂಡಾರಕ್ಕೆ ಸೇರಿಸಿದ್ದಾರೆ; ನಿಜವಾದ ಅರ್ಥದಲ್ಲಿ ಚಿರಂಜೀವಿಗಳೇ ಆಗಿದ್ದಾರೆ.

ಶ್ರೀ ಶಿವರಾಮ ಕಾರಂತರ ಒಂದನೇ ಮಗ ಹರ್ಷ ಮೃತನಾದ ಸುದ್ದಿ ಕೇಳಿ ಎದೆ ತಳಮಳಗೊಂಡು ಹೋಯಿತು. ಹಡೆದೊಡಲಬೇಗೆಯನ್ನು ಯಾರು ಅರಿಯಬಲ್ಲರು ? ಅವರ ಆ ದುಃಖದ ಆಪತ್ತಿನಲ್ಲಿ ನಾಲ್ಕು ಸಂತೈಕೆಯ ಮಾತುಗಳನ್ನು ಬರೆದು ಪತ್ರ ಹಾಕಿದೆ. ಅದಕ್ಕೆ ಉತ್ತರವಾಗಿ ಶ್ರೀ ಕಾರಂತರಿಂದ ಪತ್ರ ಬಂತು :—

"ಬಂದಿರುವ ವಿಪತ್ತು ಘನತರದ್ದಾದರೂ ಅನೇಕಾನೇಕ ತಂದೆ ತಾಯಿಗಳಿಗೆ ಬಂದುದೇ ನಮಗೂ ಬಂತು ."

ಶ್ರೀ ಕಾರಂತರ ಈ ದೃಢಮನಸ್ಸನ್ನು ಕಂಡು ನಾನು ಬೆರಗಾಗಿ ಹೋದೆ. ಆತ್ಮ ಅಚ್ಯುತ. ಮೃತ್ಯು ಅವಸ್ಥಾಂತರ. 'ಜಾತಸ್ಯ ಮರಣಂ ಧ್ರುವಂ' ಎಂಬ ಮಾತುಗಳನ್ನು ಬರಹಗಾರರೆಲ್ಲ ಲೆಕ್ಕವಿಲ್ಲದಷ್ಟು ಬಾರಿ ಬಾಯಾಡಿಸುತ್ತಾರೆ. ಆದರೆ ಆಡುವ ಮಾತಿನ ಸತ್ಯತೆಯನ್ನು ಹೃದಯಾಂತರ್ಗತ ಅನುಭವಸತ್ಯವನ್ನಾಗಿ ಮಾಡಿಕೊಂಡ ಬರಹಗಾರರನ್ನು ಲೋಕ ಕಾಣುವುದು ಬಹು ವಿರಳ! ಅಂಥ ಅತಿ ವಿರಳ ವ್ಯಕ್ತಿಗಳಲ್ಲಿ ಶ್ರೀ ಶಿವರಾಮ ಕಾರಂತರೊಬ್ಬರು !

"ಕಿಸಾ ಗೋತಮಿ"ಯನ್ನು ರಚಿಸಿದ್ದು ಸಾರ್ಥಕವಾಯಿತು. ಎಂಥ ಸಿತಪ್ರಜ್ಞ !

—ಕೊ. ಚನ್ನಬಸಪ್ಪ

ಜಂಗಮ ವಿಶ್ವವಿದ್ಯಾಲಯ ಶಿವರಾಮ ಕಾರಂತ

ಯು. ಶ್ರೀಧರಭಟ್

'ಜಯವಿಠಲ' ೧ನೇ ಮುಖ್ಯ ರಸ್ತೆ
ಸರಸ್ವತಿಪುರ, ಮೈಸೂರು–೯

ನನಗೆ ಕಾರಂತರನ್ನು ಸುಮಾರು ೩೦ ವರ್ಷಗಳಿಂದ ಅತೀ ಸಮೀಪದಿಂದ ನೋಡುವ ಸುಯೋಗ ದೊರಕಿದೆ. ಅವರು ಆಗಾಗ ನಮ್ಮ ಮನೆಗೆ ಮತ್ತು ನಾನು ಆಗಾಗ ಅವರಿದ್ದಲ್ಲಿಗೆ ಹೋಗಿ ಅವರನ್ನು ಭೇಟಿಯಾಗುವ ಅವಕಾಶಗಳು ಸಿಕ್ಕಿವೆ. ಅವರ ಜೊತೆಯಲ್ಲಿ ಕೆಲವು ಊರುಗಳನ್ನು ಸಂದರ್ಶಿಸುವ ಸಂದರ್ಭಗಳೂ ಅಲ್ಲಿ ಅವರ ಬಂಧುಗಳು, ಸ್ನೇಹಿತರು ಅಥವಾ ಅಭಿಮಾನಿಗಳ ಮನೆಯಲ್ಲಿ ಉಳಿಯುವ ಅವಕಾಶಗಳೂ ದೊರೆತಿವೆ.

ಕಾರಂತರು ಬಂದರೆಂದರೆ ಕೆಲವರ ಮನೆಯಲ್ಲಿ ಗಂಭೀರ ಮತ್ತು ಭಯದ ವಾತಾವರಣ. ಕಾರಣ: ಇಷ್ಟೊಂದು ದೊಡ್ಡ ವ್ಯಕ್ತಿ ತಮ್ಮ ಮನೆಗೆ ಬಂದರಲ್ಲಾ ಎಂಬ ಸಂತೋಷ. ಇಷ್ಟು ದೊಡ್ಡ ವ್ಯಕ್ತಿಯೊಂದಿಗೆ ತಾವು ಏನು ಮಾತನಾಡುವುದು ಎಂಬ ಭಯ. ಕೆಲವು ಕ್ಷಣ ಎಲ್ಲರಲ್ಲೂ ಮೌನ. ಆದರೆ ಕಾರಂತರೆ ಒಂದೆರಡು ನಿಮಿಷಗಳಲ್ಲಿ ಮೌನ ಮುರಿದು ಮನೆಯಲ್ಲಿರುವ ಒಂದು ಮಗುವನ್ನೊ ಇನ್ಯಾರಾದರೂ ಕಿರಿಯರನ್ನೊ ಮಾತನಾಡಿಸಿ, ಹೆಸರು ಕೇಳಿ? ಓದುತ್ತಿರುವ ಶಾಲೆಯ ವಿವರ ವಿಚಾರಿಸಿ ಆ ಹೆಸರಿಗೆ ಒಂದು ಕತೆ ಕಟ್ಟಿ ಮನೆಮಂದಿಯನ್ನೆಲ್ಲಾ ನಗಿಸಿ ವಾತಾವರಣವನ್ನು ತಿಳಿಗೊಳಿಸಿಬಿಡುತ್ತಾರೆ. ಮಕ್ಕಳ ಆಸಕ್ತಿಯನ್ನು ತಿಳದಿರುವ ಕಾರಂತರು ಅವರಿಗೆ ಪ್ರಾಣಿ ಪಕ್ಷಿಗಳ ಅಥವಾ ಇನ್ಯಾವುದಾದರೂ ಕುತೂಹಲಕರ ವಾದ ವಿಚಾರಗಳನ್ನೋ ಹೇಳಿ ಅವರನ್ನು ಸಂತೋಷಪಡಿಸುತ್ತಾರೆ. ಮನೆಮಂದಿಯ ಸುಖ ದುಃಖ ತೊಂದರೆಗಳನ್ನು ವಿಚಾರಿಸು ತ್ತಾರೆ. ಗಂಭೀರ ವಿಚಾರಗಳಲ್ಲಿ ಅಪೇಕ್ಷಿಸಿದ ವರಿಗೆ ಸಲಹೆಗಳನ್ನೀಯುತ್ತಾರೆ. ಒಂದು ಬಾರಿ ಮನೆಗೆ ಅವರ ಭೇಟಿ ಎಂದಿಗೂ ಮರೆಯದಂತೆ ಮನೆಮಂದಿಯ ಮನದಲ್ಲಿ ಉಳಿದುಕೊಳ್ಳುತ್ತಾರೆ.

ಸುಮಾರು ೨೬ ವರ್ಷಗಳ ಹಿಂದೆ ಬಿಜಾ ಪುರಕ್ಕೆ ಹೋಗಿದ್ದಾಗ ಮೂರು ದಿನಗಳ ಮಂಗಳಗಿ ಎಂಬ ಪ್ರೈಮರಿ ಸ್ಕೂಲ್‌ನ ಮುಖ್ಯೋಪಾಧ್ಯಾಯರ ಮನೆಯಲ್ಲಿ ಉ ದಿದ್ದೆವು. ಮನೆ ಅತಿ ಚಿಕ್ಕದು. ಒಂದ ೮'×೮' ಕೋಣೆಯಲ್ಲಿ ಮೂರು ಮಂ ಮಲಗಬೇಕಿತ್ತು. ಬೆಳಿಗ್ಗೆ ಹೊತ್ತಿಗೆ ಮುಂ ಎದ್ದು ಬಯಲಿಗೆ ಹೋಗಬೇಕಾಗಿತ್ತು ಮಂಗಳಗಿ ಕಾರಂತರ ಅಭಿಮಾನಿ. ಇನ್ನೊ ಅಭಿಮಾನಿ ಯಲಸಂಗಿ. ಇವರು ಕಾರಂತರ ನಲವತ್ತರ ದಶಕದಲ್ಲಿ ಬಿಜಾಪುರಕ್ಕೆ ಹೋ ದ್ದಾಗ ಅವರನ್ನು ಪ್ರಕೃತಿಯ ಪರಿಸರದ

ನವಿಲುಗಳು ನೃತ್ಯ ಮಾಡುವುದನ್ನು ಕೋರಿ ಸಿದ್ದರಂತೆ. ಅಲ್ಲಿಂದ ಮುಂದೆ ಕಾರಂತರ ಸಂಪರ್ಕವನ್ನಿಟ್ಟುಕೊಂಡಿದ್ದರು. ತಮ್ಮ ಮನೆಗೆ ಮಧ್ಯಾಹ್ನದ ಊಟಕ್ಕೆ ಕರೆದಿದ್ದರು. ಮೊದಲನೇ ಆತಿಥ್ಯ ಚಹಾ. ಜೊತೆಗೆ ಹದಿನಾಲ್ಕು ತಟ್ಟೆಗಳಲ್ಲಿ ಹದಿನಾಲ್ಕು ಬಗೆಯ ಹುರಿದ ಕಡಲೇಕಾಯಿ. ಕಾರಂತರಿಗೆ ಪ್ರಿಯವಾದುದು ಏನೆಂದು ತಿಳಿದಿದ್ದವರು. ಊಟಕ್ಕೆ ನಮಗೆ ಅಪರೂಪವಾದ ಜೋಳದ ಭಾಕ್ರಿ ಮತ್ತು ಬದನೇಕಾಯಿ ಎಣ್ಣೆಗಾಯಿ ಮತ್ತು ಇತರ ಬಗೆ ಬಗೆಯ ತರಕಾರಿಗಳು, ಹಸಿ ಮತ್ತು ಅರ್ಧ ಬೇಯಿಸಿದ್ದು. ಊಟವಾದ ಮೇಲೆ ಒಂದು ಗಂಟೆಯ ನಿದ್ದೆ. ಹೊರಡುವ ಮುನ್ನ ಕಾರಂತರ ಮುಂದೆ ಒಂದು ಚೀಲದಲ್ಲಿ ತುಂಬಿದ್ದ ಸುಮಾರು ನೂರಕ್ಕೂ ಮೇಲ್ಪಟ್ಟು ಇದ್ದ ಚಿನ್ನದ ಉಂಗುರಗಳನ್ನು ಸುರಿದು ತಮ್ಮ ನೆನಪಿಗಾಗಿ ಒಂದನ್ನು ಆರಿಸಿಕೊಳ್ಳುವಂತೆ ಕೋರಿಕೆ. ಕಾರಂತರು ಅಭಿಮಾನಿಯ ಪ್ರೀತಿಗೆ ಮಣಿದು ಅವರ ಬೆರಳಳತೆಯ ಉಂಗುರ ಒಂದನ್ನು ಆರಿಸಿಕೊಂಡರು. ಇಂಥ ಅಭಿಮಾನಿಗಳು ಕಾರಂತರಿಗೆ ನಾಡಿನಲ್ಲೆಲ್ಲಾ ಇದ್ದರು, ಈಗಲೂ ಇದ್ದಾರೆ.

ಅತ್ಯಂತ ಧಾರ್ಮಿಕ ಮನೋಭಾವದವರೂ ಅವರನ್ನು ಗೌರವಿಸುತ್ತಾರೆ. ಏಕೆಂದರೆ ಅವರು ಇನ್ನೊಬ್ಬರ ನಂಬಿಕೆಗಳ ವಿಚಾರದಲ್ಲಿ ಪ್ರವೇಶಿಸುವುದಿಲ್ಲ. ಇನ್ನೊಬ್ಬರನ್ನು ಇಂಥ ವಿಚಾರಗಳಲ್ಲಿ ಟೀಕಿಸುವುದಿಲ್ಲ. ತಮ್ಮ ನಂಬಿಕೆ ಏನೆಂಬುದನ್ನು ಖಂಡಿತವಾಗಿ ತಿಳಿದುಕೊಂಡಿದ್ದಾರೆ. ತಾವು ತಮ್ಮ ಅನುಭವದಿಂದ ಸರಿಯೆಂದು ಕಂಡದ್ದನ್ನು ಮಾತ್ರ ಆಚರಿಸುತ್ತಾರೆ. ಇತರರಿಂದ ಬಂದ ತತ್ವಗಳೊಂದಿಗೆ ಅವರು ಎಷ್ಟೇ ದೊಡ್ಡ ವ್ಯಕ್ತಿಯಾಗಿರಲಿ ರಾಜಿ ಮಾಡಿಕೊಳ್ಳುವುದಿಲ್ಲ. ಹಾಗೆಯೇ ತಮ್ಮ ನಂಬಿಕೆಗಳನ್ನು ಇತರರ ಮೇಲೆ ಹೇರುವುದಿಲ್ಲ. ಅವರ ವಿರೋಧವಿದ್ದರೆ ಜನರಲ್ಲಿರುವ ಮೂಢನಂಬಿಕೆಗಳ ವಿಚಾರದಲ್ಲಿ, ಬೂಟಾಟಿಕೆಯ ಮೇಲೆ, ಕಾಪಟ್ಯ ದ್ವಂಧ್ವ ವ್ಯಕ್ತಿತ್ವದ ಮೇಲೆ ಮತ್ತು ಚಮತ್ಕಾರದ ಮೇಲೆ. ಇದಕ್ಕೊಂದು ಉದಾಹರಣೆ: ವಾಸುದೇವ ಕಾರಂತರು ಇವರ ಹಿರಿಯ ಸಹೋದರ. ವಿದ್ಯುತ್ ಇಂಜಿನೀಯರ್ ಆಗಿದ್ದವರು. ಮದ್ರಾಸ್ ಸರಕಾರದ ವಿದ್ಯುತ್ ಇಲಾಖೆಯ ವರಿಷ್ಠರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾದವರು. ಮೊದಲಿನಿಂದಲೂ ಇವರ ವಿಚಾರಗಳು ಪಾರಮಾರ್ಥಿಕದಲ್ಲಿ. ಬರೆದುದು ಸಂಧ್ಯಾವಂದನೆ, ಪೂಜಾವಧಿ ಮೊದಲಾದ ಪುಸ್ತಕಗಳು. ಅಣ್ಣ ತಮ್ಮನ ವಿಚಾರಗಳು ಮೊದಲಿನಿಂದಲೂ ವಿರುದ್ಧ. ಆದರೆ ಈ ಅಣ್ಣ ತಮ್ಮ ಕೊನೆಯ ಕಾಲದಲ್ಲಿ ನಡೆದುಕೊಂಡ ರೀತಿ ತಮ್ಮನ ಮೇಲೆ ಅತ್ಯಂತ ಗಾಢವಾದ ಪರಿಣಾಮ ಬೀರಿದೆ. ಕೆಲವು ವರ್ಷಗಳ ಹಿಂದೆ ತೀರಿಕೊಳ್ಳುವ ಹಿಂದಿನ ದಿನ ವಾಸುದೇವ ಕಾರಂತರು ಮಗನನ್ನು ಕರೆದು ಕಾಗದ ಲೇಖನಿ ತರಿಸಿ ತನ್ನ ಇಚ್ಛೆಯನ್ನು ಅವನಿಗೆ ತಿಳಿಸಿ ಅವನ ಅನುಮತಿ ಪಡೆದು ಉಳಿದಿರುವ ತನ್ನ ಸ್ಥಿರ ಚರ ಆಸ್ತಿಯನ್ನು, ತನ್ನನ್ನು ಕೊನೆಯ ವರ್ಷಗಳಲ್ಲಿ ನೋಡಿಕೊಂಡ ಕೆಲವರಿಗೆ, ಕೆಲವು ಆಳುಗಳೂ ಸೇರಿದಂತೆ ಹಂಚುವಂತೆ ಬರೆದಿಟ್ಟರು. ಇದಕ್ಕಿಂತ ದೊಡ್ಡ ಮಾನವೀಯ ಗುಣ

ಯಾವುದಿದೆ? ತಮ್ಮ ಕೊನೆ ದಿನಗಳಲ್ಲಿ ಶಿವರಾಮ ಕಾರಂತರಾದರೂ ತಮ್ಮ ಅಣ್ಣ ಮಾಡಿದಂತೆಯೇ ಮಾಡಿದರು. ಕಾರಂತರಿಗೆ ನಂಬಿಕೆಗಳು ಮುಖ್ಯವಲ್ಲ. ಮನುಷ್ಯ ಭೂಮಿಯ ಮೇಲೆ ಬದುಕುವ ರೀತಿ ಮುಖ್ಯ.

ಕಾರಂತರ ಹೃದಯವಂತಿಕೆಗೆ ಇನ್ನೊಂದು ಉದಾಹರಣೆ: ಮೈಸೂರಿಗೆ ಆಗಾಗ್ಗೆ ಬರುತ್ತಿದ್ದ ಕಾರಂತರನ್ನು ತಮ್ಮ ಶಾಲೆಗೆ ಒಂದು ಸಾರಿ ಕರೆಸಬೇಕೆಂದು ರಂಗರಾವ್ ಸ್ಮಾರಕ ಕುರುಡು ಹೆಣ್ಣು ಮಕ್ಕಳ ಶಾಲೆಯ ಮೇಲ್ವಿಚಾರಕರಾಗಿದ್ದ ಎಸ್.ನಾಗರಾಜನ್ ಅವರಿಗೆ ಹಂಬಲ. ಈ ವಿಚಾರವನ್ನು ನನಗೆ ತಿಳಿಸಿದ್ದರು. ಒಂದೆರಡು ಸಾರಿ ಕಾರಂತರು ಬಂದಾಗ ಅವಕಾಶವಾಗಲಿಲ್ಲ. ಆದರೆ ಈಗ ಎರಡು ವರ್ಷಗಳ ಹಿಂದೆ ಒಂದು ಸಾರಿ ಬರುವವರಿದ್ದರು. ಈ ಸಾರಿ ಖಂಡಿತ ವಾಗಿಯೂ ಕರೆತರುತ್ತೇನೆಂದು ತಿಳಿಸಿದ್ದೆ. ಸಂಜೆ ಬೇರೆ ಯಾವ ಕಾರ್ಯಕ್ರಮವೂ ಇರಲಿಲ್ಲ. ಮಧ್ಯಾಹ್ನದ ಊಟವಾಗಿ ವಿರಮಿಸಿ ಎದ್ದ ಮೇಲೆ ಈ ವಿಚಾರ ತಿಳಿಸಿದೆ. ಈ ಶಾಲೆಯನ್ನು ಇಲ್ಲಿಯ ಕೈಗಾರಿಕೋದ್ಯಮಿ ಗಳೂ ದಾನಿಗಳೂ ಆದ ಅರ್. ಗುರು ಎಂಬುವರು ನಡೆಸುತ್ತಿರುವುದಾಗಿಯೂ ಸುಮಾರು ಸಂಜೆ ೪ ಗಂಟೆಗೆ ಕಾರಂತರನ್ನು ಅಲ್ಲಿಗೆ ಕರೆದೊಯ್ಯುಲು ಬರುವುದಾಗಿಯೂ ಹೇಳಿದೆ. ಅದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿ ಕೈಗಾರಿಕೋದ್ಯಮಿಗಳು ತಮ್ಮ ಪ್ರತಿಷ್ಠೆ ಬೆಳೆಸಿಕೊಳ್ಳಲು ಆ ಶಾಲೆಗಳನ್ನು ನಡೆಸುವು ದಾಗಿಯೂ ತಾನು ಬರುವುದಿಲ್ಲವೆಂಬು ದಾಗಿಯೂ ಕಡ್ಡಿ ಮುರಿದಂತೆ ಹೇಳಿದರು. ಎಲ್ಲಾ ವಿಚಾರಗಳನ್ನು ವಿವರಿಸಿ ಹೇಳಿ ನಾನು ಒಪ್ಪಿಸಿ ಕರೆದುಕೊಂಡು ಬರುವ ಮಾತುಕೊಟ್ಟುದಾಗಿಯೂ ಶಾಲೆಯಲ್ಲಿ ಭಾಷಣ ಮಾಡುವ ಅಗತ್ಯವಿಲ್ಲವಾಗಿಯೂ ಅರ್ಧಗಂಟೆ ಮಕ್ಕಳೊಂದಿಗೆ ಕಳೆಯು ವಂತೆಯೂ ಅವರನ್ನು ಒಪ್ಪಿಸಿದೆ. ಕೊನೆಗೆ ನನ್ನ ಕೋರಿಕೆಗೆ ಒಪ್ಪಿ ಬಂದು ಮಕ್ಕಳೊಡನೆ ಸುಮಾರು ಒಂದೂವರೆ ಗಂಟೆ ಕಾಲ ಕಳೆದು ಮಾರನೇ ದಿನ ಊರಿಗೆ ಹಿಂತಿರುಗಿದರು. ಮೂರು ದಿನದಲ್ಲಿ ಶಾಲೆಯ ಹೆಸರಿಗೆ ರೂ. ೫೦೦೦ ದ ಒಂದು ಚೆಕ್ಕು, ದಾನವಾಗಿ ಬಂತು!

ಇಂದು ಕಾರಂತರು ನಮ್ಮೊಡನಿಲ್ಲ. ಅವ ಹೆಜ್ಜೆಯ ಗುರುತುಗಳು ಉಳಿದಿವೆ. ಅವ ಆದರದ ಬದುಕು? ಬರಹ ... ಮುಂದಿವೆ. ಅನುಸರಿಸುವವರು ಯಾರು?

ಕಾರಂತರು ಬಾಲ್ಯದಲ್ಲಿ ಬಡತ ಕಂಡವರು. ದೊಡ್ಡ ಸಂಸಾರದಲ್ಲಿ ಹುಟ್ಟಿ ಅವರು ವಿದ್ಯಾಭ್ಯಾಸವನ್ನು ಕಾಲೇಜ ಮೆಟ್ಟಲು ಹತ್ತುವಷ್ಟಕ್ಕೇ ನಿಲ್ಲಿಸಬೇಕ ಯಿತು. ಮುಂದೆ ಬರವಣಿಗೆಯನ್ನೇ ವೃತ್ತಿ ಯಾಗಿಟ್ಟುಕೊಂಡು ಊರು ಸುತ್ತಿ ಅನೇ ಜನರ ಪರಿಚಯ ಸ್ನೇಹಗಳಿಂದ ಮನುಷ್ಯ ಗುಣ ಸ್ವಭಾವಗಳನ್ನು ತಿಳಿಯಲು ಪ್ರಯತ್ನಿ ಸಿದರು. ತಮ್ಮ ಕಾದಂಬರಿಗಳಲ್ಲಿ ತಮ ಸುತ್ತಲಿನ ವ್ಯಕ್ತಿಗಳನ್ನೇ ಪಾತ್ರಗಳಾ ತಂದರು. ವ್ಯಕ್ತಿ ವ್ಯಕ್ತಿ, ವ್ಯಕ್ತಿ ಸಮಾಜ ಸಮಾಜ ವ್ಯಕ್ತಿಗಳಲ್ಲಿಯ ಸಂಬಂಧಗಳನ ತಿಳಿದು ತಮ್ಮ ಕಾದಂಬರಿಗಳ ಮೂಲ ಓದುಗರಿಗೂ ತಿಳಿಸಲು ಪ್ರಯತ್ನಿಸಿದರ ಮನುಷ್ಯ ಬದುಕಿನಲ್ಲಿಯ ಮೌಲ್ಯಗಳನ ಎತ್ತಿ ಹಿಡಿದ, ಅವನ್ನು ಕಡೆಗಣಿಸಿ ಬ ಹಣ ಸಂಪಾದನೆ ಮಾಡಿ ತನ್ನ ಮತ್ತು ತ

ಪರಿವಾರದ ಸುಖ ಸಾಧನೆಗೆ ಮಾತ್ರ ಬದುಕಿದ ವ್ಯಕ್ತಿಗಳನ್ನು ಚಿತ್ರಿಸಿದರು. ಬದುಕಿನುದ್ದಕ್ಕೂ ಕಡುಬಡತನದಲ್ಲಿದ್ದು ಕೊನೆಯತನಕ ಪ್ರಾಮಾಣಿಕವಾಗಿ ಬದುಕಿದವರನ್ನು ಬಣ್ಣಿಸಿದರು. ಇಂತ ವ್ಯಕ್ತಿಗಳನ್ನು ಸಮಾಜ ಗೌರವಿಸುವುದನ್ನು ಗುರುತಿಸಿದರು. ಈಗಿನ ದಿನಗಳಲ್ಲಂತೂ ಅಂಥ ಬಡತನವನ್ನು ಅಂಥ ಪ್ರಾಮಾಣಿಕತೆಯನ್ನು ಕಾಣಲು ಸಾಧ್ಯವೇ ಎಂಬುದು ತಿಳಿಯದು. ಕಾರಂತ ಭೈರಪ್ಪನವರಂಥ ಕಾದಂಬರಿಕಾರರು ಚಿತ್ರಿಸಿದ ಕಥಾಪಾತ್ರಗಳಿಂದ ಮಾತ್ರ ತಿಳಿಯಲು ಸಾಧ್ಯವಾಗಬಹುದೇನೋ!

ಕಾರಂತರು ತಮಗೆ ಪ್ರಿಯವಾದ ಎಲ್ಲ ವಿಷಯಗಳ ಮೇಲಿನ ಗ್ರಂಥಗಳನ್ನು ಓದಿ ತಮ್ಮ ಜ್ಞಾನ ಭಂಡಾರವನ್ನು ಬೆಳೆಸಿಕೊಂಡವರು. ಕಿರಿಯರಿಗೂ ಹಿರಿಯ ವಿದ್ಯಾರ್ಥಿಗಳಿಗೂ, ಅಭ್ಯಾಸಕರಿಗೂ ಉಪಯುಕ್ತವಾಗುವಂಥ ಪುಸ್ತಕಗಳನ್ನು ಬರೆದರು. ಕನ್ನಡದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳು ಇಲ್ಲದಿದ್ದ ಕಾಲದಲ್ಲಿ, ಬಾಲ ಪ್ರಪಂಚ, ವಿಜ್ಞಾನ ಪ್ರಪಂಚ ಸಂಪುಟಗಳನ್ನು ಬರೆದರು. ತಾನು ತಿಳಿದುಕೊಂಡ ಎಲ್ಲ ವಿಚಾರಗಳನ್ನು ಕನ್ನಡದಲ್ಲಿ ಬರೆದರು. ಸುಮಾರು ೬-೭ ದಶಕಗಳಲ್ಲಿ ಅವರು ಬರೆದು ಪ್ರಕಟಿಸಿದ ಪುಸ್ತಕಗಳನ್ನೆಲ್ಲ ಸೇರಿಸಿದಾಗ ಒಂದು ಜ್ಞಾನ ಭಂಡಾರವೇ ಆಗುವುದರಲ್ಲಿ ಸಂದೇಹವಿಲ್ಲ.

ಮನುಷ್ಯ ತಾನು ಸಾಧಿಸಬೇಕೆಂದಿರುವುದನ್ನೆಲ್ಲಾ ಈ ಜನ್ಮದಲ್ಲೇ ಮಾಡಬೇಕೆಂಬುದು ಕಾರಂತರ ಸಿದ್ಧಾಂತ. ಇದನ್ನು ತಾವು ಸಾಧಿಸಿಯೂ ತೋರಿಸಿದ್ದಾರೆ. ಅನೇಕ ಜನ್ಮಗಳಲ್ಲಿ ನಂಬಿಕೆ ಇಟ್ಟಿರುವವರು ಹತ್ತಾರು ಜನ್ಮಗಳಲ್ಲಿ ಮಾಡಲಾರದುದನ್ನು ತನ್ನ ಒಂದೇ ಜನ್ಮದಲ್ಲಿ ಮಾಡಿ ತೋರಿಸಿ ಮುಂದಿನ ಪೀಳಿಗೆಗೆ ಆದರ್ಶಪ್ರಾಯರಾಗಿದ್ದಾರೆ. ಅವರಿಗೆ ಪುನರ್ಜನ್ಮದಂತೆಯೇ ಪಾಪ ಪುಣ್ಯ, ಸ್ವರ್ಗ ನರಕ ಮತ್ತು ಮೋಕ್ಷ ಸಾಧನೆಯಲ್ಲೂ ನಂಬಿಕೆ ಇಲ್ಲ. ತನಗೊಬ್ಬನಿಗೇ ಮೋಕ್ಷ ಸಿಗಬೇಕೆಂಬ ಸ್ವಾರ್ಥವೂ ಇಲ್ಲ. ಅವರಿಗೆ 'ಬಾಳ್ವೆಯೇ ಬೆಳಕು' ಅವರ ಬದುಕು ಅತ್ಯಂತ ವಿಶಾಲವಾದುದು, ಸೂಕ್ಷ್ಮ ಹಾಗೂ ಸಂವೇದನಾಶೀಲವಾದುದು. ಅವರ ಕಾಳಜಿ ಇಂದಿನ ಜನಾಂಗದ ಕುರಿತು ಮಾತ್ರವಲ್ಲ ಮುಂಬರುವ ಅನೇಕ ಪೀಳಿಗೆಗಳ ಕುರಿತೂ, ಜಗತ್ತಿನಲ್ಲಿ ಬದುಕುತ್ತಿರುವ ಎಲ್ಲಾ ಜೀವ ಜಂತುಗಳ ಕುರಿತು ಆಗಿದೆ. ಅವರ ದೃಷ್ಟಿಯಲ್ಲಿ ಮನುಷ್ಯ ಅತ್ಯಂತ ಸ್ವಾರ್ಥಿ! ಬದುಕನ್ನು ಅವರಂತೆ ಕಾಣುವ ವ್ಯಕ್ತಿ ಅತಿ ವಿರಳ. ಅವರ ಸಾಹಿತ್ಯ ಓದುಗರಿಗೆ ಜ್ಞಾನದ ಆಗರ ವಿದ್ವಾಂಸರಿಗೆ ಸಂಶೋಧಕರಿಗೆ ಸಾಕಷ್ಟು ವಿಶಾಲವಾದ ವಸ್ತು. ಇಂಥ ವ್ಯಕ್ತಿ ಶಕ್ತಿ ಇಂದು ನಮ್ಮೊಡನಿಲ್ಲ. ಬದುಕಿನಂತೆಯೇ ಸಾವಿನಲ್ಲೂ ಧೈರ್ಯ ತೋರಿದರು. ಕೊನೆಯವರೆಗೂ ತಲೆ ಎತ್ತಿ ನಡೆದರು. ಕಾರಂತರು ಕಾರಂತರಾಗಿಯೇ ಸಾವನ್ನಪ್ಪಿದರು. ನಮಗೆ ಉಳಿದಿರುವುದು ಅವರ ನೆನಪು ಮಾತ್ರ.

ಕಾರಂತರ ಮಾನವೀಯ ಮುಖ

ಎ. ಪಿ. ಗೌರೀಶಂಕರ
ಶ್ರೀ ಶೈಲ, ಪಿಂಟೋಸ್ ಲೇನ್
ಕರಂಗಲ್ಪಾಡಿ, ಮಂಗಳೂರು-೫೭೫೦೦

ಸದಾ ಅಧ್ಯಯನ, ಮನನ, ಸ್ವಾಭಾವಿಕ ಕಾರ್ಯತತ್ಪರತೆ, ಬಹುಮುಖ ಪ್ರತಿಭೆ ಸ್ಫೂರ್ತಿಯುತ ಮತ್ತು ಸ್ಪಷ್ಟ ಮಾತುಗಾರಿಕೆ ಇತ್ಯಾದಿ ಬೆರಗುಗೊಳಿಸುವ ಗುಣಗಳಿಂದಾಗಿ, ಶಿವರಾಮ ಕಾರಂತರ ಅಂತಃಕರಣದಲ್ಲಿ ಹುದುಗಿರುವ ದಯೆ ಪ್ರೀತಿ ಸ್ನೇಹ ಇತ್ಯಾದಿ ಮಾನವೀಯ ಗುಣಗಳ ಪರಿಚಯ ಬಹಳ ಜನರಿಗಿರಲಾರದು. ಸಾಧಾರಣ ಕಳೆದ ೩೫ ವರ್ಷಗಳ ಹತ್ತಿರದ ಪರಿಚಯದಲ್ಲಿ ಅವರ ಮಾನವೀಯ ಗುಣಗಳ ಸೆಳವಿಗೊಳಗಾದ ತೀರ ಸಾಮಾನ್ಯನಿಂದ ಇದೊಂದು ಆ ವ್ಯಕ್ತಿತ್ವದ ಚಿತ್ರಣದ ಪ್ರಯತ್ನ.

ಜೀವನದುದ್ದಕ್ಕೂ ಮಾತಿನಲ್ಲಿ, ನಡೆಯಲ್ಲಿ, ಎಲ್ಲ ವ್ಯವಹಾರಗಳಲ್ಲಿ ಸತ್ಯ ಸಹಜತೆಯನ್ನು ಸ್ವಾಭಾವಿಕವಾಗಿ, ಪ್ರಯತ್ನವಿಲ್ಲದೆ, ಕಾರಂತರು ಅಳವಡಿಸಿಕೊಂಡಿದ್ದರು. ಸಮಾಜದ ದುರ್ಗುಣ, ಕುಂದುಕೊರತೆ, ಔದಾಸೀನ್ಯಗಳ ಸಂಪೂರ್ಣ ಅರಿವಿದ್ದೂ ತಮ್ಮ ಸುತ್ತಲಿನವರೊಡನೆ ಸಹನೆಯಿಂದ, ಮನಃಪೂರ್ವಕವಾದ ಪ್ರೀತಿಯಿಂದ ಜೀವಿಸಲು ಪ್ರಯತ್ನಿಸಿದರು. ತಮ್ಮ ಜೀವನವನ್ನು ಸರಳ ಸಹಜತೆಯಿಂದ ನಡೆಸುವುದರಲ್ಲಿ, ಇತರರಲ್ಲಿಯೂ ಅದನ್ನೇ ಅರಸಿ
ಗುರುತಿಸುವುದರಲ್ಲಿ ಅವರಿಗೊಂದು ತೃಪ್ತಿ
ಅವರ ಬರವಣಿಗೆಯಲ್ಲೂ ಈ ಪ್ರಯತ
ವನ್ನು ಸ್ಪಷ್ಟವಾಗಿ ಕಾಣಬಹುದು.

ಈಗ ೬೦ರ ಹರಯದ ದ.ಕ.ದ ವಿದಾ
ವಂತರ ಮನದಲ್ಲಿ ಕಾರಂತರ ಹೂಗನ್ನ
ಪಾಠಮಾಲೆ, ಸಿರಿಗನ್ನಡ ಪಾಠಮಾಲ
ಬಾಲಪ್ರಪಂಚ, ಚಿತ್ರಮಯ ದಕ್ಷಿಣ ಕನ್ನಡ
ನಾಟಕಗಳು ಸಣ್ಣಕಥೆಗಳು ಒತ್ತಿದ ಛಾ
ಇನ್ನೂ ಮಾಸಿರಲಾರದು. ಸಣ್ಣಮಕ್ಕಳ
ಸುತ್ತಲಿನ ಪ್ರಪಂಚದ, ಪ್ರಕೃತಿಯ ಹಾಗ
ವಿಜ್ಞಾನದ ಕುರಿತು ಕುತೂಹಲ ಉಂ
ಮಾಡುವುದರಲ್ಲಿ ಈ ಬರಹಗಳು ಯಶ
ಯಾಗಿದ್ದುವು. ಬಾಲ ಪ್ರಪಂಚವನ
ಮಕ್ಕಳು ಗುಂಪಾಗಿ ಕುಳಿತು ಓದಿ, ತಮ
ಮೇಷ್ಟ್ರರಿಂದ ವಿವರಣೆ ತಿಳಿದು ಬಾ
ಪ್ರಭಾವಿತರಾಗಿದ್ದರು. ಸಿರಿಗನ್ನಡ ಪ
ಮಾಲೆಯಲ್ಲಿಯ ಪ್ರವಾಸಿ ಪತ್ರಗಳ, ಜಾ
ಕಥೆಗಳು, ವೈಜ್ಞಾನಿಕ ಬರಹಗಳು ಅವ
ಬರೆದ ವ್ಯಕ್ತಿಯ ಬಹುದೊಡ್ಡ ಚಿತ್ರಣವ
ಬಿಂಬಿಸಿದ್ದುವು. ಸ್ವಾಭಾವಿಕವಾಗಿ, ಅ
ಕಾರಂತರನ್ನು ಹತ್ತಿರದಿಂದ ನೋ
ಸಾಧ್ಯವಾದರೆ ಅವರ ಗಮನಸೆ
ಅವರಿಂದಲೇ ಮಾತನಾಡಿಸಿಕೊ
ವಿದ್ಯಾರ್ಥಿಗಳು ತವಕಿಸುತ್ತಿದ್ದ

ಈ ರೀತಿ ಪ್ರಭಾವಿತರಾದ ಮಕ್ಕಳ ಗುಂಪು ೧೯೪೭–೪೮ರ ಕಾಲದಲ್ಲಿ ಒಂದು ಸಂಜೆ ಬಾಲವನಕ್ಕೆ ಧಾಳಿ ಇಟ್ಟಿತು. ಮನೆಯ ಮಹಡಿಯಲ್ಲಿ ನಮ್ಮ ಶಾಲೆಯ ಹಲವು ಮಾಸ್ತರುಗಳಿಂದ ಸುತ್ತುವರಿದು ಕಾರಂತರು ಕುಳಿತಿದ್ದರು. ಬಹಳ ಹೆದರಿಕೆಯಲ್ಲಿ ಅಳುಕಿನಲ್ಲಿ ಮಹಡಿ ಏರಿ ಅವರು ಕುಳಿತಿದ್ದ ಕೊಠಡಿಯ ಹತ್ತಿರ ಮಕ್ಕಳು ಹೋದರು. ಒಳಗೆ ಕುಳಿತವರಿಗೆ ಮಕ್ಕಳೆಲ್ಲ ಚೆನ್ನಾಗಿ ಕಾಣುತ್ತಾರೆ. ಪರಿಚಯವೂ ಇದೆ. ಮಕ್ಕಳ ಗುಂಪು ಅನಿರೀಕ್ಷಿತವಾಗಿ ಕಾರಂತರಂಥ ಮಹಾವ್ಯಕ್ತಿಯ ಮನೆಯ ಕೊಠಡಿಯ ಸಮೀಪ ಬಂದುದರಿಂದ ಮಾಸ್ತರರುಗಳಿಗೆ ಕೋಪ ಬಂದಿರಬೇಕು. ಅವರ ಪ್ರತಿಕ್ರಿಯೆ ಗಡಿಡಾಟ ಒಳಗೆ ಬಂದ ಶತ್ರುಗಳನ್ನು ಎದುರಿಸುವ ಸೈನಿಕರದ್ದು. "ಮಕ್ಕಳೇ ಯಾಕೆ ಬಂದಿರಿ? ಸಂಜೆ ಹಾಸ್ಟೆಲಿನಲ್ಲಿದ್ದು ಪಾಠ ಓದದೆ ಇಲ್ಲಿಗೆ ಏಕೆ ಬಂದಿರಿ? ಇಲ್ಲಿ ನಿಮಗೇನು ಕೆಲಸ?" ಇತ್ಯಾದಿ ಗದರಿಸುವ ಪ್ರಶ್ನೆಗಳು. ಮಾಸ್ತರುಗಳ ಪೈಕಿ ಒಬ್ಬರು ಮೆಲ್ಲಗೆ ಮಕ್ಕಳ ಹಿರಿಯರ ಪರಿಚಯ ಕಾರಂತರಿಗೆ ತಿಳಿಸಿದರು ಮತ್ತು ಮಕ್ಕಳಿಗೆ ಬೇಗನೆ ಹಿಂದೆ ಹೋಗಲು ತಿಳಿಸಿದರು. ಮಕ್ಕಳು ಹೆದರಿ ಹಿಂದೆ ಹೋಗಲು ನಿಶ್ಚೈಸಿದ್ದರು. ಅಷ್ಟರಲ್ಲಿ ಕಾರಂತರು ದೊಡ್ಡ ಸ್ವರದಲ್ಲಿ"....ಅವನ ಮನೆ ಹಿಂದಿನ ಬಲ್ಲೇರಿ ಕಾಡು ಬಾಲವನದಿಂದ ಹೇಗೆ ಕಾಣುತ್ತದೆ ಎಂದು ನೋಡಲು ಬಂದಿದ್ದಾನೆ. ಅದಕ್ಕೇನು, ನೋಡಲಿ ಬಿಡಿ. ಆದರೆ ಬಲ್ಲೇರಿಯಲ್ಲಿರುವಷ್ಟು ಬಾಲವಂತರು ಬಾಲವನದಲ್ಲಿ ಇಲ್ಲ. ನನಗಂತೂ ಬಾಲವಿಲ್ಲ. ಇವರಿಗೆಲ್ಲ (ಮಾಸ್ತರರುಗಳನ್ನು ತೋರಿಸುತ್ತಾ) ಬಾಲವಿದೆಯೇ ಎಂಬುದು ನನಗೆ ತಿಳಿಯದು" ಎಂಬಿತ್ಯಾದಿ ಹಾಸ್ಯದ ಮಾತುಗಳನ್ನಾಡಿ, ನಕ್ಕು ಮಕ್ಕಳ ಮಧ್ಯೆ ಬಂದು ನಿಂತರು. ಪ್ರತಿಯೊಬ್ಬರನ್ನೂ ಮಾತನಾಡಿಸಿ ತಿಳಿದು, ಬಾಲವನದಲ್ಲಿ ಎಲ್ಲ ಕಡೆಯಲ್ಲೂ ಸಂಚರಿಸಲು ಬಹು ಪ್ರೀತಿಯಿಂದ ಅನುಮತಿ ಕೊಟ್ಟರು. ಕಾರಂತರ ಈ ಸಹಜ ವರ್ತನೆಯಿಂದ ಮಕ್ಕಳಿಗಾದ ಸಂತೋಷ ಆಶ್ಚರ್ಯ ಎಷ್ಟೆಂದು ಹೇಳಲು ಸಾಧ್ಯವಿಲ್ಲ. ಅನಂತರ ಅವರ ಮೃಗಾಲಯದ ಅವಶೇಷ, ಶಾಲೆಯ ಕುರುಹು, ಅಳಿದುಳಿದ ಪ್ರಾಣಿಗಳು, ಮಕ್ಕಳ ರೈಲಿನ ಕಂಬಿ ಇವನ್ನೆಲ್ಲ ನೋಡುತ್ತ ಹಿಂದಿನ ವೈಭವದ ದಿನಗಳ ಕನಸು ಕಾಣುತ್ತ ಪಡುಮಲೆ ಗುಡ್ಡೆಯಲ್ಲೆಲ್ಲ ಸಂಚರಿಸಿ ಮಕ್ಕಳು ಹಿಂದಿರುಗಿದರು. ಅಂದಿನಿಂದ ಕಾರಂತರ ಕುರಿತಿದ್ದ ಹೆದರಿಕೆ ಸಂಪೂರ್ಣ ತೊಲಗಿ, ಪೂಜ್ಯಭಾವ, ಗೌರವ ಮತ್ತು ಪ್ರೀತಿ ನೆಲಸಿದುವು. ಇನ್ನೊಂದು ದಿನ ಕಾರಂತರನ್ನು ವಿದ್ಯಾರ್ಥಿ ಭವನದ ಚರ್ಚಾಕೂಟದಲ್ಲಿ ಭಾಷಣಮಾಡಲು ವಿದ್ಯಾರ್ಥಿಗಳು ವಿನಂತಿಸಿದರು. ನಿಗದಿ ಪಡಿಸಿದ ದಿನ ಸಕಾಲದಲ್ಲಿ ಕಾರಂತರು ಹಾಜರಾದರು. "ಕಾಶ್ಮೀರ ವಿವಾದವನ್ನು ಸಂಯುಕ್ತ ರಾಷ್ಟ್ರ ಸಂಸ್ಥೆಗೆ ವಹಿಸಿಕೊಟ್ಟದ್ದು ಸರಿಯೇ?" ಎಂಬ ವಿಚಾರಭಾಷಣ ಮಾಡುವಂತೆ ವಿದ್ಯಾರ್ಥಿಗಳು ಕೇಳಿಕೊಂಡರು. ಕಾರಂತರು "ಈ ವಿಚಾರ ನಮಗೇಕೆ? 'ದೇಶಬಂಧುಗಳು' ಹಲವರಿದ್ದಾರೆ. (ದೇಶಬಂಧುಗಳ ಬಗ್ಗೆ ಭ್ರಮನಿರಸನ ಆಗಲೇ ಪ್ರಾರಂಭವಾಗಿತ್ತು) ಅವರೇ ನೋಡಿಕೊಳ್ಳಲಿ. ನಿಮಗೆ ಹಾವುಗಳ ಕಥೆ ಹೇಳುತ್ತೇನೆ ಕೇಳಿ" ಎಂದು ಪ್ರಾರಂಭಿಸಿದರು. ಸಾಧಾರಣ ೨ ಘಂಟೆಗೇ

ಕಾಲ ಹಾವುಗಳ ಕುರಿತು ಪಾಠ ನಡೆಯಿತು. ಎಲ್ಲ ಭೂಖಂಡಗಳ ಹಾವುಗಳ ಸ್ಥೂಲ ಪರಿಚಯ, ಅವುಗಳ ಹುಟ್ಟು ಜೀವನಕ್ರಮ, ಪ್ರಕೃತಿಯಲ್ಲಿ ಅವುಗಳ ಸ್ಥಾನ ಇತರ ಎಲ್ಲಿಯೂ ಸಮಗ್ರವಾಗಿ ದೊರಕದ ವೈಜ್ಞಾನಿಕ ವಿಚಾರಗಳನ್ನು ಸರಳವಾಗಿ ಮಕ್ಕಳಿಗೆ ಹೇಳಿದರು. ಆಫ್ರಿಕದ ಜಿಂಕೆ ಮತ್ತು ಆ ವರ್ಗದ ಪ್ರಾಣಿಗಳ ಗುಂಪಿನೊಳಗಡೆ ಹಾವುಗಳು ನುಸುಳಿದಾಗ ಅವುಗಳು ತಮ್ಮ ಕಾಲಿನ ಗೊರಸುಗಳನ್ನು ಇಳಿಮುಖವಾಗಿಟ್ಟು ನರ್ತಿಸಿ ಹಾವುಗಳು ಓಡಿಹೋಗುವಂತೆ ಮಾಡುವ ವಿಶಿಷ್ಟ ಕ್ರಮವನ್ನು ಪ್ರತ್ಯಕ್ಷ ಕುಣಿದು ಕಾರಂತರು ತೋರಿಸಿದರು. ಆ ಎರಡು ಗಂಟೆಗಳ ಕಾಲ ತಾವು ತಿಳಿದುಕೊಂಡ ವಿಷಯವನ್ನು ಮಕ್ಕಳಿಗೆ ತಿಳಿಸಬೇಕೆಂಬ ಹಂಬಲದಿಂದ, ತಮ್ಮನ್ನು ಸಂಪೂರ್ಣಮರೆತು ಭಾಷಣ ಮಾಡಿದರು. ಮಕ್ಕಳ ಬಗ್ಗೆ ಅವರಿಗಿದ್ದ ಸ್ನೇಹ, ಪ್ರೀತಿಯಲ್ಲವಾದರೆ ಆ ಪಾಠ ಅಷ್ಟು ಚೆನ್ನಾಗಿರುತ್ತಿರಲಿಲ್ಲ. ಇಂದಿಗೂ ಭಾಷಣ ಮಾಡುತ್ತಿದ್ದ ಕಾರಂತರ ಚಿತ್ರ ಮನಸ್ಸಿನಲ್ಲಿ ಮೂಡುತ್ತದೆ. ಅವರ ಮಾತು ಭಾವ ಕುಣಿತ ಅಂದಿನ ವಿದ್ಯಾರ್ಥಿಗಳ ಕಣ್ಣ ಮುಂದೆ ಎದ್ದು ಬರುತ್ತವೆ.

ಪುತ್ತೂರಿನ ಹೈಸ್ಕೂಲಿನ ಸಾಧಾರಣ ಎಲ್ಲ ಸಭೆ ಸಮಾರಂಭಗಳಲ್ಲಿ ಕಾರಂತರು ಭಾಗವಹಿಸುತ್ತಿದ್ದರು. ಹಲವು ಮಾಸ್ತರರು ವಯಸ್ಸಿನಲ್ಲಿ ಅವರಿಗಿಂತ ಹಿರಿಯರು. ಹಲವರು ವಿಜ್ಞಾನ ಪದವೀಧರರು ಹಾಗಿದ್ದರೂ ಎಲ್ಲರಿಂದಲೂ ನಿಸ್ಸಂಕೋಚವಾಗಿ ಆವರು ಗೌರವಿಸಲ್ಪಡುತ್ತಿದ್ದರು. ಯಾವುದೋ ಒಂದು ಸಭೆಯಲ್ಲಿ ಮಕ್ಕಳ ಬೋಧನೆಯ ಮಾಧ್ಯಮ ಕನ್ನಡವಾಗಬೇಕೇ ಇಂಗ್ಲಿಷ್ ಆಗಬೇಕೇ? ಎಂಬ ಮಾತು ಪ್ರಾಸಂಗಿಕವಾಗಿ ಬಂದಿತ್ತು. ಒಬ್ಬರು ಹಿರಿಯರು ಇಂಗ್ಲಿಷ್ ಭಾಷೆ ಒಲವಿನಲ್ಲಿ ಕೆಲವು ಮಾತುಗಳನ್ನಾಡಿ "ಮೊದಲು ಗಣಿತ ವಿಜ್ಞಾನ ಚರಿತ್ರೆಗಳನ್ನು ಇಂಗ್ಲಿಷ್‌ನಲ್ಲಿಯೇ ಬೋಧಿಸುತ್ತಿದ್ದೆವು. ಈಗ ಅದು ಸಾಧ್ಯವಾಗುತ್ತಿಲ್ಲ. ಇಂಗ್ಲಿಷ್ ಭಾಷಾಜ್ಞಾನದ ಮಟ್ಟ ದಿನದಿಂದ ದಿನ ಕುಸಿಯುತ್ತಿದೆ" ಇತ್ಯಾದಿ ಹೇಳಿದರು. ಮುಗುಳು ನಗುತ್ತ ಕಾರಂತರು ಈ ವಿಚಾರ ವಿವರಿಸಿದರು. ಮನಶ್ಶಾಸ್ತ್ರದ ಆಧಾರದಲ್ಲಿ ಯಾವುದೇ ವಿಷಯಗ್ರಹಣ ಅವನವನ ಮನೆಮಾತಿನಲ್ಲೇ ನಡೆಯುತ್ತದೆ. ಅನಂತರ ಸಂಗ್ರಹಿಸಿದ ವಿಷಯವನ್ನು ಪರಭಾಷೆಗೆ ಪರಿವರ್ತಿಸಿ ಮಾತುಗಳಲ್ಲಿ ಹೊರಗೆಡಹಲಾಗುತ್ತದೆ. ಆದುದರಿಂದ ಸಾಮಾನ್ಯವಾಗಿ ಮನೆಮಾತು ಅಥವಾ ಪ್ರಾದೇಶಿಕ ಭಾಷೆಯಲ್ಲಿ ಪಾಠ ಬೋಧನೆಯಾದರೆ ವಿಷಯಜ್ಞಾನ ಸಂಗ್ರಹಿಸಲು ಅನುಕೂಲ ಎಂದು ವಿವರಿಸಿದರು. ಅವರೆದುರು ತುಳು, ಕೊಂಕಣಿ, ಮಲೆಯಾಳ ಭಾಷೆಗಳನ್ನಾಡುವ ಹಲವು ಮಾಸ್ತರರಿದ್ದರು. ಕಡವ ಶಂಭುಶರ್ಮರು ಅಗಾಧ ಸಂಸ್ಕೃತ ಮತ್ತು ಕನ್ನಡ ಪಂಡಿತರು, ತೀಕ್ಷ್ಣ ಬುದ್ಧಿಯ ವಿಚಾರವಂತ ಬಹುಶ್ರುತರು ಕುಳಿತಿದ್ದರು. ಅವರು ಕಾರಂತರ ಮಾತುಗಳನ್ನು ಏಕಾಗ್ರತೆಯಲ್ಲಿ ಕೇಳುತ್ತಿದ್ದರು. ಅವರು ಏನೋ ವಿವರಣೆ ಕೇಳಿದರು. ಕಾರಂತರು ಶಂಭುಶರ್ಮರ ಮನೆಮಾತು (ಹವ್ಯಕ ಕನ್ನಡ)ಗಳನ್ನೇ ಉದಾಹರಣೆಗೆ ತೆಗೆದುಕೊಂಡು ವಿಷಯಗ್ರಹಣ ಹೇಗೆ ನಡೆಯುತ್ತದೆ, ಅದರ ಪರಿವರ್ತನೆ ಪರಭಾಷೆಯ

ಯಾವ ಕ್ರಮದಲ್ಲಿ ನಡೆಯುತ್ತದೆ ಎಂದು ವಿವರಿಸಿದರು. ಎಲ್ಲ ಮಾತುಗಳೂ ವಿನೋದಮಯವಾಗಿದ್ದುವು. ಇಂಗ್ಲಿಷ್ ಭಾಷಾ ಒಲವಿನವರೂ ನಗುತ್ತ ಕಾರಂತರ ನಿಲುವನ್ನು ಒಪ್ಪಿಕೊಂಡು ತಲೆದೂಗಿದರು. ಇದೆಲ್ಲ ನಡೆದುದು ಸಾಧಾರಣ ೫೦ ವರ್ಷಗಳ ಹಿಂದೆ. ಹೀಗಿದ್ದರೂ ಆ ಭಾಷಣ, ಪ್ರಾತ್ಯಕ್ಷಿಕೆ, ಬೋಧನೆಯ ಕ್ರಮ ಇನ್ನೂ ಮಾಸದೆ ಉಳಿದಿರಬೇಕಾದರೆ ಕಾರಣವೇನು? ಈ ತರದ ಭಾಷಣಗಳು, ಪಾಠ ಬೋಧನೆ, ಪ್ರಾತ್ಯಕ್ಷಿಕೆಗಳು ಬಹಳಷ್ಟು ನಡೆದಿವೆ ಅವುಗಳಿಂದ ವಿದ್ಯಾರ್ಥಿಗಳೂ ಅಧ್ಯಾಪಕರೂ ಬಹಳ ಅನುಭವ ಜ್ಞಾನ ಪಡೆದಿದ್ದಾರೆ. ಈ ತರದ ಭಾಷಣಗಳಲ್ಲಿ ಕೇಳುವವರಿಗೆ ತನ್ನ ಮಾತುಗಳಿಂದ ಪ್ರಯೋಜನವಾಗಬೇಕು, ಅವರಿಗೆ ವಿಷಯ ಜ್ಞಾನ ಉಂಟಾಗಬೇಕೆಂಬ ತೀವ್ರ ಹಂಬಲ ಕಾರಂತರಲ್ಲಿರುತ್ತಿತ್ತು. ಅವರ ನಿಜವಾದ ಅಂತಸ್ತು ತೂಕ ಕೇಳುಗರಿಗೂ ತನಗೂ ಇರುವ ಬೌದ್ಧಿಕ ಅಂತರ ಇವನ್ನು ಮರೆತು ಮಾತಾಡುತ್ತಿದ್ದರು. ಈ ತರದ ಸಭೆ ಸಮಾರಂಭಗಳಲ್ಲಿ ತಮಗೆ ಸಲ್ಲತಕ್ಕ ಗೌರವ, ಪ್ರಾಶಸ್ತ್ಯಗಳ ಕುರಿತು ಎಂದೂ ಚಿಂತಿಸಿದ್ದಿಲ್ಲ. ಎಲ್ಲರೊಡನೆ ಕುಳಿತು ಸಂದರ್ಭಬಂದಾಗ ಯಾವ ಉಪಚಾರದ ಮಾತುಗಳ ನಿರೀಕ್ಷೆ ಇಲ್ಲದೆ, ಸರಳವಾಗಿ ಮಾತು ಪ್ರಾರಂಭಿಸುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಯಾರಾದರೂ ಪ್ರಶ್ನೆಗಳನ್ನೆತ್ತಿದರೆ ಸಹನೆಯಲ್ಲಿ ಉತ್ತರ ಕೊಡುತ್ತಿದ್ದರು.

೧೯೫೭ರಲ್ಲಿ ಕಾರಂತರು ಪ್ರಜಾ ಸೋಷಲಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಮದರಾಸು ವಿಧಾನ ಸಭೆಗೆ ಸ್ಪರ್ಧಿಸಿದರು, ಇವರ ಅಣ್ಣ ರಾಮಕೃಷ್ಣ ಕಾರಂತರು ಅದೇ ಪಕ್ಷದ ಅಭ್ಯರ್ಥಿಯಾಗಿ ಲೋಕಸಭೆಗೆ ಸ್ಪರ್ಧಿಸಿದರು. ಚುನಾವಣೆಯಲ್ಲಿ ಮತಗಳ ಹೆಚ್ಚಿನ ಅಂತರವಿಲ್ಲದೆ ಇಬ್ಬರೂ ಕಾಂಗ್ರೆಸ್ ಅಭ್ಯರ್ಥಿಗಳಿಂದ ಸೋತರು, ಪುತ್ತೂರಿನಲ್ಲಿ ಅವರು ಪ್ರಥಮ ನೆಲಸಿದ ಕಾಲದಿಂದಲೂ ಆಶ್ರಯ, ಪ್ರೋತ್ಸಾಹ ಕೊಟ್ಟು ಸಹಾಯ ನೀಡಿದ ಮೊಳಹಳ್ಳಿ ಶಿವರಾವ್ ಎಂಬ ಪ್ರಸಿದ್ಧ ವಕೀಲರು, ಸಾರ್ವಜನಿಕ ಮುಂದಾಳು ಕಾಂಗ್ರೆಸ್ ಅಭ್ಯರ್ಥಿ ಬೆನಗಲ್ ಶಿವರಾವ್ ಮತ್ತು ವೆಂಕಟ್ರಮಣಗೌಡರ ಪ್ರಚಾರ ಕಾರ್ಯಗಳ ಸಂಚಾಲಕರಾಗಿದ್ದರು. ಮೊಳಹಳ್ಳಿಯವರ ವೈಯಕ್ತಿಕ ವರ್ಚಸ್ಸು ಕೀರ್ತಿಗಳೇ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಮುಖ್ಯ ಕಾರಣ ಎನ್ನಬಹುದು, ಆ ದಿನಗಳಲ್ಲಿ ಕಾರಂತರ ಭಾಷಣ ಮತ್ತು ಪ್ರಚಾರ ಧೋರಣೆಗಳು ಎಂದಿಗೂ ನಾಗರಿಕ ಸಮಾಜ ಅನುಸರಿಸಬೇಕಾದ ನೀತಿ ಕ್ರಮಗಳು. ಎದುರು ಪಕ್ಷದವರನ್ನು ವೈಯಕ್ತಿಕವಾಗಿ ಸ್ವಲ್ಪವೂ ದೂಷಿಸದೆ, ಹಳ್ಳಿಯಿಂದ ಹಳ್ಳಿಗೆ ಸುಂಟರಗಾಳಿಯಂತೆ ಸುತ್ತಾಡುತ್ತ ಪ್ರಚಾರ ನಡೆಸಿದರು. ಕಾಂಗ್ರೆಸ್ ಪಕ್ಷ ಮತ್ತು ಅದರ ಮುಂದಾಳುಗಳ ಕಾರ್ಯ ಧೋರಣೆಗಳನ್ನು ಜನಸಾಮಾನ್ಯರಿಗೆ ಮನವರಿಕೆಯಾಗುವ ಮಾತುಗಳಲ್ಲಿ ವಿವರಿಸಿ ಟೀಕಿಸಿದರು. ಕಾರಂತರು ಗೆಲ್ಲಬಹುದೆಂಬ ನಿರೀಕ್ಷೆ ಬಲವಾಗಿತ್ತು. ಚುನಾವಣಾ ಪ್ರಚಾರದಲ್ಲಿ ಪುತ್ತೂರು ತಾಲ್ಲೂಕಿನ ಪ್ರತಿ ಹಳ್ಳಿಯನ್ನೂ ಸುತ್ತಿ ಸ್ವತಃ ಅನುಭವ ಪಡೆದಿದ್ದರು, ಕೃಷಿಕರ, ಹಳ್ಳಿಗರ ಕಷ್ಟ ಸುಖಗಳ ನೇರ ಪರಿಚಯ ಅವರಿಗಿತ್ತು.

ಸಾಧಾರಣ ೧೯೬೦ ರಿಂದ ೧೯೭೪ ರಲ್ಲಿ ಸಾಲಿಗ್ರಾಮಕ್ಕೆ ಹೋಗುವತನಕ, ಅವರ ಆತ್ಮೀಯ ಸ್ನೇಹಿತರಾಗಿದ್ದ ವಕೀಲ ನಗ್ರಿಮೂಲೆ. ಶಂಕರಭಟ್ಟರೆಂಬವರ ಆಫೀಸಿನ ಹೊರಗಿನ ಕಿರು ಜಗಲಿಯಲ್ಲಿ ಸಂಜೆ ಪ್ರತಿ ದಿನವೆಂಬಂತೆ ಕಾರಂತರ ಮತ್ತು ಅವರ ಸ್ನೇಹಿತರ ಮೀಟಿಂಗ್ ನಡೆಯುತ್ತಿತ್ತು. ಈ ಕೂಟಕ್ಕೆ ಕಾರಂತರ ಮೀಟಿಂಗ್ ಎಂದೇ ಊರಲ್ಲಿ ಪ್ರಸಿದ್ಧಿಯಿತ್ತು. ಸಮಾಜದ ಎಲ್ಲ ಹಂತದ, ವರ್ಗದ, ಸ್ನೇಹಿತರು ಮತ್ತು ಅಭಿಮಾನಿಗಳಿಗು ಮೀಟಿಂಗ್ ತೆರೆದಿತ್ತು. ಹಳೆಯ ಸ್ನೇಹಿತರು, ಹಲವು ಕೃಷಿಕರು, ಶಾಲಾ ಮಾಸ್ತರರು, ವಕೀಲರುಗಳು, ವೈದ್ಯರು, ವ್ಯಾಪಾರಿಗಳು ಸಂಜೆ ತಮ್ಮ ಬಿಡು ಸಮಯದಲ್ಲಿ ಮೀಟಿಂಗಿನಲ್ಲಿ ಸೇರಿ ಕೊಳ್ಳುತ್ತಿದ್ದರು. ಸ್ವಾಭಾವಿಕವಾಗಿ ಕಾರಂತರೇ ಮೀಟಿಂಗಿನ ಕೇಂದ್ರ ವ್ಯಕ್ತಿ. ಅಪರೂಪವಾಗಿ ಹೊರಗಿನಿಂದ ಬಂದ ಅವರ ಸ್ನೇಹಿತರನ್ನೂ ಕರೆದುದುಂಟು. ಆ ದಿನಗಳ ನೆನಪು ಬಹಳ ಸವಿಯಾದುದು. ಮೀಟಿಂಗಿಗೆ ಯಾವುದೇ ಕಾರ್ಯಕ್ರಮ ನಿಯಮದ ಪ್ರತಿಬಂಧವಿಲ್ಲ. ಸುಯೇಜ್ ಕಾಲುವೆಯ ರಾಷ್ಟ್ರೀಕರಣದ ಪ್ರಸಂಗದಲ್ಲಿ ಭಾರತ ತಳೆದ ನಿಲುವಿನಿಂದ ಪ್ರಾರಂಭಿಸಿ, ಮಿತ್ರರೊಬ್ಬರ ಮನೆಯಲ್ಲಿ ಕರುಹಾಕಿದ ಎಮ್ಮೆಯ ಪಥ್ಯದ ತನಕ ಮಾತು ಹರಿಯು ತ್ತಿತ್ತು. ಚರ್ಚೆ, ವಿಮರ್ಶೆ, ಹಾಸ್ಯ ಎಲ್ಲವೂ ಸೇರಿ ಕೊನೆಯ ಮಾತು ಕಾರಂತರದ್ದು. ಯಾವುದೇ ಸಮಸ್ಯೆಗೆ ಅಂತಿಮ ತೀರ್ಪು ಅವರದ್ದು.

ಒಂದುಸಲ ಕೃಷಿಕರೊಬ್ಬರು, ವ್ಯಾಪಾರಿಗಳು ಜೀವನಾವಶ್ಯಕ ವಸ್ತುಗಳನ್ನು ಬಚ್ಚಿಟ್ಟು, ಮುಂದೆ ಕೃತಕ ಅಭಾವ ಉಂಟು ಮಾಡಿ ಲಾಭಗಳಿಸುತ್ತಾರೆ ಎಂಬ ಮಾತನ್ನು ಸಂದರ್ಭದಲ್ಲಿ ಅಗತ್ಯವಿರುವುದಕ್ಕಿಂತ ಹೆಚ್ಚಿಗೆ… ಖಾರವಾಗಿ ಹೇಳಿದರು. ಕಾರಂತರು ಕೆಲವು ಪ್ರಶ್ನೆಗಳನ್ನು ಕೇಳಿದರು. ಯಾವ ವಸ್ತು? ಈಗಿನ ಕ್ರಯ ಎಷ್ಟು? ಮುಂದೆ ಏನಾಗ… ಬಹುದು? ಬಚ್ಚಿಟ್ಟು ಮಾರುವ ಕಾಲಕ್ಕೆ… ಕ್ರಯ ಕೆಳಗೆ ಬಂದರೆ ನಷ್ಟಯಾರಿಗೆ? ಅವರ… ಪ್ರಶ್ನೆಗಳು ಸಾಕ್ರೆಟೀಸನ ಪ್ರಶ್ನೆಗಳ ಜಾಡು… ಹಿಡಿಯುತ್ತದೆ. ಕೊನೆಗೆ ನೀವು ಬೆಳೆಯುವ… ಅಡಿಕೆಯನ್ನು ಈ ವರ್ಷ ಮಾರದೆ, ಬರುವ… ವರ್ಷದ ತನಕ ದಾಸ್ತಾನಿರಿಸಿ ಮಾರಿದರೆ… ಅದು ತಪ್ಪಾಗುತ್ತದೆಯೇ? ವ್ಯಾಪಾರಿ… ಧರ್ಮ ಏನು? ಕೃಷಿಕನ ಧರ್ಮ ಏನು? ಕೃಷಿಕನು ವ್ಯಾಪಾರಿಯಂತೆ ವರ್ತಿಸುವುದು… ನ್ಯಾಯವೇ? ಅಷ್ಟರವರೆಗೆ ಮಾತನ್ನು… ತಂದು ನಿಲ್ಲಿಸಿದರು. ಎಲ್ಲರಿಗೂ ಸಂದರ್ಭ… ಅರಿವುಂಟಾಯಿತು. ಧರ್ಮವೆಂಬುದನ್ನು… ದುರುಪಯೋಗಿಸುವ ಮನೋಧರ್ಮ… ಅರಿವಾಯಿತು. ಇನ್ನೊಂದು ಸಂದರ್ಭದಲ್ಲಿ… ಒಬ್ಬರು ತೆಲುಗುಭಾಷೆ ಭಾರತದ ಎಲ್ಲಾ… ಭಾಷೆಗಳಿಗಿಂತ ಕಿವಿಗೆ ಇಂಪು. ಹಾಗಾ… ಅದನ್ನು ಭಾರತದ ಇಟಾಲಿಯನ್ ಭಾ… ಎಂಬ ಮಾತು ಹೇಳಿದರು. ಕಾರಂತ… ಪಾಟೀ ಸವಾಲುಗಳು ಪ್ರಾರಂಭವಾಯ್ತು… ಕೊನೆಯ ಹಂತದಲ್ಲಿ ಭಾಷೆಯ ಇಂ… ಮಾತನಾಡುವವನ ಮನೋಭಾವ ಹೊಂ… ಕೊಂಡಿದೆ, ಕೇವಲ ಮಾತಿನಲ್ಲಿ ಉ… ಯೋಗಿಸುವ 'ಮೃದು' ಅಕ್ಷರಗಳ ಲೆ… ದಿಂದ ಭಾಷೆಯೊಂದನ್ನು ಇಂಪಾದ ಭಾ… ಯೆಂದು ಪರಿಗಣಿಸುವುದು ಭಾ… ಶಾಸ್ತ್ರಜ್ಞರ ಒರಟು ನಿಯಮ ಎ…

ಅಭಿಪ್ರಾಯ ಎಲ್ಲರೂ ಒಪ್ಪುವಂತೆ ಕಾರಂತರು ಮಂಡಿಸಿದರು. ಇನ್ನೊಂದು ಸಂಜೆ ಒಬ್ಬರು ವಕೀಲರು ಸ್ವತಂತ್ರ ಪಕ್ಷದ ಕುರಿತು ಬಹಳ ಶ್ಲಾಘನೆಯ ಮಾತುಗಳ ನ್ನಾಡಿ ಮುಂದಿನ ಚುನಾವಣೆಯಲ್ಲಿ ಆ ಪಕ್ಷ ಜಯಗಳಿಸಿ ಸರಕಾರ ರಚನೆಯಾದರೆ ದೇಶದ ಸ್ಥಿತಿ ಸುಧಾರಣೆಯಾಗಬಹುದೆಂದರು. ಆದರೆ ಕಾಂಗ್ರೆಸ್ಸು ಅವಿದ್ಯಾವಂತರನ್ನು ಮರುಳು ಗೊಳಿಸಿ ಮತಸಂಗ್ರಹಿಸುತ್ತದೆ. ಮತದಾರರು ವಿದ್ಯಾವಂತರಾಗದೆ ದೇಶಕ್ಕೆ ಸುಭಿಕ್ಷೆಯಾಗ ಲಾರದು ಎಂಬ ಧಾಟಿಯಲ್ಲಿ ಮಾತನಾಡಿ ದರು. ಕೆಲವು ದಿನಗಳ ಹಿಂದೆ ರಾಜಾಜಿ ಯವರ ಸ್ವತಂತ್ರ ಪಕ್ಷದ ಚುನಾವಣಾ ಪ್ರಚಾರ ಭಾಷಣವನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಕಾರಂತರು ಭಾಷಾಂತರಿಸಿದ್ದರು. ಅಲ್ಲದೆ ಆ ಪಕ್ಷದ ವ್ಯಕ್ತಿ ಸ್ವಾತಂತ್ರ್ಯದ ನಿಲುವನ್ನು ಕಾರಂತರು ಯಾವಾಗಲೂ ಮೆಚ್ಚಿದ್ದರು. ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಆ ಪಕ್ಷದ ಪರವಾಗಿ ಸಾಕಷ್ಟು ಭಾಷಣಗಳನ್ನೂ ಮಾಡಿದ್ದರು. ಹಾಗಿದ್ದರೂ ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳೇನು? ಸ್ವತಂತ್ರ ಪಕ್ಷದ್ದೇನು? ಅವುಗಳ ಅನುಷ್ಠಾನ ವ್ಯಾವಹಾರಿಕವಾಗಿ ಸರಿಯಾಗಿ ನಡೆದಿದೆಯೇ? ಅನುಷ್ಠಾನ ಸರಿಯಿಲ್ಲವಾದರೆ ಅದಕ್ಕೆ ಯಾರು ಕಾರಣ? ಕಾರ್ಯಕರ್ತರೇ? ಅಥವಾ ಪಕ್ಷ ತತ್ವಗಳೇ? ಸ್ವತಂತ್ರ ಪಕ್ಷದ ವ್ಯಕ್ತಿ ಸ್ವಾತಂತ್ರ್ಯದ ಕೊನೆಯ ಹಂತ ಎಲ್ಲಿ ಎಂಬುದು ಸ್ಪಷ್ಟವಿದೆಯೇ ಈ ಧಾಟಿಯಲ್ಲಿ ಅಸ್ಪಷ್ಟವಾಗಿದ್ದ ಭಾವನೆಯನ್ನು ಹತ್ತಿ ಹಿಂಜಿದಂತೆ ಎಸಳೆಸಳಾಗಿ ಹಂತಹಂತವಾಗಿ ಸ್ಪಷ್ಟ ಪಡಿಸಿದರು. ಕೊನೆಗೆ ತಲೆಯೊಳಗೆ ಕೇವಲ ವಿಷಯ ಅಥವಾ ಮಾಹಿತಿ ಸಂಗ್ರಹಣೆಯಿಂದ ವಿದ್ಯಾರ್ಜನೆ ಆಗ ಲಾರದು, ಸಂಗ್ರಹಿಸಿದ ಮಾಹಿತಿ ಕುರಿತು ಸರಿಯಾದ ವಿಶ್ಲೇಷಣೆಮಾಡುವ ಅಭ್ಯಾಸ ಮತ್ತು ವಿಶ್ಲೇಷಣೆಯಿಂದ ಕಂಡು ಬಂದ ದಾರಿಯಲ್ಲಿ ನಡೆಯುವ ಧೈರ್ಯವಿದ್ದರೆ ವಿದ್ಯೆ ಸಫಲವಾದೀತು ಎಂಬ ತೀರ್ಮಾನಕ್ಕೆ ಮೀಟಿಂಗ್‌ನ ಕೊನೆಯ ಠರಾವು ಸ್ವೀಕಾರ ವಾಯ್ತು. ಪ್ರತಿಯೊಂದು ಚರ್ಚೆಯಲ್ಲೂ ಕಾರಂತರ ಮಾತೇ ಕೊನೆಯದೆಂದ ಮಾತ್ರಕ್ಕೆ ಇತರರ ಅಭಿಪ್ರಾಯವನ್ನು ಅವರು ಎಂದೂ ಸ್ವೀಕರಿಸಲಾರರು ಎಂಬುದು ಸರಿಯಲ್ಲ. ಆ ಕಾಲದಲ್ಲಿ ಮೈಸೂರು ಸರ್ಕಾರ ಮರಗಳನ್ನು ಕಡಿಯುವ ನಿಷೇಧ ಕಾಯದೆಯನ್ನು ಜಾರಿಗೆ ತಂದಿತ್ತು. ಪರಿಣಾಮವಾಗಿ ಖಾಸಗಿ ಭೂಮಿಯಲ್ಲಿರುವ ಮರಗಳನ್ನು ಕಡಿಯಲು ಅಧಿಕಾರಿಗಳ ಅನುಮತಿ ಪಡೆಯುವುದು ಅನಿವಾರ್ಯವಾಯ್ತು. ಕಾಯದೆಯನ್ನು ಖಂಡಿಸಿ ಹಲವಾರು ಸಭೆಗಳು ನಡೆದುವು. ಕಾರಂತರು ಇಂಥ ಸಭೆಗಳಲ್ಲಿ ಕಾಯದೆ ಯನ್ನು ವಿರೋಧಿಸಿ ಬಹಳ ರೋಷಾವೇಶ ದಲ್ಲಿ ಭಾಷಣಮಾಡುತ್ತಿದ್ದರು. ಒಂದು ಸಂಜೆ ಇದೇ ಪ್ರಶ್ನೆಯ ಚರ್ಚೆ ನಡೆಯಿತು. ಒಬ್ಬ ವಕೀಲರು ಕಾಯದೆಯ ಉದ್ದೇಶ ವನ್ನು ವಿವರಿಸಿದರು. ಪ್ರಕರಣಗಳನ್ನು ವಿಶ್ಲೇಷಿಸಿ, ನಿಯಮಾನುಸಾರ ಕಾಯದೆಯ ಅನುಷ್ಠಾನವಾದರೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಲಾರದು. ಮರಗಳನ್ನು ಯಾವ ನಿರ್ಬಂಧವೂ ಇಲ್ಲದೆ ಕಡಿಯಲು ಬಿಟ್ಟರೆ, ಬಿಡಿ ವ್ಯಕ್ತಿಗಳ ಸ್ವಂತ ಲಾಭಕ್ಕಾಗಿ ಸಮಾಜ ಸಂಕಟಕ್ಕೊಳಗಾಗುತ್ತದೆ ಎಂದು ವಾದಿಸಿ ದರು. ಸಾಕಷ್ಟು ಕಾವೇರಿ ಚರ್ಚೆ

ನಡೆಯಿತು. ಕಾರಂತರು ಚರ್ಚೆ ನಡೆಯುವಷ್ಟು ಕಾಲವೂ ಮಾತನಾಡದೆ ಮೌನವಾಗಿದ್ದರು. ಕೊನೆಯಲ್ಲಿ ಹಾಸ್ಯದಲ್ಲಿ "....ರವರು ಅವರ ಮನೆಯ ಸುತ್ತಲೂ ವನ ಬೆಳೆಯಿಸಿ ತಣ್ಣಗಿರಲಿ" ಎಂದು ಹೇಳುತ್ತ ಮೀಟಿಂಗ್ ಬರಕಾಸ್ತುಮಾಡಿದರು. ಆದರೆ ಆನಂತರ ಅವರು ಮರ ಕಡಿಯುವ ನಿಷೇಧ ಕಾಯುದೆಯನ್ನು ವಿರೋಧಿಸಿ ಮಾತನಾಡಲಿಲ್ಲ. ಅವರು ಆ ಕಾಲದಲ್ಲೂ ಪರಿಸರ ಪ್ರೇಮಿ. ಸಂಜೆಯ ಮೀಟಿಂಗಳ ನಡವಳಿಕೆ ಸಾಧಾರಣ ಸ್ಯಾಮುವೆಲ್ ಜಾನ್‌ಸನ್-ಬಾಸ್‌ವೆಲ್ ಮತ್ತು ಮಿತ್ರರ ಕೂಟದ ನಡವಳಿಕೆಯನ್ನು ಹೋಲುತ್ತದೆ. ಚರ್ಚೆಗಳಲ್ಲಿ ಕಾವೇರುವ ಸಂದರ್ಭಬಂದಾಗ ಹಾಸ್ಯದ ಚಟಾಕಿಯಿಂದ ತಣಿಸುತ್ತಿದ್ದರು. ಎಲ್ಲರೂ ಸಮಾನವಾಗಿ ಭಾಗವಹಿಸುತ್ತಿದ್ದರು. ಚರ್ಚೆಗಳು ಮುಕ್ತ ಫಲಿತಾಂಶದ ಘೋಷಣೆ ಅನಗತ್ಯ ಆ ಕಾಲದಲ್ಲಿ ಕಾರಂತರಿಗೊಬ್ಬ ಬಾಸ್‌ವೆಲ್ ಸಿಕ್ಕಿದ್ದರೆ ಎಂಬ ದುಃಖಮಿಶ್ರಿತ ಆಶೆ ಈಗ ತಲೆದೋರುತ್ತದೆ.

ಒಂದು ಸಂಜೆ ಎಲ್ಲರೂ ಯಾವುದೋ ಮಾತಿನಲ್ಲಿ ಮಗ್ನರಾಗಿದ್ದರು. ಕಾರಂತರು ಗಡಿಬಿಡಿಯಲ್ಲಿ ಎದ್ದು ನಿಂತರು. ರಸ್ತೆಯ ಆಚೆ ಬದಿಯ ಮೈದಾನದಲ್ಲಿ ಮಕ್ಕಳ ಆಟದ ಮರಳಿನ ಅಂಕಣ, ಜಾರುಬಂಡಿ ಇತ್ಯಾದಿಗಳಲ್ಲಿ ಪೋಲೀಸ್ ವಸತಿಗಳ ಮಕ್ಕಳು ಆಟವಾಡುತ್ತಿದ್ದರು. ಮಕ್ಕಳ ಪೈಕಿ ಒಬ್ಬ ಬಹಳ ಚಿಕ್ಕವನು. ೩ ಅಥವಾ ೪ ವರ್ಷದ ಒಳಗಿನವನು. ಅವನ ತಂದೆ ಪರ ಊರಿನಲ್ಲಿದ್ದನು. ಮೀಟಿಂಗ್ ಜರುಗುವ ಕಟ್ಟಡದ ಕೆಳಗೆ ಒಂದು ಸಣ್ಣ ಕೋಣೆಯಲ್ಲಿ ಮಗು ಮತ್ತು ಅವನ ತಾಯಿಯ ವಾಸ. ತಾಯಿ

ಹೊರಗೆ ಇತರರಲ್ಲಿ ಮನೆ ಕೆಲಸ ಮಾ
ಜೀವಿಸುತ್ತಿದ್ದಳು. ಸಂಜೆ ಮಗು ಬಹ
ಅಂಶ ನಗ್ನವಾಗಿದ್ದು ಆಟದ ಮೈದಾನದ
ಇತರ ಮಕ್ಕಳೊಂದಿಗೆ ಆಡುವನು. ಅವ
ಗಿಂತ ದೊಡ್ಡ ಮಕ್ಕಳ ಜೊತೆಗೆ ಆಡಲ
ಹೋಗಿದ್ದ ಈ ಮಗುವನ್ನು ದೊಡ್ಡ
ಮಕ್ಕಳು ಸೇರಿಸಿಕೊಳ್ಳಲಿಲ್ಲ. ಆ ಸಂ
ಇತರ ಮಕ್ಕಳು ಈ ಮಗುವನ್ನು ಕ್ರೂ
ವಾಗಿ ನೋಯಿಸಿ ಹೊರಗೆ ನೂಕಿದರು
ಮಕ್ಕಳೊಳಗಿನ ಈ ಗಲಾಟೆಯ ನ
ಕಾರಂತರು ನೋಡುತ್ತಿದ್ದರು. ಮನ
ನೋವು ಅವರ ಮುಖದಲ್ಲಿ ಕಾಣಿಸುತಿತ್ತು
ಈ ಮಗುವನ್ನು ನೋಯಿಸಿದಾಗ ಅವನ
ಅಳಲು ಪ್ರಾರಂಭಿಸಿದಾಗ ಅವರಿಗೆ ಸಹಿ
ಲಾಗಲಿಲ್ಲ. ಎದ್ದು ನಿಂತು ಮಕ್ಕಳನ
ಉದ್ದೇಶಿಸಿ ಏನೋ ಅಂದರು. ಅಷ್ಟರ
ಸಣ್ಣ ಮಗು ಇತರರು ನೂಕಿದ್ದರ ರಭಸಕ
ರಸ್ತೆಯ ಪಕ್ಕದ ಕೊಳಕು ನೀರಿನ ಚರಂಡಿ
ಉರುಳಿತು. ಕಾರಂತರು ಕುರ್ಚಿಗಳನ್ನು ತ
ಗಡಿಬಿಡಿಯಲ್ಲಿ ಮಹಡಿಯಿಂದ ಅವಸರದ
ಓಡಿ, ಚರಂಡಿಯಿಂದ ಮಗುವನ್ನು ಎ
ದರು. ಅಲ್ಲಿಯೇ ಪಕ್ಕದಲ್ಲಿದ್ದ ಬಾವಿಯಿಂ
ನೀರು ಸೇದುತ್ತಿದ್ದ ಹೆಂಗಸೊಬ್ಬಳಿಂದ ನೀ
ತೆಗೆದು ಮಗುವನ್ನು ತೊಳೆದು ಸಮಾ
ದಲ್ಲೇ ವಾಸಿಸುತ್ತಿದ್ದ ತಾಯಿಯ ವಶ
ಕೊಟ್ಟರು. ಇಷ್ಟೆಲ್ಲ ಕೇವಲ ೧೫-
ಮಿನಿಟುಗಳೊಳಗೆ ನಡೆದಿದೆ. ಇ
ಮೀಟಿಂಗ್ ಸದಸ್ಯರು ತಾವೇನು ಮಾ
ಬೇಕೆಂಬುದನ್ನು ಮನಗಾಣದೆ ಇದ
ದಕ್ಕೂ ಮೂಕ ಪ್ರೇಕ್ಷಕರಾಗಿದ್ದರು. ಇ
ರರು ನಿರ್ಗತಿಕ ಮಗುವನ್ನು ಕೊಚ್ಚೆಗುಂ
ಯಿಂದ ಎತ್ತಿದರೆ ತಮ್ಮ ಉಡುಪು ಹಾ

ದರೆ, ಅಥವಾ ಅಂಥ ನಿರ್ಗತಿಕ ಮಗುವನ್ನು ಎತ್ತಿದರೆ ಇತರರ ದೃಷ್ಟಿಯಲ್ಲಿ ತಮ್ಮ ಸ್ಥಾನಕ್ಕೆ ಅಂತಸ್ತಿಗೆ ಧಕ್ಕೆ ಇತ್ಯಾದಿ ಆತಂಕಗಳಲ್ಲಿ ಸಿಲುಕಿ ಸುಮ್ಮನಿದ್ದರು. ಆದರೆ ಕಾರಂತರಿಗೆ ಅಂಥಾ ಯಾವುದೇ ಅಸಹಜ ಸೀಮಾ ರೇಖೆಗಳಿಲ್ಲ. ನಿಶ್ಶಕ್ತ ಮಗು ಅನ್ಯಾಯವಾಗಿ ಚರಂಡಿಗೆ ಉರುಳಿದೆ. ಅದನ್ನು ಎತ್ತುವುದು ಶಕ್ತಿವಂತನ ಸಾಮಾಜಿಕ ಕರ್ತವ್ಯ ಇಷ್ಟೇ ಅವರ ತತ್ವ. ಇದರ ಆಚರಣೆಯಲ್ಲಿ ಇತರ ವ್ಯಾವಹಾರಿಕ ಅಳುಕುಗಳನ್ನು ಕಡೆಗಣಿಸಿ ಸಹಜ ಗುಣದಂತೆ ವರ್ತಿಸುತ್ತಾರೆ. ಇದರಲ್ಲಿ ಕಪಟ ನಾಟಕ ವಿಲ್ಲ. ಬಹಳ ದಿನಗಳ ಹತ್ತಿರ ಪರಿಚಯದಿಂದ ಕಂಡು ಬಂದಂತೆ ಕಾರಂತರಿಗೆ ಬಡವರ, ಬಲಹೀನರ, ನಿರ್ಗತಿಕರ ಬಗ್ಗೆ ಸ್ವಾಭಾವಿಕವಾದ ಮತ್ತು ನಿಷ್ಕಪಟವಾದ ಕರುಣೆ ಮತ್ತು ಪ್ರೇಮ. ಇದನ್ನು ಅವರು ಬಹಿರಂಗವಾಗಿ ಮಾತಿನಲ್ಲಿ ಪ್ರಕಟಿಸಿ ಬಣ್ಣಿಸಿದವರಲ್ಲ. ಅದರೆ ಸಂದರ್ಭ ಮತ್ತು ಪ್ರಸಂಗ ಒದಗಿದಾಗ ತನ್ನಿಂದ ತಾನಾಗಿ ಇತರ ಯಾವುದೇ ಪ್ರೇರಣೆ ಇಲ್ಲದೆ ಅವರ ಸ್ವಾಭಾವಿಕ ಪ್ರತಿಕ್ರಿಯೆ ಬಲಹೀನರ ಪರವಾಗಿ ಕೆಲಸ ಮಾಡಲು ಖರ್ಚು, ವೆಚ್ಚ ಶ್ರಮ, ಕಾಲಗಳನ್ನು ಅವರು ಪರಿಗಣಿಸುತ್ತಿರಲಿಲ್ಲ. ಹಲವಾರು ನಿದರ್ಶನಗಳನ್ನು ಈ ಕುರಿತು ಕೊಡಬಹುದು.

ಅಂಬು ಕೇರಳದಿಂದ ಪುತ್ತೂರಿಗೆ ಬಂದು ಕಟ್ಟಡ ಮನೆ ಇತ್ಯಾದಿಗಳನ್ನು ಕಟ್ಟುವ ಕಸುಬಿನ ಗಾರೆ ಮೇಸ್ತ್ರಿ. ಕಾರಂತರಿಗೆ ಅವನ ಪರಿಚಯ ಅವರು ಪುತ್ತೂರಿನಲ್ಲಿ ನೆಲಸಿದಂದಿನಿಂದ. ಅಂಬು ಪ್ರಾಮಾಣಿಕ, ಯಾವುದೇ ದುರ್ವ್ಯಸನವಿಲ್ಲದ ಕಸಬುಗಾರ. ಅವನ ಕೆಲಸದಲ್ಲಾಗಲಿ, ಅವನು ಒಪ್ಪಿಸುತ್ತಿದ್ದ ಕೆಲಸ ಮತ್ತು ಹಣದ ಲೆಕ್ಕದಲ್ಲಾಗಲೀ ಮೋಸವಿಲ್ಲ. ಉದ್ಯೋಗದ ನಿಮಿತ್ತ ಪರ ಊರಿನಲ್ಲಿ ವಾಸಿಸುತ್ತಿದ್ದ ಕಾರಂತರ ಹಳೆಯ ಮಿತ್ರರೊಬ್ಬರಿಗೆ ಅವರ ಮನೆಯ ದುರಸ್ತಿ ಕೆಲಸಕ್ಕೆ ಯೋಗ್ಯ ಗಾರೆ ಮೇಸ್ತ್ರಿಯ ಅಗತ್ಯ ಬಂತು. ಕಾರಂತರ ಮಾತಿನಂತೆ ಅಂಬು ಮೇಸ್ತ್ರಿ ಕೆಲಸ ಒಪ್ಪಿಕೊಂಡ. ಕೆಲಸದ ಮೇಲ್ತನಿಖೆ ಮಾಡುವ ದನಿ ಊರಲಿಲ್ಲವಾದರೂ ಪ್ರಾಮಾಣಿಕವಾಗಿ ಚೆನ್ನಾಗಿ ಮಾಡಿ ಮುಗಿಸಿ ಖರ್ಚಿನ ಲೆಖ್ಖಗಳನ್ನು ಅಂಬು ಮೆಸ್ತ್ರಿ ಧನಿಗೆ ಒಪ್ಪಿಸಿದ. ಕೆಲಸದ ಅನುಭವವಿಲ್ಲದ ಧನಿ ಲೆಖ್ಖವನ್ನು ಒಪ್ಪಲಿಲ್ಲ. ಅಂಬು ಮೇಸ್ತ್ರಿ ಸುಳ್ಳು ಲೆಖ್ಖ ಕೊಟ್ಟು ಹೆಚ್ಚಿಗೆ ಹಣ ಸುಲಿಯಲು ಪ್ರಯತ್ನಿಸುತ್ತಾನೆಂದು ಧನಿಯ ಆಧಾರ ರಹಿತ ಸಂಶಯ. ದೂರು ಕಾರಂತರಲ್ಲಿಗೆ ತಲುಪಿತು. ಕಾರಂತರು ಎರಡೂ ಪಕ್ಷದವರನ್ನು ವಿಚಾರಿಸಿಕೊನೆಗೆ ಅಂಬು ಮೇಸ್ತ್ರಿಯ ಲೆಖ್ಖ ಸರಿ. ಆ ಪ್ರಕಾರ ಉಳಿಕೆ ಹಣ ಪಾವತಿಸಬೇಕಾದುದು ನ್ಯಾಯ ಎಂದು ಮಿತ್ರರಿಗೆ ತಿಳಿಸಿದರು. ಕಾರಂತರ ತೀರ್ಪನ್ನು ಆ ಮಿತ್ರರು ಒಪ್ಪಲಿಲ್ಲ. ಕಾರಂತರ ಮಾತು ನಡೆಯಲಿಲ್ಲ. ಇನ್ನೇನು ಮಾಡುವುದೆಂದು ಅಂಬು ಮೇಸ್ತ್ರಿ ತೋಚದಾದ. ಕಾರಂತರು ಹಳೆಯ ಸ್ನೇಹದ ಬಲೆಗೆ ಬಲಿಯಾಗದೆ, ಅಂಬು ಮೇಸ್ತ್ರಿಯಲ್ಲಿ ಬಾಕಿ ಬರಬೇಕಾದ ಹಣದ ವಸೂಲಾತಿಗೆ ಕೋರ್ಟಿನಲ್ಲಿ ದಾವೆ ಹಾಕುವಂತೆ ತಿಳಿಸಿದರು. ಅವರ ಸ್ನೇಹಿತ ಪಟೇಲರ ಮೂಲಕ ದಾವೆ ತನಿಖೆ ನಡೆಯಿತು. ಕಾರಂತರೇ ಪ್ರತಿ ತನಿಖೆಯ ದಿನ ಕೋರ್ಟಿಗೆ ಹಾಜರಾಗಿ ಸಾಕ್ಷಿ ಹೇಳಿದರು.

ಮೇಸ್ತ್ರಿ ದಾವೆಯಲ್ಲಿ ಜಯ ಹೊಂದಿದನು. ಬಾಕಿ ಇದ್ದ ಹಣ ವಸೂಲಾಯ್ತು. ಹಳೆಯ ಮಿತ್ರರು ಕಾರಂತರು ತನಗೆ ದ್ರೋಹ ಮಾಡಿದರೆಂದು ಸಾರಿಕೊಂಡು ಬಂದರು. ಸ್ನೇಹ ಕಡಿದರು. ಆದರೆ ಬಡವನನ್ನು ಕಾರಂತರು ಕೈಬಿಡಲಿಲ್ಲ.

ಆ ಕಾಲಕ್ಕಿಂತ ಸಾಧಾರಣ ೧೦–೧೫ ವರ್ಷಗಳ ಹಿಂದೆ ಸ್ವಾತಂತ್ರ್ಯಪೂರ್ವದ ಕಾಲದ ಇನ್ನೊಂದು ಘಟನೆ. ಆಗ ಆಮಿಷ ವೊಡ್ಡಿ ಬಡವರ ಮಕ್ಕಳನ್ನು ಮತಾಂತರ ಗೊಳಿಸುವ ಧರ್ಮ ಪ್ರಚಾರಕರೊಬ್ಬರು ಪುತ್ತೂರಿನ ಸಮೀಪದ ಹಳ್ಳಿಯಲ್ಲಿದ್ದರು. ಹತ್ತಿರದ ಬಡವರ ಎರಡು ಮಕ್ಕಳನ್ನು ಆ ಮತ ಪ್ರಚಾರಕರು ಉಚಿತವಾಗಿ ಸಾಕಿ, ಸಲಹಿ, ವಿದ್ಯಾಭ್ಯಾಸ ಕೊಡುವುದಾಗಿ ಆಮಿಷವೊಡ್ಡಿ ತಮ್ಮ ಸ್ವಾಧೀನತೆಗೆ ಪಡೆದರು. ಅನಂತರ ಮಕ್ಕಳ ತಂದೆ ತಾಯಿಗೆ ಮೋಸದ ಅರಿವುಂಟಾಯ್ತು. ಮನೆಯಲ್ಲಿ ಊಟಕ್ಕೆ ತತ್ವಾರವಾದರೂ, ಪರಿಚಯ ವಿಲ್ಲದ ಪರಿಸರದಲ್ಲಿ ಪರಕೀಯ ಶಿಸ್ತುಗಳಿಗೆ ಮನವೊಲಿಯದೆ ಮಕ್ಕಳ ಜೀವನ ದಿನದಿಂದ ದಿನಕ್ಕೆ ಕಷ್ಟವಾಯ್ತು. ಮಕ್ಕಳನ್ನು ಹಿಂದೆ ಪಡೆಯಲು ತಂದೆ ಮಾಡಿದ ಪ್ರಯತ್ನವೆಲ್ಲಾ ವಿಫಲವಾಯ್ತು. ಮಕ್ಕಳನ್ನು ಕಳಕೊಂಡ ಬಡ ತಂದೆಯ ಕರುಣಾಜನಕ ಕಥೆ ಕಿವಿಯಿಂದ ಕಿವಿಗೆ ದಾಟಿ ಕಾರಂತರ ತನಕ ಬಂತು. ಆ ಕಾಲದಲ್ಲಿ ಕಾರಂತರು ಪುತ್ತೂರಿನಲ್ಲಿ ಹೊಸದಾಗಿ ನೆಲಸಿದವರು. ಆರ್ಥಿಕವಾಗಿ ಬುಡ ಅಸ್ಥಿರ. ಬ್ರಾಹ್ಮಣ ಸಮಾಜ ಅವರನ್ನು ಹತ್ತಿರ ಸೇರಿಸದು. ಸ್ನೇಹಿತರ ಬಳಗ ಊರಿನಲ್ಲಿಲ್ಲ. ಇಂಥ ಸ್ಥಿತಿಯಲ್ಲಿ ಅದೆಷ್ಟೇ ಕರುಣಾಜನಕ ಸ್ಥಿತಿಯಾದರೂ

ಇತರರು ಯಾರೂ ಬಡತಂದೆಯ ಪರವಾಗಿ
ಮಕ್ಕಳನ್ನು ಹಿಂದೆ ಪಡೆಯಲು ಪ್ರಯತ್ನಿ
ಸುವ ಸಾಹಸಕ್ಕೆ ಕೈಯಿಕ್ಕುತ್ತಿರಲಿಲ್ಲ.
ಹಾಗೇ ಆಯ್ತು; ಕಾರಂತರೊಬ್ಬರೇ
ಟೊಂಕ ಕಟ್ಟಿ ಕೋರ್ಟಿನಲ್ಲಿ ಕ್ರಿಮಿನಲ್
ವ್ಯವಹರಣೆ ನಡೆಯಿಸಿ ಮಕ್ಕಳನ್ನು ಹಿಂದೆ
ಪಡೆದರು. ಅವರ ಭಾವ ಎಂ. ಸದಾಶಿವ
ರಾಯರೆಂಬ ವಕೀಲರು ವ್ಯವಹರಣೆ ನಡೆಸಿ
ದರು. ಕ್ರಿಮಿನಲ್ ದಾವೆಯ ಬೆಳವಣಿಗೆ,
ತನಿಖೆ, ತೀರ್ಮಾನ ಇತ್ಯಾದಿಗಳನ್ನು ಬಹಳ
ರೋಚಕವಾಗಿ ಅವರು ವಿವರಿಸಿ ಹೇಳು
ತ್ತಿದ್ದರು. ಕಾರಂತರು ಅವರ ಕೈಯಿಂದ
ಖರ್ಚು ಮಾಡಿ ದಾವೆಯನ್ನು ಹೂಡಲ
ಬಡವನಿಗೆ ಸಹಾಯ ಮಾಡದಿರುತ್ತಿದ್ದ
ಮಕ್ಕಳ ಸ್ಥಿತಿ ಏನಾಗುತ್ತಿತ್ತು ಎಂದ
ಊಹಿಸಲು ಸಾಧ್ಯವಿಲ್ಲ.

ಮೇಲಿನ ಘಟನೆಯ ಮತ ಪ್ರಚಾರ
ವಿಧರ್ಮಿಯ, ಆದುದರಿಂದ ಕಾರಂತರ
ಬಡವನಿಗೆ ಸಹಾಯ ಮಾಡುವ ನೆಪದ
ವಿಧರ್ಮಿಯನ ಎದುರು ದಾವೆ ನಡೆಸಿ
ರೆಂದು ವಾದಿಸಲು ಸಾಧ್ಯವಿಲ್ಲ. ಇಂಥದ್ದೆ
ಇನ್ನೊಂದು ಘಟನೆ ೧೯೬೦-೬೧ರ
ಸಂಭವಿಸಿತು. ಈ ಸಂದರ್ಭದಲ್ಲಿ ಹೊಟ್ಟೆ
ಊಟ ಮಾಡಲೂ ಸಾಕಷ್ಟು ಆದಾಂ
ವಿಲ್ಲದ ತಂದೆ ಮತ್ತು ತಾಯಿ, ತಮ
ಎರಡು ಮಕ್ಕಳನ್ನು ಪುತ್ತೂರಿನಲ್ಲಿ ಕಾರಂತ
ಆಪ್ತ ಮಿತ್ರರಾಗಿದ್ದ ಒಬ್ಬರು ಪ್ರಾಮಾಣಿ
ಸಮಾಜಸೇವಾಸಕ್ತ ವಕೀಲರ ಸ್ವಾಧೀನ
ಬಿಟ್ಟುಕೊಟ್ಟರು. ಅವರು ಆ ಮಕ್ಕಳನ
ಶ್ರೀ ರಾಮಕೃಷ್ಣ ಆಶ್ರಮದವರು ನಡೆಯಿ
ತ್ತಿದ್ದ ಅನಾಥಾಲಯದಲ್ಲಿ ಸಾಕಿ ಯೋ
ಉಚಿತ ವಿದ್ಯಾಭ್ಯಾಸ ಒದಗಿಸುವ ಏರ್ಪಾ

ನೋಡಲಿದ್ದರು. ಇವೆಲ್ಲ ಕಾರಂತರಿಗೆ ತಿಳಿದೇ ಇತ್ತು. ಈ ಏರ್ಪಾಡುಗಳಲ್ಲಿ ಗೌಪ್ಯವೇನೂ ಇರಲಿಲ್ಲ. ಕಾರಂತರು ಆಕ್ಷೇಪಿಸಿದ್ದೂ ಇಲ್ಲ. ಆದರೆ ಸ್ವಲ್ಪ ಕಾಲಾನಂತರ ತಂದೆ ತಾಯಿಗೆ ಮಕ್ಕಳನ್ನು ಕಳೆದುಕೊಂಡ ವ್ಯಥೆ ಬಾಧಿಸಲು ಪ್ರಾರಂಭಿಸಿತು. ದುಡಿಯಲು ಉದ್ಯೋಗವಿಲ್ಲದೆ, ಉಣ್ಣಲು ಅನ್ನವಿಲ್ಲದೆ, ಮುಂದಿನ ಜೀವನದ ದಾರಿ ಕಾಣಿಸದೆ ಆರ್ಥಿಕ ಮುಗ್ಗಟ್ಟಿನಲ್ಲಿದ್ದಾಗ ಸಾಕಷ್ಟು ಯೋಚಿಸದೆ ಮಕ್ಕಳನ್ನು ಪರ ಸ್ವಾಧೀನತೆಗೆ ಕೊಟ್ಟಾಗಿತ್ತು. ಇನ್ನು ತಮ್ಮ ಮಕ್ಕಳು ಎಂಬ ಮೋಹ ಭಾವ ಕಳಚಿಕೊಳ್ಳಲು ಸಾಧ್ಯವಾಗದೆಂದು ತಿಳಿದಾಗ ಅವರು ನಿಜವಾಗಿಯೂ ದುಃಖಿಸಲು ಪ್ರಾರಂಭಿಸಿದರು. ಕಾರಂತರು ತಂದೆ ತಾಯಿಯರ ಪರವಾಗಿ ತಮ್ಮ ಮಿತ್ರರಲ್ಲಿ ಮಕ್ಕಳನ್ನು ಅನಾಥಾಲಯದಿಂದ ಹಿಂದಿರುಗಿಸುವಂತೆ ಒತ್ತಾಯಿಸಿದರು. ಆದರೆ ಮಿತ್ರರು ಕಾರಂತರ ವಾದ ಒಪ್ಪಲಿಲ್ಲ. ಈ ವಿಷಯದಲ್ಲಿ ಒಂದು ಸಂಜೆಯ ಮೀಟಿಂಗ್‌ನಲ್ಲಿ ಕಾವೇರಿದ ಚರ್ಚೆ ನಡೆಯಿತು. ಅನಾಥಾಲಯದ ಪ್ರತಿನಿಧಿ ಕಾರಂತರನ್ನು ಭಾವಾವೇಶದಲ್ಲಿ ಖಂಡಿಸಿ, ರೋಷದಲ್ಲಿ ಹೊರನಡೆದರು. ಅಪ್ರಾಯಸ್ಥ ಮಕ್ಕಳನ್ನು ಕೂಡಲೇ ತಂದೆಯ ಸ್ವಾಧೀನತೆಗೆ ಒಪ್ಪಿಸದಿದ್ದರೆ ಖಂಡಿತವಾಗಿಯೂ ತಾನು ಕಾಯಿದೆ ಪ್ರಕಾರ ನ್ಯಾಯಾಲಯದಲ್ಲಿ ದೂರು ಸಲ್ಲಿಸುವುದಾಗಿ ಕಾರಂತರು ಏರು ಧ್ವನಿಯಲ್ಲಿ ಗದರಿಸಿದರು. ಅವರ ವಕೀಲ ಮಿತ್ರರು ಹಲವು ರೀತಿಯಲ್ಲಿ ಸಾಂತ್ವನದ ಮಾತುಗಳನ್ನು ಹೇಳಿದರು. ತಂದೆ ತಾಯಿಯ ಪ್ರೇಮ ಕೇವಲ ಕುರುಡು ಮೋಹ. ಅದಕ್ಕಾಗಿ ಎಳೆಯ ಜೀವಗಳ ಭವಿಷ್ಯ ಹಾಳು ಮಾಡುವುದು ವಿವೇಕ ಅಲ್ಲ. ತಂದೆ ತಾಯಂದಿರು ಜೀವನೋಪಾಯ ಗಳಿಸಲು ಮಕ್ಕಳ ಹಂಬಲದ ಕಪಟ ನಾಟಕವಾಡುತ್ತಿದ್ದಾರೆ. ಈ ಮಂದಿಯನ್ನು ವ್ಯಾವಹಾರಿಕವಾಗಿ ವಿವೇಕಿಗಳು ನಂಬ ಕೂಡದು. ಒಂದು ವೇಳೆ ಅವರು ನಿಜವಾಗಿಯೂ ಆರ್ಥಿಕವಾಗಿ ಕಷ್ಟದಲ್ಲಿರುವುದಾದರೆ ಅವರ ಜೀವನಕ್ಕೆ ಇತರ ಉಪಯುಕ್ತ ಕಸುಬು ಒದಗಿಸುವ ಪ್ರಯತ್ನ ಮಾಡೋಣವೆಂದೂ ಕಾರಂತರ ವಕೀಲ ಮಿತ್ರರು ವಿನಂತಿಸಿದರು. ಕಾರಂತರ ಕೋಪ ಶಮನವಾಗಲಿಲ್ಲ. ಅವರ ನಿಲುವು ಸ್ಪಷ್ಟ ಮತ್ತು ನಿಶ್ಚಿತ. ಮಕ್ಕಳ ಬಗ್ಗೆ ತಂದೆ ತಾಯಂದಿರ ಪ್ರೇಮವನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇಲ್ಲ. ತಂದೆ ತಾಯಂದಿರು ಮನಃಪೂರ್ವಕವಾಗಿ ಒಪ್ಪದೆ ಮಕ್ಕಳನ್ನು ಅವರ ಸ್ವಾಧೀನತೆಯಿಂದ ಹೊರತರುವುದು ನೈತಿಕವಾಗಿ ಸರಿಯಲ್ಲ. ಕೊನೆಗೂ ಮಕ್ಕಳನ್ನು ಅವರ ತಂದೆ ತಾಯಂದಿರ ಸ್ವಾಧೀನತೆಗೆ ಹಿಂದಿರುಗಿಸಲಾಯಿತು. ಆ ಬಡ ತಂದೆ ತಾಯಂದಿರಿಗೆ ಕಾರಂತರು ಆರ್ಥಿಕ ಸಹಾಯ ಕೊಟ್ಟಿದ್ದು ತಿಳಿದು ಬಂದಿದೆ. ಬಹಿರಂಗ ಅಂತರಂಗದಲ್ಲಿ ವ್ಯತ್ಯಾಸವಿಲ್ಲದೆ ಬಲಹೀನರ ಬಗ್ಗೆ ಟೊಂಕ ಕಟ್ಟಿ, ಸೋಲು ಗೆಲುವುಗಳ ಬಗ್ಗೆ ಸ್ವಲ್ಪವೂ ಚಿಂತಿಸದೆ ಹೋರಾಟಕ್ಕೆ ಧುಮುಕುವುದು ಅವರ ಪ್ರವೃತ್ತಿ. ಅವರ ಈ ಸ್ವಭಾವವನ್ನು (ಬಹುಶಃ ವ್ಯಾವಹಾರಿಕವಾಗಿ ದುಡುಕು ಎಂದು ಪರಿಗಣಿಸುವ) ಬಹಳಷ್ಟು ಮಂದಿ ದುರುಪಯೋಗಿಸಿದ್ದಾರೆ. ಕೆಲವು ಸಲ ಅಂಥ ದುರುಪಯೋಗ ಅವರಿಗೆ ತಿಳಿಯುತ್ತದೆ. ಹೆಚ್ಚಿನ ಪ್ರಸಂಗಗಳಲ್ಲಿ ಅವರಿಗೆ ತಿಳಿಯದು.

'ಬ್ರಾಹ್ಮಣರು ಬ್ರಾಹ್ಮಣ್ಯ' ಇದರ ಕುರಿತು ಅವರ ಅಭಿಪ್ರಾಯ ೧೯೩೨–೩೩ ರಷ್ಟು ಹಿಂದೆ ಸ್ಪಷ್ಟವಾಗಿ ಬ್ರಾಹ್ಮಣರಿಗೇನೇ ನೇರವಾಗಿ ತಿಳಿಸಿದ್ದಾರೆ. ಬ್ರಾಹ್ಮಣ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವದ

ಪ್ರಸಂಗದಲ್ಲಿ ಈಗಿನ ದಿಗಳಲ್ಲಿ ಬ್ರಾಹ್ಮಣ್ಯ ವನ್ನು ಅನುಸರಿಸದಿರುವ ಕುರಿತು ಮತ್ತು ಬ್ರಾಹ್ಮಣ ವಿದ್ಯಾರ್ಥಿಗಳಿಗಾಗುವ ಅನ್ಯಾಯದ ಕುರಿತು ಮಾತು ಬಂತು. ಕಾರಂತರು ಅಧ್ಯಕ್ಷ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದರು. "ನಿಜವಾದ ಬ್ರಾಹ್ಮಣರು ಬ್ರಾಹ್ಮಣ ಸಮಾಜದಲ್ಲೇ ಕೇವಲ ಕೆಲವು ಮಂದಿ. ಅಂಥಹವರನ್ನು ಬ್ರಾಹ್ಮಣೇತರ ಸಮಾಜಗಳಲ್ಲೂ, ವಿದೇಶಗಳಲ್ಲೂ ಗುರುತಿಸ ಬಹುದು. ಈಗ ಸಮಾಜದಲ್ಲಿ ತಲೆಯೆತ್ತಿ ರುವ ಸಮಸ್ಯೆ ಎಂದರೆ ಸರಕಾರ ಒದಗಿಸುವ ಉದ್ಯೋಗಾವಕಾಶ, ಸವಲತ್ತು ಮತ್ತು ಎಂಜಲು ಕೂಳಿಗಾಗಿದೆಯಲ್ಲದೆ, ನಿಜವಾದ ಬ್ರಾಹ್ಮಣ್ಯದ ರಕ್ಷಣೆ ಕುರಿತಾಗಿರುವುದಲ್ಲ. ವಿದ್ಯಾರ್ಜನೆಯ ಪ್ರಯತ್ನವನ್ನು ಉದ್ಯೋಗಕ್ಕಾಗಿ ಮಾತ್ರ ಮಾಡದೆ, ಜ್ಞಾನಾರ್ಜನೆಯನ್ನೇ ಗುರಿಯಾಗಿಟ್ಟು ಮಾಡಿದರೆ ನಿಜವಾದ ಬ್ರಾಹ್ಮಣ್ಯ ರಕ್ಷಿಸಿ ದಂತಾಗುತ್ತದೆ. ಜ್ಞಾನವಿದ್ಯೆ ಎಂದರೆ ಕೇವಲ ಮನದೊಳಗೆ ವಿಷಯ ಮಾಹಿತಿ ಸಂಗ್ರಹ ವಲ್ಲ. ಮಾಹಿತಿಯ ಕುರಿತಾಗಿ ವೈಚಾರಿಕ ಮಾಹಿತಿ ಪಡೆಯಲು ಸತತ ಪ್ರಯತ್ನವಿರ ಬೇಕು. ಈ ಪ್ರಯತ್ನದಲ್ಲಿ ಹೊರಗಿನ ಗುರು ಇಲ್ಲ. ಪ್ರತಿಯೊಬ್ಬನಿಗೆ ಅವನೇ ಗುರು. ಸರಕಾರದ ಎಂಜಲು ಕೂಳಿಗೆ ಯುವ ಜನರು ಪ್ರಯತ್ನಿಸುವುದನ್ನು ಬಿಟ್ಟರೆ "ಸಮಾಜ ಕಲ್ಯಾಣ ತನ್ನಷ್ಟಕ್ಕೇ ಆಗುತ್ತದೆ." ಅನಂತರ ಬ್ರಾಹ್ಮಣರೆಂದು ಹೇಳಿಕೊಳ್ಳುವ ಜನಾಂಗದವರ ನಡೆನುಡಿ ವರ್ತನೆಗಳ ಕುರಿತುಸಾಕಷ್ಟು ವಿವರಿಸಿ ಯೂರೋಪಿನ ಯಹೂದ್ಯ ಜನಾಂಗದ ಉದಾಹರಣೆ ಕೊಟ್ಟರು. ಅವರ ಭಾಷಣ ಬಹಳ ಮಂದಿಗೆ ಹಿಡಿಸಲಿಲ್ಲ. ಆದರೆ ಅವರ ನಿಲುವು ಕೊನೆಯ ತನಕ ನಿಶ್ಚಲ ಸ್ಪಷ್ಟ.

ಸಂಜೆಯ ಮೀಟಿಂಗ್ ಕಾಲದಲ್ಲೇ ಪುತ್ತೂರಿನಲ್ಲಿ ಕರ್ನಾಟಕ ಸಂಘವನ್ನು ಸ್ಥಾಪಿಸಿ ಊರ ಜನರಿಗೆ ಕನ್ನಡದ ಅದರ ಬರಹಗಾರರ, ಸೋದರ ಭಾಷೆಗಳ ಬರಹ ಗಾರರ, ಉತ್ತಮ ಸಾಹಿತ್ಯ ಕೃತಿಗಳ, ಅಲ್ಲದೆ ಲಲಿತ ಕಲೆಗಳ ಪರಿಚಯ ಮಾಡಿಕೊಡು ತ್ತಿದ್ದರು. ಈ ಸಾಹಿತ್ಯ ಸಂಘದ ಕಾರ್ಯ ಕಲಾಪಗಳಿಗೆ ಯಾವುದೇ ಕಟ್ಟುಪಾಡು— ನಿಯಮಗಳಿಲ್ಲ. ಒಬ್ಬರು ಮಹನೀಯರು ಸದಾ ಅಧ್ಯಕ್ಷರು ಇನ್ನೊಬ್ಬರು ಕಾರ್ಯ- ದರ್ಶಿ. ಕಾರಂತರು ಸದಾ ಸಂಚಾಲಕರು. ಅವರೇ ಸಂಘದ ಜೀವ, ಉಸಿರು. ಪುತ್ತೂರಿ ನಲ್ಲಿ ಸಾಹಿತ್ಯ ಕಲೆಗಳ ವಿಚಾರ ಏನಾದರೂ ಪ್ರಚಾರ ಅಥವಾ ಸೇವೆಗಳು ನಡೆದಿವೆ ಯಾದರೆ ಅದಕ್ಕೆ ಆ ಕಾಲದಲ್ಲಿ ಇತರರೆಲ್ಲರಿ ಗಿಂತ ಹೆಚ್ಚಿಗೆ ದುಡಿದವರು ಕಾರಂತರು. ಅವರಲ್ಲವಾದರೆ ಪುತ್ತೂರಿನಲ್ಲಿ ಸಾಹಿತ್ಯ ಸೇವೆ ಬಾಯಿ ಮಾತಿನಲ್ಲೇ ಉಳಿಯುತ್ತಿತ್ತು.

ರಾಜಕೀಯ ಚುನಾವಣಾ ಕಾಲದಲ್ಲಿ ಮೊಳಹಳ್ಳಿ ಶಿವರಾಯರ ಕಾಂಗ್ರೆಸ್ ಪರ ಪ್ರಚಾರ ಕಾರ್ಯ, ಕಾರ್ಯವಿಧಾನ, ಇತ್ಯಾದಿ ಗಳನ್ನು ಕಟುವಾಗಿ ಟೀಕಿಸಿ ಹಳ್ಳಿಯಿಂದ ಹಳ್ಳಿಗೆ ಸುತ್ತಾಡಿದರೂ ಅವರಲ್ಲಿ ಕಾರಂತರಿಗ ಇದ್ದ ಗೌರವ, ಪ್ರೇಮ, ಅಭಿಮಾನ ಸ್ವಲ್ಪ ವಲ್ಲ. ರಾಜಕೀಯವಲ್ಲದ ಇತರ ಎಲ್ಲ ಕ್ಷೇತ್ರ ಗಳಲ್ಲೂ ಮೊಳಹಳ್ಳಿಯವರ ಕುರಿತು ಬಹ ಶ್ಲಾಘನೀಯ ಮಾತುಗಳನ್ನಾಡುತ್ತಿದ್ದರು ಪುತ್ತೂರಿನ ಸಾರ್ವಜನಿಕ ಜೀವನದ ಸ್ವರ್ಣ ಕಾಲ ಮೊಳಹಳ್ಳಿಯವರ ಚಟುವಟಿಕೆಯ ಜೀವಿತಾವಧಿ ಎಂದೇ ಕಾರಂತರು ಅಭಿ ಪ್ರಾಯ ಪಟ್ಟಿದ್ದರು. ಮೊಳಹಳ್ಳಿಯವ ಮರಣಾನಂತರ ಕಾರಂತರ ವೈಯಕ್ತಿ ಸಾಧನೆಯಿಂದ ಮತ್ತು ಪ್ರಭಾವದಿಂ ಸಾಕಷ್ಟು ಧನ ಸಂಗ್ರಹಿಸಿ ಅವರ ನೆನ ಮುಂದಿನ ತಲೆಮಾರುಗಳಲ್ಲಿ ಉಳಿಯ

ಒಂದು ಸುಂದರ ಕಟ್ಟಡವನ್ನು ಹೈಸ್ಕೂಲಿನ ವಠಾರದಲ್ಲಿ ಕಟ್ಟಿಸಿರುತ್ತಾರೆ. ಈ ಕೆಲಸದಲ್ಲಿ ಪುತ್ತೂರಿನ ಹಳ್ಳಿಗಳಲ್ಲಿ ಸಂಚರಿಸಿ, ತಮ್ಮ ಹಿಂದಿನ ದಿನಗಳಲ್ಲಿ ಅವರೊಡನೆ ಕುಣಿದು ಆಟವಾಡಿದ ಮಹನೀಯರನ್ನು ಮುಖತಃ ಭೇಟಿಯಾಗಿ, ಸಹಾಯಬೇಡಿ ಧನ ಸಂಗ್ರಹಿಸಿ ಕಟ್ಟಡ ಕೆಲಸವನ್ನು ಅತಿ ಕಡಿಮೆ ಕಾಲಾವಧಿಯಲ್ಲಿ ಸುಂದರವಾಗಿ ಮುಗಿಸಿದ್ದಾರೆ. ಕಾರಂತರ ಹಲವಾರು ಸಾಹಸಗಳಲ್ಲಿ ಈ ಕಟ್ಟಡ ನಿರ್ಮಾಣವೂ ಒಂದು ಮಹತ್ತಾದುದು.

ಅವರು ನಡೆ ನುಡಿಗಳಲ್ಲಿ ತನ್ನ ಪ್ರಸಿದ್ಧಿಗಾಗಿ ಎಂದೂ ಪ್ರಯತ್ನಿಸಿದವರಲ್ಲ. ಸಮಾಜದ ಕುರಿತು ಯಾವಾಗಲೂ ಅಂತಃಕರಣಪೂರ್ವಕವಾದ ಪ್ರೇಮ ಮತ್ತು ಅನುಕಂಪವಿತ್ತು. ೬೦ ನೇ ವರ್ಷದ ಹುಟ್ಟುದಿನದಂದು ಪುತ್ತೂರಿನ ಜನರು ಸಭೆಯಲ್ಲಿ ಅಭಿನಂದಿಸಿದರು. ಆ ಸಂದರ್ಭದಲ್ಲಿ ಬಾಲ್ಯದಿಂದ ಆತನಕ ಅವರು ಸಮಾಜದಿಂದ, ಸ್ನೇಹಿತರಿಂದ, ಬಂಧುಗಳಿಂದ ಕೇಳದೆ ಪಡೆದ ಸಹಾಯ ಸಹಕಾರಗಳನ್ನು ಹೆಸರೆತ್ತಿ ಬಿಡಿಸಿ ಹೇಳಿ ತನ್ನ ಋಣಭಾರವನ್ನು ಹೇಳಿದರು. “ಆದರೆ ನಾನು ಸಮಾಜಕ್ಕೆ, ನನ್ನ ಮಿತ್ರರಿಗೆ ಬಂಧುಗಳಿಗೆ ಏನು ಕೊಟ್ಟಿದ್ದೇನೆ?” ಎಂಬ ಉದ್ಗಾರ ಅವರ ಬಾಯಿಯಿಂದ ಬಂದಿತ್ತು. ಅನಂತರವೂ ತಕ್ಕ ಸಂದರ್ಭಗಳಲ್ಲಿ ಸಮಾಜಕ್ಕೆ ಸಲ್ಲತಕ್ಕ ತನ್ನ ಋಣವನ್ನು ಯಾವ ಸಂಕೋಚ ಅಥವಾ ಕಪಟನಾಟಕದ ಸೋಂಕಿಲ್ಲದೆ ಒಪ್ಪಿಕೊಂಡಿದ್ದಾರೆ. ಎಂ. ಮರಿಯಪ್ಪಭಟ್ಟರ ಸನ್ಮಾನ, ಕಡವ ಶಂಭು ಶರ್ಮರ ಸನ್ಮಾನ, ಮಾಸ್ತಿಯವರ ಸನ್ಮಾನ ಇತ್ಯಾದಿ ಸಂದರ್ಭಗಳಲ್ಲಿ ವ್ಯಕ್ತಿ ಪರಿಚಯ ಮಾಡಿ ಮುಕ್ತ ಕಂಠದಲ್ಲಿ ಶ್ಲಾಘಿಸಿ ಯಾಕಾಗಿ ಸನ್ಮಾನ ಎಂದು ಹೇಳುತ್ತಿದ್ದರು. ಈ ಭಾಷಣಗಳೆ ಒಂದೊಂದು ಶಿಕ್ಷಣಮಾಲೆ ಎಂದೆನ್ನಬಹುದು. ಮೊಳಹಳ್ಳಿಯವರು, ಮಂಜೇಶ್ವರ ಗೋವಿಂದ ಪೈಯವರು ಮೃತಪಟ್ಟಾಗ ಕಾರಂತರು ಮಾಡಿದ ಹೃದಯಸ್ಪರ್ಶಿ ಭಾಷಣಗಳು ಪುತ್ತೂರಿನ ಜನರು ಎಂದೂ ಮರೆಯಲಾರರು.

ಅವರು ಪುತ್ತೂರು ಬಿಟ್ಟು ಸಾಲಿಗ್ರಾಮಕ್ಕೆ ಹೋಗಲು ನಿರ್ಧರಿಸಿದಾಗ ಒಬ್ಬ ಅಭಿಮಾನಿ ಇಷ್ಟು ಕಾಲ ನೀವು ಪುತ್ತೂರಿನಲ್ಲಿದ್ದು, ಈಗ ನಿಮಗೆ ಪುತ್ತೂರು ಬೇಡವಾಯಿತೆ? ಯಾಕೆ ಹೋಗುತ್ತಿದ್ದೀರಿ?” ಎಂದು ಸಹಜ ಮರುಕದಲ್ಲಿ ಕೇಳಿದರು. ಕಾರಂತರೂ ಅಷ್ಟೇ ಮರುಕದಲ್ಲಿ, ಸಮಾಧಾನದಲ್ಲಿ ಮರುಪ್ರಶ್ನೆ ಒಡ್ಡಿದರು. “ಕಳೆದ ೪೦ ವರ್ಷ ನಾನು ನಿಮ್ಮೊಡನಿದ್ದುದು ಸಾಲದೇ? ಇನ್ನು ಕೊನೆಯ ದಿನಗಳಲ್ಲಾದರೂ ನಾನು ನನ್ನ ಬಾಲ್ಯದ ಹಳ್ಳಿಗೆ ಮರಳಬಾರದೆ? ಅಭಿಮಾನಿಗೂ ಅವರಿಗೂ ಕಣ್ಣುಗಳು ಒದ್ದೆಯಾದುವು. ಸಾಲಿಗ್ರಾಮಕ್ಕೆ ಮರಳಿದ ಅನಂತರ ಒಂದು ದಿನ ಬೆಳಗ್ಗೆ ಪುತ್ತೂರಿನ ವಕೀಲ ಮಿತ್ರರಲ್ಲಿಗೆ ಹಾಜರಾದರು. ತಮಗೆ ತಮ್ಮ ಭೂಮಿಗಳ ವಿಕ್ರಯದಿಂದ ತಾವು ಈತನಕ ಎಣಿಸದಷ್ಟು ಹಣ ಸಿಕ್ಕಿದೆ ಆದರೆ ಆ ಭೂಮಿಯ ಮೂಲಗೇಣಿ ಧನಿಗೆ ಏನೂ ಸಿಗಲಿಲ್ಲ. ತಮಗೆ ಲಾಭವಾದಂತೆ ಮೂಲಗೇಣಿ ಧನಿಗೂ ಪಾಲು ಸಿಗಬೇಕಾದದ್ದು ಧರ್ಮ. ಆದುದರಿಂದ ಪಾಲನ್ನು ಅವರಿಗೆ ಕೊಡಬೇಕಾಗಿದೆ. ಈ ವ್ಯವಹಾರ ತೀರಿಸಲು ಬನ್ನಿ ಎಂದು ಕರೆದುಕೊಂಡು ಹೋದರು. ಮೂಲಗೇಣಿ ಧನಿಗೆ ಇದೊಂದು ಅನಿರೀಕ್ಷಿತ ಆಶ್ಚರ್ಯ ಮತ್ತು ಘಟನೆ. ಮೂಲಗೇಣಿಧನಿಗೆ ಸಿಗುವ ವರ್ಷಾವಧಿ ಗೇಣಿ ಕೇವಲ ೧ ರೂ. ಅಥವಾ ೨. ಹಾಗಾಗಿ ಭೂಮಿ ಮಾರಾಟವಾದಾಗ ಧನಿಗೆ ಯಾರೂ ಪಾಲು ಕೊಟ್ಟ ಪ್ರಸಂಗವಿರಲಿಲ್ಲ.

ಆದರೆ ಇಲ್ಲಿ ಲಾಭದಲ್ಲಿ ಪಾಲು ನೀಡಲು ಕಾರಂತರು ಸ್ವತಃ ತನ್ನ ಮನೆಗೆ ಬಂದಿದ್ದಾರೆ ಎಂಬುದನ್ನು ಕಂಡು ಸಂತೋಷದಲ್ಲಿ ಕಣ್ಣೀರು ಬಂತು. ಅವರು ನಿವೃತ್ತ ಸರಕಾರೀ ಉದ್ಯೋಗಿ. ೮೦ ವರ್ಷ ಪ್ರಾಯ ಕಳೆದಿರಬಹುದು. ಲಾಭದಲ್ಲಿ ಸರಿಯಾದ ಪಾಲು ವೃದ್ಧ ಡಿಸೋಜರಿಗೆ ನೀಡಿ ಅವರ ಮನಃಪೂರ್ವಕ ಆಶೀರ್ವಾದ ಪಡೆದು ಹಿಂದೆ ಬಂದರು ಕಾರಂತರು.

ಶಿವರಾಮಕಾರಂತರೊಬ್ಬರುನಿಸ್ಸಂದೇಹವಾಗಿ ಮಹಾವ್ಯಕ್ತಿ. ಸತ್ಯ ಸಹಜತೆಯೇ ಅವರ ಧರ್ಮ ಮತ್ತು ನಿಲುವು. ಬದುಕು ಸರಳವಾದಷ್ಟೂ ಬದುಕುವವನಿಗೂ ಅವನ ಸಂಗಡಿಗರಿಗೂ ಸುಖ. ಬದುಕು ತಂತ್ರಕ್ಕೆ ಯುಕ್ತಿಗೆ ಬಗ್ಗಲಾರದು. ಇದನ್ನು ಅಕ್ಷರಶಃ ಬದುಕಿ ತೋರಿಸಿದರು. ಅವರ ಹಳೆಯ ಮಿತ್ರರೊಬ್ಬರು ಅವರ ವಿಜ್ಞಾನ ವಿಷಯದ ಬರವಣಿಗೆಯನ್ನು ಬಹಳವಾಗಿ ಟೀಕಿಸಿ ಬರೆದುದನ್ನು ನೋಡಿ“....ಅವನು ಯಾಕೆ ನನ್ನನ್ನು ಇಷ್ಟು ಕಠೋರವಾಗಿ ಟೀಕಿಸುತ್ತಾನೆ? ಬಹುಶಃ ಅವನ ಲೇಖನದಲ್ಲಿ ಮಾಡಿದ್ದ ತಪ್ಪುಗಳನ್ನು ನಾನು ಟೀಕಿಸಿದ್ದಿರಬಹುದು....” ಎಂದು ದುಃಖದಲ್ಲಿ ಈ ದಿನಗಳ ಪ್ರಚಾರಗಳ ಕುರಿತು ಹೇಳಿದರು. ಅವರ ಮಿತ್ರರ ಲೇಖನವನ್ನು ಅವರ ಮನಸ್ಸಿಗೆ ಅನಿಸಿದಂತೆ ಸ್ವಲ್ಪ ಒರಟಾಗಿ ಟೀಕಿಸಿದ್ದರು. ಅವರ ಒರಟು ಟೀಕೆಯಿಂದ ಮಿತ್ರರ ಮನಸ್ಸಿಗೆ ನೋವಾಗಿದೆ ಎಂದು ತಿಳಿದಾಗ ತಾವೂ ಬಹಳವಾಗಿ ನೊಂದರು. ತಮ್ಮ ಸ್ನೇಹಿತರ ಸಂತೋಷದಲ್ಲಿ ತಾನೂ ಸಂತೋಷಿಸಿ, ನೋವನ್ನು ಕಂಡು ತಾವೂ ನೊಂದು, ತಾನು ತಿಳಿದದ್ದನ್ನು, ಗಳಿಸಿದ್ದನ್ನು, ಉಳಿಸಿದ್ದನ್ನು ಸ್ನೇಹಿತರೊಡನೆ ಹಂಚಿ ಸಂತೋಷಪಟ್ಟ ಅತಿ ವಿರಳ ವ್ಯಕ್ತಿ ಕಾರಂತರು.

ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ “ಏಕಾಂಗ ವೀರ” ಲೇಖನದ ಕರ್ತೃ ಎ. ಪಿ. ಸುಬ್ಬಯ್ಯನವರ ಸುಪುತ್ರ ಎ. ಪಿ. ಗೌರಿಶಂಕರ. ಬಲ್ಲೇರಿ ಗುಡ್ಡದ ಬುಡದಲ್ಲಿ ಸುಬ್ಬಯ್ಯನವರ ಮನೆ—ಅಂದರೆ ಗೌರೀಶಂಕರ ಹುಟ್ಟಿ ಬೆಳೆದದ್ದು ಅಲ್ಲಿ. ಕಾರಂತರ ಬಾಲವನಕ್ಕೆ ಅಲ್ಲಿಂದ ಒಳದಾರಿ ನಡಿಗೆ ಸುಮಾರು ೧ ಗಂಟೆ. ಶಿವರಾಮ ಕಾರಂತರ ಇಳಿ ವಯಸ್ಸಿನಲ್ಲಿ ಗೌರೀಶಂಕರ ಅವರ ಪರಮಾಪ್ತ ವಕೀಲರಾಗಿದ್ದರು. “ನನ್ನ ಸ್ನೇಹಿತ ಮತ್ತು ಸಹಪಾಠಿ ಸುಬ್ಬಯ್ಯನವರ ಮಗ, ಈತನ ಶಾಲಾದಿನಗಳಿಂದಲೂ ಈತನನ್ನು ಬಲ್ಲೆ” ಎಂಬ ಪ್ರೀತಿ ಸದಾ ಇತ್ತು. ಆದರೆ ವ್ಯವಹಾರ ವಿಷಯಗಳಿಗಾಗುವಾಗ—ಕೋರ್ಟ್, ಕಚೇರಿ, ಕಾಗದ, ಪತ್ರ, ಪ್ರಮಾಣ ಇತ್ಯಾದಿ—ಕಾರಂತರು ಸದಾ ಅತಿ ಧಾರಾಳವಾಗಿ ತನ್ನ ಜೊತೆ. ನಡೆದುಕೊಂಡಿದ್ದಾರೆ, ಇದು ಒಬ್ಬ ಕಕ್ಷಿಗಾರ ತನ್ನ ವಕೀಲನ ಜೊತೆ ನಡೆದುಕೊಳ್ಳುವ ವ್ಯವಹಾರ ಪ್ರಪಂಚವನ್ನು ಮೀರಿ ಅತಿಶಯ ಮಾನನೀಯವೂ ಅಂತಃಕರಣಪೂರ್ವಕವೂ ಆಗಿತ್ತು ಎನ್ನುತ್ತಾರೆ ಗೌರೀಶಂಕರ. “ಕರುಣೆಗೆಂದು ಕೋಡಿದನ್, ಎದೆಯೊಲುಮೆಗೆ ತಾಣವನ್” (ಕುವೆಂಪು).

—ಸಂ.

ಕಣ್ಣಮುಂದೆ ಕಾರಂತರು

ಎಸ್. ರೋಹಿಣಿಶರ್ಮ

ತ್ಯಾಗರಾಜ ಬಡಾವಣೆ
ಅಜ್ಜಂಪುರ, ತರೀಕೆರೆ–೫೭೭೫೪೭

ಕಾರಂತರ ಬಗ್ಗೆ ನನ್ನ ತಿಳುವಳಿಕೆ ಇಂದು ನಿನ್ನೆಯದಲ್ಲ. ಬಾಲ್ಯದಲ್ಲಿಯೇ ಅವರನ್ನು ನೋಡಿ ಮುಖ ಪರಿಚಯವಿದ್ದ ನನಗೆ ಅವರ ಸಾಹಿತ್ಯದ ಬಗ್ಗೆಯಾಗಲೀ, ಪಾಂಡಿತ್ಯದ ಬಗ್ಗೆಯಾಗಲೀ ಅಷ್ಟೊಂದು ತಿಳಿಯುವ ವಯಸ್ಸಾಗಿರದಿದ್ದರೂ ಹೆಗ್ಗೋಡಿಗೆ ಕಾರಂತರು ಬರುತ್ತಾರೆ ಎಂದು ಕೇಳಿದರೆ ಸಾಕು ನಾವು ಅಲ್ಲಿ ಹಾಜರಿರುತ್ತಿದ್ದೆವು.

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಭೀಮನಕೋಣೆ ನನ್ನ ತವರೂರು. ಈ ಊರ ಹತ್ತಿರವೇ ಇರುವ ಹೆಗ್ಗೋಡು ಒಂದು ಪುಟ್ಟಹಳ್ಳಿ. ಅಂದು ಹೆಗ್ಗೋಡು ಇಂದಿನಷ್ಟು ಅಂತಾ ರಾಷ್ಟ್ರೀಯ ಮಟ್ಟದಲ್ಲಿ ಮಿಂಚಿರದಿದ್ದರೂ ಎಲೆ ಮರೆಯಕಾಯಿಯಂತೆ ಕೆ. ವಿ. ಸುಬ್ಬಣ್ಣನವರ ನೇತೃತ್ವದಲ್ಲಿ ರಂಗಪ್ರಯೋಗಗಳು ನಡೆಯುತ್ತಲೇ ಇದ್ದವು. ಕಾರಂತರು ಹೆಗ್ಗೋಡಿಗೆ ಬರುತ್ತಾರೆಂದರೆ ಅಲ್ಲಿನ ಜನತೆಗೆ ಏನೋ ಪುಲಕ, ಸೆಳೆತ. ಆಗ ಇಂದಿನಂತೆ ಈ ಕಾರಂತ ರಂಗ ಮಂದಿರವಾಗಲೀ ಸುಸಜ್ಜಿತವಾದ ವೇದಿಕೆಯಾಗಲೀ ಇರಲಿಲ್ಲ. ಹವ್ಯಾಸಿ ನಾಟಕ ಸಂಸ್ಥೆಗಳಿಗಿರುವಹಾಗೆ ಸೋಗೆ ಮಾಡಿನ ಒಂದು ನಾಟಕಶಾಲೆ. ಅಲ್ಲಿಯೇ ಹಲವಾರು ಗೋಷ್ಠಿ, ರಂಗಪ್ರಯೋಗಗಳು ನಡೆಯುತ್ತಿದ್ದು ಕಾಲಕ್ರಮೇಣ ವಿ. ಸಂ. ಪ್ರೌಢಶಾಲೆ ಆದ ನಂತರ ಅಲ್ಲಿ ಯಕ್ಷಗಾನ ಗೋಷ್ಠಿ, ಸಮೂಹ ಚರ್ಚೆ ಅದು-ಇದು ನಡೆಯುತ್ತಿತ್ತು. ಒಮ್ಮೆ ಅಲ್ಲಿಯೇ ಯಕ್ಷಗಾನದ ಬಗ್ಗೆ ಮೂರು ದಿನಗಳ ಕಾರ್ಯಾಗಾರವಿತ್ತು. ಆಗ ಕಾರಂತರೇ ಯಕ್ಷಗಾನದ ಕಲಾಪ್ರಕಾರವನ್ನು ಹಾವಭಾವದ ಮೂಲಕ ಅಭಿನಯಿಸಿ ತೋರಿಸುತ್ತಿದ್ದರು. ಆ ಕಾರ್ಯಾಗಾರದಲ್ಲಿ ಅವರ ಮಾತಿನ ವೈಖರಿ ಎಂಥವರನ್ನು ಬೆರಗುಗೊಳಿಸುತ್ತಿತ್ತು. ಅದರಲ್ಲಿ ಯಾವುದೋ ಒಂದು ಪ್ರಸಂಗವನ್ನು ತಮ್ಮ ಮಾತಿನ ಮೂಲಕ ಮೇರುಸ್ತರದಲ್ಲಿ ಹರಿಯಬಿಟ್ಟಾಗ ಅವರ ಧ್ವನಿಯ ಕಂಪನಕ್ಕೆ ಮೈಕಿನ ಧ್ವನಿ ತರಂಗವೇ ಫಟ್ ಎಂದು ಸಿಡಿದು ಬಿದ್ದಾಗ ಯಾರಿಗೂ ಬಗ್ಗದೆ ಕಾರಂತರು ಒಂದೆರೆಡು ನಿಮಿಷ ಮ್ಲಾನವದನರಾದುದನ್ನು ಕಣ್ಣಾರೆ ಕಂಡ ನನಗೆ ಕಾರಂತರು ತಮ್ಮಿಂದ ಏನಾದರೂ ತಪ್ಪಾದರೆ ಅದರ ಬಗ್ಗೆ ಚಿಂತಿಸುವ ಗುಣವೂ ಇತ್ತು ಎಂಬುದನ್ನು ಕಂಡುಕೊಂಡೆ. "ಕಾರಂತರು ಹೆಗ್ಗೋಡಿಗೆ ಬಂದಿದ್ದಾರೆ. ಅವರ ಜೊತೆ ಅವರ ಹೆಂಡತಿಯೂ ಬಂದಿದ್ದಾರೆ. ಅವರ ಹೆಂಡತಿ ಚೆಂದ ಇದ್ದಾರಂತೆ. ಅವರದ್ದು ಬೇರೆ ಜಾತಿ (ಅಂತರಜಾತಿ) ಮದುವೆಯಂತೆ. ಯಾರಿಗೂ

ಇಷ್ಟ ಇರಲಿಲ್ಲವಂತೆ. ಡ್ಯಾನ್ಸ್ ಕಲಿಯುತ್ತಿದ್ದವಳನ್ನು ಮದುವೆ ಆದದ್ದಂತೆ" ಎಂದು ಅವರನ್ನು ಹೆಗ್ಗೋಡಿನಲ್ಲಿ ನೋಡಿ ಬಂದವರು ಹೇಳುತ್ತಿದ್ದರು. ಕುತೂಹಲದಿಂದಲೆ ನಾನು ನನ್ನ ಗೆಳತಿ ಶಾಲೆ ಬಿಟ್ಟ ಕೂಡಲೆ ಕಾರಂತರ ಚೆಂದದ ಹೆಂಡ್ತಿ ನೋಡಲು ಹೆಗ್ಗೋಡಿಗೆ ಓಡಿದೆವು. ನಮ್ಮ ಅದೃಷ್ಟಕ್ಕೆ ಕಾರಂತರು ರಂಗಮಂದಿರದ ಕಲ್ಲುಬೆಂಚಿನ ಮೇಲೆ ಹೆಂಡತಿ ಜೊತೆ ಮಾತನಾಡುತ್ತಾ ಕುಳಿತಿದ್ದರು. ನಮಗೆ ಹಿಗ್ಗೋ ಹಿಗ್ಗು. ದೂರದಲ್ಲಿಯೇ ನಿಂತು ಇಣುಕಿನೋಡಿ ಸಪತ್ನಿಕರಾಗಿ ಕುಳಿತಿದ್ದ ಕಾರಂತರನ್ನು ನೋಡಿ ಧನ್ಯರಾದೆವು. ಊರಿಗೆ ಬರುವಾಗ ದಾರಿಯಲ್ಲಿ ಸಿಕ್ಕವರಿಗೆಲ್ಲಾ ಈ ಸುದ್ದಿ ತಲುಪಿಸಿ ಏನೋ ಸಾಧಿಸಿದವರ ಹಾಗೆ ಪ್ರಚಾರ ಮಾಡಿದೆವು.

ನಾನು ಪ್ರೌಢಶಾಲೆಗೆ ಕಾಲಿಟ್ಟಾಗ ಬುದ್ಧಿ ಬೆಳವಣಿಗೆಯಿಂದಾಗಿ ಸ್ವಲ್ಪ ಹೆಚ್ಚಿನ ಮಟ್ಟದ ತಿಳುವಳಿಕೆ ನನಗೆ ಬಂದಿತ್ತು. ನಮ್ಮ ಶಾಲೆಯಲ್ಲಿ ಏನೇ ಕಾರ್ಯಕ್ರಮವಾಗಲಿ ಪ್ರಾರ್ಥನೆ ಮಾಡುವ ಸರದಿ ಹೆಚ್ಚಾಗಿ ನನಗೇ ಬರುತ್ತಿತ್ತು. ಒಮ್ಮೆ ಕಾರಂತರು ನಮ್ಮ ಶಾಲೆಯ ಒಂದು ಕಾರ್ಯಕ್ರಮಕ್ಕೆ ಅತಿಥಿಯಾಗಿ ಬರುವವರಿದ್ದರು. ಅವರು ಸಾಹಿತಿಗಳಾದ್ದರಿಂದ ಸಾಹಿತ್ಯಕ್ಕೆ ಸಂಬಂಧಪಟ್ಟ ಹಾಡು "ಸ್ವಾಗತ, ಸ್ವಾಗತ, ಸ್ವಾಗತವು ಕವಿವಾಣಿಗೇ" ಹಾಡನ್ನು ಆಯ್ಕೆ ಮಾಡಿಕೊಂಡು ಚೆನ್ನಾಗಿ ಅಭ್ಯಸಿಸಿ ಹಾಡಿಯೇ ಬಿಟ್ಟೆ. ಹಾಡುಕೂಡ ಸುಶ್ರಾವ್ಯವಾಗಿಯೇ ಬಂದಿದ್ದರಿಂದ ವೇದಿಕೆಯಲ್ಲಿಯೆ ಕಾರಂತರು ನನ್ನನ್ನು ನಿಲ್ಲಿಸಿ "ಯಾರು ಬರೆದದ್ದು ಈ ಹಾಡನ್ನು, ಕತ್ತಿಗಿಂತ ಲೇಖನಿ ಹರಿತ ಎನ್ನಬೇಕೆ? ಒಂದು ಕಡೆ ಹೆದರಿಕೆ. ಹೆದರುತ್ತಲೇ ಬರೆದವರು ಯಾರೆಂದು ಗೊತ್ತಿಲ್ಲ. ಕತ್ತಿಗಿಂತ ಲೇಖನಿ ಹರಿತ ಹೌದು. ಎಂದುಬಿಟ್ಟೆ. "ಭೇಷ್, ಚೆನ್ನಾಗಿ ಹಾಡಿದೆ" ಎಂದು ಪ್ರಶಂಸಿಸಿದರು. ಕಾರಂತರ ಆ ಮೆಚ್ಚುಗೆಯ ನುಡಿ ಇನ್ನೂ ಹಚ್ಚಹಸುರಾಗಿಯೇ ಇದೆ.

ಒಮ್ಮೆ ಕಾರಂತ ರಂಗಮಂದಿರದಲ್ಲಿ ಕಿಕ್ಕಿರಿದು ಜನ ತುಂಬಿತ್ತು. ರಂಗಕಲೆಯ ಬಗ್ಗೆ ಕಾರಂತರೇ ಭಾಷಣ ಮಾಡುವವ ರಿದ್ದರು. ಭಾಷಣ ಪ್ರಾರಂಭವಾಗಿದೆ. ಜನ ಸಂದಣಿಯಿಂದಾಗಿ ಗಲಾಟೆ ಕೂಡ ಮಿತಿ ಮೀರಿದೆ. ಕಾರಂತರಿಗೆ ಎಲ್ಲಿಲ್ಲದ ಸಿಟ್ಟು ಬಂದೇಬಿಟ್ಟಿತು. ಒಮ್ಮೆ ಸಿಂಹದಂತೆ ಘರ್ಜಿಸಿದರು" ಹೆಗ್ಗೋಡಿನ ಜನ ಸುಸಂಸ್ಕೃತರು ಎಂದು ತಿಳಿದಿದ್ದೆ. ಇಲ್ಲಿ ನೋಡಿದರೆ ನಿಮ್ಮ ಕು ಸಂಸ್ಕೃತಿ ಕ ಚೇಷ್ಟೆಯಂತೆಯೇ ಇದೆ. ಈ ಸಂಸ್ಥೆಯವರು ಯಾರೂ ಇಲ್ಲವಾ? ನೀವು ಹೀಗೆ ಗಲಾಟೆ ಮಾಡಿದರೆ ನಾನು ಭಾಷಣ ನಿಲ್ಲಿಸಿಯೇಬಿಡುತ್ತೇನೆ" ಎಂದು ಗಪ್ಪನೆ ಕುಳಿತೇಬಿಟ್ಟರು. ನಿರ್ವಾಹಕರಿಗೆ ಏನು ಮಾಡಬೇಕೆಂಬುದು ತೋಚದೆ ಅವರಲ್ಲಿ ಕ್ಷಮೆ ಯಾಚಿಸಿ ಮತ್ತೆ ಅವರಿಂದ ಭಾಷಣ ಮುಂದುವರಿಸಲು ಕೇ ಕೊಂಡರು. ಇದೇ ಒಂದು ನೆನಪು ಇಂದು ಕೂಡ ನೀ. ನಾ. ಸಂ ನಲ್ಲಿ ಏನೇ ಆಗ ಪ್ರೇಕ್ಷಕರಾಗಿ ಬರುವಜನ ನಿಶ್ಶಬ್ದವಾ ಆಲಿಸುವ ಜಾಣ್ಮೆ ಸಂಸ್ಕೃತಿ ಬೆಳಸಿಕೊಂ ಬರುತ್ತಿದ್ದಾರೆ.

ಸಂಘ–ಸಂಸ್ಥೆಗಳಲ್ಲಿ ನಿಕಟ ಸಂಪರ್ಕ ಹೊಂದಿದ್ದ ನಮ್ಮ ತಂದೆಗೆ ಕೆ.ವಿ. ಸುಬ್ಬ ಅವರು ಆಪ್ತ ಮಿತ್ರರು. ಸುಬ್ಬಣ್ಣನವರಿ

ನಮ್ಮ ತಂದೆಗೆ ಹಲವಾರು ಸಾಹಿತಿ ಗಣ್ಯರ ಪರಿಚಯವೂ ಇತ್ತು. ತಮ್ಮ ಕೆಲಸದ ನಿಮಿತ್ತ ಆಗಾಗ್ಗೆ ಬೆಂಗಳೂರು ಮೈಸೂರಿಗೆ ಹೋಗಿ ಬರುತ್ತಿದ್ದರು. ಅಲ್ಲಿಂದ ಬರುವಾಗ ಏನಾದರೂ ಹೊಸ ಹೊಸ ವಾರಪತ್ರಿಕೆ, ದೈನಿಕ, ನನ್ನ ಜ್ಞಾನ ಮಿತಿಗೆ ಎಟುಕುವಂಥ ಕಥೆ ಪುಸ್ತಕಗಳನ್ನು ನನಗಾಗಿ ಕೊಂಡು ತರುತ್ತಿದ್ದರು. ಆಗ ಅವರು ತಂದ ಕಾರಂತರ "ಚೋಮನ ದುಡಿ, ಆ ಕಾದಂಬರಿಯೇ ನಾನು ಓದಿದ ಮೊಟ್ಟಮೊದಲ ಕಾದಂಬರಿ. ಅದೇ ಪುಸ್ತಕವನ್ನುಎಷ್ಟು ಬಾರಿ ಓದಿದೆನೋ ಜ್ಞಾಪಕವಿಲ್ಲ. ಚೋಮನ ತಾಕಲಾಟ ಅವನ ದಾರುಣ ಬದುಕು. ತುಂಡು ಜಮೀನಿಗಾಗಿ ನಿರಂತರ ಹೋರಾಟದ ಚಾಂಚಲ್ಯ. ಚೋಮನ ದುಡಿಯಲ್ಲಿ ಕಂಡಿದ್ದರೆ "ಬೆಟ್ಟದ ಜೀವ"ವನ್ನು ಪದವಿ ತರಗತಿಯಲ್ಲಿ ಪಠ್ಯ ಪುಸ್ತಕವಾಗಿ ಓದಿದಾಗ ಅದರಲ್ಲಿ ಬರುವ ಹಳ್ಳಿಯ ಪರಿಸರ, ಅಬ್ಬಿನೀರು, ಮಗನನ್ನು ಕಳೆದುಕೊಂಡ ತಂದೆ–ತಾಯಿಯರ ನೀರಸ ಬದುಕು, ಕೊನೆಗೆ ಕತೆಗಾರ ತಾನು ಕಂಡ (ಪೂನಾದಲ್ಲಿ) ಆ ವ್ಯಕ್ತಿಯೇ ಇವರ ಮಗನೆಂಬ ಹೊಳಹು ಸಿಕ್ಕಾಗ ಆದ ಆನಂದ ಇವೆಲ್ಲವನ್ನು ಓದುತ್ತಾ ಹೋದಾಗ ನಮ್ಮ ಕಡೆಯ ಬದುಕಿನೊಂದಿಗೇ ಹೋಲಿಕೆ ಆಗ ಬಲ್ಲ ನಾಣಯ್ಯನ ಅಡಿಕೆ ತೋಟದ ಪರಿಶ್ರಮ ನಮ್ಮ ಪರಿಸರದ ಅನೇಕ ಅನುಭವ ಆ ಕಾದಂಬರಿ ನನ್ನನ್ನು ಹೆಚ್ಚಾಗಿ ಕಾಡಿದ್ದಿದೆ. ಇಲ್ಲಿಂದಲೇ ಕಾರಂತರ ಪುಸ್ತಕಗಳ ಬಗ್ಗೆ ಹುಚ್ಚು ಹಿಡಿಸಿದ ನನಗೆ ಅವರ ಎಲ್ಲ ಕೃತಿ ಶ್ರೇಣಿಗಳನ್ನು ಓದಿ ಮುಗಿಸಲು ಸಾಧ್ಯವಾಗ ದಿದ್ದರೂ ಓದುತ್ತ, ಓದುತ್ತಲೆ ಸಾರ್ಥಕತೆ ಪಡೆದದ್ದು ಮದುವೆಯ ನಂತರದ ವೈವಾಹಿಕ ಬದುಕನ್ನು ಅಜ್ಜಂಪುರದಲ್ಲಿ ಕಳೆಯಲು ತೊಡಗಿದಾಗ.

ಸಾಹಿತ್ಯ ಪ್ರೇಮಿಯಾದ ನನ್ನ ಪತಿ ಅವರ ಎಲ್ಲಾ ಕೃತಿಗಳನ್ನು ಕೊಂಡು ಸಂಗ್ರಹಿಸಿಟ್ಟಿದ್ದರಲ್ಲದೆ ಅಷ್ಟೇ ಸಮರ್ಥವಾಗಿ ನಾನು ಓದಿದ ಕಾರಂತರ ಪುಸ್ತಕಗಳಿಗೆ ನಮ್ಮಿಬ್ಬರಲ್ಲಿ ವಿಮರ್ಶೆ-ಚರ್ಚೆಗಳೂ ನಡೆಯುತ್ತಿದ್ದರಿಂದ ಬಾಲ್ಯದಲ್ಲಿ ಕಂಡ ಕಾರಂತರಿಗಿಂತ ಪ್ರೌಢಳಾದಾಗ ಕಾರಂತರನ್ನು ಮುಖತಃ ಕಾಣುವ ಹಂಬಲ ತೀವ್ರವಾಗಿ ಕಾಡುತ್ತಿತ್ತು. ತರಂಗ ವಾರಪತ್ರಿಕೆಯಲ್ಲಿ ಹಿಂದೆ "ಬಾಲವನದಲ್ಲಿ ಕಾರಂತಜ್ಜ" ಎಂಬ ಒಂದು ಅಂಕಣವೇ ಇರುತ್ತಿತ್ತು. ಅದರಲ್ಲಿ ಮಕ್ಕಳೇ ಪ್ರಶ್ನೆ ಕೇಳಬೇಕಿತ್ತು. ಮಕ್ಕಳು ಕೇಳಿದ ಪ್ರಶ್ನೆಗೆ ನಗೆ ಚಾಟಿಕೆ ಹಾರಿಸಿಯೋ, ಖಚಿತವಾಗಿಯೋ, ಗಂಭಿರವಾಗಿಯೇ ಉತ್ತರಿಸುತ್ತಿದ್ದರು. ನಮ್ಮಕಡೆ ಕಾರಂತರ ಹೆಸರೇಳಿದರೆ ಸಾಕು. ಯಾವ ಕಾರಂತರು? ಬಾಲವನದ ಕಾರಂತಜ್ಜ"ನೆ? ಎನ್ನುವ ಮಟ್ಟಿಗೆ ಅವರು ಪ್ರತೀತರಾಗಿದ್ದರು. ನನ್ನ ಮಕ್ಕಳೂ ಕೂಡ ಈ ಅಂಕಣ ಓದಿ "ಕಾರಂತಜ್ಜನನ್ನೊಮ್ಮೆ ನೋಡಬೇಕಮ್ಮ, ಕೋಟಕ್ಕೊಮ್ಮೆ ಹೋಗೋಣ" ಎಂದು ಪ್ರತಿರಜೆಯಲ್ಲೂ ಪೀಡಿಸುತ್ತಿದ್ದರು. ಮಕ್ಕಳ ಆಸೆಯನ್ನು ತಣಿಸಲು ಒಮ್ಮೆ ಕೋಟಕ್ಕೆ ಹೋಗಿ ಬರುವಷ್ಟರಮಟ್ಟಿಗೆ ತಯಾರಿದ್ದರೂ ಮಗದೊಮ್ಮೆ "ಕಾರಂತರಿಗೆ ಸಿಟ್ಟು. ಅಷ್ಟು ಸರಳವ್ಯಕ್ತಿಯಲ್ಲ" ಎಂದೇ ಭಾವಿಸಿದ್ದ ನಮಗೆ ಮಕ್ಕಳೇನು, ನಾವುಕೂಡ ಹೋಗಲು ಹಿಂಜರಿಯುತ್ತಿದ್ದರಿಂದ ಕಡೆಗೂ ಮಕ್ಕಳ ಆಸೆ ಈಡೇರಲೇ ಇಲ್ಲ. ಆದರೆ ನನಗೆ ಹಾಗೂ ನನ್ನಪತಿಗೆ ಆ ಅವಕಾಶ ಈಗ

ಎರಡು ವರ್ಷದ ಹಿಂದೆ ಸಿಕ್ಕಿದ್ದು ನಮ್ಮ ಸುಕೃತವೇ ಸರಿ ಎನ್ನಬೇಕು.

ಕಾರಂತರ ೯೫ನೆಯ ಹುಟ್ಟುಹಬ್ಬದ ಆಚರಣೆಯನ್ನು ಹೆಗ್ಗೋಡಿನ ನೀ.ನಾ.ಸಂ ಪ್ರತಿಷ್ಠಾನ ಹಾಗೂ ಕೋಟ ಮಿತ್ರ ಬಳಗದವರು ಅವರ ಹುಟ್ಟೂರು ಕೋಟದಲ್ಲಿ 'ಕಾರಂತ ಅಧ್ಯಯನ ಶಿಬಿರ' ಹಮ್ಮಿಕೊಂಡಾಗ ನಾವಿಬ್ಬರೂ ಶಿಬಿರಾರ್ಥಿಗಳಾಗಿ ಭಾಗವಹಿಸಿದಾಗ ಕಾರಂತರು ದಿನವಿಡೀ ಅಲ್ಲೆ ಇದ್ದು ಶಿಬಿರಾರ್ಥಿಗಳಿಗೆ ತಮ್ಮ ಸರಳತೆಯನ್ನು ಪರಿಚಯ ಮಾಡಿಕೊಟ್ಟಿದ್ದರು.

ಶಿಬಿರವನ್ನು ಉದ್ಘಾಟಿಸುವವರು ಬಾರದಿದ್ದಾಗ ಕಾರಂತರಿಗೆ ಹೇಳಿದಾಗ "ಉದ್ಘಾಟಿಸುವುದು ನನ್ನ ಕೆಲಸ ಅಲ್ಲ. ನಾನು ಮಧ್ಯಪ್ರವೇಶಿಸಲಾರೆ ಎಂದರು. ದೀಪ ಹಚ್ಚಿಸುವ ಮುನ್ನ ಫ್ಯಾನ್ ತಿರುಗುತ್ತಿದೆಯಾ ಎಂದು ನೋಡಿದರು. ಫ್ಯಾನಿನ ಗಾಳಿಗೆ ದೀಪ ಆರಬಾರದಲ್ಲ! ಅವರ ಈ ಮುಂಜಾಗರೂಕತೆ ಎಲ್ಲರಿಗೂ ಆಶ್ಚರ್ಯ ತರಿಸಿತು. ಕಾರ್ಯಕ್ರಮದಲ್ಲಿ ತಮ್ಮ ಸರದಿ ಆದಕೂಡಲೆ ಒಂದು ನಿಮಿಷವೂ ವೇದಿಕೆ ಮೇಲೆ ಕೊರುತ್ತಿರಲಿಲ್ಲ. ಕೆಳಗೆ ಇಳಿದು ಬಂದು ಮುಂದಿನ ಸಾಲಿನಲ್ಲಿ ಕುಳಿತು ಕಾರ್ಯಕ್ರಮವನ್ನು ತನ್ಮಯತೆಯಿಂದ ವೀಕ್ಷಿಸುತ್ತಿದ್ದರು. ವೇದಿಕೆಯಿಂದ ಇಳಿಯುವಾಗ ಹತ್ತುವಾಗ ಸಂಚಾಲಕರು ಕೈಹಿಡಿದು ಹತ್ತಿಸಲು ಪ್ರಯತ್ನಿಸಿದರೆ "ಛೇ ಬೇಡ ಬೇಡ ನನಗೆ ಶಕ್ತಿ ಇದೆ" ಎಂದು ತಾವೇ ಯುವಕರಂತೆ ಪುಟ ಪುಟನೆ ವೇದಿಕೆ ಏರಿಬಿಡುತ್ತಿದ್ದರು.

ಶಿಬಿರದಲ್ಲಿ ಗುಂಪು ಚಟುವಟಿಕೆ ಇರು
ತ್ತಿತ್ತು. ಈ ಗುಂಪು ಚಟುವಟಿಕೆಯಲ್ಲಿ
ನನಗೆ ಬಂದ ವಿಷಯ ಕಾರಂತರ "ಚೋಮನ
ದುಡಿ." ಚೋಮನದುಡಿ ಬಗ್ಗೆಯೆ
ಸಾಕಷ್ಟು (ಬಾಲ್ಯದಿಂದಲೂ) ಓದಿಮುಗಿಸಿದ
ನನಗೆ ಆ ವಿಷಯದಲ್ಲೂ ಸಮರ್ಥವಾಗಿ
ಪ್ರಶ್ನೋತ್ತರ ನಡೆಸಲು ಸಹಕಾರಿ ಆಯಿತು
ಕಾರಂತರ ಕೃತಿಗಳ ಅಭ್ಯಾಸ ಕುರಿತ
ಸಾಗರದ ಟಿ. ಪಿ. ಅಶೋಕ ಹಾಗು
ಪ್ರಭುಸ್ವಾಮಿ ಮಠ ಅವರು ಸಾಕಷ್ಟು
ನಿರೂಪಣೆಯೊಂದಿಗೆ ಕೃತಿಗಳ ಪರಿಚಯ
ಮಾಡಿಕೊಟ್ಟಾಗ ಕಾರಂತರ ಬಗ್ಗೆ ಒಲುವೆ
ಇನ್ನು ಹೆಚ್ಚಾಯಿತೆಂದೇ ಹೇಳಬೇಕು. ಈ
ಶಿಬಿರದಲ್ಲೊಂದು ದಿನ ಶಿಬಿರಾರ್ಥಿಗ
ಸಂವಾದ ಕಾರ್ಯಕ್ರಮ ಇತ್ತು. ಶಿಬಿರಾರ್ಥಿ
ಗಳು ನೇರವಾಗಿ ಕಾರಂತರೊಂದಿಗೆ ಚರ್ಚಿ
ಬಹುದಿತ್ತು. ಇದೇ ಒಳ್ಳೆ ಅವಕಾಶವೆಂದ
ನಾನು "ನೀವು, ನಿಮ್ಮಣ್ಣ ವಾಸುದೇ
ಕಾರಂತ ಒಂದೇ ಪರಿಸರ–ಹಿನ್ನೆಲೆಯ
ಬೆಳೆದಿದ್ದರೂ ಜೀವನದಲ್ಲಿ ನಿಮ್ಮ ಧೋರಣೆ
ನಿಲುವು ತೀರಾಭಿನ್ನವಾಗಿರಲು ಕಾರ
ವೇನು?" ಎಂದು ಪ್ರಶ್ನಿಸಿದೆ. ಅವರ ಉತ್ತ
"ಹೌದು, ನಾವಿಬ್ಬರು ಒಂದೇ ಪರಿಸರದ
ಬೆಳೆದವರು. ಆದರೂ ನನ್ನ ಬುದ್ಧಿ ನನ
ಅವನ ಬುದ್ಧಿ ಅವನಿಗೆ–ನಾವಿಬ್ಬರು ನಮ
ನಮ್ಮದೇ ಆದ ನಿಲುವಿನಲ್ಲಿ ಕಲಿತವ
ಸ್ವಲ್ಪ ಮಟ್ಟಿನ ಬುದ್ಧಿ ಇದ್ದವರು" ಎಂದ
ಎಲ್ಲರೂ ಗೊಳ್ಳನೆ ನಕ್ಕುಬಿಟ್ಟರು.

ನನ್ನ ಯಜಮಾನರು ಕೂಟದಿ
ಕೋಟವೋ. ಕೋಟದಿಂದ ಕೂಟ
ಎಂಬುದಾಗಿ ಆ ಊರಿನ ಬಗ್ಗೆ ಪ್ರಶ್ನೆ ಕ
ದಾಗ "ಕೂಟದಿಂದ ಕೋಟವೋ, ಗೊ

ಿದಕ್ಕೆ ನಿಮ್ಮ ಕಾಟವೋ" ಎಂದು ಚಟಾಕಿ ಕಾರಿಸಿದರು.

ಇವೆಲ್ಲ ಕಾರಂತ ಅಧ್ಯಯನ ಶಿಬಿರದ ಸ್ತಾದ ಅನುಭವಗಳಾದರೆ ಕಾರಂತರ ಮನೆಯಲ್ಲಾದ ಅನುಭವ ಅನನ್ಯವಾದದು. ಶಿಬಿರದ ಕಾರ್ಯಕ್ರಮದ ನಡುವೆ ಮಾಲಿನಿ ಮಲ್ಯರವರು ತಾವು ಕಂಡಂತೆ ಕಾರಂತರ ಬಗ್ಗೆ ತಮ್ಮ ಅನುಭವಗಳನ್ನು ಶಿಬಿರಾರ್ಥಿಗಳಿಗೆ ಪರಿಚಯಿಸಿದಾಗ "ಕಾರಂತರಿಗೆ ಸಿಟ್ಟು ಎಂದು ಎಲ್ಲರೂ ಕಾರಂತರನ್ನು ಸಿಟ್ಟಿನ ಮನುಷ್ಯರೆಂದೇ ಗುರುತಿಸಿದ್ದಾರೆ. ಆದರೆ ಎಲ್ಲರೂ ತಿಳಿದಂತೆ ಕಾರಂತರು ಹಾಗೆ ಇಲ್ಲವೇ ಇಲ್ಲ. ಸರಳರು ಎಂದಾಗ ಕಾರಂತರನ್ನು ಅವರ ಮನೆಯಲ್ಲಿ ಭೇಟಿ ಆಗಿಬಿಡೋಣವೆಂದು ಅದೇ ದಿನ ಸಂಜೆ ವಿರಾಮದ ವೇಳೆಯಲ್ಲಿ ಕಾರಂತರ ಸುಹಾಸಕ್ಕೆ (ಮಾಲನಿಮಲ್ಯರ ಮನೆ) ಹೊರಟೇಬಿಟ್ಟೆವು. ನಾವು ಸುಹಾಸ ತಲುಪಿದಾಗ ಸಂಜೆ ಸುಮಾರು ೬ ಘಂಟೆ ಇರಬೇಕು. ಬಿಳೀಪಂಚೆ, ಹಸಿರು ಟೀಶರ್ಟು ಧರಿಸಿ ಮನೆ ಬಾಗಿಲ ಪಡಸಾಲೆಯಲ್ಲಿ ಖುರ್ಚಿ .ಮೇಲೆ ಕುಳಿತು ತಮಗೆ ಅಂದು ಬಂದಿದ್ದ ಪತ್ರಗಳನ್ನು ನೋಡುತ್ತಿದ್ದರು. ಇಳುಕುತ್ತಲೇ ನಾವಿಬ್ಬರು ಮನೆ ಹೊಸಿಲು ತುಳಿದಾಗ ಯಾರು? ಎಂದರು. ನಾವು ಸಾಗರದ ಹತ್ತಿರ ಹೆಗ್ಗೋಡಿನವರೆಂದೂ ಅಲ್ಲೇ ಹತ್ತಿರದ ಭೀಮನಕೋಣೆ ಎಂದೆ. ಅಧ್ಯಯನ ಶಿಬಿರಕ್ಕೆ ಬಂದಿದ್ದು, ನಿಮ್ಮನ್ನು ಕಾಣುವ ತೀವ್ರತೆಯಿಂದ ಬಂದಿದ್ದೆಂದು ಹೇಳಿದೆವು. ಎಲ್ಲಿ ಉಳಿದದ್ದು? ನಿಮಗೆಲ್ಲಾ ವ್ಯವಸ್ಥೆ ಚೆನ್ನಾಗಿಮಾಡಿದಾರಾ? ತೊಂದರೆಏನೂ ಆಗಿಲ್ಲವಲ್ಲ? ಎಂದು ಎಲ್ಲಾ ವಿಚಾರಿಸಿಕೊಂಡ ಮೇಲೆ ಆ ನಿಮ್ಮ ಭೀಮನಕೋಣೆ ಕೆರೆ ಮೊದಲಿನ ಹಾಗೆ ತುಂಬಿರುತ್ತದೆಯೆ? (ಎಷ್ಟು ಮಳೆ ಆಗಿದೆ ಎಂದರ್ಥ) ಈ ವರ್ಷ ಎಷ್ಟು ತುಂಬಿದೆ ಎಂದಾಗ ಮೊದಲಿನ ಹಾಗೆ ನಮ್ಮ ಕೆರೆ ಇಲ್ಲ. ಈಗ ಕೆರೆಬಗ್ಗೆ ಜನರಿಗೂ ಸರ್ಕಾರಕ್ಕೂ ಕಾಳಜಿ ಇಲ್ಲ. ಜೊಂಡು, ಮಣ್ಣು ತುಂಬಿ ಹಾಳಾಗುತ್ತಿದೆ ಎಂದೆ. ಹೌದು, ನೋಡಿ ನಮ್ಮೂರ ಕೆರೆಗಾಗಿ ನಾನೆಷ್ಟು ಕಾಳಜಿ ಪಟ್ಟೆ. ಕೆರೆಯಿಂದ ಪರಿಸರ ಉಳಿವು ಎಂದೆಲ್ಲಾ ಹೇಳಿದರು. ಮಾತಿಗೆ ಮಾತು ಆಡುತ್ತಾ ಸಾಮಿರುವುದು ಅಜ್ಜಂಪುರದಲ್ಲಿ ಎಂದಾಗ (ಹುಚ್ಚು ಮನಸ್ಸಿನ ಹತ್ತು ಮುಖಗಳಲ್ಲಿ ಅಜ್ಜಂಪುರದ ಸುದ್ದಿ ಬಂದಿದೆ) ಥಟ್ಟನೆ ತಮ್ಮ ಹಳೆಯ ನೆನಪು, ಆ ಬೋಳು ಬಯಲು ಸೀಮೆಯಲ್ಲಿ ಉರುವಲಿಗೆ ಏನುಮಾಡುತ್ತೀರಿ? ಸಂಬಾರ ಬೆಳೆ ಬಗ್ಗೆ, ಅಮೃತಮಹಲ್ ತಳಿ ಕೇಂದ್ರದ ಅಭಿವೃದ್ಧಿ ಬಗ್ಗೆ. ಅಜ್ಜಂಪುರದ ಆಸುಪಾಸಿನ ಜಾನಪದ ಕಲೆ ಖಡ್ಗಕುಣಿತ, ಡೊಳ್ಳು ಕುಣಿತದ ಬಗ್ಗೆ ಅಷ್ಟೇ ಆತ್ಮೀಯರಾಗಿ ವಿಚಾರಿಸಿದರು. ನಾವಿಬ್ಬರೂ ನಮ್ಮ ಸಾಹಿತ್ಯದ ಒಲವು, ಬರವಣಿಗೆ ಬಗ್ಗೆ ಹೇಳಿದಾಗ ನೀವು ಅವಸರದ ಸಾಹಿತಿಗಳೋ? ಎಂದು ನಗೆ ಆಡಿದರು. ಹೀಗೆ ಅವರೊಂದಿಗೆ ಒಂದಿಷ್ಟು ಹೊತ್ತು ಮಾತನಾಡಿ "ಸಂವಾದದಲ್ಲಿ ಕೇಳಿದ ಪ್ರಶ್ನೆ ಮತ್ತೆ ಹಾಕಿದಾಗ ಹೌದು, ನಮ್ಮ ಮನೆ ವಾತಾವರಣದಲ್ಲಿ ತಂದೆಯೊಟ್ಟಿಗಿನ ಸಂಪರ್ಕ ನನ್ನಣ್ಣನಿಗೆ ಹೆಚ್ಚಾಗಿ ಬೆಳೆದದ್ದರಿಂದ ಅವ ಹಾಗೆ ಬೆಳೆದ, ಸದಾ ಸಂಚಾರಿ ಆದ ನಾನು ಹೀಗೆ ಬೆಳೆದೆ ಎಂದು ಸಮಾಧಾನಿಗಳಾಗಿಯೇ ಉತ್ತರ ಕೊಟ್ಟರು.

ಅಂದು ಹಾಗೆ ಕಾರಂತರನ್ನು ಕಂಡು ಅವರೊಂದಿಗೆ ಮಾತನಾಡಿದ ಹೆಮ್ಮೆ ಸಾರ್ಥಕತೆ ನಮಗಿದೆಯಾದರೂ ಒಂದು ಬೇಸರದ ಸಂಗತಿಯು ಸದಾ ಕೊರೆಯುತ್ತಿರುತ್ತದೆ. ಅಂದು ನಾವು ಹಾಗೆ ಹೋಗಿ ಬರುವಂತೆ ನಮ್ಮನ್ನು ಪ್ರೇರೆಪಿಸಿದ್ದು ನಮ್ಮ ಮಕ್ಕಳಿಬ್ಬರಾದರೂ, ನಮ್ಮ ಮಕ್ಕಳು ಮುಂದೆ ಕಾರಂತರನ್ನು ಶಾರೀರಿಕವಾಗಿ ಕಾಣುವಂತಿಲ್ಲ, ಅವರಿಗೆ ಅವಕಾಶ ಎಂದೂ ಸಿಗದಂತಾಯಿತಲ್ಲವೆನ್ನುವ ಕೊರಗು ಇದ್ದೇ ಇದೆ.

ಕಾರಂತರು ಅಸ್ವಸ್ಥರಾಗಿದ್ದಾ ಮಣಿಪಾಲದ ಆಸ್ಪತ್ರೆಯಲ್ಲಿ ಇಹದ ಅ ವಿಲ್ಲದೆ ಮಲಗಿದ ಅವರ ಶರೀರವನ್ನು ಪತ್ರಿ ಯಲ್ಲಿ ನೋಡಿದಾಗ ನನಗಾದ ವೇದ ಅಷ್ಟಿಷ್ಟಲ್ಲ. ಎರಡು ದಿನ ಸಾವು ನೋ ನೊಂದಿಗೆ ಹೋರಾಡಿ ಇಹಲೋಕ ತ್ಯಜಿಸಿ ಕಾರಂತರು ಇನ್ನಿಲ್ಲವಾಗಿದ್ದರೂ ಅವ ಬಿಟ್ಟುಹೋದ ಅಪಾರ ಜ್ಞಾನಭಂಡಾ ನಮ್ಮೆದುರಿಗೇ ಇದೆ. ಅಂತೆಯೇ ಅಂ ನಾನು ಕಂಡ ಕಾರಂತರು ನನ್ನ ಕಣ ಮುಂದೆ ಮತ್ತೆ ಬರುತ್ತಲೇ ಇರುತ್ತಾ ಸ್ಫೂರ್ತಿ ತುಂಬುತ್ತಲೇ ಇದ್ದಾರೆ.

ವಿದ್ಯಾರ್ಥಿಯಾಗಿದ್ದಾಗಲೇ ಶಿವರಾಮ ಜಾಣನೆಂದು ಹೆಸರುಗೊಂಡಿದ್ದ. ನಾನು ಮಂಗಳೂರಿನಲ್ಲಿದ್ದಾಗ, ೧೯೨೧–೨೨ರಲ್ಲಿ ಗಾಂಧೀಜಿಯವರ ಅಸಹಕಾರ ಚಳುವಳಿ ಮೊದಲಾಯಿತು. ನಾನು ಬೇಡವೆಂದರೂ ಲೆಕ್ಕಿಸದೆ ಇಂಟರ್ ಓದುತ್ತಿದ್ದ ಶಿವರಾಮ ಕಾಲೇಜಿಗೆ ಶರಣು ಹೊಡೆದ. ಹಾಗೆ ಮಾಡದೆಹೋಗಿದ್ದರೆ ಅವನೀಗ ಒಬ್ಬ ಆಫೀಸರ್ ಆಗಿ ಪೆನ್ಷನ್ ಪಡೆಯುತ್ತಿದ್ದನೇನೊ. ಆ ಶಿವರಾಮನೆಲ್ಲಿ? ನಮಗೆಲ್ಲ ಹೆಗ್ಗಳಿಕೆ, ಗೌರವ, ಕೀರ್ತಿ ತಂದ ಈಗಿನ ಶಿವರಾಮನೆಲ್ಲಿ?

ಕೋಟ ರಾಮಕೃಷ್ಣ ಕಾರಂತ (ಕಾರಂತರ ಹಿರಿ ಅಣ್ಣ)

ಕಾರಂತರ ಯಕ್ಷರಂಗ ಪ್ರಯೋಗಗಳು

ಕು. ಶಿ. ಹರಿದಾಸಭಟ್ಟ
ನಿರ್ದೇಶಕರು
ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ
ಎಂ. ಜಿ. ಎಂ. ಕಾಲೇಜು, ಉಡುಪಿ–೫೭೬ ೧೦೬

ಯಕ್ಷಗಾನದ ಹಳಬರ ಬಗ್ಗೆ, ಅನೇಕ ಸಿಕರದ ಮಾತುಗಳನ್ನು ನಾವು ಕೇಳು ತ್ತೇವೆ. ಹಳೆಯವರನ್ನು ಹಿಡಿದುಕೊಂಡು ಏನಾದರೂ ಮಾಡಬೇಕೆಂದು ನಾನು ಹೇಳು ತ್ತೇನೆ, ಇವರೆಲ್ಲರೂ ಅರವತ್ತು ವರ್ಷ ಮೀರಿ ದವರು. ಇವರ ದೆಸೆಯಿಂದ ಏನೇನು ಕಲಿ ಯಲು ಸಾಧ್ಯ ಉಂಟೋ ಅದನ್ನು ಕಲಿ ಯುವುದಕ್ಕಾಗಿ ಉಡುಪಿಯಲ್ಲಿ ಒಂದು ಕೇಂದ್ರ ಸ್ಥಾಪನೆ ಆಯಿತು. ಈಗಲೂ ಕೂಡ ಹಳಬರು ಅಲ್ಲಿ ಕಲಿಸುತ್ತಿದ್ದಾರೆ. ಪರಂಪರೆಯ ಈ ರಂಗಭೂಮಿಯಲ್ಲಿ ಸಂಪ್ರ ದಾಯ ನಿಷ್ಠೆ ಅಂತ ಎಷ್ಟು ಬಡಕೊಂಡರೂ ಕೂಡ, ಇದು ವ್ಯಾಪಾರದ ದೃಷ್ಟಿಯಿಂದ ಅನೇಕ ವಿಷಯಗಳಲ್ಲಿ ಬದಲಾವಣೆ ಮಾಡಿ ಕೊಂಡಿದೆ. ಕರ್ಣಾರ್ಜುನ, ತಾಮ್ರಧ್ವಜ ಆಡುವ ಮೇಳಗಳು ಎಲ್ಲಿಯೂ ನಿಮಗೆ ನೋಡಲು ಸಿಗುವುದಿಲ್ಲ. ಪುರಾಣಕಾಲದ ಸುಪ್ರಸಿದ್ಧ ಪ್ರಸಂಗಗಳು ಯಾವುದನ್ನೂ ನಮ್ಮ ಮೇಳಗಳು ಈಗ ಆಡುತ್ತಿಲ್ಲ. ಅದರ ಬದಲಿಗೆ ಬೇರೆ ಹೊಸದಾದ ಹೊಸ ಪ್ರಸಂಗ ಗಳನ್ನು ಆಡುತ್ತಾರೆ. ಐತಿಹಾಸಿಕ ಕಥೆಗಳೂ ಇರುತ್ತವೆ. ತುಳು ಜಾನಪದದ ಕಥೆಗಳೂ ಬರುತ್ತವೆ.

ಕೆಲವರು ರಾಕ್ಷಸರು, ಕೆಲವರು ಸಾತ್ವಿ ಕರು—ಇವರ ನಡುವೆ ಯುದ್ಧ ನಡೆಯ ಬೇಕು. ಒಂದು ಪ್ರಯಾಣ ಆಗಬೇಕು. ಒಂದು ಅರಣ್ಯ, ಅರಣ್ಯದಲ್ಲೊಬ್ಬ ರಾಕ್ಷಸ, ಅರಮನೆಯಲ್ಲಿ ರಾಜಕುಮಾರಿ, ಪ್ರಣಯ ವಿರಹ, ಕ್ರೋಧ, ಆವೇಶದಂಥ ಸನ್ನಿವೇಶ ಗಳಿದ್ದರೆ ಸೈ. ಹಿಂದಿನ ಪ್ರಸಂಗಗಳ ಧಾಟಿ ಯಲ್ಲಿ ಪ್ರಸಂಗರಚನೆ ಬಲು ಸುಲಭ—ಈ ಶಬ್ದದ ಬದಲಿಗೆ ಆ ಶಬ್ದ. ಅದರಲ್ಲೇ ಸಿಕ್ಕ ಹಾಡುಗಳನ್ನು ಹಾಡಿದರೂ ನಡೆಯುತ್ತದೆ. 'ಭೂತ'ಗಳೇ ನಾಯಕರಾಗಿ ತಪ್ಪಿದರೆ ಖಳ ನಾಯಕರಾಗಿಬಿಟ್ಟರೆ ರಾಮರಾವಣರ ಪದ್ಯ ಗಳನ್ನು ಹಾಕಿದರೂ ಸಲ್ಲುತ್ತದೆ. ಹಳೆಯ ಪ್ರಸಂಗಗಳಿಗೆ ಪ್ರತಿರೂಪವಾದಂಥ ಪದ್ಯ ಗಳನ್ನು ಬರೆದು ಹುಟ್ಟುವ ಹೊಸ ಪ್ರಸಂಗ ಗಳನ್ನು ಯಜಮಾನರು ಆಡಲು ಬಯಸು ತ್ತಾರೆ. ಪ್ರೇಕ್ಷಕರೂ ಕೂಡ ಅದನ್ನೇ ಕೇಳು ತ್ತಾರೆ: ಈ ವರ್ಷ ಏನು ಹೊಸದು ? ಕೆಲವು ಸಲ ಹೆಸರು ಕೂಡ ಇಲ್ಲ: "ಒಂದು ನೂತನ ಪ್ರಸಂಗ" ಅಂತ ಹಾಕದೆ ಜನ ಬರುವುದಿಲ್ಲವೆಂಬ ನಂಬಿಕೆ. ಪ್ರೇಕ್ಷಕರ ಮನೋರಂಗ ಬದಲಾದ್ದರ ಸೂಚನೆ ಇದ ಲ್ಲವೆ ?

ಕೆಲ ವರ್ಷದಿಂದ ಯಕ್ಷಗಾನ ಕೇಂದ್ರದಲ್ಲಿ ನಾವು ಸಣ್ಣ ಹುಡುಗರನ್ನು ತಯಾರು ಮಾಡಿಕೊಟ್ಟೆವು. ಮೇಳದಲ್ಲಿ ಅವರಿಗೆ ಸಣ್ಣ ಕೆಲಸ, ಸಣ್ಣ ಚಾಕರಿ, ಅಷ್ಟೇ ಲಭ್ಯ. ಧ್ರುವ, ಭಕ್ತಪ್ರಹ್ಲಾದ, ಅಭಿಮನ್ಯು—ಈ ಎಳೆಯರಿರುವಂಥ ಯಾವ ಬಯಲಾಟಗಳನ್ನೂ ಇವತ್ತಿನವರು ಆಡುವುದಿಲ್ಲ. ಆದ್ದರಿಂದ ಚಿಕ್ಕವರಿಗೆ ಕೆಲಸ ಇಲ್ಲ. ಹಿಂದಿನ ಕಾಲದಲ್ಲಾದರೆ ಮೇಳದಲ್ಲೇ ಧ್ರುವ, ಅಭಿಮನ್ಯು, ಬಭ್ರುವಾಹನ, ನಕುಲ, ಸಹದೇವ, ಅರ್ಜುನ—ಹೀಗೆ ವಯೋಗುಣಕ್ಕೆ ಅನುಸಾರವಾಗಿ ಪಾತ್ರ ದೊರೆಯುವ ಪ್ರಸಂಗಗಳು ಇರುತ್ತಿದ್ದವು. ಚಿಕ್ಕವರಿಗೂ ಸ್ಥಾನ ಇತ್ತು.

ಯಾವುದಕ್ಕೆ ಮಹತ್ವ? ಮಾತಿಗೆ. ಕುಣಿತ ಸ್ವಲ್ಪ ಕಡಿಮೆ ಆದರೂ ಅಡ್ಡಿಯಿಲ್ಲ. ಮಾತಿನಿಂದ ಸುಧಾರಿಸಬಹುದು ಎಂಬ ವಿಶ್ವಾಸ ಮೇಳಗಳಲ್ಲಿ ಭದ್ರವಾಗಿದೆ. ಹೊಸ ಸಾಹಿತ್ಯ, ಹೊಸ ರೀತಿಯ ಪ್ರಸಂಗಗಳ ದೆಸೆಯಿಂದ ಕರಾವಳಿ ಯಕ್ಷಗಾನ ಕೂಡ, ಬದಲಾವಣೆಗೆ ಪಕ್ಕಾಗಿದೆ. ಪರಂಪರೆಯ ಚೌಕಟ್ಟನಲ್ಲಿ ನಾವು ಬದಲಾವಣೆಗಳನ್ನು ಮಾಡಬೇಕು ಅಂತ ಹೇಳಿದರೆ ಅದು ಒಂದು ವಿಮರ್ಶೆಯ ಪ್ರಶ್ನೆ ಆಗುತ್ತದೆ. ಒಂದು ಚರ್ಚೆಯ ಪ್ರಶ್ನೆ ಆಗಿಬಿಡುತ್ತದೆ. ಈ ನಡುವೆ ಅದರಲ್ಲಿ ಎಷ್ಟು ಪರಂಪರೆ ಉಳಿದಿದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

ಕರ್ನಾಟಕದ ಬೇರೆ ಭಾಗಗಳಲ್ಲಿ ಜಾನಪದ ನೃತ್ಯಗಳನ್ನು ಆಡಿಸುವ ಅಭ್ಯಾಸ ಹಳ್ಳಿಗಳಲ್ಲಿ ಬಿಟ್ಟು ಹೋಗುತ್ತಾ ಇದೆ. ಗೋಷ್ಠಿ ಮಾಡಿ ಅವರನ್ನು ಕರೆಸಿದರೆ ತಯಾರಾಗಿ ಬರುತ್ತಾರೆ. ಒಂದು ನಿರಂತರವಾದ ಪ್ರಯತ್ನ ವಾಗದೆ, ಸತತ ಆಡುವ ಗುಂಪುಗಳ ರಚ[illegible] ಆಗದೆ, ಉದ್ಯೋಗ ಅಂತ ಆಗದೆ, ಒಂದ[illegible] ಕಲೆ ಉಳಿಯಲು ಸಾಧ್ಯವಿಲ್ಲ.

ಕಲೆ ಕಸುಬಾಗಬೇಕು, ಅಂದರೆ ಮಾ[illegible] ಅದು ನಿಡುಗಾಲ ಉಳಿಯುತ್ತದೆ. ನಿ[illegible] ತಮ್ಮ ಜಾನಪದ ಕಲಾಗೋಷ್ಠಿಯ[illegible] ವಿದ್ಯಾರ್ಥಿಗಳೂ ಅಧ್ಯಾಪಕರೂ ಕುಣಿ[illegible] ತೋರಿಸಿದರು. ನಿಜವಾಗಿ ಜಾನಪದದ[illegible] ತಲ್ಲೀನರಾಗುವ ರೀತಿ ಇದು. ನೀವು ಜಾ[illegible] ಪದ ಅಧ್ಯಯನ ಮಾಡುತ್ತೀರೋ? ಬ[illegible] ಪುಸ್ತಕ, ಟೇಪ್ ರಿಕಾರ್ಡ್, ಪತ್ರಿಕಾ ಲೇ[illegible] ಇಷ್ಟೇ ಸಾಲದು ; ಕುಣಿಯಬೇಕು, ಹಾ[illegible] ಬೇಕು, ಎಲ್ಲವನ್ನೂ ಮಾಡಬೇಕು. ಯಾ[illegible] ದನ್ನು ಅಧ್ಯಯನ ಮಾಡುತ್ತೀರೋ ಅದ[illegible] ಪೂರ್ತಿ ಮುಳುಗಿ ಅಧ್ಯಯನ ಮಾಡ[illegible] ರೀತಿಯನ್ನು ಮಾರ್ತಾ ಆ್ಯಷ್ಟನ್ ತೋ[illegible] ಕೊಟ್ಟಿದ್ದಾರೆ. ಹೆಂಗಸಾದರೂ ಕೂಡ [illegible] ಕಿರೀಟ ಹಾಕಿಕೊಂಡು ಕುಣಿದರು. [illegible] ಬಿಟ್ಟು ಕುಣಿದು ತೋರಿಸಿದರು. ಆ[illegible] ನಮ್ಮಲ್ಲಿನ ಶಿಷ್ಟ ಸಮಾಜ ಇದಕ್ಕೆ [illegible] ವಾಗಿಲ್ಲ. ಅವನು ಕುಣಿದರೆ ನಾನು ನೋ[illegible] ತ್ತೇನೆ ಅನ್ನುತ್ತದೆ, ಬೇಕಾದರೆ ದು[illegible] ಕೊಟ್ಟೇನು, ಆರಾಮುಕುರ್ಚಿಯಲ್ಲಿ ಕು[illegible] ನೋಡಿಯೇನು, ನಾನು ಕುಣಿಯಲು[illegible] ಎನ್ನುತ್ತದೆ. ಹಿಂದೆ ಯಕ್ಷಗಾನದಲ್ಲಿ ಚ[illegible] ಹಾಕಿ ನೋಡುವ ಸಂಪ್ರದಾಯ. [illegible] ಅದರ ಸ್ಥಾನದಲ್ಲಿ 'ಈಜೀಚೇರ್', [illegible] ದಲ್ಲೇ ಎಲ್ಲಿಯೂ ಇರಲಿಕ್ಕಿಲ್ಲ, ಆರ[illegible] ಕುರ್ಚಿ ಸೌಲಭ್ಯವನ್ನು ಕೊಡುವಂಥ ಬ[illegible] ರಂಗಸಂಪ್ರದಾಯ. ಚಾಪೆ ಮೇಲೆ [illegible] ಮಾಡುವ ಬದಲಿಗೆ ಆರಾಮುಕುರ್ಚಿ [illegible] ನಿದ್ದೆ ಹೋಗಿ ಸಂಪ್ರದಾಯವನ್ನು ಉ[illegible] ತ್ತೇವೆ !

ಎರಡು ವರ್ಷ ಪೂರ್ವದಲ್ಲಿ ಕಾರಂತರು ಅಲ್ಲಿಯ ಸಂಸ್ಕೃತಿ ವಿಭಾಗದ ಆದೇಶದಂತೆ ಯಕ್ಷರಂಗವೆಂಬ ಒಂದು ಮೇಳ ರಚಿಸಿ ಕಲಾವಿದರಿಗೆ ತಮ್ಮ ಹದಿನೈದು ವರ್ಷ ಹಿಂದಿನ ಪ್ರಯೋಗಾತ್ಮಕ ನೃತ್ಯನಾಟಕದ (ಬ್ಯಾಲೆ) ಪರಿಮಾರ್ಜಿತ ರೂಪದಲ್ಲಿ ದೀರ್ಘ ತರಬೇತಿ ನೀಡಿ ಸುಂದರವಾದ ಒಂದು ಯಕ್ಷಗಾನ ರೂಪಕವನ್ನು ಭಾರತೀಯ ರಂಗಭೂಮಿಗೆ ಅರ್ಪಿಸಿದರು. ಹುರುಪಿಗೆ ಹೆಸರಾಂತ ಕೆಲ ಸ್ಥಾನಿಕರನ್ನು ಬಿಟ್ಟು ಉಳಿದ ಭಾರತೀಯ ಕಲಾ ಪ್ರಪಂಚ ಕಾರಂತ. ಬ್ಯಾಲೆಯನ್ನು ಯಕ್ಷಗಾನದ್ದೇ ಒಂದು ಪರಿಷ್ಕಾರವೆಂಬ ನಿಟ್ಟಿನಲ್ಲಿ ಸ್ವಾಗತಿಸಿತು. ದೇಶವಿದೇಶದ ಕಲಾ ವಿಮರ್ಶಕರು ಕೊಂಡಾಡುವಂತೆ ಕಾರಂತರು ಯಕ್ಷಗಾನವನ್ನು ನವೀಕರಿಸಿದರು. ನವೀಕರಣ ಯಾತಕ್ಕೆ ? ಪರಂಪರೆ ಒಂದೇ ಸಾಲದೆ ?—ಎಂಬ ಸವಾಲಿಗೆ ಕಾರಂತರು ಮಾತ್ರವೇ ಅಲ್ಲ ಜಗತ್ತಿನ ರಂಗಭೂಮಿ ಒಂದೇ ಬಗೆಯ ಜವಾಬು ಕೊಡುತ್ತದೆ. ಜಪಾನಿನ 'ಒಡೋರಿ' ಉತ್ಸವ ತಂಡ ಕೆನಡಾ ದೇಶಕ್ಕೆ ಪರ್ಯಟನೆಗೆ ಹೋದಾಗ ನಮ್ಮ ನೃತ್ಯ ಬರೀ ಹಳ್ಳಿಯಲ್ಲಿ ಕಾಣುವ ನೃತ್ಯವಲ್ಲ ಎಂದು ಹೇಳಿದ್ದಾರೆ. ಸದ್ಯ ನಡೆಯುತ್ತಿರುವ ಸಂಶೋಧನೆ, ಅಭ್ಯಾಸ, ಜಿಜ್ಞಾಸೆ, ಪ್ರದರ್ಶನ ಎಲ್ಲವೂ ಜಾನಪದದ ಗತಿಚಿತ್ರವನ್ನು ಸ್ಪಷ್ಟಗೊಳಿಸಲು ನಡೆಯುತ್ತಿವೆ ಎಂದು ನನ್ನ ಅನಿಸಿಕೆ. ಇದಕ್ಕೂ ಮುಂಚೆ ಒಂದು ಗತಿಚಿತ್ರ ಉಂಟು. ಆ ಗತಿಚಿತ್ರದಲ್ಲಿ ಜಾನಪದ ಪ್ರಪಂಚವನ್ನು ನಾವು ಕೂಡ ತನ್ಮಯತೆಯಿಂದ ಪ್ರವೇಶ ಮಾಡಬೇಕಾಗುತ್ತದೆ. ಬದಲಾವಣೆ ಆಗದೆ, ಒಂದು ಪರಂಪರೆ ಉಳಿಯುವುದಿಲ್ಲ. ಯಕ್ಷಗಾನ ವೇಷಭೂಷಣಗಳಲ್ಲಿ ಏನೇನೋ ಬದಲಾವಣೆಗಳು ಆಗಿದ್ದಾವೆ ಎಂದು ಪ್ರಬಂಧಕಾರರು ಹೇಳಿದರು. ಇಂಥ ಬದಲಾವಣೆ ಆಗಲೇಬೇಕಾದ್ದು—ಕಾಲಧರ್ಮಾನುಸಾರ ವೇಷಭೂಷಣಗಳ ವರ್ಣಸಂಯೋಜನೆಯನ್ನು ಕಾಯ್ದುಕೊಂಡು ಬಳಸುವ ಮೂಲವಸ್ತುವನ್ನು ಬದಲಾಯಿಸಿದರೆ ತಪ್ಪಾಗಲಾರದು. ಬದಲಾವಣೆಯೂ ಒಂದು ಸೃಷ್ಟಿಕಾರ್ಯವೇನೆ. ಆದರೆ ಅದನ್ನು ಮಾಡತಕ್ಕವನಿಗೆ ಅರ್ಹತೆ ಬೇಕು.

ಕಲೆ—ಜಾನಪದವೂ ಸೇರಿದಂತೆ–ಒಂದು ಸೃಷ್ಟಿಕಾರ್ಯವೆಂಬುದನ್ನು ಮರೆಯದೇ ಇರೋಣ. ನಮ್ಮ ಜಾನಪದ ಕಲೆಗಳನ್ನು ಹಿಡಿದುಕೊಂಡು, ಸೃಷ್ಟಿಶಕ್ತಿ ಉಳ್ಳ ಪ್ರತಿಭಾವಂತರು ಕೆಲಸ ಮಾಡಬೇಕು. ಇಂಥವರಿಗೆ ಕರ್ನಾಟಕದ ಜಾನಪದ ಒಂದು ಅಮೂಲ್ಯವಾದ ಸಂಪತ್ತು.

ಹಾಗೆಯೇ ಜಾನಪದ ಸಂಗೀತದ ಸಂಪ್ರದಾಯವನ್ನೂ ಕೂಡ ಹೇಗೆ ನಮ್ಮ ಆಧುನಿಕ ರಂಗಸಂಪ್ರದಾಯದೊಡನೆ ಬೆರೆಸಬಹುದು. ಎಂದೆನ್ನುವುದಕ್ಕೆ ಪ್ರತಿಭೆ, ಸ್ವಲ್ಪ ಶಕ್ತಿ ಬೇಕು. ಕಂಬಾರರು ಈ ಪ್ರದೇಶದಲ್ಲಿ ಕೆಲಸ ಮಾಡಿದ್ದಾರೆ. ಕಾರಂತರು ಮಾಡಿದ್ದೂ ಇದೇನೆ. ಕಲೆ ಎಂಬುದು ನಿಯತಿಕೃತ ನಿಯಮರಹಿತವಾದದ್ದು, ನವನವೋನ್ಮೇಷಶಾಲಿಯಾದದ್ದು, ಪದೇ ಪದೇ ಪುನರ್ಜನ್ಮ ತಾಳುವಂಥದ್ದು ಎನ್ನುವ ಮಾತನ್ನು ಸಂಪ್ರದಾಯಶರಣರೂ ಆಡುತ್ತಾರೆ. ಕಲಾಪ್ರಪಂಚದಲ್ಲಿ ಯಾವುದೇ ಭಾಗ ಸೃಷ್ಟಿಶಕ್ತಿಗೆ ಅಧೀನವಾಗದ ಹೊರತು ವಿಧಿಯಿಲ್ಲ ಎಂಬುದನ್ನು ಸಕಲರೂ ಒಪ್ಪಿದ್ದಾರೆ.

ಮಾತಿಗೆ ಬದಲಾಗಿ

ಪರಂಪರೆಯ ಮಾತನ್ನು ಹೇಳುವಾಗ, ಚಿತ್ರಕಲೆಯಲ್ಲಿ ಎಷ್ಟು ಪರಂಪರೆಗಳಿಲ್ಲ? ಪರಂಪರೆ ಅಂದರೇನು? ಒಬ್ಬ ಒಂದು ಅರುವತ್ತು ವರ್ಷ ಅಥವಾ ಬುದ್ಧಿ ಬಂದ ಮೇಲೆ ಮೂವತ್ತು ನಲವತ್ತು ವರ್ಷ ನೋಡಿದ್ದಷ್ಟೇ ಪರಂಪರೆಯೆ? ಅದಕ್ಕಿಂತ ಹಿಂದೆ ಏನಾದರೂ ಇತ್ತೆ? ಇದ್ದದ್ದು ಹೇಗಿತ್ತು? ಅದರಲ್ಲಿ ನೀವು ನೋಡಿದ ಹೊತ್ತಿಗೆ ಬದಲಾವಣೆ ಆಗಿರಲಾರದೆ? ಅಂದರೆ ಬದಲಾವಣೆಗೆ ಆಕ್ಷೇಪ ಮಾಡುವುದು ಸಲ್ಲ. ಅದು ಕೆಟ್ಟ ಬದಲಾವಣೆಯೋ ಒಳ್ಳೆ ಬದಲಾವಣೆಯೊ? ಕಲಾತ್ಮಕವಾಗಿದೆಯೋ ಇಲ್ಲವೊ? ಅದರಿಂದ ರಸಸೃಷ್ಟಿಗೆ ಪೋಷಣೆ ದೊರೆಯಿತೇ ಹೇಗೆ?—ಇದು ಮುಖ್ಯ.

ಕಾರಂತರು ಯಕ್ಷಗಾನ ನೃತ್ಯನಾಟಕಗಳಲ್ಲಿ ಮಾತಿನ ಬದಲಿಗೇನಿಟ್ಟಿದ್ದಾರೆಂಬುದನ್ನು ಕೇಳದವ ಯಾರೂ ಇಲ್ಲ. ಅದರಲ್ಲಿ ಮಾತಿನ ಬದಲು ಪರಿಪುಷ್ಟವಾದ ಅಭಿನಯ ಬಂದಿದೆ; ಆ ಅಭಿನಯವನ್ನು ಪರಿಶೀಲಿಸುವವರಿಲ್ಲ. ಪರಂಪರೆಯ ಸಂಗೀತವೇ ಉಚ್ಚಾರ ಸ್ಪಷ್ಟವಾಗಿಯೂ ಮಾತು ವಿರಳವಾಗಿಯೂ ಬಂದರೆ ಅದರ ಮಾಧುರ್ಯಕ್ಕೆ ಕೊರೆ ಆದೀತೆ? ವಾಸ್ತವ ಸಂಗತಿ ಏನೆಂದರೆ ಆಕ್ಷೇಪಕರಿಗೆ—ಮುಖ್ಯವಾಗಿ ದಕ್ಷಿಣ ಕನ್ನಡಿಗರಿಗೆ—ಸಾಮಾನ್ಯವಾಗಿ ಸಂಗೀತದ ಕಿವಿ ಇಲ್ಲ. ಏಕೆಂದರೆ ತಮಿಳುನಾಡಿನಲ್ಲಿ 'ಯಕ್ಷರಂಗ' ಪ್ರವಾಸ ಮಾಡಿದಾಗ ಅಲ್ಲಿನ ರಸಿಕರು ಯಕ್ಷಗಾನ ಸಂಗೀತವನ್ನು ಬಹುವಾಗಿ ಮೆಚ್ಚಿಬಿಟ್ಟರು. ಪ್ರತಿಯೊಬ್ಬರೂ ಆಸಕ್ತಿಯಿಂದ ಈ ಸಂಗೀತದ ಬಗ್ಗೆ ಪ್ರಶ್ನೆಗಳನ್ನು ಕೇಳಿದರು. ಅಂದರೆ ಪೂರ್ವಭಾವಿಯಾಗಿ

ಅವರಲ್ಲಿ ಸಂಗೀತಕ್ಕೆ ಸಂವೇದಿಯಾದ
ಸಂಸ್ಕಾರ ತಾನೇತಾನಾಗಿ, ಸಹಜವಾ
ಪರಿಸರಸಂಬಂಧಿಯಾಗಿ ಇದ್ದುದರಿಂದ ಯಕ್ಷ
ಗಾನ ಸಂಗೀತಕ್ಕೆ ಅವರು ಒಲಿದರು.

ಕರ್ನಾಟಕದಲ್ಲಿರತಕ್ಕ ಜಾನಪ
ಸಂಪತ್ತು—ಅದು ಯಕ್ಷಗಾನ ಆಗಲಿ
ಸಣ್ಣಾಟ ಆಗಲಿ, ದೊಡ್ಡಾಟ ಆಗಲಿ—
ಎಷ್ಟು ಸೃಷ್ಟಿಶೀಲವಾದ ಕೆಲಸಕ್ಕೆ ಒದ
ಬಲ್ಲದು ಎಂಬುದರ ಬಗ್ಗೆ ಯೋಚನೆಮಾ
ಬೇಕು. ಅಂದರೆ ಮಾತ್ರ ಜಾನಪ
ಉಳಿದೀತು. ಕಂಬಾರರಂಥ ಪ್ರತಿಭಾಶಾ
ಗಳು ಯೋಚನೆಮಾಡಿ, ತಮ್ಮ ನಾಟ
ಗಳಲ್ಲಿ ಅವನ್ನು ಉಳಿಸಿಕೊಳ್ಳಬೇಕು. ಅವಕ
ಆಧುನಿಕ ಸ್ಪರ್ಶ ಆಗಲೇಬೇಕು. ಇದ್ದಂ
ಇರಿಸೋಣ ಎಂದರೆ ಎಲ್ಲಿ? ಮೂರು ತಾ
ನೊಳಗೆ ಮುಗಿಯುವ ವಿವಾಹಸಮಾರಂ
ದಲ್ಲಿ ಹಸೆಹಾಡಿಗೆ ಅವಕಾಶ ಇರುತ್ತದೆಯೆ
ಹೊಳೆ ದಾಟಲು ಸೇತುವೆಗಳನ್ನು ಕಟ್ಟ
ಮೇಲೆ ಅಂಬಿಗನ ಹಾಡು ಅವನ ಕೊರಳ
ಉಳಿದೀತೆ? ಹಿಟ್ಟಿನ ಗಿರಣಿಗಳಲ್ಲಿ ಬೀಸು
ಹಾಡು ಕೇಳಿಸುವುದುಂಟೆ? ಇಲ್ಲಿ ಮುಖ್
ವಾದ ಮಾತೆಂದರೆ—ಜಾನಪದ ಸಂಗೀ
ನೃತ್ಯ, ಕಲೆಗಾರಿಕೆ ಎಲ್ಲವೂ ಜೀವನ
ಅವಿಭಾಜ್ಯ ಅಂಗವಾಗಿ ಉದ್ಭವಿಸಿದವ
ವಿದ್ವಾಂಸರ ಚರ್ಚೆಗಾಗಿ, ಅಭಿಮಾನಿಗ
ಪ್ರೋತ್ಸಾಹಕ್ಕಾಗಿ ಅಥವಾ ಆಕ್ಷೇಪಕ
ಸಮಾಧಾನಕ್ಕಾಗಿ ಹುಟ್ಟಿದವುಗಳ
ಸಂದರ್ಭವೇ ಬದಲಾದರೆ ಜಾನಪದ ಇದ್ದ
ಇರಲಾರದು. ಹೊಸ ಕಾಲಮಾನ, ಹೊ
ವೇದಿಕೆಯಲ್ಲಿ ಅದು ಹೇಗೆ ಕಾಣಿಸಿ
ಚಂದ ಎಂಬ ಬಗ್ಗೆ ವಿಚಾರವಂತ
ಯೋಚಿಸಬೇಡವೆ? ಗ್ರಾಮಜೀವನ ಪದ್ಧ

ಾಂಪ್ರದಾಯಿಕವೆನಿಸಿಕೊಂಡಿದ್ದ ಜೀವನ ಾಮಾಜಿಕವಾಗಿ ಎಷ್ಟೊಂದು ಬದಲಾವಣೆಗೆ ಡಾಗಿದೆ? ನೂರು ವರ್ಷಗಳಲ್ಲಿ ನಡೆದ ದಲಾವಣೆ ಹತ್ತೇ ವರ್ಷದಲ್ಲಿ ನಡೆಯು ಂತೆ ಅದಕ್ಕೆ ಉದ್ದೀಪನಗಳನ್ನೊದಗಿಸಲು ಾಷ್ಟ್ರಶಕ್ತಿಯ ವಿನಿಯೋಗ ಆಗುತ್ತಿರುವು ನ್ನು ನೋಡಿದರೆ ಸನ್ನಿವೇಶಪಲ್ಲಟಕ್ಕೆ ಕ್ಕಾಗಿ ಜಾನಪದದ ರೂಪಪಲ್ಲಟವೂ ಗಿಯೇ ತೀರುತ್ತದೆ. ಜಾನಪದದ ಸ್ಫೂರ್ತಿ ಶಕ್ತಿ ನಮ್ಮ ಸೃಷ್ಟಿಶೀಲ ನಾಟಕಕಾರರು, ಸಂಗೀತಗಾರರು ಇವರಲ್ಲಿ ಮರುಹುಟ್ಟು ಪಡೆದು ಉಳಿಸಿಕೊಳ್ಳುವುದೇ ನಿಜವಾಗಿ ಜಾನಪದವನ್ನು ಉಳಿಸಿ ಬೆಳಸುವ ಮಾರ್ಗ. ವಸ್ತುಸಂಗ್ರಹಾಲಯದಲ್ಲಿ ನಮಗೆ ತೋರು ವುದು ಜಾನಪದದ ಸ್ಥಿತಿಚಿತ್ರ—ಇಷ್ಟೇ ಸಾಲದು; ಜಾನಪದ ಮೂಲವಾದ ಸೃಷ್ಟಿ ಯಲ್ಲಿ, ಕವಿಕೃತಿಯಲ್ಲಿ, ನಾಟಕಕಾರರ ಪ್ರದರ್ಶನದಲ್ಲಿ ಕ್ರಿಯಾಶೀಲವಾಗಿ ಉಳಿಸಿ ಕೊಳ್ಳುವುದು ನಮ್ಮ ಸದ್ಯದ ಕರ್ತವ್ಯವೆಂದು ನನಗೆ ತೋರುತ್ತದೆ.

ಕಾರಂತರು ಎಂದರೆ ಜನಕ್ಕೊಂದು ಆಶ್ಚರ್ಯವನ್ನು ಕಂಡಂತೆ ಆಗು ತ್ತದೆ. ಅವರು ಪ್ರವಾಸದಲ್ಲಿದ್ದಾಗ, ತರುಣರು ವೃದ್ಧರು ಎಲ್ಲರೂ ಸಮೀಪಕ್ಕೆ ಬಂದೊಡನೆ 'ಅಬ್ಬಾ!' ಎಂದು ಬದಿಗೆ ಸರಿದು ಕಣ್ಣರಳಿಸಿ ಆದರ ಕೌತುಕ ಪ್ರೀತಿಗಳಿಂದ ಕಾಣುತ್ತಾರೆ. ತಲೆವಾಗಿ ಅವರಿಗೆ ಗೌರವವನ್ನು ಸೂಚಿಸುತ್ತಾರೆ. ಕಾರಂತರನ್ನು ಕುರಿತಂತೆ ಗೀತೆಯ ಈ ಶ್ಲೋಕ ನೆನಪಿಗೆ ಬರುತ್ತದೆ:

ಆಶ್ಚರ್ಯವತ್ ಪಶ್ಯತಿ ಕಶ್ಚಿತ್ ಏನಂ
ಆಶ್ಚರ್ಯವತ್ ವದತಿ, ತಥೈವ ಚ ಅನ್ಯಃ
ಆಶ್ಚರ್ಯವತ್ ಶ್ರುಣೋತಿ........

—ಶಂ. ಬಾ. ಜೋಶಿ

ವೈಶಿಷ್ಟ್ಯಪೂರ್ಣ ಯಕ್ಷರಂಗ

ಕೆ. ಈಶ್ವರಯ್ಯ
'ಉದಯವಾಣಿ'
ಮಣಿಪಾಲ

ಏನು?

'ಯಕ್ಷರಂಗ'ದ ಹುಟ್ಟಿಗೆ ಶಿವರಾಮ ಕಾರಂತರ ಈ ಅನ್ವೇಷಣ ಪ್ರವೃತ್ತಿಯೇ ಕಾರಣವಾಗಿದೆ. ಯಕ್ಷಗಾನದ ಮೇಲಿನ ಕಾರಂತರ ಅಭಿಮಾನ, ಅಭಿರುಚಿ ಇಂದು ನಿನ್ನೆಯದಲ್ಲ. ನಾಲ್ಕು ದಶಕಗಳಿಂದ ತಮ್ಮ ಇತರ ಹವ್ಯಾಸಗಳೊಂದಿಗೆ ಯಕ್ಷಗಾನದ ತಳ ಶೋಧನೆಯ ಕಾರ್ಯವನ್ನು ಮುಂದುವರಿಸಿ ಸಂಶೋಧನಾ ರಂಗಕ್ಕೆ ಮಹತ್ವದ ಕೊಡುಗೆಯೊಂದನ್ನು ನೀಡಿದ್ದಾರೆ. ಇಂದಿಗೂ ಯಕ್ಷಗಾನ ಅವರ ಅಚ್ಚುಮೆಚ್ಚಿನ ಕಲೆಯಾಗಿಯೇ ಉಳಿದಿದೆ.

ಯಕ್ಷಗಾನ ತನ್ನ ವಲಯವನ್ನು ವಿಸ್ತರಿಸಿಕೊಳ್ಳಬೇಕಾದರೆ ಅದರಲ್ಲಿ ಕೆಲವು ಮಾರ್ಪಾಡುಗಳಾಗುವುದು ಅನಿವಾರ್ಯವಾಗಿತ್ತು. ಮಾತುಗಾರಿಕೆ ಯಕ್ಷಗಾನದ ಜನಪ್ರಿಯತೆಗೆ ಒಂದು ಪ್ರಧಾನ ಸಾಧನವಾಗಿದ್ದಂತೆ ಅವರ ವಲಯ ವಿಸ್ತರಣೆಗೆ ಅಡ್ಡಿಯಾಗುವ ದೊಡ್ಡ ದೌರ್ಬಲ್ಯವೂ ಆಗಿತ್ತು. ಭಾಷೆಯ ಉದ್ದೇಶ ಭಾವ ಪ್ರಕಟಣೆಯನ್ನು ಮಾತಿನ ಬದಲು ವಿಶ್ವ ಭಾಷೆಯಾದ ಸಂಗೀತ, ನೃತ್ಯದ ಮೂಲಕ ಮಾಡುವಂತಾದರೆ ಯಕ್ಷಗಾನ ಸಾರ್ವತ್ರಿಕವಾಗಿ ಅಂಗೀಕರಿಸಲ್ಪಡುವ ಕಲೆಯಾಗಿ ಮಾರ್ಪಡುವುದು ಎನ್ನುವುದು ಕಾರಂತರ ಕನಸಾಗಿತ್ತು. ಇದು ನನಸಾದುದು ೧೯೬ರಲ್ಲಿ, ಕಾರಂತರ ಮೊತ್ತಮೊದಲಾಗಿ ತಮ ಯಕ್ಷಗಾನ ನೃತ್ಯರೂಪಕವನ್ನು ಪ್ರದರ್ಶಿ ದಾಗ.

ಯಾರು?

ಯಕ್ಷರಂಗದಲ್ಲಿ ಇಪ್ಪತ್ತು ಮಂ ಕಲಾವಿದರಿದ್ದಾರೆ. ಇವರಲ್ಲಿ ಹೆಚ್ಚಿನವರ ವೃತ್ತಿಪರ ಕಲಾವಿದರು. ಹಲವರು ಮೊದಲ ಮೇಳಗಳಲ್ಲಿ ಪಾತ್ರವಹಿಸುತ್ತಿದ್ದವರು ಇನ್ನೂ ಕೆಲವರು ಹೊಸದಾಗಿ ಸೇ ಕೊಂಡವರು. ಇವರು ಮೂರು ತಿಂಗ ಕಾಲ ಕಾರಂತರ ದಿಗ್ದರ್ಶನದಲ್ಲಿ ತರಬೇ ಪಡೆಯುತ್ತಾರೆ. ವರ್ಷದಲ್ಲಿ ಮೂವತ್ತ ಪ್ರದರ್ಶನಗಳನ್ನು ನೀಡುವ ಯೋಜನೆ ಹಾ ಕೊಳ್ಳಲಾಗಿದೆ. ಪ್ರದರ್ಶನ ಸಮಯಕ ಆಯಾ ಸ್ಥಳಗಳಲ್ಲಿ ಹಾಜರಿದ್ದು ಇತ ಸಮಯದಲ್ಲಿ ತಮ್ಮ ಉಪವೃತ್ತಿಯನ ಮುಂದುವರಿಸುವ ಅವಕಾಶ ಕಲಾವಿದರಿ ಇದೆ.

ಹೇಗೆ?

ಯಕ್ಷರಂಗದ ಮೂಲಕ ಕಾರಂತ ಪ್ರಚುರಪಡಿಸುವ ನೃತ್ಯರೂಪಕ ಸಾಂ



ಯಕ್ಷಗಾನತರಬೇತಿ ಶಿಬಿರದಲ್ಲಿ ಕಾರಂತರು



'ಮುಕ್ತದ್ವಾರ'ದ ಕಾಲನಟನಾಗಿ
ಕಾರಂತರು ೧೯೩೫



ಶಬರಶಂಕರ ವಿಲಾಸ ನೃತ್ಯ ನಾಟಕದಲ್ಲಿ ಲೀಲಾ ಮತ್ತು ಕಾರಂತರು



ಪತ್ನಿ ಲೀಲಾರೊಡನೆ ಕಾರಂತರು

ದಾಯಿಕ ಯಕ್ಷಗಾನಕ್ಕಿಂತ ಹಲವು ರೀತಿಯಲ್ಲಿ ಭಿನ್ನವಾಗಿದೆ. ಒಟ್ಟು ಪ್ರದರ್ಶನ ಕಾಲವನ್ನು ಎರಡೂವರೆ ಗಂಟೆಗೆ ಇಳಿಸಲಾಗಿದೆ. ಸಂಭಾಷಣೆಯನ್ನು ಕೈ ಬಿಡಲಾಗಿದೆ. ಯಾವುದೇ ನಿರ್ದಿಷ್ಟವಾದ ತಂತ್ರ, ನೃತ್ಯ ಸಂಯೋಜನೆಯನ್ನು ಬಂಧಿಸಿರುವುದಿಲ್ಲ. ಹೆಜ್ಜೆ, ಚಲನೆ ಭಂಗಿಗಳಲ್ಲಿ ಯಕ್ಷಗಾನದ ಮೂಲ ರೂಪವಿದ್ದೂ ಅವುಗಳಲ್ಲಿ ಬಹಳಷ್ಟು ಮಾರ್ಪಾಡನ್ನು ಕಾರಂತರು ಮಾಡಿರುತ್ತಾರೆ.

ತಂತ್ರವೇ ಸರ್ವಸ್ವವಲ್ಲ. ಅದು ಭಾವನೆಗಳನ್ನು ಮಾಧ್ಯಮಕ್ಕೆ ಭಾಷಾಂತರಿಸುವ ಒಂದು ಸಾಧನ. ಪರಿಣಾಮಕಾರಿಯಾದ ಭಾವನಿರೂಪಣೆಗೆ ಅನುಕೂಲವಾಗುವಂತೆ ತಂತ್ರವನ್ನು ಆರಿಸುವುದು, ಕೈಬಿಡುವುದು, ಬದಲಾಯಿಸುವುದು, ಮಿಶ್ರಗೊಳಿಸುವುದು ಅಗತ್ಯ ಎನ್ನುತ್ತಾರೆ ಕಾರಂತರು. ಲಯ, ತಾಳ, ರಾಗ, ಸಾಹಿತ್ಯ — ಇವುಗಳಿಗೆ ಭಾವನೆಯೊಡನಿರುವ ಸಂಬಂಧವನ್ನು ಇಲ್ಲಿ ಪ್ರತ್ಯೇಕಪ್ರತ್ಯೇಕವಾಗಿ ಗುರುತಿಸಲು ಯತ್ನಿಸಲಾಗಿದೆ. ಲಯದೊಂದಿಗೆ ತಾಳದ ನುಡಿಗಳನ್ನು ಸಾಹಿತ್ಯ ಸೊಲ್ಲುಕಟ್ಟುಗಳನ್ನು ಹೆಜ್ಜೆಯಲ್ಲಿ ಮೂಡಿಸಲು ವೇಷಧಾರಿಗಳು ಯತ್ನಿಸುತ್ತಾರೆ. ಶೃಂಗಾರ, ಹಾಸ್ಯ, ಕರುಣಕ್ಕೆ ಲಘುವಾದ ಪದಚಲನೆಯಿದ್ದರೆ ವೀರ ರೌದ್ರಕ್ಕೆ ಪಾದ ನೆಲವನ್ನು ಅಪ್ಪಳಿಸುತ್ತಾ ಚಲಿಸುತ್ತದೆ. ಚಲನೆಯಲ್ಲಿ ಲಾಸ್ಯ ಮರೆಯಾಗಿ ಗಡಸುತನ ಕಾಣಿಸುತ್ತದೆ. ದೇಹ ಸೆಟೆದು ಭಂಗಿ ಸ್ಫುಟವಾಗಿ ಒರಟೊರಟಾಗಿ ಮೂಡುತ್ತದೆ.

ಪಾತ್ರಗಳ ಸಾಮೂಹಿಕ ಚಲನೆಯಲ್ಲಿ ಪಾಶ್ಚಾತ್ಯ ಬ್ಯಾಲೆಯ ತೇಲುಗತಿ ಮತ್ತು ಸಂಯೋಜನಾ ವಿಧಾನವನ್ನು ಕಾಣಬಹುದು. ಸಾಂಪ್ರದಾಯಿಕ ಯಕ್ಷಗಾನದಲ್ಲಿ ಸಮೂಹ ಚಲನೆಯಲ್ಲಿ ಕಾಣಿಸಿಕೊಳ್ಳುವ ವಿಷಯವಿನ್ಯಾಸ ಇಲ್ಲಿರುವುದಿಲ್ಲ. ಸಾಮರಸ್ಯದ ಒಂದು ಮೋಹಕತೆಯನ್ನು ಕಾರಂತರು ಇಲ್ಲಿ ನೀಡಿರುತ್ತಾರೆ.

ಮುದ್ರೆಗಳಿಗಿಂತ ಅಂಗವಿನ್ಯಾಸಗಳ ಮೂಲಕ ಭಾವಪ್ರಕಟಣೆ ಹೆಚ್ಚು ಅನುಕೂಲಕರವೆನ್ನುತ್ತಾರೆ ಕಾರಂತರು. ಮುದ್ರೆಗಳಿಗೆ ತಮ್ಮದೇ ಆದ ನಿಶ್ಚಿತ ಅರ್ಥವಿದೆ. ಎಲ್ಲ ಸಂದರ್ಭಗಳಲ್ಲೂ ಅವುಗಳ ಪ್ರಕಟಣೆ ಸುಲಭಸಾಧ್ಯವಲ್ಲ. ಅದರ ಬದಲು ಕೋಪ ದುಃಖ ಸಂತೋಷದ ಸಂದರ್ಭಗಳಲ್ಲಿ ನಮ್ಮಲ್ಲಿ ಸಹಜವಾಗಿ ಕಾಣಿಸಿಕೊಳ್ಳುವ ಆಂಶಿಕ ಚಲನೆಗಳನ್ನೇ ನೃತ್ಯದಲ್ಲಿ ಅಳವಡಿಸಿಕೊಂಡರೆ ಅವು ಹೆಚ್ಚು ಪರಿಣಾಮಕಾರಿಯೂ ಸಂವಹನಕಾರಿಯೂ ಆಗಿರುತ್ತದೆ.

ಇಲ್ಲಿ ನೃತ್ಯ ಮತ್ತು ಸಂಗೀತವನ್ನು ಕಾರಂತರು ಬೆಸೆದಿರುವ ವಿಧಾನ ಅನನ್ಯವಾಗಿದೆ. ಸಂಗೀತಕ್ಕೆ ನರ್ತಿಸುವುದು ಮತ್ತು ಸಂಗೀತವನ್ನೇ ನರ್ತಿಸುವುದು ಇವುಗಳ ನಡುವಿನ ವ್ಯತ್ಯಾಸವನ್ನು ಕಾರಂತ ನೃತ್ಯ ರೂಪಕದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಒಂದಕ್ಕೆ ಪೋಷಕವಾಗಿ ಇನ್ನೊಂದು ಬರುವುದರ ಬದಲು ಎರಡೂ ಅವಿಭಾಜ್ಯ ಅಂಗಗಳಾಗಿ ಕೊನೆಯವರೆಗೂ ಉಳಿದುಕೊಳ್ಳುತ್ತವೆ. ಸಂಗೀತದೊಂದಿಗೆ ಭಾವ ನೃತ್ಯದ ಮೂಲಕ ಅರಳಿಕೊಳ್ಳುತ್ತದೆ.

ಪ್ರಯೋಗಕ್ಕೆ ಬೇಕಾದ ಎಲ್ಲ ವೇಷಭೂಷಣಗಳನ್ನು ಕಾರಂತರೇ ತಯಾರಿಸು

ತ್ತಾರೆ. ಭಾರವಾದ ಅಲಂಕಾರಗಳ ಬದಲು ವೇಷಧಾರಿಯ ಚಲನೆಗೆ ಅನುಕೂಲವಾಗುವಂತೆ ಹಗುರವಾದ ಎಲ್ಯೂಮಿನಿಯಮ್, ಪ್ಲಾಸ್ಟಿಕ್, ರಟ್ಟು ಮುಂತಾದ ಸಾಮಗ್ರಿಗಳಿಂದ ಅತ್ಯಾಕರ್ಷಕ ಕಾಸ್ಟ್ಯೂಮ್ಸ್‌ನ್ನು ಕಾರಂತರೇ ತಯಾರಿಸಿರುತ್ತಾರೆ. ದೇಹವನ್ನು ಬಿಗಿಯಾಗಿ ಒತ್ತಿ ನಿಲ್ಲುವ ತೊಡುಗೆಗಳನ್ನು ರಚಿಸುವಾಗ ಆಯಾ ಅಂಗಗಳ ಸ್ನಾಯು ಖಂಡಗಳ ರಚನೆಯನ್ನು ಕಾರಂತರು ಗಮನದಲ್ಲಿರಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ. ಅವರ ಸೂಕ್ಷ್ಮ ದೃಷ್ಟಿಯಿಂದ ಯಾವುದೂ ತಪ್ಪಿಸಿಕೊಳ್ಳುವುದಿಲ್ಲ. ಪಾತ್ರಗಳಿಗೆ ಉಡುಪನ್ನು ಆರಿಸುವಾಗ ಬಣ್ಣವನ್ನು ಅತಿ ಜಾಗರೂಕತೆಯಿಂದ ಪರೀಕ್ಷಿಸುತ್ತಾರೆ. ಒಟ್ಟು ವರ್ಣ ಸಂಯೋಜನೆಯನ್ನು ಲಕ್ಷ್ಯದಲ್ಲಿರಿಸಿಕೊಂಡು ಅಂಚಿನಿಂದ ಒಡಲಿನವರೆಗೂ ಬಣ್ಣದಲ್ಲಿ ಸಾಮರಸ್ಯವಿರುವಂತೆ ಡೈ ಮಾಡಿಸುತ್ತಾರೆ. ಆದರೂ ಅವರಿಗೆ ತೃಪ್ತಿ ಇಲ್ಲ. "ಈಗೇನು ಮಾಡಿದರೂ ಪ್ರಯೋಜನವಿಲ್ಲ. ಒಟ್ಟು ಪರಿಣಾಮ ರಂಗದ ಮೇಲೆ ಬೆಳಕಿನಲ್ಲಿ ಗೊತ್ತಾಗುತ್ತದೆ" ಅನ್ನುತ್ತಾರೆ ಕಾರಂತರು. ಟೀಕೆಗೆ ಅವರೆಂದೂ ಹಿಮ್ಮೆಟ್ಟಿದವರಲ್ಲ.

ಯಾಕೆ?

ಕಾರಂತರ ನೃತ್ಯ ರೂಪಕ ಮೊತ್ತ ಮೊದಲು ಬೆಳಕಿಗೆ ಬಂದಾಗ ಈ ಪ್ರಶ್ನೆಯನ್ನು ಕೇಳಿದವರು ಕೆಲವರಾದರೆ 'ಬೇಡವೇ ಬೇಡ' ಎಂದು ಸಾರಿದವರು ಹಲವರು. ಯಕ್ಷಗಾನ ಹಾಳಾಯಿತು ಎಂದು ಹಲುಬಿದವರು ಕೆಲವರಾದರೆ ಇತ್ತೀಚೆಗೆ ಇನ್ನು ಕೆಲವರು 'ಕಲೆಯ ಕುಲಗೆಡಿಸದಂತೆ ಕಾರಂತರನ್ನು ತಡೆಯಿರಿ' ಎಂದು ಸರಕಾರಕ್ಕೆ ಮನವಿಯನ್ನೂ ಸಲ್ಲಿಸಿದ್ದರು. ಅಡ್ಡಿ, ಆತಂಕ, ಆಕ್ಷೇಪ, ಆರೋಪ, ಯಾವುದೂ ಕಾರಂತರಿಗೆ ಹೊಸದಲ್ಲ. ತಮ್ಮ ಹೃದಯದಲ್ಲಿ ತಾವು ನಂಬಿದ್ದನ್ನು ಮಾಡಿಯೇ ತೀರುವವರು ಅವರು. "ನಲ್ವತ್ತು ವರ್ಷದಿಂದ ಈ ರಂಗದಲ್ಲಿ ಶ್ರಮಿಸುತ್ತಿರುವ ನನಗೆ ತಾಳ ಜ್ಞಾನವಿಲ್ಲವೆಂದು ಕೆಲವರು ಹೇಳುತ್ತಾರೆ. ಗೊತ್ತೇ ನಿಮಗೆ?" ಎಂದು ಕಾರಂತರು ಹಗುರವಾಗಿ ನಕ್ಕುಬಿಡುತ್ತಾರೆ.

ಇಂಥ ಪ್ರಶ್ನೆ, ಪ್ರತಿಭಟನೆ ಇಲ್ಲಿಗೆ ಮತ್ತು ಕಾರಂತರಿಗೆ ಮಾತ್ರ ಮೀಸಲಾದ್ದು ಅಲ್ಲ. ಇದು ಎಲ್ಲ ಪ್ರತಿಭಾವಂತರ ಮುಂದೆಯೂ ಎದ್ದು ನಿಂತಿತು ಕಾರಣ ಹಲವು ಬಗೆಯದ್ದು. ಹೊಸದೆಲ್ಲವನ್ನೂ ಕುರುಡಾಗಿ ತಿರಸ್ಕರಿಸುವುದು ಒಂದಾದರೆ ಸಂಪ್ರದಾಯದ ಮೇಲಿನ ಅತಿನಿಷ್ಠೆ ಇನ್ನೊಂದು. ವೈಯಕ್ತಿಕ ಅಸಹನೆ ಸಿನಿಸಿಸಂ, ವಿರೋಧಕ್ಕೆಂದೇ ವಿರೋಧಿಸುವ ಧೋರಣೆಯೂ ಇದಕ್ಕೆ ಪ್ರೇರಣೆಯಾಗಿರಬಹುದು.

ಪಾಶ್ಚಾತ್ಯ ಬ್ಯಾಲೆಯ ಆಧುನಿಕ ರೂಪಕ್ಕೆ ಬಹುಮಟ್ಟಿಗೆ ಕಾರಣಳಾದ ಇಸಡೋರಾ ಡಂಕನ್ ಮೊತ್ತಮೊದಲಿಗೆ ಸಾಂಪ್ರದಾಯಿಕ ಬ್ಯಾಲೆಯ ಅಂಗಸೌಂದರ್ಯ ಕೆಡಿಸುವ ಗಡಸು ಭಂಗಿಗಳನ್ನು ತೊರೆದು ಚಲನೆಯಲ್ಲಿ ಸ್ವಾತಂತ್ರ್ಯ ಭಾವನೆಗಳ ಮುಕ್ತ ಅಭಿನಯವನ್ನು ನೃತ್ಯದಲ್ಲಿ ಪರಿಚಯಿಸಿದಾಗ ತೀವ್ರಪ್ರತಿಭಟನೆಯನ್ನು ಇದಿರಿಸಬೇಕಾಯಿತು. ಬ್ರಾಮ್, ಗ್ಲಕ್, ಬಿಥೋವನ್, ಚೋಪಿನ್ ಅವರ ಸಂಗೀತ ಸಂಯೋಜನೆಗೆ ಆಕೆ ರೂಪಿಸಿದ ನೃತ್ಯ ವಿಧಾನವನ್ನು ಅಮೆರಿಕಾ ತಿರಸ್ಕರಿಸಿದರೆ ಯೂರೋಪ್ ಉತ್ಸಾಹದಿಂದ ಸ್ವಾಗತಿಸಿತು

ಅನ್ನಾ ಪಾವ್ಲೋವಾ ಮತ್ತು ರಷ್ಯನ್ ಬ್ಯಾಲೆಯ ಪಿತಾಮಹ ಸರ್ಜೆ ಡಾಯಗಿಲೆವ್ ಇಸಡೋರಳ ನೃತ್ಯದಿಂದ ಸ್ಫೂರ್ತಿಪಡೆದು ರಷ್ಯನ್ ಬ್ಯಾಲೆಯಲ್ಲಿ ಹಲವು ಮಾರ್ಪಾಡುಗಳನ್ನು ಮಾಡಿದರು. ಇಂಗ್ಲೆಂಡಿನ ರಾಯಲ್ ಬ್ಯಾಲೆಯ ದಿಗ್ದರ್ಶಕ ಸರ್ ಫ್ರೆಡ್ರಿಕ್ ಆ್ಯಷ್ಟನ್ ತಮ್ಮ ವಿಖ್ಯಾತ ನೃತ್ಯರೂಪಕಗಳಾದ 'ಫೆಕೆಡ್' 'ಸಿಂಡ್ರಿಲ್ಲಾ' 'ಸಿಂಫೋನಿಕ್ ವೇರಿಯಶನ್'ನಲ್ಲಿ ಇಸಡೋರಾಳ ಚಲನ ವಿಧಾನಗಳನ್ನು ಬಳಸಿಕೊಂಡಿರುವುದಾಗಿ ಹೇಳಿದ್ದಾರೆ.

ಹೀಗೆ ಯಾವುದೇ ಕೊಡುಗೆಯ ಮಹತ್ವವನ್ನು ಕಾಲವೇ ನಿರ್ಧರಿಸಬೇಕಾಗುತ್ತದೆ. ಯಾಕೆ ಅನ್ನುವ ಪ್ರಶ್ನೆ ಬೇಕು. ಯಾಕೆಂದರೆ ಕಲೆಯ ಮೌಲ್ಯ, ಸತ್ತ್ವಪರೀಕ್ಷೆಗೆ ಇದು ನಿಕಷ, ಪ್ರಾಮಾಣಿಕ ಜಿಜ್ಞಾಸೆಯಿಂದ ಈ ಪ್ರಶ್ನೆ ಹುಟ್ಟಿದರೆ ಅದನ್ನು ಸ್ವಾಗತಿಸಬಹುದು. ಇಲ್ಲವಾದಲ್ಲಿ ಯಕ್ಷಗಾನದ ಸೊಗಸನ್ನು ಹತ್ತು ಕಡೆ ಹಂಚಬಲ್ಲ ಈ ಈ ಪ್ರಯೋಗಕ್ಕೆ 'ಯಾಕೆ?' ಎಂದು ಸವಾಲು ಹಾಕುವ ಬದಲು 'ಈ ದಿಸೆಯಲ್ಲಿ ನಡೆದ ಯತ್ನ ಸಾಕೇ?' ಎಂದು ಕೇಳುವುದು ಒಳ್ಳೆಯದು.

ಕಾರಂತರ ಸ್ವಭಾವದ ಮುಖ್ಯ ಗುಣವೆಂದರೆ ಸಾಹಸ ಜೀವನ. ಅವರು ಬಹು ಕುತೂಹಲಿಗಳು. ಅವರಿಗೆ ತಿಳಿಯದ ವಿಷಯವೇ ಇಲ್ಲ. ಚಿಕ್ಕ ಮಕ್ಕಳ ಸಲುವಾಗಿ ಅವರಿಗೆ ಮೊದಲಿನಿಂದಲೂ ಪ್ರೀತಿ. ಅವರು ಮಕ್ಕಳ ಮಾನಸಿಕ ಜೀವನವನ್ನು ಬಹಳ ಆಳವಾಗಿ ಅಭ್ಯಾಸ ಮಾಡಿದವರು. ಇವರು ಕಥೆ ಹೇಳುವುದರಲ್ಲಿ ಮತ್ತು ಸ್ವತಃ ನಾಟಕ ಮಾಡುವುದರಲ್ಲಿ ಗಟ್ಟಿಗರು. ಯಕ್ಷಗಾನದಲ್ಲಂತೂ ಅವರು ಅಪೂರ್ವ ಕ್ರಾಂತಿಯನ್ನೇ ಮಾಡಿರುವರು. ಅವರ ಕ್ರಾಂತಿಯ ಮೂಲಕವೇ ಯಕ್ಷಗಾನದ ಕೀರ್ತಿ ಸ್ವೀಡನ್ನಿನವರೆಗೆ ಹೋಯಿತು.

ದಿವಂಗತ ಆಲೂರು ವೆಂಕಟರಾಯರು

ಶಿವರಾಮ ಕಾರಂತರ ವಿಜ್ಞಾನ ಸಾಹಿತ್ಯ

ಅಡ್ಯನಡ್ಕ ಕೃಷ್ಣಭಟ್
ನಂ. ೨೩೮೬, ೮ ನೇ ಮುಖ್ಯರಸ್ತೆ
ವಿಜಯನಗರ ೨ ನೇ ಹಂತ
ಮೈಸೂರು–೫೭೦೦೧೭

ಈ ಶತಮಾನದ ೪ ನೇ ದಶಕದಿಂದ ೧೦ ನೇ ದಶಕದ ತನಕ ಶಿವರಾಮ ಕಾರಂತರ ವಿಜ್ಞಾನ ಕೃತಿಗಳು ಬೆಳಕು ಕಾಣುತ್ತಲೇ ಬಂದುವು. ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಬರೆದ 'ಚಿತ್ರಮಯ ದಕ್ಷಿಣ ಕನ್ನಡ' (೧೯೩೪) 'ಚಿತ್ರಮಯ ದಕ್ಷಿಣ ಹಿಂದೂಸ್ಥಾನ' (೧೯೩೪), ಮಕ್ಕಳಿಗೋಸಲುವಾಗಿ ಬರೆದ 'ಬಾಲಪ್ರಪಂಚ"ವೆಂಬ ವಿಶ್ವಕೋಶ (೧೯೩೬), ಹೈಸ್ಕೂಲ್ ಶಿಕ್ಷಣವಿರುವ ಓದುಗರಿಗಾಗಿ 'ವಿಜ್ಞಾನ ಪ್ರಪಂಚ' ವಿಶ್ವಕೋಶದ ನಾಲ್ಕು ಸಂಪುಟಗಳು (೧೯೫೯–೬೪), ಮಕ್ಕಳಿಗಾಗಿ ಚಿತ್ರಪ್ರಧಾನವಾದ 'ವಿಚಿತ್ರ ಖಗೋಳ' (೧೯೬೫) ಮತ್ತು 'ನಮ್ಮ ಭೂಖಂಡಗಳು' (೧೯೬೭) ವಯಸ್ಕ ಹೊಸ ಅಕ್ಷರಸ್ಥರಿಗಾಗಿ 'ಗೃಹ ವಿಜ್ಞಾನ' (೧೯೨೯), 'ಕೋಳಿ ಸಾಕಣೆ' (೧೯೪೯), ಅನುವಾದಗಳಿಂದ 'ಪರಮಾಣು ಇಂದು–ನಾಳೆ' (೧೯೫೨–ಮೂಲ : ಮಾರ್ಗರೆಟ್ ಹೈಡ್ ಅವರ Atom Today & Tomorrow). 'ನಮ್ಮ ಸುತ್ತಲಿನ ಕಡಲು' (೧೯೫೬ ಮೂ ರಾಶಿಲ್ ಎಲ್ ಕಾರ್ಸನ್‌ರ The sea arround us) 'ಭಾರತದ ಪರಿಸರ ಪರಿಸ್ಥಿತಿ' (೧೯೮೪ ಮೂಲ The state of Indias environment), 'ಹಿರಿಯ ಕಿರಿಯ ಹಕ್ಕಿಗಳು' (೧೯೭೧ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ಗೃಹಸರಸ್ವತೀ ಗ್ರಂಥಮಾಲೆ) ಭಾರತವನ್ನೂ ಒಳಗೊಂಡ ಆಗ್ನೇಯದ ಹವೆ, ಸಸ್ಯ, ಪ್ರಾಣಿ ಸಂಪತ್ತುಗಳನ್ನು ವಿವರಿಸುವ 'ಉಷ್ಣವಲಯದ ಆಗ್ನೇಯ' (೧೯೮೩), ಸಮುದ್ರದ ಬಗೆಗಿನ 'ವಿಶಾಲ ಸಾಗರ' (೧೯೮೪), ಪ್ರಾಣಿಗಳ ಬಗ್ಗೆ ಸ್ವಾರಸ್ಯಕರ ಘಟನೆಗಳನ್ನೊಳಗೊಂಡ 'ಪ್ರಾಣಿ ಪ್ರಪಂಚದ ವಿಸ್ಮಯಗಳು' (೧೯೮೪), ಜನಜಾಗೃತಿಗಾಗಿ ಬರೆದ 'ಮಂಗನಕಾಯಿಲೆ (೧೯೮೪) ಸುಮಾರು ೭೦೦ ಪಶು ಪಕ್ಷಿಗಳ ವಿವರಗಳನ್ನು ಅಕ್ಷರಾನುಗುಣವಾದ ಶೀರ್ಷಿಕೆಗಳಲ್ಲಿ ಅಳವಡಿಸಿದ 'ಪ್ರಾಣಿಪ್ರಪಂಚ (೧೯೯೦) ಹೀಗೆ ಅವರು ಸೃಷ್ಟಿಸಿದ ಜನಪ್ರಿಯ ವಿಜ್ಞಾನ ಸಾಹಿತ್ಯ ವಿಪುಲವಾದದ್ದು. ಇಷ್ಟಲ್ಲದೆ ಸಿರಿಗನ್ನಡ ಪಾಠಮಾಲೆಯ ತರಗತಿವಾರು ಪುಸ್ತಕಗಳಲ್ಲಿ ಅಳವಡಿಸಿದ ವಿಜ್ಞಾನ ಲೇಖನಗಳು, ವಿಜ್ಞಾನ ಮತ್ತು ಅಂಧಶ್ರದ್ಧೆ, ಪ್ರಕೃತಿ–ಪರಿಸರದ ರಕ್ಷಣೆ, ಮಾನವಕುಲ

ವಿಜ್ಞಾನ ಸಂಬಂಧವಾಗಿ ಅವರ ಭಾಷಣ ಮತ್ತು ಬಿಡಿ ಲೇಖನಗಳು ಹಲವು,

ಪ್ರೇರಣೆ: ಶಿವರಾಮ ಕಾರಂತರು ಬಾಲ್ಯದಿಂದಲೇ ನಿಸರ್ಗದ ಅಸಂಖ್ಯಾತ ವಿದ್ಯಮಾನಗಳಿಗೆ ಸ್ಪಂದಿಸಿದವರು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿ ದೇಹಶಾಸ್ತ್ರವನ್ನು ಕಲಿತಾಗ ಅವರು ಮನುಷ್ಯದೇಹದ ಭಾಗಗಳ ಬಗ್ಗೆ ಆಶ್ಚರ್ಯ ಪಟ್ಟಿದ್ದರು. ವಿಜ್ಞಾನದ ಕಲಿಕೆಗೆ ಸಹಾಯಕ ಸಾಮಗ್ರಿಯಾಗಿ ಬಾಸೆಲ್ ಮಿಷನ್ ಛಾಪಖಾನೆಯವರು ಅಚ್ಚು ಹಾಕಿದ ಬಣ್ಣದ ಚಿತ್ರಗಳನ್ನು ಮೆಚ್ಚಿದರು. ಒಣ ದತ್ತಾಂಶಗಳಿಂದಲೇ ಕೂಡಿದ ಭೂಗೋಲ ಕ್ಕಿಂತ ಪ್ರಯೋಗಗಳನ್ನು ನೋಡಿ ಕಲಿಯು ತ್ತಿದ್ದ ರಸಾಯನ ವಿಜ್ಞಾನ (ಕೆಮಿಸ್ಟ್ರಿ) ಆಕರ್ಷಕವಾಗಿತ್ತು. ಕಾಲೇಜು ಸೇರಿ ದಾಗಲೂ (೧೯೨೦) ಅವರು ವಿಜ್ಞಾನ ಮತ್ತು ಗಣಿತಗಳನ್ನು ಐಚ್ಛಿಕ ವಿಷಯ ಗಳಾಗಿ ಆರಿಸಿಕೊಂಡಿದ್ದರು. ಆದರೆ ಅದು ಕೇವಲ ಒಂದೇ ವರ್ಷ.

ಸ್ವದೇಶೀ ಚಳುವಳಿಯಿಂದ ಆಕರ್ಷಿತರಾಗಿ ಕಾಲೇಜು ಬಿಟ್ಟ ಕಾರಂತರು ಆದಾಗಲೇ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿದ್ದ ಮೊಳ ಹಳ್ಳಿ ಶಿವರಾವ್, ರಾಮನ್ ನಂಬಿಯಾರ ರಂಥ ಅನುಭವಿಗಳ ಸಂಪರ್ಕ ಗಳಿಸಿದರು. ಮಕ್ಕಳಕೂಟ, ಶಾಲೆಗಳ ಸಂದರ್ಶನ, ಉಪಾಧ್ಯಾಯರೊಡನೆ ಚರ್ಚೆ, ವಯಸ್ಕರ ಶಿಕ್ಷಣವೇ ಮೊದಲಾದ ಚಟುವಟಿಕೆಗಳಿಂದ ಮಕ್ಕಳ ಸುಪ್ತಶಕ್ತಿ, ಅವರ ಹತ್ತು ಹಲವು ಆಸಕ್ತಿಗಳು, ಶಾಲೆಗಳ ಸ್ಥಿತಿ ಹಾಗೂ ಉಪಾಧ್ಯಾಯರ ಇತಿಮಿತಿಗಳ ನೇರ ಅನುಭವ ಪಡೆದರು, ಈ ನೇರ ಅನುಭವವೇ ಶಿಕ್ಷಣದ ಬಗ್ಗೆ ಆಳವಾಗಿ ಯೋಜಿಸುವಂತೆ ಮಾಡಿತು. ಇದರೊಂದಿಗೆ ಭೂಮಿ, ಬಾನು, ಕಾಡು, ಕಡಲು, ಜೀವ ವೈವಿಧ್ಯಗಳನ್ನು ನೋಡಿ ಅರಳಿದ ಕುತೂಹಲ ; ಮನುಷ್ಯನ ಪಾಲಿಗೆ ಬುದ್ಧಿ ಜೀವನವು ದೇಹ ಪೋಷಣೆ ಗಿಂತಲೂ ಮುಖ್ಯವಾಗಿರುವುದು ; ದಶಕಗಳ ಓದಿನಿಂದಲೂ ಮುಗಿಸಲಾಗದ ಜ್ಞಾನಕ್ಷೇತ್ರ ವುಂಟೆಂಬ ಅರಿವು ; ಸಾಹಿತ್ಯಕ್ಕಿಂತಲೂ ಅನ್ಯ ವಿಷಯಗಳ ಕಡೆಗೆ ಬೆಳೆಯುತ್ತಲೇ ಹೋದ ಓದು ; ತಾನು ತಿಳಿದು ಆನಂದಿಸಿದ್ದನ್ನು ಇತರರೊಂದಿಗೆ ಹಂಚಿಕೊಳ್ಳುತ್ತ ನಮ್ಮ ಜನರ ಮತ್ತು ಮಕ್ಕಳ ಜ್ಞಾನ ತೃಷೆಯನ್ನು ಹೆಚ್ಚಿಸುವ ಅದಮ್ಯ ಬಯಕೆ–ಇವು ಅವರನ್ನು ಕಾಲದಿಂದ ಕಾಲಕ್ಕೆ ತಲ್ಲೀನ ಗೊಳಿಸಿದ ವಿಜ್ಞಾನ ಬರಹಗಳಿಗೆ ಪ್ರೇರಕ ವಾದವು.

ಸಿದ್ಧತೆ: ಕಾರಂತರ ವಿಜ್ಞಾನ ಬರಹ ಗಳಲ್ಲಿ ಪ್ರಸಿದ್ಧವಾದುವು 'ಬಾಲಪ್ರಪಂಚ' ಮತ್ತು 'ವಿಜ್ಞಾನ ಪ್ರಪಂಚ' ಸಂಪುಟಗಳು. ಆ ಸಂಪುಟಗಳನ್ನು ಅವರು ಬರೆದು ಪ್ರಕಟಿ ಸಿದ ರೀತಿಯಿಂದ ವಿಜ್ಞಾನ ಲೇಖಕರಾಗಿ ಮುಂದುವರಿಯುವ ಅವರ ಕಾರ್ಯ ವೈಖರಿಯನ್ನು ತಿಳಿಯಬಹುದು. ಬರಹಗಾರ ನಾಗಿ ಬರಿಯ ಬರಹಕ್ಕೇ ತಮ್ಮ ಗಮನ ವನ್ನು ಅವರು ಸೀಮಿತಗೊಳಿಸುತ್ತಿರಲಿಲ್ಲ. ಪ್ರಕಟಣೆಯ ಹೊಣೆಯನ್ನು ಹೊತ್ತು ಮುಂದಾಗಿಯೇ ಪುಸ್ತಕದ ಗಾತ್ರ, ವಿನ್ಯಾಸ ಮುದ್ರಣ, ಪ್ರಕಾಶನ, ಮಾರಾಟಗಳ ಬಗೆಗೂ ಯೋಚಿಸಿ ಯೋಜಿಸುತ್ತಿದ್ದರು. ಪುಸ್ತಕದ ತಯಾರಿಯೂ ಅಷ್ಟೇ ಕ್ರಮಬದ್ಧ. ಮೊದಲನೆಯ ಹಂತ ಎಡೆಬಿಡದ ಓದು, ಅಭ್ಯಾಸ, ಬರವಣಿಗೆಯದ್ದು. ಅನಂತರ

ವಿಜ್ಞಾನ ವಿಷಯಗಳಲ್ಲಿ ತನಗೆ ಬಂದ ಸಂದೇಹಗಳನ್ನು ನಿವಾರಿಸಿ ಬರಹದಲ್ಲಿ ನುಸುಳಿರಬಹುದಾದ ಓರೆ ಕೋರೆಗಳನ್ನು ಪರಿಣತರ ಸಹಾಯದಿಂದ ಸರಿಪಡಿಸುತ್ತಿದ್ದರು. ಬರಹ ಸಿದ್ಧವಾದ ಮೇಲೆ ನಿರೂಪಣೆಗೆ ಪೋಷಕವಾದ ಫೋಟೋಗಳ ಸಂಗ್ರಹ. ಬರೆದು ತರಿಸುವುದಷ್ಟೇ ಅಲ್ಲದೆ ತಾನೇ ತಿರುಗಾಡಿ ಫೋಟೋ ತೆಗೆಯುತ್ತಿದ್ದರು. ಇಂಥ ತಿರುಗಾಟದಿಂದ ಭೂಸ್ವರೂಪ, ಪ್ರಾಣಿ, ಪಕ್ಷಿ, ಉದ್ಯಮಗಳಂಥ ವಿಷಯಗಳ ಸರಿಯಾದ ಕಲ್ಪನೆ ಬರುವುದಕ್ಕೂ ಸಹಾಯವಾಗುತ್ತಿತ್ತು. ಫೋಟೋ ಸಂಗ್ರಹವಾದ ಬಳಿಕ ಬೇಕಾದ ರೇಖಾ ಚಿತ್ರಗಳನ್ನು ಕಾರಂತರೇ ಬರೆಯುತ್ತಿದ್ದರು. 'ಅದ್ಭುತ ಜಗತ್ತು' ಮಾಲೆಯಲ್ಲಿ ಪ್ರಕಟವಾದ ಎರಡು ಪುಸ್ತಕಗಳಿಗೆ ವರ್ಣ ಚಿತ್ರಗಳನ್ನು ಅವರೇ ಬರೆದರು.

ವಾಕ್ಯ ನುಡಿಗಟ್ಟು: ಯಾವುದೇ ವಿಚಾರವನ್ನು ತೆಗೆದುಕೊಂಡರೂ ಎತ್ತರದಲ್ಲಿ ನಿಂತು ವಿಸ್ತಾರ ವಿಹಂಗಮ ಅವಲೋಕನದ ಫಲವಾಗಿ ನಿರ್ಲಿಪ್ತತೆ, ನಿರ್ಮೋಹದಿಂದ ತೂಗಿ ಬರೆದ ವಾಕ್ಯಗಳನ್ನು ಅಲ್ಲಲ್ಲಿ ಕಾಣುತ್ತೇವೆ. ಉದಾ: "ಪ್ರತಿಯೊಂದು ಜೀವಿಯ ಮನಸ್ಸಿನಲ್ಲೂ ತನ್ನ ಸುತ್ತಲಿನ ಪ್ರಪಂಚವನ್ನು ಕಂಡು ಬೆರಗು ಹುಟ್ಟುತ್ತಿರಬಹುದು....ಆದರೂ ಮನುಷ್ಯೇತರ ಜೀವಿಗಳು ಪ್ರಪಂಚವನ್ನು ಕುರಿತು ಏನು ಹೇಳಬಹುದೆಂದು ನಮಗೆ ತಿಳಿಯದಲ್ಲ!" "ಸಾಗರದ ಪ್ರಶಾಂತತೆಯನ್ನು ಹೊಗಳಿದ ಕವಿಗಳಿದ್ದಾರೆ. ಸಾಗರವನ್ನು ಸಮೀಪಿಸಿದರೆ ಮಾತ್ರ ನೀರಿನ ಚಂಚಲಸ್ವಭಾವ ಕಾಣುತ್ತದೆ. ನಮಗೆ ಇನ್ನೇನೂ ತಿಳಿಯದೆ ಹೋದರೂ ದಂಡೆಗೆ ಮೇಲಿಂದ ಮೇಲೆ ಉರುಳಿ ಬರುವ ಅಲೆಗಳನ್ನು ಕಾಣಬಹುದಲ್ಲ!"

ಅಲ್ಲಲ್ಲಿ ಪ್ರಶ್ನೆಗಳನ್ನು ಕೇಳುತ್ತ, ಉತ್ತರಗಳನ್ನು ನೀಡುತ್ತ, ಆಶ್ಚರ್ಯವನ್ನು ಸೂಚಿಸುತ್ತ ಅಥವಾ ವೈದೃಶ್ಯವನ್ನು ಎತ್ತಿ ತೋರಿಸುತ್ತಾ ನಿರೂಪಣೆ ಮುಂದುವರಿಸುವುದು ಏಕತಾನತೆಯನ್ನು ಮುರಿಯಲು ಅನುಕೂಲವಾದ ವಿಧಾನ, ಅನ್ಯಮನಸ್ಕನಾದ ಓದುಗನನ್ನು ಸೆಳೆಯಲು ಸಹಾಯಕ. ಕಾರಂತರು ಇಂಥ ಪ್ರಶ್ನೋತ್ತರ ವಿಧಾನವನ್ನು ಉದ್ದಕ್ಕೂ ಉಪಯೋಗಿಸಿದ್ದಾರೆ. ಉದಾ: "ಭೂಮಿಯ ಮೇಲಿರುವ ನಮಗೆ ನಮ್ಮ ಭೂಮಿ ಚಲಿಸಿದ್ದು ಕಾಣಿಸುತ್ತದೆಯೇ?" "ಈ ಪುಸ್ತಕ ಎಂಬುದೇನು??" "ನಮ್ಮ ಪುಸ್ತಕ ಯಾವ ನೆಲದಲ್ಲಿ ಬಿದ್ದಿದೆಯೋ ಆ ನೆಲದ ಕತೆಯೇನು?" ವೈದೃಶ್ಯ ಭಾವದಿಂದ ಪರಿಣಾಮಕಾರಿಯಾಗುವ ವಾಕ್ಯಗಳಿಗೆ ಈ ಕೆಳಗಿನವು ಉದಾಹರಣೆಗಳು. "ಮೀನಿಗೂ ನದಿಯು ನಿವಾಸ, ಅದರ ವೈರಿಯಾದ ನೀರ್ನಾಯಿಗೂ ಅದೇ ವಾಸಸ್ಥಾನ." "ಎಂದೋ ಒಂದು ದಿನ ಈ ಸೂರ್ಯ ಹುಟ್ಟಿದ ಎಂದ ಮೇಲೆ ಇನ್ನೊಂದು ದಿನ ಆತ ಸಾಯದಿದ್ದಾನೆ? ಹುಟ್ಟಿದವರಿಗೆ ಸಾವು ತಪ್ಪೀತೆ?" ಕೆಲವೊಮ್ಮೆ ಪ್ರಶ್ನಾಸರಣಿಯೇ ಬಿಚ್ಚಿಕೊಂಡು ಉಪಾಧ್ಯಾಯರು ಕಲಿಸುವ ರೀತಿಯೇ ತೆರೆದಂತಾಗುತ್ತದೆ. ಉದಾ: "ಈ ಪರಮಾಣು ಎಂದರೇನು? ಅಂಥದು ಇನ್ನೊಂದು ಪರಮಾಣುವಿನೊಡನೆ ಜ[illegible] ಗೂಡಿ ಒಂದು ಅಣು ನಿರ್ಮಾಣವಾಗುವುದ[illegible]

ಹೇಗೆ? ಅಥವಾ ಒಂದು ಜಾತಿಯ ಪರಮಾಣುವಿನೊಡನೆ ಮೇಳಗೊಂಡು ಮೂರನೆಯ ಗುಣವುಳ್ಳ ಒಂದು ಸಂಯುಕ್ತದ ಅಣು ಉಂಟಾಗುವುದಾದರೂ ಹೇಗೆ?"

ನುಡಿಗಟ್ಟು, ರೂಪಕಗಳಿಂದ ಕೆಲವು ಸಂದರ್ಭಗಳಲ್ಲಿ ನಿರೂಪಣೆ ಕಾವ್ಯಮಯವಾಗಿದೆ. ಉದಾ: "ಶನಿಗ್ರಹದ ಬಳೆಗಳು ಶನಿಯ ಒಡ್ಯಾಣಗಳು.

ಶಬ್ದಗಳು: ವಿಜ್ಞಾನ ಬರಹಗಳ ಬಗ್ಗೆ ಚರ್ಚಿಸುವಾಗಲೆಲ್ಲ ಬರುವ ಮುಖ್ಯವಾದ ಅಂಶ ಶಬ್ದಗಳದ್ದು, ಅದರಲ್ಲೂ ಪಾರಿಭಾಷಿಕ ಅಥವಾ ತಾಂತ್ರಿಕ ಶಬ್ದಗಳದ್ದು. ಇದರಲ್ಲಿ ಕಾರಂತರ ದಾರಿ ಮುಕ್ತವಾದದ್ದೂ ಜೀವನಕ್ಕೆ ಹತ್ತಿರವಾದದ್ದೂ ಆಗಿದೆ. "ಭಾಷೆಯು ಆದಷ್ಟು ಸುಲಭವಾಗುವಂತೆ ಕನ್ನಡದ ಬಳಕೆಯನ್ನು ಆದಷ್ಟು ಹೆಚ್ಚಿಸಿ ಪಾರಿಭಾಷಿಕ ಪದಗಳನ್ನು ತಿಳಿಯಾಗಿ ಪರಿವರ್ತಿಸಿ ಇಲ್ಲವೆ ಮೂಲದಂತೆ ಬಳಸಿ' ವಿಷಯವನ್ನು ಪ್ರತಿಪಾದಿಸುವ ಪ್ರಯತ್ನ ಅವರದ್ದು. ತಾವು ತೋಟದಲ್ಲಿ ಕಂಡ 'ಚಣಿಲು' ಮೆಕ್ಮಿಲನ್ ಬಾಲಶಿಕ್ಷೆಯಲ್ಲಿ 'ಅಳಿಲು' ಆದುದು, ದಕ್ಷಿಣ ಕನ್ನಡದ ಮಕ್ಕಳ 'ಗಾಳಿ' ಎಂಬ ಪದ ಪಠ್ಯ ಪುಸ್ತಕದಲ್ಲಿ 'ಹವೆ' ಯಾಗುವುದನ್ನು ಉದಾಹರಿಸುವ ಕಾರಂತರು ಮಕ್ಕಳ ದೃಷ್ಟಿಯಿಂದ ಅಂಥ ಪ್ರಯೋಗಗಳನ್ನು ಮೆಚ್ಚದಿರುವಂತೆ ತೋರುತ್ತದೆ. 'ಮಕ್ಕಳ ಭಾಷೆಯಲ್ಲಿ ಶಬ್ದಗಳ ಆವರ್ತನೆ ಸ್ಮರಣಶಕ್ತಿಗೆ ಪೋಷಕವಾಗಿ ಬರಬೇಕು. ಅದವರ ಲಯಗಾರಿಕೆ ಗದ್ಯದ ಸೊಬಗನ್ನು ಹೆಚ್ಚಿಸಬೇಕು' ಶಬ್ದಗಳು ಜೀವನಕ್ಕೆ ಅಂಟಿಂದಂಥವಾಗಿದ್ದು (ಮಕ್ಕಳು ಮಾತನಾಡುವಾಗ 'ಸುಂದರ' ಎನ್ನುವುದಕ್ಕಿಂತಲೂ 'ಚಂದ' ಎನ್ನುತ್ತಾರೆ) ಅಂಥ ಶಬ್ದಗಳಿಂದ ತುಂಬದ ಭಾಷೆಯ ಪರಿಚಯವಾದ ಮೇಲೆ ಜ್ಞಾನವನ್ನು ಬಿಂಬಿಸಲು ಬೇಕಾದ ಹೆಚ್ಚಿನ ಶಬ್ದಗಳನ್ನು ಹೆಕ್ಕಿ ಸೇರಿಸುವ ಹಂತವು ಬರಬೇಕು'—ಹೀಗೆಂದು ಕಾರಂತರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. 'ಪ್ರಾಣಿ ಪ್ರಪಂಚ'ದಲ್ಲಿ (ಪುಟ ೩) ಅಳಿಲು, ಚಣಿಲು ಎರಡನ್ನೂ ಶೀರ್ಷಿಕೆಯಲ್ಲಿಟ್ಟುಕೊಂಡುದು ಪ್ರಾಯಶಃ ಈ ಕಾರಣಕ್ಕಾಗಿಯೇ, ಉದಾಹರಣೆಗೆ ದಿಂಡು (Core), ಮೆಟ್ಟಲಬ್ಬಿ (Cataract), ನೀರ್ಸೊಂಡಿಲು (Typhoon), ಕಚ್ಚಡ (Moraine), ನೀರ್ದಂಡೆ (Bore—ವಿಚಿತ್ರ ಆರ್ಭಟಿಯಿಂದ ಮುನ್ನುಗ್ಗುವ ನೀರಹಾಳಿ), ನೀರ್ಸುಳಿ (Malstrom), ಪಾಮಾಜಿ (Algae), ಅರಿವು (Consciousness)—ಇವೆಲ್ಲ ತಿಳಿಗನ್ನಡ ಪದಗಳಂತೆ ತೋರಿದರೂ ವಿಶೇಷ ತಾಂತ್ರಿಕ ಅರ್ಥದಲ್ಲಿ ಉಪಯೋಗಿಸಿದಂಥವು. ನೀರ್ಸೊಂಡಿಲು–ಸಮುದ್ರದಿಂದ ಮುಗಿಲಿಗೆ ಚಾಚಿರುವ ಆಕಾರವನ್ನು ಚಿತ್ರಿಸುತ್ತದೆ. ದಿಂಡು–ಸಾಮಾನ್ಯ ಉಪಯೋಗದ ಶಬ್ದವಾದರೂ ಸಾಮಾನ್ಯ ಅರ್ಥವನ್ನು ಮೀರಿ ನಿಲ್ಲುತ್ತದೆ (ಭೂಮಿಯ ದಿಂಡು).

ಇಂಗ್ಲಿಷ್‌ನಲ್ಲಿ ಬಳಕೆಯಲ್ಲಿರುವ ಶಬ್ದಗಳನ್ನು ರೂಪಾಂತರಿಸಿ ನಮ್ಮದನ್ನಾಗಿಸುವುದರಲ್ಲೂ ಅವರು ಪ್ರಯೋಗ ನಡೆಸಿದರು. ಕ್ಯಾಲ್ಸಿಯಂ ಕಾರ್ಬೊನೇಟ್ ಪೂರಿತ ಶಿಲೆಗಳು ಅಂತರ್ಜಲದಿಂದ ಕರಗಿ ತೊಟ್ಟಿಕ್ಕಿ ಉಂಟಾಗುವ ವಿಚಿತ್ರ ರಚನೆಗಳಿವೆ. ಮೇಲಿನಿಂದ ಕೆಳಗೆ ತೂಗುವ Stalectites

ರಚನೆಗಳನ್ನು ಸ್ಥಲಾಕಗಳಿಂದೂ ಕೆಳಗಿನಿಂದ ಬೆಳಯುವ Stalagmites ರಚನೆಗಳನ್ನು ಸ್ಥಲಾಗ್ಮಗಳಿಂದೂ ಕರೆದಿದ್ದಾರೆ.

ಹೀಗೆ ನಮ್ಮದೇ ಪದಗಳನ್ನು ಬಳಸಿದರೂ ಎಷ್ಟೋ ಬಾರಿ—ಅದರಲ್ಲೂ 'ವಿಜ್ಞಾನ ಪ್ರಪಂಚ'ದ ಮೂರನೇ ಮತ್ತು ನಾಲ್ಕನೇ ಸಂಪುಟಗಳಲ್ಲಿ—ಮೂಲ ಶಬ್ದಗಳನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ: ಹಾರ್ಮೋನು, ಎನ್‌ಜೈಮ್, ಮರ್ಗಿಯರ್, ಟಿಲಿವಿಷನ್, ಎಟ್ಮೊಸ್ಫಿರಿಕ್ಸ್ ಇತ್ಯಾದಿ. ಆದರೆ ಅದೇ ರೀತಿ ಬರಬಹುದಾಗಿದ್ದ 'ರಿಯಾಕ್ಟರ್', 'ರೋಟರ್'ಗಳು 'ಕುಲುಮೆ', 'ಭ್ರಮರ'ಗಳಾಗಿ ಬಂದಿವೆ. ಪಾರಿಭಾಷಿಕ ಪದಗಳ ಬಳಕೆಯಲ್ಲಿ ಪ್ರಯೋಗಶೀಲ ಹಂತ ಅದಾಗಿತ್ತು ಎಂಬುದಕ್ಕೆ ಇದು ಸಾಕ್ಷಿ.

ವ್ಯಂಗ್ಯ, ವಿಶ್ಲೇಷಣೆ: ವ್ಯಂಗ್ಯದ ಅಭಿವ್ಯಕ್ತಿಗೋ ವಿಶ್ಲೇಷಣೆಯನ್ನು ಗಟ್ಟಿಮಾಡುವುದಕ್ಕೋ ನಿರೂಪಣೆಯ ಮಧ್ಯೆ ಅಲ್ಲಲ್ಲಿ ಪುರಾಣ ಕಲ್ಪನೆ, ನಂಬಿಕೆ, ಗಾದೆಗಳು ಬರುವುದುಂಟು. ಅವು ಸ್ವಾರಸ್ಯಕರವಾಗಿರುತ್ತವೆ. ಆದರೆ ಅಲ್ಲೆಲ್ಲ ವೈಜ್ಞಾನಿಕಾಂಶಗಳು ಇದ್ದೇ ಇವೆಯೆಂದು ಹುಡುಕಲಾಗದು. ಕೆಲವು ಉದಾಹರಣೆಗಳನ್ನು ನೋಡಿ: ೧) ನಮ್ಮ ದೇಶದ ಕಾವ್ಯಗಳಲ್ಲಿ ತೀರ ಹೆಸರಾದ ಹಂಸಪಕ್ಷಿ, ದಮಯಂತಿಯ ಪತ್ರವನ್ನೊಯ್ದ ಹಂಸಪಕ್ಷಿ ನಮ್ಮ ದೇಶದ ಪಕ್ಷಿಯಲ್ಲ. ನಮ್ಮ ದೇಶದಿಂದ ಕೆಲವೇ ಯಾತ್ರಿಕರು ಹಿಮಾಲಯದ ಆಚೆಗಿರುವ ಮಾನಸ ಸರೋವರಕ್ಕೆ ಹೋಗಿ ಬರುವುದರಿಂದ 'ಹಂಸಗಳು ಮಾನಸ ಸರೋವರದಲ್ಲಿವೆ' ಎಂಬ ಸವಿನೆನಪು ಬಂದಿರಬಹುದೇನೋ. (೩೧೨, ಜೀವ ಜೀವನ). ೨) ಸರ್ವಜ್ಞನ 'ಗೋರ್ಕಲ್ಲ ಮೇಲೆ ಮಳೆ ಕರೆದಂತೆ' ಎಂಬ ಗಾದೆ ಉಂಟಷ್ಟೆ? ಆತ ಮಳೆಯಿಂದ ಕಲ್ಲಿಗೆ ಯಾವ ಪ್ರಯೋಜನವೂ ಇಲ್ಲವೆಂದು ಹೇಳಿದ್ದ. ಆದರೆ ಆ ಮಾತಿನಂತೆ ನಿಜಸ್ಥಿತಿಯಿಲ್ಲ.

ಪ್ರಾಮಾಣಿಕತೆ: ಸಾಪೇಕ್ಷತಾವಾದಕ್ಕೆ ದೀರ್ಘ ಪೀಠಿಕೆ ನೀಡುತ್ತ ಕಾರಂತರು ಬರೆಯುತ್ತಾರೆ, 'ಇಲ್ಲಿ ಬರೆದಿರುವ ಯಾವುದೇ ಮಾತುಗಳಿದ್ದರೆ ಅವು ಭವ್ಯದೃಶ್ಯವೊಂದನ್ನು ನೋಡಿ ಬೆರಗುಗೊಂಡ ಒಬ್ಬ ವ್ಯಕ್ತಿಯ ಉದ್ಗಾರಗಳಷ್ಟೇ ಹೊರತು ಬಲ್ಲಿದನೊಬ್ಬನು ಹೇಳುವ ಸಿದ್ಧಾಂತದ ವಿವರಣೆಯೆಂದು ನೀವು ತಿಳಿಯಬೇಕಾಗಿಲ್ಲ.' ಇಂಥ ಉದ್ಗಾರಗಳು ಅವರ ಪ್ರಾಮಾಣಿಕತೆಯನ್ನು ತೋರಿಸುತ್ತವೆ. ಹೆಚ್ಚಾಗಿ ತಮ್ಮ ಎಲ್ಲ ವೈಜ್ಞಾನಿಕ ಗ್ರಂಥಗಳ ಮುನ್ನುಡಿಗಳಲ್ಲೂ ಅವರು ತಮ್ಮ ಮಿತಿಗಳನ್ನು ಉದ್ದೇಶವನ್ನೂ ನೇರವಾಗಿ ಹೇಳಿಬಿಡುತ್ತಾರೆ. ಉದಾ: 'ಈ ಗ್ರಂಥವನ್ನು ನನ್ನ ಅನುಭವದಿಂದ ಬರೆದೆನೆಂದು ಯಾರೂ ತಿಳಿಯಬಾರದು. ಈ ಬರಹದ ಹೆಚ್ಚಿನ ಸಂಗತಿಗಳು ಪಾಶ್ಚಾತ್ಯರ ಬರಹಗಳಿಂದ ಸಂಗ್ರಹಿಸಿದವು' (ಮುನ್ನುಡಿ—'ಹಿರಿಯ ಕಿರಿಯ ಹಕ್ಕಿಗಳು.')

ಕಾರಂತರ ವಿಜ್ಞಾನ ಬರಹಗಳನ್ನು ಓ... ವಿಷಯಗ್ರಹಣದ ಹಂತಕ್ಕೆ ಬರುವಾ... ಭೂಮಿ, ಸಾಗರ, ಅರಣ್ಯ, ಪ್ರಾಣಿ, ಪಕ್ಷಿ... ಮನಸ್ಸುಗಳ ಬಗ್ಗೆ ನಿರೂಪಿಸುವಾಗ...

ಶೋಧೆ ಸಾಮಾನ್ಯ ಅನುಭವಕ್ಕೆ ಬಾರದ ಅಮೂರ್ತ ವೈಜ್ಞಾನಿಕ ತತ್ತ್ವ ಮತ್ತು ವಿದ್ಯಮಾನಗಳ ಸಂದರ್ಭಗಳಲ್ಲಿಬರುವುದಿಲ್ಲ. ಪ್ರಾಯಶಃ ಅವರೇ ಹೇಳಿರುವಂತೆ "ವಸ್ತು-ಚೈತನ್ಯಗಳಿಂದ ನಿರ್ಮಿತವಾದ ಈ ಭೌತ ಜಗತ್ತಿನ ನಿಕಟ ಪರಿಚಯವಾಗಲು ಭೌತ, ರಸಾಯನ, ಗಣಿತಶಾಸ್ತ್ರಗಳ ವಿವಿಧ ಮುಖ ಗಳ ಪರಿಚಯ ಅಗತ್ಯವಿದೆ. ಇದು ಓದು, ಪ್ರಯೋಗ, ಚರ್ಚೆಗಳಿಗೆ ಅವಕಾಶವಿರುವ ವ್ಯವಸ್ಥಿತ ಶಿಕ್ಷಣ ವ್ಯವಸ್ಥೆಯಿಂದ ಸಾಧ್ಯ." ಆದರೆ ಇಂಥ ಸೌಲಭ್ಯ ಇಲ್ಲದವರನ್ನು ತಲಪುವುದು ಜನಪ್ರಿಯ ವಿಜ್ಞಾನ ಲೇಖಕನಿಗೊಂದು ಸವಾಲು. ಶಿವರಾಮ ಕಾರಂತರು ಇದನ್ನು ಸ್ವೀಕರಿಸಿ ಮುಂದುವರಿದವರು.

ನಿಖರತೆ : ಪದಗಳೂ ವಾಕ್ಯಗಳೂ ಸರಳ ವಾಗಿದ್ದರೂ ವಿಷಯ ನಿರೂಪಣೆ ಓದುಗನ ಪಾಲಿಗೆ ಸರಳವಾಗದೆ ಹೋಗುವ ಸಂದರ್ಭ ಗಳು ಪರಿಣತ ಲೇಖಕನ ಬರಹಗಳಲ್ಲಿ ಬರಬಹುದು. ಕಾರಂತರ ಬರಹಗಳಲ್ಲೂ ಇವನ್ನು ಒಮ್ಮೊಮ್ಮೆ ಕಾಣಬಹುದು.

ಮಕ್ಕಳಿಗಾಗಿ ಬರೆದ 'ವಿಚಿತ್ರ ಖಗೋಲ' ದಲ್ಲಿರುವ ಒಂದು ವಾಕ್ಯ ಹೀಗಿದೆ : 'ಆಕಾಶ ದಲ್ಲಿ ಸೂರ್ಯ ಚಂದ್ರರು ಚಲಿಸುತ್ತಿರುವ ಸಂಗತಿ ದಿನನಿತ್ಯ ಕಾಣುತ್ತಿರುವ ವಿಷಯ. ಆಕಾಶದಲ್ಲಿರುವ ಅಸಂಖ್ಯ ನಕ್ಷತ್ರಗಳು ಚಲಿಸುವಂತೆ ಕಾಣುವುದಿಲ್ಲ. ಅದೇ ಆಕಾಶ ದಲ್ಲಿ ಕೆಲವೊಂದು ಬೆಳಗುವ ಚಿಕ್ಕಕಾಯ ಗಳು ಸೂರ್ಯ ಚಂದ್ರರಂತೆ ಚಲಿಸುತ್ತಿರು ವುದು ಅವರ ಗಮನಕ್ಕೆ ಬಂದಿತ್ತು, ಇಂಥ ಕಾಯಗಳನ್ನು ಅವರು ಗ್ರಹಗಳೆಂದು ಕರೆದರು ! ವರ್ಷಾವಧಿಯಲ್ಲಿ ಎದ್ದು ಕಾಣುವ ಸಾಪೇಕ್ಷ ಚಲನೆಯನ್ನು ತಿಳಿಯದೆ ದೈನಂದಿನ ಮೂಡಿ ಅಸ್ತಮಿಸುವ ಸರಳ ಚಲನೆಯನ್ನಷ್ಟೇ ಮನಗಾಣಬಲ್ಲವನಿಗೆ ಇಲ್ಲಿ ಬೇರಾವ ಸಹಾಯವಿಲ್ಲದೆ ಇದ್ದರೆ ವಿಷಯ ಗ್ರಹಿಸಲು ಕಷ್ಟವಾಗಬಹುದು.

ಹಾಗೆಯೇ 'ವಿಜ್ಞಾನ ಸಾಧನ'ದಲ್ಲಿ ಮೇಸರ್ ಎಂದಿದ್ದ ಹಳೆಯ ಹೆಸರು ಹೋಗಿ ಲೇಸರ್ ಆಗಿದೆ. ಎನ್ನುವಾಗ ಲೇಸರ್, ಮತ್ತು ಮೇಸರ್‌ಗಳ ಮಧ್ಯೆ ವಾಸ್ತವವಾಗಿ ಇರುವ ವ್ಯತ್ಯಾಸ ಮಸುಕಾಗುತ್ತದೆ.

ಜೀವಿಗಳ ವಿವರಣೆಯಲ್ಲಿ ವಂಶ, ವರ್ಗ ಗಣ, ಬಳಗ, ಕುಲ, ಜಾತಿ, ಎಂಬ ಪದಗಳು ವರ್ಗೀಕರಣದ ವಿವಿಧ ಹಂತ ಗಳನ್ನು ಸೂಚಿಸುತ್ತವೆ. ಆದರೆ 'ಪ್ರಾಣಿ ಪ್ರಪಂಚ', 'ಹಿರಿಯ–ಕಿರಿಯ ಹಕ್ಕಿಗಳು' ಇತ್ಯಾದಿ ವಿವರಣಾತ್ಮಕ ಪುಸ್ತಕಗಳಲ್ಲಿ ಈ ಪದಗಳು ಇಂಥ ಸೂಕ್ಷ್ಮ ವ್ಯತ್ಯಾಸಗಳನ್ನು ಸೂಚಿಸುತ್ತವೆಯೇ ಇಲ್ಲವೇ ಎನ್ನುವುದು ಸ್ಪಷ್ಟವಾಗುವುದಿಲ್ಲ.

ಚಿತ್ರದ ಪ್ರಾಮುಖ್ಯ : ಪ್ರಾಯಶಃ ಕನ್ನಡದ ವಿಜ್ಞಾನ ಬರಹಗಳಲ್ಲಿ ಚಿತ್ರಗಳ ಪ್ರಾಮುಖ್ಯವನ್ನರಿತು ಅದಕ್ಕೆ ಸಲ್ಲಿಸ ಬೇಕಾದ ಸ್ಥಾನವನ್ನು ಕೊಟ್ಟವರಲ್ಲಿ ಮೊದಲಿಗರು ಕಾರಂತರೇ. ದಕ್ಷಿಣ ಕನ್ನಡದ ಭೂಗೋಳದಿಂದ ಹಿಡಿದು ಬಾಲಪ್ರಪಂಚ, ವಿಜ್ಞಾನ ಪ್ರಪಂಚ, ಅದ್ಭುತ ಜಗತ್ತು, ಪ್ರಾಣಿಪ್ರಪಂಚಗಳ ತನಕ ರೇಖಾಚಿತ್ರ, ಛಾಯಾಚಿತ್ರ, ಕೆಲವೊಮ್ಮೆ ವರ್ಣಚಿತ್ರ ಗಳಿಗೂ ಅವರು ಕೊಟ್ಟ ಸ್ಥಾನ, ಹಾಗೆ ಸ್ಥಾನ ಕೊಡಲು ಅವರು ಏಕಾಕಿಯಾಗಿ ಪಟ್ಟ ಸಾಹಸ ವಿಶೇಷವಾದದ್ದು.

ಸ್ಥಾನ: ಪಠ್ಯೇತರ ವಿಜ್ಞಾನ ಸಾಹಿತ್ಯ ಕನ್ನಡದಲ್ಲಿ ಕಾಣಿಸದಿದ್ದಾಗ, ಕನ್ನಡದಲ್ಲಿ ವಿಜ್ಞಾನ ವಿಷಯಗಳ ಬಗ್ಗೆ ಬರೆಯುವವರೇ ಕಡಿಮೆ ಇರುವಾಗ, ಬರೆದುದನ್ನು ಪ್ರಕಟಿಸುವವರು ಇಲ್ಲದಾಗ, ಪ್ರಕಟವಾದವು ಮಾರಾಟವಾಗದೆ ಉಳಿಯುತ್ತಿದ್ದಾಗ ಕೋಟ ಶಿವರಾಮ ಕಾರಂತರು ಬರೆದು ಪ್ರಕಟಿಸಿದರು. ಈ ದೃಷ್ಟಿಯಿಂದ ಅವರ ಬರಹಗಳಿಗೂ ಗ್ರಂಥಗಳಿಗೂ ಚಾರಿತ್ರಿಕ ಮಹತ್ವ ಇದ್ದೇ ಇದೆ. ಅಷ್ಟೇ ಅಲ್ಲ, ವಿಜ್ಞಾನ ಸಾಹಿತ್ಯದಲ್ಲಿ ಬರಹ, ಚಿತ್ರ, ಭಾಷೆ, ಶಬ್ದ, ಪುಟ ವಿನ್ಯಾಸಗಳಂಥ ಹಲವು ಅಂಶಗಳ ಮಹತ್ವವನ್ನು ಅವರು ತೋರಿಸಿಕೊಟ್ಟರು.

ಕುತೂಹಲ–ಆಸಕ್ತಿಗಳ ಪ್ರೇರಣೆಯಿಂದ ಓದು–ಅನುಭವಗಳ ತಳಹದಿಯ ಮೇಲೆ ಕಾರಂತರು ಬರೆದರು. ಕನ್ನಡದ ಬರಡು ಸ್ಥಿತಿಯಲ್ಲಿ ಅವರ ಬರಹಗಳು ಚೈತನ್ಯವನ್ನು ಸಂಸೇಚಿಸಿದುವು. ಅವರ ಬರಹಗಳು ಬೇರೆ ಬೇರೆ ವರ್ಗಗಳ ಓದುಗರಿಗೆ ನೀಡಿದ ಉಲ್ಲಾಸ ಹೊಸ ಲೇಖಕರಿಗೆ ನೀಡಿದ ಉತ್ಸಾಹ ವ್ಯಾಪಕವಾದದ್ದು.

ಶಿವರಾಮ ಕಾರಂತರು ನಮ್ಮ ತಲೆಮಾರಿನ ಕನ್ನಡದ ಕ್ರಾಂತಿಪುರುಷರಲ್ಲಿ ಒಬ್ಬರು. ಅವರ ಪ್ರತಿಭೆಗೆ ಅಳವಡದ ಕಲೆಯಿಲ್ಲ. ವಿಚಾರಪರರಾದ ಕಾರಂತರ ದೃಷ್ಟಿಯಲ್ಲಿ 'ಬಾಳ್ವೆಯೇ ಬೆಳಕು'. ಆದರೆ ಅನ್ಯರ ಬದುಕನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರ ಸಾಂಪ್ರದಾಯಿಕವಾದ ನಂಬಿಕೆಗಳನ್ನು ಅವು ತಮ್ಮವಲ್ಲದಿದ್ದರೂ ಅರ್ಥಮಾಡಿಕೊಳ್ಳಬೇಕು ಎಂಬುದು ಕಾರಂತರ ದೃಢತತ್ವ. ಢಾಂಬಿಕವರ್ತನೆಯನ್ನು, ಆಷಾಢಭೂತಿ ವಿದ್ಯೆಯನ್ನು ಕಂಡರೆ ಮಾತ್ರ ಅವರಿಗೆ ಎಂದಿಗೂ ಆಗದು. ಅವನ್ನು ವ್ಯಂಗ್ಯವಾಗಿ ವಾಚ್ಯವಾಗಿ ಅವರು ಖಂಡಿಸುತ್ತಲೇ ಇರುತ್ತಾರೆ. ಇಷ್ಟಾದರೂ ಬದುಕಿನ ಅನಂತ ವಿವಿಧತೆಯನ್ನು ಅವರು ಚೆನ್ನಾಗಿ ಮನಗಂಡವರು.

—ತೀ. ನಂ. ಶ್ರೀಕಂಠಯ್ಯ

ಕಾರಂತರ ಬಾಲಸಾಹಿತ್ಯ

ಎ. ಕೆ. ರಾಮೇಶ್ವರ
ಕಾರ್ಯದರ್ಶಿ
ಸಾಕ್ಷರತಾ ಕಿರಣ ಸಮಿತಿ
ಗುಲ್ಬರ್ಗಾ–೫೮೫೧೦೪

“ಹಕ್ಕಿಯಂತೆ–ರೆಕ್ಕೆ ಇದ್ದರೆ
ಪಕ್ಕ ಬಿಡಿಸಿ ಹಾರುತಿದ್ದೆ
ಬಿಳಿಯ ಮೋಡ ಏರುತಿದ್ದೆ
ಬೆಳ್ಳಿ ತಾರೆ ಸೇರುತಿದ್ದೆ.”

ಎಂದು ಮಿಡಿಯುತ್ತಿದ್ದ ಮಕ್ಕಳ ಜಗತ್ತಿನ ಮಾಂತ್ರಿಕ ಕಾರಂತರ ಉತ್ಕಟ ಹಂಬಲ ಇದು. ಎಂದೂ ಬತ್ತದ ಅವರ ಈ ಹೃದಯದ ಹಂಬಲವು ನಾಡಿನ ಚಿಣ್ಣರ ಮನವನ್ನು ತಣಿಸಿತು.

ಕಾರಂತರು ಮಕ್ಕಳಿಗಾಗಿ ಬರೆದ “ಬಾಲ ಪ್ರಪಂಚ”, “ವಿಜ್ಞಾನ ಪ್ರಪಂಚಗಳು”, “ಅದ್ಭುತ ಜಗತ್ತು” ಮುಂತಾದ ವಿಶ್ವಕೋಶಗಳು ಕನ್ನಡದ ಗರ್ಭಗುಡಿಯಲ್ಲಿ ತಮ್ಮದೇ ಆದ ಶೋಭೆಯಿಂದ ಕಂಗೊಳಿಸುತ್ತವೆ. ಒಂದು ಸಂಘ, ಒಂದು ಸಂಸ್ಥೆ, ಒಂದು ಸರಕಾರ ಮಾಡಬೇಕಾದಷ್ಟು ಕೆಲಸವನ್ನು ಕಾರಂತರು ಒಬ್ಬರೇ ಮಾಡಿದ್ದಾರೆ. ಇದು ಇವರ ಕತೃತ್ವ ಶಕ್ತಿಗೆ, ಸೃಜನಶೀಲ ಹೋರಾಟಕ್ಕೆ ನಿದರ್ಶನವಾಗಿದೆ.

ಕಾರಂತರು ಬರೆದುದುಕ್ಕಿಂತಲೂ ಹೆಚ್ಚು ಅಡ್ಡಾಡಿದ್ದಾರೆ. ಅದಕ್ಕೂ ಹೆಚ್ಚು ನೋಡಿದ್ದಾರೆ. ಅನುಭವಿಸಿದ್ದಾರೆ. ಆ ಮೇಲೆ ನಾಡಿಗೆ, ನುಡಿಗೆ ಉಪಯುಕ್ತವಾಗಲೆಂದು ಬರೆದಿದ್ದಾರೆ. ಆದರೂ ಅವರು “ನಾನು ಕಂಡದ್ದು, ಆದ್ದರಿಂದ ತಿಳಿದದ್ದು ಮತ್ತೂ ಕಡಿಮೆಯನ್ನಬೇಕಾಯಿತು! ಅಂಥಹ ಒಂದು ಶಿಕ್ಷಣವನ್ನು ಪಡೆಯುವ ಪ್ರಯತ್ನದ ಫಲವೇ ಈ ಬರಹವೆಂದರೆ ತಪ್ಪಲ್ಲ. ಮಾಡುತ್ತಾ ಕಲಿಯುವ ಇನ್ನೊಂದು ಚಟಕ್ಕೆ ಇದು ಇನ್ನೊಂದು ಸಾಕ್ಷಿ” ಎಂದು ಅತ್ಯಂತ ಪ್ರಾಮಾಣಿಕವಾಗಿ ಹೇಳಿದ್ದಾರೆ. ಆಡುತ್ತ, ಮಾಡುತ್ತ, ನೋಡುತ್ತ ಕಲಿಯುವ, ಕಲಿಸುವ ಅವರ ವಿಚಾರ ನಿತ್ಯ ನೂತನ! ವಿನೂತನ!!

ಎಷ್ಟೋ ಜನರು ತಾವು ದೊಡ್ಡವರಾದ ಮೇಲೆ ತಮ್ಮ ಬಾಲ್ಯ ಜೀವನವನ್ನು ಮರೆತು ಬಿಡುತ್ತಾರೆ. ಅಷ್ಟೇ ಅಲ್ಲ. ತಮ್ಮ ಸುತ್ತಮುತ್ತಲಿರುವ ಮಕ್ಕಳನ್ನೂ ಸಹ ಅಲಕ್ಷಿಸುತ್ತಾರೆ. ಆದರೆ ಕಾರಂತರು ತಮ್ಮ ಬಾಲ್ಯ ಜೀವನದ ಸವಿ ನೆನಪಿನೊಂದಿಗೆ ಮಕ್ಕಳ ಲೋಕವನ್ನೂ ಬೆಳಗಿದ್ದಾರೆ. “ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಅವರ ಭವ್ಯ

ಭವಿತವ್ಯವೇ ದೇಶದ ಭವಿತವ್ಯ" ಎಂದು ಬಗೆದು ಮಕ್ಕಳ ಶಿಕ್ಷಣ, ಸಾಹಿತ್ಯ, ಸಂಸ್ಕೃತಿಗಳತ್ತ ವಿಶೇಷ ಗಮನ ಹರಿಸಿದರು. ಅಂತೆಯೇ ಅವರು ಮಕ್ಕಳಿಗಾಗಿ ಇತಿಹಾಸ, ಭೂಗೋಲ, ಸಾಮಾನ್ಯ ವಿಜ್ಞಾನ ಭಾಷಾ ವಿಷಯ. ಅಂಕಗಣಿತ, ಅರ್ಥಕೋಶ, ಚಿತ್ರಕಲೆ ಮುಂತಾದ ಪಠ್ಯ ವಿಷಯಗಳ ಮೇಲೆ ವಿಸ್ತೃತಪೂರ್ಣ ಪುಸ್ತಕಗಳನ್ನು ಬರೆದು ಮಕ್ಕಳ ಅಂತರಂಗವನ್ನು ಅರಳಿಸಿದರು. ಇದು ಅಲ್ಲದೆ ಅವರಿಗಾಗಿ "ಮಂಗನ ಮದುವೆ" ನಾಟಕ, "ಢಂಢಂ ಡೋಲು" ಶಿಶು ಗೀತೆಗಳು, 'ಹುಲಿರಾಯ' ಚಿತ್ರ ಚಿಕ್ಕ ಪ್ರಬಂಧಗಳು 'ಒಂದೇ ರಾತ್ರಿ—ಒಂದೇ ಹಗಲು' ಭೌಗೋಳಿಕ ಪ್ರಬಂಧ, 'ದೇಹ ಜ್ಯೋತಿಗಳು, ಪ್ರಾಣಿ ಪ್ರಬಂಧಗಳು' 'ಗಣರಾಜ', ಚಿನ್ನಕ್ಕನ ಛತ್ರಿ', 'ಮರಿಯಪ್ಪನ ಸಾಹಸಗಳು', ಮುಂತಾದ ಪಠ್ಯೇತರ ಮಕ್ಕಳ ಕೃತಿಗಳನ್ನೂ ರಚಿಸಿ ಮಕ್ಕಳಲ್ಲಿ ಓದುವ ಅಭಿರುಚಿಯನ್ನು ಬೆಳಸಿದರು. 'ಢಂಢಂ ಡೋಲು' ಕೃತಿಯಲ್ಲಿ ಬರುವ ಕಿನ್ನರ ದೇವರು ಕವಿತೆಯಲ್ಲಿ ಕಾರಂತರು.

"ಅಮ್ಮನು ನಿತ್ಯವು ಅನ್ನವ ತಂದು
ದೇವರು ಮುಂದಕೆ ಇರಿಸುತ್ತಾಳೆ
ದೇವರು ಏನೇನು ತಿಂದುದೇ ಇಲ್ಲ
ಅಮ್ಮನು ತಪ್ಪುವು ಬಿಡುವಂತಿಲ್ಲ"

ಎಂದು ತಾಯಿಯು ಯಾಂತ್ರಿಕ ಪೂಜೆ ಮಗುವಿಗೆ ಏನನ್ನೂ ಹಿಡಿಸುತ್ತಿಲ್ಲ. "ಅಮ್ಮ ಎಡೆ ಮಾಡುವ ಕೆಲಕೆಲ ಪದಿನೆಂಟು ಬಂದಿಲ್ಲಿ ದೇವರು ಎಂದೂ ತಿಂದುದೇ ಇಲ್ಲ." ಇದನ್ನು ಅಮ್ಮ ಏಕೆ ಅರಿಯಳು! ಎಂದು ಮಗು ಒಂದೇ ಸಮನೆ ವಿಚಾರಿಸುತ್ತದೆ.

ಅದೇ ಊರಿನ ಕುರುಡ ತಿನ್ನ ... ಭಿಕ್ಷೆಗೆ ಬರುತ್ತಾನೆ. ಅಮ್ಮ ... ದಿನವೂ ಅವನಿಗೆ ನೀಡಲಿಲ್ಲ. ಅಮ್ಮ ... ಸಂತಸ ಪಡಲಿಲ್ಲ. ಅಂತೆಯೇ ಮಗು ... ಓದುತ್ತಾನೆ.

"ಅಮ್ಮನ ಪೂಜೆಯು ಗುಟ್ಟಾಗಿಂದು
ಮನಸ್ಸಿಗೆ ಬಂದಿದೆ ಹಾದೋ ಅಲ್ಲೋ
ತಿಂಬುವ ದೇವರು ಅಮ್ಮಗೆ ಸಲ್ಲ
ತಿನ್ನದ ದೇವರ ನಂಬುವಳಲ್ಲ"

ಎಂದು ಸೋಜಿಗದಿಂದ ಮಗ ಅ... ಅರ್ಥಮಾಡಿಕೊಳ್ಳುತ್ತದೆ. ಇಂತಹ ... ಹಲವನ್ನು ಕೆರಳಿಸುವ, ಲವಲವಿಕೆ ... ಹೆಚ್ಚಿಸುವ ಕವಿತೆಗಳಿಂದ ಕಾರಂತರು ... ಹೃದಯಗಳನ್ನು ಅರಳಿಸಿದ್ದಾರೆ. ಒ... ಕೆರಳಿಸಿದ್ದಾರೆ.

'ಹತ್ತರ ಲೆಕ್ಕ' ಕವಿತೆಯಲ್ಲಿ ... ಕವಿತೆಯ ಮುಖಾಂತರ ಅಂಕಗಳ ... ಮಾಡಿಕೊಡುವ ವಿಧಾನ ತುಂಬ ... ವಾಗಿದೆ; ಅನುಕರಣೀಯವಾಗಿದೆ.

"ಒಂದಕ್ಕೊಂದು ನೀರಿಲ್ಲ ಹಂದು
ಎರಡಕ್ಕೆರಡು ಎಲ್ಲ ಕೋಣ ಬರಡು
ಮೂರಕ್ಕೆ ಮೂರು ಹೇಳಬಾರದು ...
ನಾಲ್ಕಕ್ಕೆ ನಾಲ್ಕು ಬಾಗಿಲಿಗೆ ...
ಐದಕ್ಕೈದು ಕತ್ತನ್ನು ಬಡುಕೋಣ ...
ಆರಕ್ಕೆ ಆರು ನೆಲದ ಕೆಳಗೆ ಬೇರು
ಏಳಕ್ಕೇಳು ಆಳುವುದೆಂದರೆ ಗೋಳು
ಎಂಟಕ್ಕೆಂಟು ಕುರುಡನ ಕೈಗೆ ಗಂಟು
ಒಂಬತ್ತಕ್ಕೆ ಒಂಬತ್ತು ರಾತ್ರಿ ಆದ್ದೆ ...
ಹತ್ತಕ್ಕೆ ಹತ್ತು ಚಪ್ಪಿನಿಂದ ಮುತ್ತು"

ಹೋಗೆ ತೀರ ಚಿಕ್ಕಮಕ್ಕಳ ಉಸಿರಿಗೆ ...ಕುವಂತಹ ಕವಿತೆಗಳನ್ನು ರಚಿಸಿ ಸರಾಗ ...ಗ ಹಾಡಲು ಹಚ್ಚಿದ್ದಾರೆ.

ಇನ್ನು 'ಮರಿಯಪ್ಪನ ಸಾಹಸಗಳು' ...ಸ್ತಕ ತುಂಬ ಆಕರ್ಷಕವಾಗಿದೆ.' ಮಕ್ಕ... ಇನ್ನೂ ಓದಬೇಕೆನಿಸಿದ ಪುಸ್ತಕ ಇದು. ...ಷ್ಟು ಸಲ ಓದಿದರೂ ತೃಪ್ತಿ ಅನಿಸುವುದಿಲ್ಲ. ...ನ ಮಾಂತ್ರಿಕತೆಯಿಂದ ಕೂಡಿದ ನೀಳ್ಗತೆ ...ದು.

'ಬಾಲ ಪ್ರಪಂಚ'. ಈ ಪುಸ್ತಕದ ...ಂದೊಂದು ಸಂಪುಟದಲ್ಲಿ ಸುಮಾರು ...ಸೂರು ಪುಟಗಳಿಕ್ಕಿರಬಹುದು. ಈ ...ಲ ಪ್ರಪಂಚಗಳು ಮಕ್ಕಳ ಮನಸ್ಸಿನ ...ಹವನ್ನು ಹಿಂಗಿಸುವ ಅತ್ಯುಪಯುಕ್ತ ...ರುಕೃತಿಗಳಾಗಿವೆ. ಇಂಥ ಗ್ರಂಥಗಳನ್ನು ...ಬ ಶ್ರದ್ಧೆ, ವಿಶ್ವಾಸ, ನಿಷ್ಠೆಗಳನ್ನಿಟ್ಟು ...ಂಡು ಬರೆದು ಮಕ್ಕಳ ಸಾಹಿತ್ಯದ ...ರತೆಯನ್ನು ನೀಗಿಸಿದವರು ...॥ ಶಿವರಾಮ ಕಾರಂತರು.

ಈ ಸಂಪುಟಗಳಲ್ಲಿ ಅವರು ಭೂಗೋಲ, ...ರವ್ಯೂಹ, ಭೂ ವಿಜ್ಞಾನ ಜೀವ ಸೃಷ್ಟಿ ...ವನದ ನಾನಾ ಭಾಗಗಳ ಪ್ರಾಚೀನ ...ವುಗಳು ಭೂಮಿಯಲ್ಲಿ ಜೀವಿಗಳ ...ಟಿಕೆ ಭೂಖಂಡಗಳ ಪರಿಚಯ ನಾನಾ ...ಶಗಳ ಪರಿಚಯ, ಸಸ್ಯ ಜೀವನ, ಸಸ್ಯ ...ರ್ಗಗಳ ಮನುಷ್ಯರ ವಿವಿಧ ಕಸಬು ...ಳು, ಕಲೆ–ಕಲೋಪಾಸನೆ; ಸಾಹಿತ್ಯ ...ಂಗೀತ; ಹಾಗೂ ಸಾಹಿತ್ಯಗಳ ನಾನಾ ...ಕಾರಗಳು ಯಂತ್ರ, ತಂತ್ರವಿದ್ಯೆ ಮತ್ತು ...ತ್ರ ಜಗತ್ತಿನ ಅದ್ಭುತಗಳು ಪ್ರಾಪಂಚಿಕ ...ತಿಹಾಸದ ರೂಪರೇಷೆಗಳು, ರಾಜಕೀಯ ಯುದ್ಧಗಳು ಮತ್ತು ಧರ್ಮಪ್ರವೃತ್ತಿ ಸಾಗರಗಳು, ನಾಗರಿಕ ಜೀವನದ ಹವಾ, ಶಾಸ್ತ್ರ ಮೊದಲಾದ ವಿಷಯಗಳ ಮೇಲೆ ಮೂರು ಭಾಗಗಳಲ್ಲಿಯೂ ವಿವರಿಸಿದ್ದಾರೆ.

'ಅದ್ಭುತ ಜಗತ್ತು" ಹತ್ತು ವರ್ಷದ ಮಕ್ಕಳಿಗಾಗಿ ಬರೆದ ಪುಸ್ತಕ ಇದರ ಮೊದಲನೇ ಭಾಗದಲ್ಲಿ ಆಕಾಶ ಲೋಕವನ್ನು ಪರಿಚಯ ಮಾಡಿಕೊಡಲಾಗಿದೆ. ಇಪ್ಪತ್ತೇಳು ನಕ್ಷತ್ರಗಳ, ಅವುಗಳ ರಾಶಿಗಳ, ಇತರ ಮುಖ್ಯ ನಕ್ಷತ್ರಗಳ, ದ್ವಂದ್ವ ನಕ್ಷತ್ರಗಳೊಂದಿಗೆ ವಿವರಿಸಿದ್ದಾರೆ. ಆಕಾಶಲೋಕವನ್ನು ಅವಲೋಕಿಸುವ ಚಿಕ್ಕ ಮಕ್ಕಳಿಗೆ ಈ ಪುಸ್ತಕ ಅತ್ಯಂತ ಆಕರ್ಷಣೀಯವಾಗಿದೆ. ಇಂದಿನ ವಿಜ್ಞಾನ ಯುಗದಲ್ಲಿ ಮಾನವ ಚಂದ್ರಲೋಕದಲ್ಲಿ ಅಡ್ಡಾಡಿ ಬರಹತ್ತಿದ್ದಾನೆ. ಈ ಅವಸರದಲ್ಲಿ ಇಂತಹ ಪುಸ್ತಕಗಳು ಮಕ್ಕಳಿಗೆ ತೀರ ಅವಶ್ಯಕವೆನಿಸುತ್ತವೆ. ಎರಡನೆಯ ಭಾಗದಲ್ಲಿ ಭೂಮಿಯ ವಿವಿಧ ಭಾಗಗಳ ಪರಿಚಯವನ್ನು ಮಾಡಿ ಸೃಷ್ಟಿ ಇದರ ರಚನೆ, ವಿವಿಧ ಯುಗದಲ್ಲಿ, ಭೂಭಾಗದಲ್ಲಿ ಕಂಡು ಬರುವ ರೂಪಾಂತರಗಳು, ಭೂಕಂಪ, ಜ್ವಾಲಾಮುಖಿ ವಿವಿಧ ಪರ್ವತಗಳು ಮುಂತಾದುವುಗಳನ್ನೆಲ್ಲ ಸಮರ್ಪಕವಾದ ಚಿತ್ರಗಳೊಂದಿಗೆ ವಿವರಿಸಲಾಗಿದೆ.

ಬೃಹತ್ತು ಮತ್ತು ಮಹತ್ತು ಎನಿಸಿಕೊಳ್ಳುವ ಈ ಗ್ರಂಥಗಳನ್ನು ರಚಿಸುವುದನ್ನು ನೆನೆಸಿಕೊಂಡರೆ ಕಾರಂತರು ಕೈಕೊಂಡ ಈ ಕಾರ್ಯವನ್ನು ಒಂದು ದೊಡ್ಡ ಸಾಹಸವೆಂದೇ ಹೇಳಬೇಕಾಗುತ್ತದೆ. ಬಾಲ ಪ್ರಪಂಚದ ಮೂರು ಸಂಪುಟಗಳನ್ನು ಯಾವ ವಿಷಯ ತಜ್ಞರ ಸಹಾಯ, ಸಹಕಾರವಿಲ್ಲದೆ ಕಾರಂತರೊಬ್ಬರೇ ಬರೆದದ್ದು

ಇನ್ನೊಂದು ದೊಡ್ಡ ಸಾಹಸ. ವಿಜ್ಞಾನಕ್ಕೆ ಸಂಬಂಧಿಸಿದ ತಮಗೆ ತಿಳಿಯದ ಎಷ್ಟೋ ವಿಷಯಗಳನ್ನು ಮೊದಲು ತಾವು ಅಭ್ಯಾಸ ಮಾಡಿ ಚೆನ್ನಾಗಿ ವಿಷಯವನ್ನು ಅರಗಿಸಿಕೊಂಡು ನಂತರ ಮಕ್ಕಳಿಗಾಗಿ ಬರೆದರು. ಛಾಯಾಚಿತ್ರಗಳನ್ನು ಸಂಗ್ರಹಿಸುವುದಕ್ಕಾಗಿ ಬಗಲಲ್ಲಿ ಕ್ಯಾಮರಾ ಹಾಕಿಕೊಂಡು ಭಾರತದ ಪ್ರದಕ್ಷಿಣೆಯನ್ನು ಕೈಕೊಂಡರು. ಜಗತ್ತಿನ ಅನೇಕ ದೇಶಗಳ ಮ್ಯೂಜಿಯಂಗಳಿಗೆ, ಪ್ರಾಣಿ ಸಂಗ್ರಹಾಲಯಗಳಿಗೆ, ಉದ್ಭಿಜ್ಜ ಮಂದಿರಗಳಿಗೆ, ಸಂಶೋಧನಾಲಯಗಳಿಗೆ, ಸರಕಾರಗಳಿಗೆ ಪತ್ರಗಳನ್ನು ಬರೆದು ತಮಗೆ ಬೇಕಾದ ಮಾಹಿತಿಯನ್ನು ಪಡೆದರು. "ಬಾಲ ಪ್ರಪಂಚ"ವನ್ನು ಸೃಷ್ಟಿಸಿದರು. ಕಾರಂತರದ್ದು ಸಾಹಸ ಪ್ರವೃತ್ತಿ, ಪ್ರಾಯೋಗಿಕ ಬುದ್ಧಿ, ತಮ್ಮ ಜೀವನವನ್ನೇ ಒಂದು ಪ್ರಾಯೋಗ ಶಾಲೆಯನ್ನಾಗಿ ಮಾಡಿಕೊಂಡಿದ್ದರು. "ಹೊಗನ್ನಡ ಪಾಠಮಾಲೆ" ಯನ್ನೂ, ಹಾಗೂ "ಸಿರಿಗನ್ನಡ ಪಾಠಮಾಲೆ" ಎಂಬ ಹೆಸರಿನಿಂದ ಏಳು ಪಠ್ಯ ಪುಸ್ತಕಗಳನ್ನು ರಚಿಸಿದರು. ಮುಂದೆ ಯುನೆಸ್ಕೊ ಸಂಸ್ಥೆಯವರು ಒದಗಿಸಿಕೊಟ್ಟ ಅವಕಾಶ ಒಂದರಿಂದ ವಯಸ್ಕರರಿಗೆ ರುಚಿಸುವಂತಹ ಕೇವಲ ೧೩೦ ಶಬ್ದಗಳ ಆವರ್ತವುಳ್ಳ ಐದು ಪುಸ್ತಕಗಳನ್ನು ಬರೆದರು. "ಜೋಗಿ ಕಂಡ ಊರು", "ದೇವರು ಒಲಿದ ಊರು" ಇಂದಿಗೂ ಜನಾಕರ್ಷಣೆಯನ್ನು ಪಡೆದಿವೆ.

ಮಕ್ಕಳಿಗೆ ಸಮಗ್ರ ಕನ್ನಡ ನಾಡನ್ನು ಪರಿಚಯ ಮಾಡಿಕೊಡುವುದಕ್ಕಾಗಿಯೇ 'ಕರ್ನಾಟಕದಲ್ಲಿ ನೃತ್ಯಕಲೆ', 'ಕರ್ನಾಟಕದಲ್ಲಿ ನಾಟಕಗಳು' 'ಯಕ್ಷಗಾನ-ಬಯಲಾಟ', 'ಕರ್ನಾಟಕದಲ್ಲಿ ಚಿತ್ರಕಲೆ' 'ಕರ್ನಾಟದಲ್ಲಿ ಶಿಲ್ಪಿ' ಎಂಬ ಕೃತಿಗಳನ್ನು ರಚಿಸಿ ಮಕ್ಕಳಿಗೆ ಭವ್ಯ ಕರ್ನಾಟಕದ ಪರಿಚಯ ಮಾಡಿಕೊಟ್ಟಿದ್ದಾರೆ. 'ಇಕೊ', 'ಅಮರ ಚಿತ್ರ" ಕಥಾಮಾಲಿಕೆಯಲ್ಲಿ ದೇಶದ ಶೂರ, ಸಾಹಸಿಗಳ ಜೀವನ ಚರಿತ್ರೆ, ಪೌರಾಣಿಕ ಪ್ರಸಂಗ ತುಂಬಿ ಇಟ್ಟಿದ್ದಾರೆ.

ಹೀಗೆ ಸಾಹಿತ್ಯ, ವಿಜ್ಞಾನ, ನಾಟಕ ತತ್ವ, ಶಿಲ್ಪ ಕಲೆಗಳಿಗೆ ಸಂಬಂಧಿಸಿದ ನೂರಾರು ಕೃತಿಗಳನ್ನು ಬರೆದು ಮಕ್ಕಳ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆ. ಸಾಹಿತ್ಯಕ್ಕಾಗಿ ತಮ್ಮ ಜೀವನವನ್ನು ಮೀಸಲಾಗಿಟ್ಟ ಡಾ|| ಕಾರಂತರಿಗೆ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ದಯಪಾಲಿಸಿ ತನ್ನ ಗೌರವವನ್ನು ಹೆಚ್ಚಿಸಿಕೊಂಡಿತು.

ಅಂತೆಯೇ ಪರಮೇಶ್ವರ ಭಟ್ಟರು ಬಹುಮುಖ ಪ್ರತಿಭೆಯ ಡಾ|| ಕಾರಂತರನ್ನು ಕುರಿತು ಹೀಗೆ ಹಾಡುತ್ತಾರೆ.

"ಕಾರಂತರೆ ನಮ್ಮ ಕೊಂಬುಕಹಳೆ
ಕಾರಂತರೆ ನಮ್ಮ ಧ್ರುವತಾರೆ
ಕಾರಂತರೆ ನಮ್ಮ ಉತ್ತರ ಮುಖಿ
ಕಾರಂತರನ್ನು ಪಡೆದ ಕನ್ನಡವು
ಪರಮ ಸುಖಿ"

ಕಾರಂತರು ಮತ್ತು ವಯಸ್ಕ ಶಿಕ್ಷಣ

ಚಂದ್ರಶೇಖರಾರಾಧ್ಯ
೧೪೫, 'ಇಂಚರ', ಎಂ. ಬ್ಲಾಕ್
೨ ನೆಯ ಹಂತ, ಕುವೆಂಪುನಗರ, ಮೈಸೂರು-೨೩

ಕಾರಂತರ ಹುಚ್ಚು ಮನಸ್ಸಿನ ಹತ್ತು ಮುಖಗಳಲ್ಲಿ ವಯಸ್ಕ ಶಿಕ್ಷಣವೂ ಒಂದು. ಈ ಕ್ಷೇತ್ರಕ್ಕೆ ಕಾರಂತರು ತಮ್ಮನ್ನು ತೊಡಗಿಸಿಕೊಂಡ ಬಗೆ 'ಸ್ಮೃತಿಪಟಲ'ದಲ್ಲಿ ಹೀಗಿದೆ.

"೧೯೫೩ ರ ಸುಮಾರಿಗೆ ಯುನೆಸ್ಕೋ ಸಂಸ್ಥೆಯವರು ವಯಸ್ಕರ ವಿದ್ಯಾಭ್ಯಾಸದ ಸಮಸ್ಯೆಗಳನ್ನು ಕಂಡುಹಿಡಿಯುವುದಕ್ಕಾಗಿ 'ಫಂಡಮೆಂಟಲ್ ಗ್ರೂಪ್ ಟ್ರೈನಿಂಗ್ ಸ್ಕೀಂ' ಎಂಬ ಒಂದು ಯೋಜನೆಯನ್ನು ಹಾಕಿಕೊಂಡರು. ಇದನ್ನು ಎರಡು ವರ್ಷಗಳ ಕಾಲ ಮೈಸೂರು ಬಳಿಯ ಯಲವಾಲ ಎಂಬಲ್ಲಿ ನಡೆಸಿದರು. ಅದರ ನೇತೃತ್ವವನ್ನು ಯುನೆಸ್ಕೋ ವಿದ್ಯಾಸಂಸ್ಥೆಯ ಡೈರೆಕ್ಟರಾಗಿದ್ದ ಜಾನ್ ಬವರ್ಸ್ ಎಂಬುವರು ವಹಿಸಿದ್ದರು. ವಯಸ್ಕರಿಗೆ ಫಿಲ್ಮ್, ಪುಸ್ತಕ, ರೇಡಿಯೋ ಪ್ರಸಾರ ಮೊದಲಾದ ಮಾಧ್ಯಮಗಳ ಮೂಲಕ ಯಾವ ರೀತಿ ತಿಳಿವಳಿಕೆಯನ್ನು ನೀಡಬೇಕು, ಈ ತನಕ ನೀಡುತ್ತಿದ್ದ ವಸ್ತುಗಳಲ್ಲಿರುವ ಗುಣದೋಷಗಳೇನು ಎಂಬುದನ್ನು ಅರಿತುಕೊಂಡು, ಅದಷ್ಟು ಹೆಚ್ಚಾಗಿ ಪ್ರಯೋಜನಕಾರಿಯಾಗುವಂತೆ ವಯಸ್ಕರ ಶಿಕ್ಷಣವನ್ನು ರೂಪಿಸುವುದು ಅವರ ಉದ್ದೇಶವಾಗಿತ್ತು."

"ಮೈಸೂರಿನಲ್ಲಿ ದೀರ್ಘಕಾಲದಿಂದಲೂ ವಯಸ್ಕರ ಶಿಕ್ಷಣ ನಡೆಯುತ್ತಿತ್ತು. ಪ್ರೊ॥ ಈಗಲ್‌ಟನ್, ಎಸ್.ವಿ. ಶ್ರೀನಿವಾಸರಾವ್ ನ. ಭದ್ರಯ್ಯ, ಟಿ. ಕೃಷ್ಣಮೂರ್ತಿ ಮುಂತಾದವರು ಸೇರಿ ಮೈಸೂರಿನಲ್ಲಿ ವಯಸ್ಕರ ಶಿಕ್ಷಣ ಸಂಸ್ಥೆ ತೆರೆದು ಕಾರ್ಯಕ್ರಮಕ್ಕೆ ವಿಶೇಷ ಚಾಲನೆ ನೀಡಿದ್ದರು. ಇದರ ಸಲುವಾಗಿ ಪಠ್ಯಪುಸ್ತಕಗಳೂ, ಅನ್ಯ ಬರವಣಿಗೆಗಳೂ ಪ್ರಕಟಣೆಗೊಳ್ಳುತ್ತ ಬಂದಿದ್ದುದರಿಂದ ಯುನೆಸ್ಕೋ ಸಂಸ್ಥೆಯು ಮೈಸೂರಿನಲ್ಲಿ ಈ ಶಿಬಿರ ನಡೆಸಲು ಕಾರಣವಾಯಿತು."

ಕಮ್ಮಟದಲ್ಲಿ ಕಾರಂತರು

'ಜಾನ್ ಬವರ್ಸ್ ರವರು ಯಲವಾಲದಲ್ಲಿ ಈ ಕೇಂದ್ರ ತೊಡಗಿದ ಒಂದೆರಡು ತಿಂಗಳಲ್ಲೇ ನನ್ನನ್ನು ಅಲ್ಲಿಗೆ ಬರಹೇಳಿದರಲ್ಲದೆ ವಯಸ್ಕರ ಸಲುವಾಗಿ ಒಂದೆರಡು ಪ್ರಾಥಮಿಕ ಪುಸ್ತಕಗಳನ್ನು ತಯಾರಿಸಿಕೊಡಬೇಕೆಂದೂ ಕೇಳಿದರು. ಆ ಕಾಲದಲ್ಲಿ ಶಿಕ್ಷಣ ಕ್ರಮದಲ್ಲಿ ಪ್ರತ್ಯೇಕ ಲಿಪಿಯ ಪರಿಚಯ ಮಾಡದೆಯೇ ಶಬ್ದಗಳನ್ನು ಕಲಿಸಿ ಕೊಡುವ ಕ್ರಮಕ್ಕೆ ಒಪ್ಪಿಗೆ ಸಿಕ್ಕಿತ್ತು. ಆದರೆ ಪಠ್ಯ ಪುಸ್ತಕದಲ್ಲಿ ಎತ್ತಿಕೊಳ್ಳಬೇಕಾದ ವಿಷಯಗಳಾವುವು ಎಂಬ ಪ್ರಶ್ನೆ ನಮ್ಮ ಮುಂದೆ

ಬಂದಿತು. ದೆಹಲಿಯ ಜಾಮಿಯಾ ಮಿಲಿಯದ ಮುಸ್ತಾಕ್ ಅಹಮ್ಮದರು–ತಾವು ಅದಕ್ಕಾಗಿ ಹಾಕಿಕೊಂಡ ಹಂಚಿಕೆಯನ್ನು ನಮಗೆ ವಿವರಿಸಿದರು; ಅದರಲ್ಲಿ ಹಳ್ಳಿಯ ಜನರ ವಿದ್ಯಾಭ್ಯಾಸ ಗುರಿಯಾದುದರಿಂದ ಊರಿನ ಬಾವಿಯನ್ನು ವಸ್ತುವಾಗಿರಿಸಿಕೊಂಡು ಅಲ್ಲಿಗೆ ನೀರಿಗೆ ಬರುವ ಗಂಡಸು, ಹೆಂಗಸರ ಮಾತುಕತೆಗಳ ಮೂಲಕ-ಶುಚಿತ್ವದ ವಿಚಾರ, ಆರೋಗ್ಯದ ಪ್ರಶ್ನೆ, ರೋಗಗಳ ವಿಚಾರ–ಇಂಥವನ್ನು ಕುರಿತು ಬರೆಯುವುದು ಲೇಸು–ಎಂಬ ಸಲಹೆಯನ್ನು ಮಾಡಿದರು.

ನಾನು ಅವರನ್ನು ಕೇಳಿದೆ? 'ಏನು ನಿಮಗೆ ನಿಮ್ಮ ವಯಸ್ಕ ಓದುಗರನ್ನು ಮೊದಲ ದಿನಕ್ಕೇ ಓಡಿಸುವ ಉದ್ದೇಶವಿದೆಯೇ? ಎಂದು. "ಹಾಗೇಕೆ ಹೇಳುತ್ತೀರಿ?' ಎಂದರು ಅವರು. ಆಗ ಅವರಿಗೆ ನನ್ನದೊಂದು ಅನುಭವವನ್ನು ಹೇಳಿದೆ. ನಾನು ಪುತ್ತೂರಿನಲ್ಲಿ ಇದ್ದಾಗ ಸುತ್ತಣ ಹಳ್ಳಿಗಳಲ್ಲಿ ಜ್ಞಾನಪ್ರಸಾರ ಕಾರ್ಯಕ್ರಮ ಕೈಗೊಂಡಿದ್ದೆ. ಆಗ ಕಥೆಗಳನ್ನು ಕೆಲವೊಂದು ಕೈಗಾರಿಕೆ ಮತ್ತು ಕೃಷಿ ಮೊದಲಾದ ವಿಚಾರಗಳನ್ನು ಮಾಯಾಲಾಂಥ್ರ ಫಲಕಗಳ ಮೂಲಕ ತೋರಿಸುವ ಕ್ರಮ ಪ್ರಯತ್ನಿಸಿದ್ದೆ. ಅಲ್ಲಿನ ಜನರು ಮಾಯಾಲಾಂಥ್ರ ಪ್ರದರ್ಶನ ಇದೆ ಎಂದೊಡನೆಯೇ 'ಕೊಕ್ಕೆ ಹುಳುವೋ?" ಎಂದು ವ್ಯಂಗ್ಯವಾಗಿ ಹೇಳಿದ್ದನ್ನು ಕೇಳಿದ್ದೇನೆ. ಆದ್ದರಿಂದ ಸ್ವಾಮಿ, ನೀವು ಹಳ್ಳಿಯವರನ್ನು ಕರೆದು ಆರೋಗ್ಯದ ವಿಷಯವಾಗಲಿ, ಇನ್ನಾವುದಾಗಿರಲಿ ಉಪನ್ಯಾಸ ಮಾಡುವುದಕ್ಕೆ ಬಂದಿದ್ದೀರಿ ಎಂದು ತಿಳಿದರೆ ಅವರು ನಿಮ್ಮಿಂದ ದೂರ ನಿಲ್ಲುತ್ತಾರೆ. ಆ ರೀತಿ ಅನೇಕರು ಬಂದು ಅವರಿಗೆ ಉಪದೇಶ ಮಾಡಿದ್ದಾರೆ. ಅವರು ಓದನ್ನು ಕಲಿತಮೇಲೆ ಅವರ ಕೈಯಲ್ಲಿ ಹತ್ತಾರು ವಿಷಯಗಳ ಪುಸ್ತಕಗಳನ್ನು ಹಾಕಿ, ಓದುವ ಅಭಿರುಚಿ ಬೆಳೆದ ಬಳಿಕ ತಮಗೆ ಒಪ್ಪಿದ ವಿಷಯವನ್ನು ಅವರು ಓದಿಯಾರು. ಓದಿನ ಪ್ರಾರಂಭಕ್ಕೆ ನೀವು ಆರೋಗ್ಯದ ವಿಷಯದ ಉಪನ್ಯಾಸ ತೊಡಗಿದರೆ–ನಿಮ್ಮ ಹತ್ತಿರ ಸುಳಿಯಲಾರರು. ಅಲ್ಲದೆ, ಓದು ಕಲಿಸುವುದು ನಿಮ್ಮ ಗುರಿಯಾದರೆ, ಶಬ್ದದ ಮೂಲಕ ಭಾಷೆ ಕಲಿಸುವುದಕ್ಕೆ ವಿದ್ಯಾರ್ಥಿಗಳಿಗೆ ಒಪ್ಪುವ ಒಂದು ವಿಷಯವನ್ನು ಆರಿಸಿಕೊಂಡು, ಸಂಭಾಷಣೆ ನಡೆಸಿ ಆ ಮೂಲಕ ಪಾಠದಲ್ಲಿ ಬರುವ ಶಬ್ದಗಳನ್ನು ಕಿವಿಯ ಮೇಲೆ ಹಾಕಬೇಕಾಗುತ್ತದೆ. ಬಳಿಕ ಶಬ್ದಗಳನ್ನು ಅವಕ್ಕೆ ಸಂಬಂಧಿಸಿದ ಚಿತ್ರಗಳನ್ನೂ ಅವರ ಕಣ್ಮುಂದೆ ತೋರಿಸಬೇಕು. ಆಗ ಅವರು ಕಣ್ಮುಂದಿನ ಚಿತ್ರದಿಂದ 'ಶಬ್ದ' ಯಾವುದು ಎಂದು ತಿಳಿಯಬೇಕು. ಹೀಗಾಗಿ ಆರಂಭದಿಂದಲೂ ಅವರೊಡನೆ ಮಾತನಾಡುವ ವಿಷಯ ಆಕರ್ಷಕವಾಗಿರಬೇಕು. ಇಲ್ಲಿ ನೀವು ಆಯ್ದ ಒಂದೇ ವಿಷಯದಲ್ಲಿ ಮುಂದಣ ಯಾವತ್ತು ಪಾಠಗಳು ಜರಗಬೇಕಾದ್ದರಿಂದ, ದಿನ ದಿನ ಸಂಭಾಷಣೆ ನಡೆಯುವ ರೀತಿಯಲ್ಲಿ ವಿಷಯದ ವ್ಯಾಪ್ತಿಯೂ ಇರಬೇಕು" ಎಂದೆ. ಅದನ್ನು ಅವರು ಒಪ್ಪಿಕೊಂಡರು. ಮುಂದೆ ಅವರ ಸಲಹೆಗಾರರು ಶಬ್ದಗಳನ್ನು ಜ್ಞಾಪಕ ಇಟ್ಟುಕೊಳ್ಳುವುದಕ್ಕೆ ಅವುಗಳ ಪುನರಾವರ್ತನೆ ಮೇಲಿಂ ಮೇಲೆ ಪುಸ್ತಕದಲ್ಲಿ ಬರಬೇಕು ಎಂ ಸೂಚಿಸಿದರು. ಅದು ನನಗೆ ತಿಳಿದಿ ವಿಷಯವಾದರೂ ಆ ರೀತಿ ಬರೆಯುವಾ

ನಾನು ಎಲ್ಲಿ ತಪ್ಪಬಹುದೆಂಬ ಸಂಗತಿ ಮಾತ್ರ ಹೊಳೆದಿರಲಿಲ್ಲ.

ವಯಸ್ಕರಿಗೆ ಸಾಹಿತ್ಯ ಹೇಗಿರಬೇಕು

"'ಒಂದು ವಾರದಕಾಲ ಅಲ್ಲಿ ಕುಳಿತು ನಾನೊಂದು ಪುಸ್ತಕ ಬರೆದೆ. ಆದರ ವಿಷಯ ಒಂದು ಹಳ್ಳಿಯ ನಿತ್ಯ ಜೀವನದಲ್ಲಿ ಗಂಡ ಹೆಂಡಿರ ಸಂಸಾರಕ್ಕೆ ಸಂಬಂಧಪಟ್ಟದ್ದು. ಅಂಥ ಕಥೆಯಲ್ಲಿ ಹೆಂಡತಿಯ ಬಾಯಿ ದೊಡ್ಡದು. ಗಂಡನ ಕೈ ಇನ್ನೂ ದೊಡ್ಡದು' ಎಂಬುದೇ ವಿಷಯ. ಪುಸ್ತಕದ ಅಚ್ಚೈ ಇವಳ ಬಾಯಿ ಮೇಲು; ಅವನ ಕೈಮೇಲು ಎಂದು ಕಥೆಯ ಬರವಣಿಗೆಯಲ್ಲಿ ಸಣ್ಣ ಸಣ್ಣ ಶಬ್ದಗಳಿಂದ ತೊಡಗಿ, ಪಾಠಪಾಠಕ್ಕೂ ಬೆಳೆದು ಗಂಡ ಹೆಂಡಿರ ಜಗಳ ಇಬ್ಬರಿಗೂ ತಮ್ಮ ತಮ್ಮ ಅರಿವಾಗುವತನಕ ಮುಂದೆ ಸಾಗುತ್ತಿದೆ. ವೇರಿ ಥೊಗರ್ ಮತ್ತು ನೀಗ್ರೋ ಉಪಾಧ್ಯಾಯಿನಿ ಸೂಸಿ ಎಂಬುವರು ಸೇರಿ, ನಾನು ಬರೆದ ಮೊದಲ ಪಾಠವನ್ನು ಕಲಿಸುವುದಕ್ಕೆ ಕನ್ನಡ ಬಲ್ಲ ಸ್ಥಳೀಯ ಉಪಾಧ್ಯಾಯರ ಜತೆಯಲ್ಲಿ ಒಂದು ಹಳ್ಳಿಗೆ ಹೋದರು. ಹೋಗಿ ಪಾಠ ಹೇಳಿ ಮರಳಿ ಬಂದು 'ಈ ವಿಷಯವನ್ನು ಕಲಿಸುವುದು ಅಸಾಧ್ಯ' ಎಂದು ನನ್ನೊಡನೆ ದೂರಿದರು.

'ಏಕೆ? ಎಂದು ಕೇಳಿದೆ' ಉತ್ತರ: ಅವರೊಡನೆ ಆ ವಿಷಯುವನ್ನು ತೊಡಗುವುದಕ್ಕೇ ಕಷ್ಟ ಬಂತು. ತರಗತಿಯಲ್ಲಿ ಪ್ರಾಯಸ್ಥ ಗಂಡಸರು, ಹೆಂಗಸರು ಜತೆಗೆ ಕುಳಿತಿರುವಾಗ, ಸಂಸಾರದ ಜಗಳವನ್ನು ಕುರಿತು ವಿಷಯ ಎತ್ತಿಕೊಂಡೊಡನೆಯೇ ಒಬ್ಬರು ಇನ್ನೊಬ್ಬರ ಮುಖ ನೋಡುತ್ತಾ ನಕ್ಕರು. ಆ ವಿಚಾರ ಯಾವ ಸಂಭಾಷಣೆಗೂ ಒಪ್ಪಲಿಲ್ಲ. 'ನಮ್ಮ ಮನೆಯ ಕಸುರನ್ನು ಇಲ್ಲಿ ಹೇಗೆ ಚರ್ಚೆ ಮಾಡುವುದು' ಎಂದರು. ನಿಜವಾದ ಕಷ್ಟ ಅದು. 'ಪಾಠ ಕಲಿಯುವವರ ನಿತ್ಯದ ಬದುಕಿಗೆ ಸಂಬಂಧಿಸಿದ ವಿಷಯುವನ್ನು ಎತ್ತಿಕೊಂಡಾಗ ನಿರರ್ಗಳ ಸಂಭಾಷಣೆ ಸ್ಥಳೀಯ ಸಾಮಾಜಿಕ ಅವಣದಿಂದಾಗಿ ಕಷ್ಟವಾಗುತ್ತದೆ. ಹೀಗಾಗಿ ಇನ್ನೊಂದೇ ವಿಷಯುವನ್ನು ಎತ್ತಿಕೊಂಡು ಪುಸ್ತಕ ಬರೆಯಬೇಕಾಯಿತು. ನಾನು ಅವರ ಗೃಹ ಕಲಹದ ತಂಟೆಗೆ ಹೋಗಬಾರದು ಎಂಬುದು ಸ್ಪಷ್ಟವಾಯಿತು."

ವಯಸ್ಕ ಶಿಕ್ಷಣ ಸಾಹಿತ್ಯ ರಚನೆಯು ವಿಶಿಷ್ಟ ಎಂಬುದನ್ನು ಮನಗಂಡ ಕಾರಂತರು ಗ್ರಾಮೀಣ ಪ್ರದೇಶದ ಹಿನ್ನಲೆಯಾಗಿಟ್ಟುಕೊಂಡು 'ಜೋಗಿಕಂಡ ಊರು' ಹಾಗೂ 'ದೇವ ಒಲಿದ ಊರು' ಎಂಬ ಎರಡು ಕೃತಿಗಳನ್ನು ರಚಿಸುತ್ತಾರೆ. ಈ ಕೃತಿಗಳು ಜೀವನಾಧಾರವಾದ ನೀರು ಹಾಗೂ ಗಾಳಿಯನ್ನು ಕುರಿತದ್ದಾಗಿದ್ದು, ಪರಿಸರವನ್ನು ಮನುಷ್ಯರಕ್ಷಿಸಿದರೆ, ಪರಿಸರ ಮನುಷ್ಯನನ್ನು ಕಾಪಾಡುತ್ತದೆ ಎಂಬುದನ್ನು ಪ್ರತಿಪಾದಿಸುತ್ತದೆ. ಇದೇ ಸಂದರ್ಭದಲ್ಲಿ ಅಳಿಲಭಕ್ತಿ (ಸೇತುಬಂಧನದ ಕಥೆ) ಹುಟ್ಟು ಸಾವು ಒಟ್ಟು ಒಟ್ಟು (ಕಿಸಾ ಗೌತಮಿ ಕಥೆ) 'ಇತರರೂ ಸರಿ ಇರಬಹುದು' ಎಂಬ ಪುಸ್ತಕಗಳನ್ನು ರಚಿಸುತ್ತಾರೆ.

ಕಾರಂತರ ಕೃತಿಗಳಿಗೆ ಹೆಬ್ಬಾರರ ಚಿತ್ರ:

ಕಾರಂತರಿಂದ ಹಸ್ತಪ್ರತಿ ಸಿದ್ಧವಾದ ನಂತರ ಕಮ್ಮಟದ ನಿರ್ದೇಶಕರಾದ ಜಾನ್ ಬವರ್ಸ್ ಅವರು ಇದಕ್ಕೆ ಯೋಗ್ಯ ಚಿತ್ರ

ಗಳನ್ನು ಬರೆಯಿಸಬೇಕು. ಚಿತ್ರಕಾರರು ಇಲ್ಲಿಗೆ ಬಂದೇ ಅವನ್ನು ಬರೆದುಕೊಟ್ಟರೆ ಒಳ್ಳೆಯದೆಂದು ಅಭಿಪ್ರಾಯಪಡುತ್ತಾರೆ. ತಕ್ಷಣವೇ ಕೆ. ಕೆ. ಹೆಬ್ಬಾರರನ್ನು ಕನ್ನಾಟಕ್ಕೆ ಆಹ್ವಾನಿಸಿ ಮುಂಬಯಿಗೆ ಪತ್ರ ಹೋಗುತ್ತದೆ. ಪತ್ರ ತಲುಪಿದ ಕೂಡಲೇ ಮರು ಮಾತಾಡದೇ ಹೆಬ್ಬಾರರು ಗಂಟು ಮೂಟೆಯೊಡನೆ ಯಲವಾಲಕ್ಕೆ ಬಂದು ಇಳಿಯುತ್ತಾರೆ. ನಿರಂತರವಾಗಿ ಒಂದು ತಿಂಗಳ ಕಾಲ ಹೆಬ್ಬಾರರು ಶಿಬಿರದಲ್ಲಿದ್ದುಕೊಂಡು ಕಾರಂತರ ಎಲ್ಲ ಪುಸ್ತಕಗಳಿಗೂ ಚಿತ್ರ ರಚಿಸಿ ಕೊಡುತ್ತಾರೆ.

ಹೆಬ್ಬಾರರ ಚಿತ್ರ ತಿರುಗುಮುರುಗಾದ ಪ್ರಸಂಗ:

ಈ ಸಂದರ್ಭವನ್ನು ಕಾರಂತರು ಹೀಗೆ ನಿರೂಪಿಸುತ್ತಾರೆ. 'ಪಾಠಗಳನ್ನು ದೊಡ್ಡ ಅಕ್ಷರಗಳಲ್ಲಿ ಅಚ್ಚು ಹಾಕಿಸಿದೆವು. ಅದರ ಇದಿರಿನ ಪುಟದಲ್ಲಿ ಒಂದೇ ಒಂದು ದೊಡ್ಡ ರೇಖಾಚಿತ್ರವಿರುತ್ತಿತ್ತು. ಚಿತ್ರಗಳನ್ನು ಬರೆಯುತ್ತಾ ಹೋದಂತೆ ಉಪಾಧ್ಯಾಯರು ಅವನ್ನು ಊರಿನ ವಯಸ್ಕರಿಗೆ ತೋರಿಸಲು ಒಯ್ಯುತ್ತಿದ್ದರು. ನನ್ನ ಪುಸ್ತಕದ ಒಂದು ಪಾಠದಲ್ಲಿ 'ಇದು ಊರು. ಈ ಊರಲ್ಲಿ ಬಡ ಜನ, ಬಡ ಊರು, ಬಡ ಜನ' ಎಂಬ ವಾಕ್ಯಗಳು ಬಂದಿದ್ದುವು. ಅದಕ್ಕೆ ತಕ್ಕಂತೆ ಊರಿನ 'ಬಡ ಜನರ' ಚಿತ್ರವನ್ನು ಹೆಬ್ಬಾರರು ಬರೆದುಕೊಟ್ಟಿದ್ದರು. ಆ ಚಿತ್ರ ನೋಡಿದ ಹಳ್ಳಿಯ ಒಬ್ಬ ವಯಸ್ಕ 'ಇವನು ಹ್ಯಾಗರೀ ಬಡವ; ಅವನ ಮೈ ಕೈ ಅಷ್ಟು ಗಟ್ಟಿಮುಟ್ಟಾಗಿದೆ' ಎಂದು ಹೇಳಿದನಂತೆ. ಹೆಬ್ಬಾರರಲ್ಲಿಗೆ ದೂರು ಬಂದಿತು. ಆ ಬಡ ಜನಕ್ಕೆ, ಬಡಕಲು ಮೈಯನ್ನೇ ಕೊಟ್ಟು ಅಲ್ಲಿನ ಜನರನ್ನು ಅವರು ಚಿತ್ರಿಸಬೇಕಾಯಿತು. ಚಿತ್ರ ಮತ್ತು ಬರವಣಿಗೆಗಳೆರಡೂ ಕೂಡಿಯೇ ವಯಸ್ಕ ಓದುಗರ ಗ್ರಹಣ ಶಕ್ತಿಯ ಮೇಲೆ ಸ್ಪಷ್ಟವಾದ ಪರಿಣಾಮ ಬೀರಬೇಕಾದರೆ ಸಾಕಷ್ಟು ಶ್ರಮವಿದೆ.

ಕಾರಂತರೂ ತಮ್ಮ ಹಸ್ತಪ್ರತಿಯನ್ನು ಪರಿಷ್ಕರಿಸಿಕೊಟ್ಟರು:

ವಯಸ್ಕರಿಗೆ ಸಾಹಿತ್ಯ ರಚಿಸುವಾಗ ಕಾರಂತರಿಗೂ ಇದೇ ಅನುಭವ ಆಗಿತ್ತು. ಈ ಸಂದರ್ಭವನ್ನು ಪ್ರಸ್ತುತ ರಾಷ್ಟ್ರೀಯ ಸಾಕ್ಷರತಾ ನಿಯೋಗದ ಸಲಹೆಗಾರರಾಗಿರುವ ವಯಸ್ಕ ಶಿಕ್ಷಣತಜ್ಞ ದೆಹಲಿಯ ಮುಸ್ತಾಕ್ ಅಹಮ್ಮದ್ ಅವರ ನೆನಪು ಹೀಗಿದೆ: ಯುನೆಸ್ಕೋ ಸಂಸ್ಥೆಯ ಆಹ್ವಾನದ ಮೇರೆಗೆ ಯಲವಾಲಕ್ಕೆ ಬಂದ ಕಾರಂತರು ಕೃತಿ ರಚಿಸಿಕೊಟ್ಟು ಆಮೇಲೆ ಪುತ್ತೂರಿಗೆ ಹಿಂದಿರುಗುತ್ತಾರೆ. ಕ್ಷೇತ್ರ ಪರಿಶೀಲನೆಯಲ್ಲಿ ಈ ಕೃತಿಯ ಬಗ್ಗೆ ಕಲಿಯುವವರಿಂದ ಕೆಲವು ಆಕ್ಷೇಪಣೆಗಳು ವ್ಯಕ್ತವಾಗುತ್ತದೆ. ಹಸ್ತ ಪ್ರತಿಯನ್ನು ಈ ಹಿನ್ನೆಲೆಯಲ್ಲಿ ಪರಿಷ್ಕರಿಸಿ ಕೊಡುವಂತೆ ಕಾರಂತರನ್ನು ಕೋರಲು ಮುಸ್ತಾಕ್ ಅಹಮ್ಮದ್ ಅವರು ಪುತ್ತೂರು ದಾರಿ ಹಿಡಿದು ಬಾಲಭವನ ತಲಪಿದಾಗ ಸಂಜೆಯಾಗಿರುತ್ತದೆ. ಪುಣ್ಯವಶಾತ್ ಮನೆಯಲ್ಲೇ ಇದ್ದ ಕಾರಂತರು ಅತಿಥಿಗಳನ್ನು ವಿಶ್ವಾಸದಿಂದ ಸ್ವಾಗತಿಸಿ ಸತ್ಕರಿಸುತ್ತಾರೆ. ಕೊನೆಗೆ ತಾವು ಬಂದ ಉದ್ದೇಶವನ್ನು ಮುಸ್ತಾಕ್ ಅಹಮ್ಮದ್ ಅವರು ಅಳುಕಿನಿಂದಲೇ ಕಾರಂತರಲ್ಲಿ ಪ್ರಸ್ತಾಪಿಸುತ್ತಾರೆ. ಈವರಿ

ಶಾಂತಚಿತ್ತರಾಗಿದ್ದ ಕಾರಂತರು ಕನಲಿ ಕೆಂಡವಾಗಿ 'ನಾನು ಬೇರೆಯವರನ್ನು ಹೇಳಿ ಕೇಳಿ ಬರೆಯುವವನಲ್ಲ, ನನ್ನಿಚ್ಛೆಯಂತೆ ಬರೆಯುವವ' ಎಂದು ಮೂದಲಿಸುತ್ತಾರೆ. 'ಕಾರಂತರ ಬರಹವನ್ನು ಓದುವ ಹಕ್ಕು ಈ ಜನರಿಗಲ್ಲವೆ?' ಎಂದು ಚಾಣಾಕ್ಷರಾದ ಮುಸ್ತಾಕ್ ಅಹಮ್ಮದ್ ಅವರು ಕೇಳಿದ ಕೂಡಲೇ ಕಾರಂತರ ಏರಿದ ಸಿಟ್ಟು ಅದೇ ವೇಗದಲ್ಲಿ ಇಳಿಯುತ್ತದೆ. ಈಗ ವೇಳೆಯಾಗಿದೆ. ನೀವು ಮಲಗಿ, ಬೆಳಗ್ಗೆ ಏಳುವುದರ ಒಳಗಾಗಿ ನಿಮ್ಮ ಅಪೇಕ್ಷೆಯಂತೆ ಹಸ್ತಪ್ರತಿ ಪರಿಷ್ಕರಿಸಿಕೊಡುತ್ತೇನೆ ಎಂದು ಆಶ್ವಾಸನೆ ಕೊಡುತ್ತಾರೆ. ಅದೇ ಕೋಣೆಯ ಒಂದು ಮೂಲೆಯಲ್ಲಿ ಮಲಗಿದ ಮುಸ್ತಾಕ್ ಅಹಮ್ಮದ್ ಅವರು ಕಾರಂತರ ಹಸ್ತಪ್ರತಿ ತಿದ್ದುವ ಕಾಯಕವನ್ನು ನಿದ್ದೆ ಹತ್ತುವವರೆಗೂ ಗಮನಿಸುತ್ತಾರೆ. ಕಾರಂತರು ಹಾಳೆ ತೆಗೆದುಕೊಂಡು ಬರೆಯುವುದು, ಓದುವುದು, ಕೊನೆಗೆ ಆ ಕಾಗದವನ್ನು ಉಂಡೆಮಾಡಿ ಮೂಲೆಗೆ ಎಸೆಯುವುದು. ಈ ಕೆಲಸ ಮುಸ್ತಾಕ್ ಅಹಮ್ಮದ್ ಅವರಿಗೆ ನಿದ್ದೆ ಹತ್ತುವವರೆಗೂ ನಡೆದೇ ಇತ್ತಂತೆ. ಆದರೆ ಬೆಳಗ್ಗೆ ಎದ್ದಾಗ ಮೇಜಿನ ಮೇಲೆ ತಿದ್ದಿ ತೀಡಿದ ಹಸ್ತಪ್ರತಿ ಮತ್ತು ಮೂಲೆಯಲ್ಲಿ ಕಾಗದದ ಉಂಡೆಯ ರಾಶಿ ಕಾಣುತ್ತದೆ. ಮುಸ್ತಾಕ್ ಅಹಮ್ಮದ್ ಅವರು ದಿಗ್ವಿಜಯ ಸಾಧಿಸಿದ ತೃಪ್ತಿಯಿಂದ ಕಾರಂತರಿಂದ ಪರಿಷ್ಕಾರಗೊಂಡ ಹಸ್ತಪ್ರತಿಯೊಡನೆ ಯಲವಾಲದ ದಾರಿ ಹಿಡಿಯುತ್ತಾರೆ.

ಟೆಹರಾನಿನ ಸಮ್ಮೇಳನದಲ್ಲಿ ಕಾರಂತರು:

೧೯೬೭ರಲ್ಲಿ ಇರಾನಿನ ಟೆಹರಾನಿನಲ್ಲಿ ವಯಸ್ಕ ಶಿಕ್ಷಣ ಸಮ್ಮೇಳನ ನಡೆಯಿತು. ಭಾರತದ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದ ಕಾರಂತರು ಈ ಸಂದರ್ಭವನ್ನು ಹೀಗೆ ಜ್ಞಾಪಿಸಿಕೊಂಡಿದ್ದಾರೆ; 'ಒಮ್ಮೆ ನನಗೆ ಭಾರತ ಸರಕಾರದ ವಿದ್ಯಾ ಇಲಾಖೆಯವರು ಟೆಹರಾನಿನಲ್ಲಿ ಯುನೆಸ್ಕೋ ಸಂಸ್ಥೆಯವರು ನಡೆಯಿಸಲಿರುವ ವಯಸ್ಕರ ವಿದ್ಯಾಭ್ಯಾಸದ ಒಂದು ಗೋಷ್ಠಿಗೆ ನಮ್ಮ ದೇಶದ ಪ್ರತಿನಿಧಿಯಾಗಿ ಹೋಗಬೇಕೆಂದು ತಿಳಿಸಿದರು. ಈ ಈ ಗೋಷ್ಠಿ ೧೧ನೆಯ ನವೆಂಬರ್ ೬೭ನೇ ಇಸವಿಯಲ್ಲಿ ಟೆಹರಾನಿನಲ್ಲಿ ನಾಲ್ಕು ದಿನ ನಡೆಯುವುದಿತ್ತು. ಈ ಬಗ್ಗೆ ಯುನೆಸ್ಕೋ ಸಂಸ್ಥೆಯ ಪೂರ್ವ ದೇಶಗಳ ಶಾಖಾ ಕಛೇರಿಯಿಂದ ನನಗೆ ಪ್ರತ್ಯೇಕ ಆಮಂತ್ರಣವೂ ಬಂದಿತ್ತು. ನಮ್ಮ ದೇಶದ ಇನ್ನೊಬ್ಬ ಪ್ರತಿನಿಧಿ ದೆಹಲಿಯ ಡಾ॥ ಶರ್ಮ ಎಂಬುವರು ಬಂದಿದ್ದರು. ನನಗೆ ಈ ಆಮಂತ್ರಣ ಬಂದಾಗ ಅದೊಂದು ಹೆಮ್ಮೆಯ ವಿಷಯವಾಗಿ ಕಂಡರೂ ಅದೇಕೆ ಬಂದಿತು ಎಂಬ ಆಶ್ಚರ್ಯವನ್ನೂ ಹುಟ್ಟಿಸಿತ್ತು. ಅಲ್ಲಿನ ಸರಕಾರ ವಯಸ್ಕರ ಸಲುವಾಗಿ ಕೆಲವೊಂದು ಆಕರ್ಷಕ ಪುಸ್ತಕಗಳನ್ನೂ ಪ್ರಕಟಿಸಿತ್ತು. ಇರಾನಿನ ರಾಣಿಯೇ ಅಂಥ ಒಂದು ಪುಸ್ತಕಕ್ಕೆ ಚಿತ್ರಗಳನ್ನು ಬರೆದುಕೊಟ್ಟಿದ್ದಳು. ಯಾವುದೇ ಒಂದು ದೇಶದ ಜನರು, ಮೊದಲು ತಮ್ಮ ನಾಡಿನ ಸಂಸ್ಕೃತಿಯನ್ನು ಕುರಿತು ತಿಳಿಯುವಂತೆ, ಮೆಚ್ಚುವಂತೆ ರಸವತ್ತಾದ ಗ್ರಂಥಗಳ ನಿರ್ಮಾಣ ವಯಸ್ಕರ ಸಲುವಾಗಿ ಆಗಬೇಕು. ಅನಂತರ ಅವರವರ ನೆರೆಕರೆಯ ನಾಡುಗಳ ವಿಚಾರದಲ್ಲಿ ಅಂಥ ಗ್ರಂಥಗಳನ್ನು ಪ್ರಕಟಿಸಬೇಕು. ಇದನ್ನು ಹೇಗೆ ಬರೆಯಬಹುದು, ಯಾವ ವಿಷಯಗಳನ್ನು

ಅವುಗಳಲ್ಲಿ ತಿಳಿಸಬೇಕು ಎಂಬ ಹಲವಾರು ಸಂಗತಿಗಳನ್ನು ನಮ್ಮ ಗೋಷ್ಠಿಯಲ್ಲಿ ವಿವರವಾಗಿ ನಾವು ಚರ್ಚಿಸಿದೆವು. ನನಗೆ ಅಲ್ಲಿನ ಚರ್ಚೆಗಳು ಪ್ರಯೋಜನಕಾರಿಯಾಗಿ ಕಂಡುವಾದರೂ, ಅಲ್ಲಿನ ಸಲಹೆಗಳನ್ನು ಆಯಾ ದೇಶದ ಸರಕಾರಗಳು ನಡೆಯಿಸುವತನಕ ಆ ನಿರ್ಣಯಗಳೆಲ್ಲ ವ್ಯರ್ಥ ಎಂದು ತಿಳಿದಿತ್ತು. ಅಲ್ಲಿನ ನಿರ್ಣಯಗಳೆಲ್ಲವೂ ಯುನೆಸ್ಕೊ ಸಂಸ್ಥೆಗೂ, ಸಂಬಂಧಪಟ್ಟ ಸರಕಾರಗಳಿಗೂ ಹೋಗಿರಬೇಕು. ಅವು ಮುಂದೇನಾದುವು ಎಂಬುದು ನನಗಂತು ತಿಳಿಯಲಿಲ್ಲ.


ಕಾರಂತರು ಮಾಡಿದ ಮೌಲ್ಯಮಾಪನ

೧೯೫೩ ರಲ್ಲಿ ಯುನೆಸ್ಕೋ ಸಂಸ್ಥೆಯು ಲವಾಲದಲ್ಲಿ ನಡೆಸಿದ ಬರಹಗಾರರ ಕಮ್ಮಟ ಮುಕ್ತಾಯವಾದ ಅನಂತರ ಕಲಿಯುವವರ ಮೇಲೆ ಅದರ ಪರಿಣಾಮ ಕತೆಯನ್ನು ಅಳೆಯಲು ಮೌಲ್ಯಮಾಪನ ನಡೆಯಿತು. ಇದರಲ್ಲಿ ಪಾಲ್ಗೊಂಡಿದ್ದ ಕಾರಂತರ ಅನುಭವ ಹೀಗಿದೆ—"ಸುಮಾರು ಎರಡು ವರ್ಷಗಳ ಕಾಲ ಈ ಶಿಬಿರದ ಕೆಲಸ ಮುಂದುವರಿಯಿತು. ಮುಂದೆ ಅವರೆಲ್ಲರೂ ಚೆದುರಿದರು. ಶಿಬಿರ ಮುಗಿಯುವುದರೊಳಗಾಗಿ ಯುನೆಸ್ಕೊ ಸಂಸ್ಥೆಯವರು ನಡೆಸಿದ ಮೌಲ್ಯಮಾಪನ ಹೀಗಿತ್ತು—ಬರಹಗಾರರ ಕಮ್ಮಟ ನಡೆದ ಪ್ರದೇಶದಲ್ಲಿ ಸುಮಾರು ೨೪೦ ಕಲಿಕಾರ್ಥಿಗಳನ್ನು ಆಯ್ಕೆಮಾಡಿಕೊಂಡು ಅವರು ಕಲಿತ ಓದು ಬರಹ ಏನಾಗಿದೆ ಎಂಬ ಬಗ್ಗೆ ಪ್ರಶ್ನಿಸಲಾಯಿತು. ಆ ಪ್ರಶ್ನೆಗಳಿಂದ ಹೊರಬಂದ ವಿಚಿತ್ರ ಸಂಗತಿಯೆಂದರೆ....ಓದು ಕಲಿತವರು, ಕಲಿತದ್ದನ್ನು ಉಪಯೋಗಕ್ಕೆ ತರದೆ, ಬಲು ಬೇಗ ಮರೆಯುತ್ತಾರೆ ಎಂಬ ಕಟುಸತ್ಯ. ೨೪೦ ಮಂದಿಗಳಲ್ಲಿ ಕಲಿಕೆ ಮುಗಿಸಿದ ಮೇಲೆ, ಒಬ್ಬನೇ ಒಬ್ಬ ಒಂದೇ ಒಂದು ಪುಸ್ತಕವನ್ನೂ ಓದಲಿಲ್ಲವಂತೆ. ಒಂದು ಪತ್ರಿಕೆಯನ್ನು ಓದಿಲ್ಲವಂತೆ. ಅವರಲ್ಲಿ ಕೇವಲ ಇಬ್ಬರಿಗೆ ಮಾತ್ರ ಸ್ನೇಹಿತರು ಕಾಗದ ಬರೆದಿದ್ದರು; ಇಬ್ಬರಲ್ಲಿ ಒಬ್ಬ ತನಗೆ ಬಂದ ಕಾಗದವನ್ನು ತಾನೇ ಓದಿದ. ಮತ್ತೊಬ್ಬ ಅದನ್ನು ಇನ್ನೊಬ್ಬರಿಂದ ಓದಿಸಿ ಕೇಳಿದ. ಹಾಗೆ ಓದಿದಾತ ಸಹ ಅದಕ್ಕೆ ತಾನು ಉತ್ತರ ಬರೆಯದೆ ಬೇರೆಯವರಿಂದ ಪತ್ರ ಬರೆಯಿಸಿದನಂತೆ—ಇದು ನಿಜಕ್ಕೂ ಆಶ್ಚರ್ಯದ ಸಂಗತಿಯಲ್ಲ. ಮಾಮೂಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದ, ಹೆಚ್ಚಿನ ವಿದ್ಯಾರ್ಥಿಗಳು ಐದು ವರ್ಷಗಳ ಓದು ಕಲಿತ ಮೇಲೆ ಅನಕ್ಷರಸ್ಥರಂತೆಯೇ ಬಾಳುತ್ತಾರೆ. ಏತಕ್ಕೆ ಎಂದು ನಮಗೆ ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆ ಇದು. ಓದು ಕಲಿತ ವಯಸ್ಕರು ಸಹ ಈ ದಾರಿಯನ್ನು ಹಿಡಿದರೆ ಯಾರ ಆಶ್ಚರ್ಯವೂ ಇಲ್ಲ.


ವಯಸ್ಕ ಶಿಕ್ಷಣದ ಆಳ ಅಗಲ ಅರಿತಿದ್ದ ಕಾರಂತರು

ಕಾರಂತರು ವಯಸ್ಕ ಶಿಕ್ಷಣ ಸಾಹಿತ್ಯ ರಚನಾಲಯದಲ್ಲಿ ಶಿಬಿರಾರ್ಥಿಯಂತೆ ಇದ್ದು ಸಾಹಿತ್ಯ ರಚಿಸಿದವರು. ಅಂತಾರಾಷ್ಟ್ರೀಯ ವಿಚಾರ ಸಂಕಿರಣ, ಸಭೆ, ಸಮಾರಂಭಗಳಲ್ಲಿ ಪಾಲ್ಗೊಂಡು ವಿಷಯಗಳನ್ನು ಗಂಭೀರವಾಗಿ ಚಿಂತಿಸಿ, ಮಾರ್ಗೋಪಾಯಗಳನ್ನು ಸೂಚಿಸಿದವರು. ಮೌಲ್ಯಮಾಪನ ಕೈಗೊಂಡು ಕಾರ್ಯಕ್ರಮದ ಆಳ ಅಗಲ ಅರಿತಿದ್ದವರು. ಸಾಧಾರಣ ಜನರ


ಪುಸ್ತಕ ಪ್ರಪಂಚಕ್ಕೆ ಲೇಖನ ಕಳುಹಿಸುವುದಾಗಿ ಭರವಸೆ



2/6/95



ವಿಜಾಪುರ ನಿಲ್ದಾಣದಲ್ಲಿ ಪತ್ನಿ ಲೀಲಾ ಮತ್ತು ನರೇಗಲ್ ಅವರೊಂದಿಗೆ



ಮಡದಿ ಮಕ್ಕಳೊಡನೆ ಕಾರಂತರು :
ಮಾಲವಿಕಾ ಉಲ್ಲಾಸ ಮತ್ತು ಕ್ಷಮಾ

ಬದುಕು ಹಸನಾಗಬೇಕೆಂಬ ಹಂಬಲ ಇದ್ದವರು. ಸದಾ ಅನುಮಾನ, ಅಪ ನಂಬಿಕೆಗೆ ಗುರಿಯಾಗಿರುವ ಈ ಕ್ಷೇತ್ರದಲ್ಲಿ ನಂಬಿಕೆ ವಿಶ್ವಾಸ ಇರಿಸಿಕೊಂಡಿದ್ದವರು. ಇದರಿಂದಾಗಿಯೇ ಕಳೆದ ಐದು ದಶಕ ಗಳಿಂದಲೂ ಕಾರಂತರ ಸಂಬಂಧ ವಯಸ್ಕ ಶಿಕ್ಷಣದೊಂದಿಗೆ ಸಾಗಿ ಬರಲು ಕಾರಣ ವಾಯಿತು.

ಕಾರಂತರಿಗೆ ಕಾರಂತರೇ ಸಮ

ಕೆಲವು ದಿನಗಳ ಹಿಂದೆ ಕಾರಂತರಿಂದ ಪುಸ್ತಕ ಪ್ರಪಂಚಕ್ಕೆ ಲೇಖನ ಕೋರಿ ಪತ್ರ ಕಳುಹಿಸಿದಾಗ, 'ನಿಮ್ಮ ಕಾಗದ ಬಂದಿದೆ ಲೇಖನವನ್ನು ಎರಡು ದಿನಗಳಲ್ಲಿ ಕಳುಹಿಸಿ ಕೊಡುತ್ತೇನೆ ಎಂದು ಸಾಲಿಗ್ರಾಮದಿಂದ ಕಾರಂತರ ಪತ್ರ ಬಂತು. ಇದರಂತೆ ಎರಡೇ ದಿನಗಳಲ್ಲಿ ಲೇಖನವೂ ಬಂತು. ಇನ್ನೊಮ್ಮೆ ನೇತಾಜಿಯವರನ್ನು ಕುರಿತು ಲೇಖನ ಕೇಳಿದಾಗ "ನೇತಾಜಿಯವರನ್ನು ಕುರಿತು ಸಾಕಷ್ಟು ಅಧ್ಯಯನ ಮಾಡಿದವ ನಲ್ಲ. ಹಾಗಾಗಿ ಬರೆಯುವ ಸಾಹಸಕ್ಕೆ ಹೋಗಿಲ್ಲ" ಎಂಬ ಅವರ ಪ್ರತಿಕ್ರಿಯೆ ಮರುದಿನವೇ ಬಂದು ಮುಟ್ಟಿತು. ಇದೇ ಕಾರಂತರ ವಿಶೇಷ. ಇಂಥ ಹಲವು ಹನ್ನೊಂದು ವಿಶೇಷಗಳ ಭಂಡಾರ ಆಗಿದ್ದ ಕಾರಂತರಿಗೆ ಕಾರಂತರೇ ಸಮ.

ಕಾರಂತರ ವಯಸ್ಕ ಶಿಕ್ಷಣ ಕೃತಿಗಳು

೧. ಜೋಗಿಕಂಡ ಊರು

ಪುಟ ೪೨, ಯುನೆಸ್ಕೊ ಗ್ರೂಪ್ ಟ್ರೈನಿಂಗ್ ಸ್ಕೀಮ್, ಮೈಸೂರು. ೧೯೫೪.

'ವಯಸ್ಕರಿಗಾಗಿ ಸಿದ್ಧಪಡಿಸಿದ ಈ ಪುಸ್ತಕದಲ್ಲಿ ಸುಮಾರು ೨೦೦ ಪದಗಳನ್ನು ಬಳಸಿದೆ. ಕಥಾರೂಪದಲ್ಲಿ ನಿರೂಪಣೆ ಹೊಂದಿರುವ ಈ ಕೃತಿಯನ್ನು ವಯಸ್ಕರು ಓದು ಬರಹ ಅರಿತುಕೊಳ್ಳಲು ಅನುವಾಗು ವಂತೆ ರಚಿಸಿದೆ. ಜನಜೀವನಕ್ಕೆ ಅತಿ ಅಗತ್ಯ ವಾದ ನೆರಳು, ನೀರು, ಬೆಳೆಯನ್ನು ಕುರಿತು ಸುಲಭ ಶಬ್ದಗಳ ಪುನರಾವರ್ತನೆಯ ಮೂಲಕ ವಯಸ್ಕರಿಗೆ ಆಸಕ್ತಿ ಹುಟ್ಟಿಸು ವಂತೆ ಕಥಾ ನಿರೂಪಣೆ ಇದೆ. ಖ್ಯಾತ ಕಲಾವಿದ ಕೆ. ಕೆ. ಹೆಬ್ಬಾರ್‌ರ ರೇಖಾ ಚಿತ್ರಗಳು ಕೃತಿಗೆ ಮೆರಗು ನೀಡಿದೆ.

೨. ದೇವ ಒಲಿದ ಊರು

ಪುಟ ೩೩, ಯುನೆಸ್ಕೊ ಗ್ರೂಪ್ ಟ್ರೈನಿಂಗ್ ಸ್ಕೀಮ್, ಮೈಸೂರು ೧೯೫೪.

'ಊರಗೌಡನೊಬ್ಬ ಜೋಗಿಯನ್ನು ಭೇಟಿಯಾಗಿ ಅವನ ಸಲಹೆಯಂತೆ ಮಣ್ಣು ತುಂಬಿದ್ದ ಕೆರೆಯನ್ನು ಊರಿನ ಜನರು ಅಗೆದು, ಬೀಜ ನೆಡುತ್ತಾರೆ. ಮಳೆ ಬಂದು ಕೆರೆ ತುಂಬುತ್ತದೆ. ಬೀಜ ಮೊಳಕೆಯೊಡೆದು ಸಸಿಯಾಗಿ ಮರವಾಗುತ್ತದೆ. ಮೊದಲು ಕರೆ ದಾಗ ನೀರು ನೆರಳು ಇಲ್ಲದ ನಿಮ್ಮ ಊರಿಗೆ ಬಾರೆನು ಎಂದು ಹೇಳಿದ ಜೋಗಿಯು ಈಗ ನಿಮ್ಮ ಊರಿಗೆ ಬಾರದೆ ಇರುವನೆ?' ಎಂದು ತೆರಳುತ್ತಾನೆ. 'ಈ ಮರದ ಸಾಲು ಏನು ಚಂದವು—ಎಂದುಕೊಂಡು ಖುಷಿಪಟ್ಟು ಕೊಂಡ.' ನೀರು ಕಂಡು, ಹಸಿರುಕಂಡು, ನೆರಳುಕಂಡು, ತಂಪು ಉಂಡು, ಚಂದ, ಚಂದ, ಬಹಳ ಚಂದ, ಜನರ ದುಡಿಮೆ, ದೇವ ಒಲಿವ' ಎಂದು ಊರವರನ್ನು ಹರಸು

ತ್ತಾನೆ. ಕೆ. ಕೆ. ಹೆಬ್ಬಾರರ ರೇಖಾ ಚಿತ್ರಗಳು ಕೃತಿಯ ಅಂದವನ್ನು ಹೆಚ್ಚಿಸಿದೆ.

೩. ಅಳಿಲ ಭಕ್ತಿ, ಮಳಲ ಸೇವೆ

ಪುಟ ೨೩. ಯುನೆಸ್ಕೊ ಗ್ರೂಪ್ ಟ್ರೈನಿಂಗ್ ಸ್ಕೀಮ್. ೧೯೫೪ ಮೈಸೂರು.

ರಾಮಾಯಣದಿಂದ ಆಯ್ದ ಜನಪ್ರಿಯ ಕತೆಯನ್ನು ಬಳಸಿಕೊಂಡು, ವಯಸ್ಕರಿಗೆ ಓದು ಬರಹ ಕಲಿಯಲು ಸಹಕಾರಿಯಾಗುವಂತೆ ಪದ್ಯ ರಚಿಸಲಾಗಿದೆ. ಶ್ರೀರಾಮಚಂದ್ರನು ಲಂಕೆಗೆ ತೆರಳಲು ಅನುಕೂಲವಾಗಲೆಂದು ಕಪಿಗಳು ಸಮುದ್ರಕ್ಕೆ ಸೇತುವೆ ಕಟ್ಟುತ್ತಿದ್ದಾಗ, ಪುಟ್ಟ ಅಳಿಲೊಂದು ಭಕ್ತಿಯಿಂದ ಸೇತುವೆಯ ಕೆಲಸದಲ್ಲಿ ತನ್ನ ಪಾಲನ್ನು ಸಲ್ಲಿಸುತ್ತದೆ. ಇದರಿಂದ ಸುಪ್ರೀತನಾದ ರಾಮ ಆ ಅಳಿಲನ್ನು ಹರಸುತ್ತಾನೆ. ಪ್ರೀತಿಯಿಂದ ಅದರ ಮೈಯನ್ನು ತನ್ನ ಮೂರು ಬೆರಳುಗಳಿಂದ ಸವರಿದಾಗ ಉಂಟಾದ ಗುರುತುಗಳು-ಈಗಲೂ ಎಲ್ಲ ಅಳಿಲುಗಳ ಮೇಲೆಯೂ ಇದೆ. ಎಂಬ ನಂಬಿಕೆಗೆ ಸಂಬಂಧಿಸಿದ ಕತೆ. ಇದರಿಂದ ಹುಟ್ಟಿಕೊಂಡ ಗಾದೆಯ ಮಾತು' ಅಳಿಲ ಭಕ್ತಿ, ಮಳಲ ಸೇವೆ' ಯನ್ನು ಬಳಸಿಕೊಂಡು ಕೃತಿ ರಚಿಸಿದೆ. ೧೭೦ ಶಬ್ದಗಳನ್ನು ಬಳಸಿರುವ ಈ ಪುಸ್ತಕದಲ್ಲಿ ಕೆ. ಕೆ. ಹೆಬ್ಬಾರರ ಚಿತ್ರಗಳು ಅಂದವಾಗಿವೆ.

೪. ಹುಟ್ಟು ಸಾವು ಒಟ್ಟು ಒಟ್ಟು

ಪುಟ ೨೫, ಯುನೆಸ್ಕೊ ಗ್ರೂಪ್ ಟ್ರೈನಿಂಗ್ ಸ್ಕೀಮ್, ೧೯೫೪ ಮೈಸೂರು.

ವಯಸ್ಕರಿಗಾಗಿಯೇ ವಿಶೇಷವಾಗಿ ಸಿದ್ಧಪಡಿಸಿದ ಪುಸ್ತಕ. ಕೆ. ಕೆ. ಹೆಬ್ಬಾರರ ರೇಖಾ ಚಿತ್ರಗಳಿವೆ. ಈ ಪದ್ಯವನ್ನು ಕಥನ ರೂಪದ ಶೈಲಿಯಲ್ಲಿ ರಚಿಸಿದೆ. ಬೌದ್ಧ ಧರ್ಮದಲ್ಲಿ ಹೇಳಲ್ಪಟ್ಟ ಪ್ರಸಿದ್ಧ ಕತೆ 'ಕಿಸಾಗೋತಮಿಯನ್ನು ಲೇಖಕರು ಇದರಲ್ಲಿ ಬಳಸಿಕೊಂಡಿದ್ದಾರೆ. ಸತ್ತ ತನ್ನ ಕೂಸನ್ನು ಬದುಕಿಸಲೋಸುಗ ಗೋತಮಿಯೆಂಬಾಕೆ ಗೌತಮ ಬುದ್ಧನನ್ನು ಶರಣುಹೋದಾಗ ಆತ ಅವಳಿಗೆ ಸಾವಿಲ್ಲದ ಮನೆಯ ಸಾಸಿವೆ ಕಾಳನ್ನು ತರಲು ಆಜ್ಞಾಪಿಸುತ್ತಾನೆ. ಅದನ್ನು ತರಲು ವಿಫಲಳಾದ ಗೋತಮಿ ಮರಳಿ ಬಂದು ಬುದ್ಧನಲ್ಲಿ ಅಳಲನ್ನು ತೋಡಿಕೊಳ್ಳುತ್ತಾಳೆ. ಆಗ ಬುದ್ಧ ಪ್ರೀತಿಯಿಂದ ಅವಳಿಗೆ ಬುದ್ಧಿ ಹೇಳುತ್ತಾನೆ.' ತಂಗಿ ಹುಟ್ಟಿದವರಿಗೆ ಸಾವು ನಿಶ್ಚಯ, ಹುಟ್ಟಿದವರು ಸಾಯಲೇಬೇಕು ಹುಟ್ಟು ಸಾವು ಒಟ್ಟು ಒಟ್ಟು, ಯಾವುದು ತಪ್ಪದೋ ಅದಕ್ಕಾಗಿ ಅಳಬಾರದು. ಅತ್ತರೆ ಸತ್ತವರು ಬರಲಾರರು-ಎಂದು ಹೇಳಿದಾಗ ಅವಳಿಗೆ ತಿಳಿವು ಬಂದಿತು. ತಿಳಿವಿನಿಂದ ಶಾಂತಿ ಬಂದಿತು. ಅವಳ ದುಃಖ ಹೋಯಿತು–ಎಂಬಲ್ಲಿಗೆ ಕತೆಯು ಮುಗಿಯುತ್ತದೆ.

೫. ಬೇರೆಯವರು ಸರಿ ಇರಬಹುದು

ಯುನೆಸ್ಕೊ ಗ್ರೂಪ್ ಟ್ರೈನಿಂಗ್ ಸ್ಕೀಮ್, ೧೯೫೪, ಮೈಸೂರು.

೬. ಕೋಳಿ ಸಾಕಣೆ

ಪುಟ ೩೨, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೫೬.

ಕೋಳಿಯ ವಿವಿಧ ತಳಿಗಳು—ಸಾಕಣೆ ವಿಧಾನ, ಕೋಳಿಗಳಿಗೆ ಬರುವ ರೋಗಗಳು ಮತ್ತು ಅದರ ನಿವಾರಣೆ ಮುಂತಾದ ಹಲವಾರು ಅಂಶಗಳನ್ನು ಒಳಗೊಂಡಿದೆ. ಈ ಕೃತಿಗೆ ಕಾರಂತರೇ ಚಿತ್ರಕಾರರಾಗಿಯೂ ಕೆಲಸ ಮಾಡಿರುವುದು ಕೃತಿಯ ವಿಶೇಷ.

೭. ಕರ್ನಾಟಕದ ಜಾನಪದ ಕಲೆಗಳು

ಪುಟ ೨೫, ಲಿಟರಸಿ ಹೌಸ್ ಲಕ್ನೋ, ೧೯೬೧

ಕರ್ನಾಟಕದ ಜಾನಪದ ಕಲೆಗಳ ಉಗಮ ವಿಕಾಸ, ವೈವಿಧ್ಯತೆಯನ್ನು ಕುರಿತು ರಚನೆಯಾಗಿರುವ ಕೃತಿ.

೮. ದಕ್ಷಿಣ ಹಿಂದೂಸ್ತಾನದ ನದಿಗಳು

ಪುಟ ೨೫, ಲಿಟರಸಿ ಹೌಸ್ ಲಕ್ನೋ, ೧೯೬೧

ಇದು ದಕ್ಷಿಣ ಭಾರತದ ನದಿಗಳನ್ನು ಕುರಿತ ಪರಿಚಯಾತ್ಮಕ ಪುಸ್ತಿಕೆ.

ನನ್ನ ಮಿತ್ರರಾದ ಶ್ರೀ ಶಿವರಾಮ ಕಾರಂತರೆಂದರೆ ಅವರೊಬ್ಬ ವಿಶಿಷ್ಟ ವ್ಯಕ್ತಿ. ಹಿತ್ತಲನ್ನು ಹೊಕ್ಕ ಆಡು ಬಾಯಿಕ್ಕದ ಸೊಪ್ಪಿಲ್ಲದಂತೆ, ಕನ್ನಡ ಸಾಹಿತ್ಯದಲ್ಲಿ ಅವರು ಕೈಯಿಕ್ಕದ ವಿಷಯವಿಲ್ಲ; ಕತೆ, ಕಾದಂಬರಿ, ಕವಿತೆ (ಅವರ ಕೆಲವೇ ಆದರೂ ಚೆನ್ನಾದ ಕವಿತೆಗಳನ್ನು ಓದಿರುವಂತೆ ನನಗೆ ನೆನಪಿದೆ.) ವಿಮರ್ಶೆ, ವಿನೋದ, ಸಂಶೋಧನೆ, ಈಚೀಚೆಗೆ ಯಕ್ಷಗಾನ ಮತ್ತು ಬಯಲಾಟ ಮೊದಲಾಗಿ ಕನ್ನಡ ಸಾಹಿತ್ಯದಲ್ಲಿ ಏನಿದೆಯೊ ಅದೆಲ್ಲ! ಹೀಗೆ ಕನ್ನಡ ಸಾಹಿತ್ಯದ ಇವಿಷ್ಟು ಅಂಗಗಳಲ್ಲಿ ಕೈಯಾಡಿಸಿದ ಒಬ್ಬನೇ ವ್ಯಕ್ತಿ ಬೇರೆ ಇಲ್ಲ. ಇದ್ದರೆ ತೀರ ವಿರಳ.

—ಎಂ. ಗೋವಿಂದ ಪೈ

ಕೋಟಾ ಶಿವರಾಮ ಕಾರಂತ

(ವ್ಯಕ್ತಿತ್ವ ಮತ್ತು ಕಾದಂಬರಿಗಳು)

ಪ್ರೊ|| ಕೆ. ಬಿ. ಪ್ರಭುಪ್ರಸಾದ್
೧೧, ದೇವಸ್ಥಾನದ ರಸ್ತೆ
ಜಯಲಕ್ಷ್ಮೀಪುರ,
ಮೈಸೂರು–೫೭೦೦೧೨

ಶಿವಮೊಗ್ಗಾ ಇಂಟರ್‌ಮಿಡಿಯಟ್ ಕಾಲೇಜ್ ವಿದ್ಯಾರ್ಥಿ ಸಂಘದ (ಉದ್ಘಾಟನೆಯೊ–ಸಮಾರೋಪವೊ ಸರಿಯಾಗಿ ನೆನಪಿಲ್ಲ). ಕಾರ್ಯಕ್ರಮಕ್ಕೆ ಶಿವರಾಮ ಕಾರಂತರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಆಗ ತಾನೆ ಇಂಗ್ಲಿಷ್ ಅಧ್ಯಾಪಕನಾಗಿ ಸೇರಿದ್ದ ನಾನು ಕಾರಂತರೊಂದಿಗೆ ಮಾತಾಡುತ್ತ ಸಭಾಂಗಣಕ್ಕೆ ಕರೆದೊಯ್ಯುತ್ತಿದ್ದೆ. ನಮ್ಮೊಡನಿದ್ದ ಒಬ್ಬರು ತಮ್ಮ ಮಿತ್ರರು ಕಾರಂತರ ಕಾದಂಬರಿಗಳನ್ನು ತಮ್ಮ ಪಿ.ಎಚ್.ಡಿ. ವಿಷಯವನ್ನಾಗಿ ಆರಿಸಿಕೊಂಡಿದ್ದಾರೆಂದು ಹೇಳಿದರು. ಚಕ್ಕನೆ ಕಾರಂತರು ನಗುತ್ತ "ಯಾಕೆ ಸುಲಭವಾಗಿ ಒಂದು ಡಾಕ್ಟರೇಟ್ ಡಿಗ್ರಿ ಸಿಕ್ಕುತ್ತೆ ಅಂತಲೊ?" ಎಂದುಬಿಟ್ಟರು. ಆ ಗೆಳೆಯರು ಕ್ಷಣ ತಬ್ಬಿಬ್ಬಾದರು. ತಮ್ಮ ಕೃತಿಗಳು ಅಧ್ಯಯನಕ್ಕಾಗಲಿ ಸಂಶೋಧನೆಗಾಗಲಿ ತಕ್ಕ ಗಂಭೀರ ವಿಷಯವೇನಲ್ಲ ಎಂಬ ಅರ್ಥದಲ್ಲಿ ಅವರು ತಮ್ಮ ಸಾಹಿತ್ಯ ಕುರಿತು ತಾವೇ ವಿನೋದವಾಗಿ ಹಾಗೆ ಮಾತಾಡಿದ್ದೆಂದು ಹೊಳೆದು ನಾವೆಲ್ಲರೂ ಕಾರಂತರ ನಗುವಿನಲ್ಲಿ ಸೇರಿಕೊಂಡೆವು. ಪರವಾಗಿಲ್ಲ ಹಾಸ್ಯವನ್ನು ಗ್ರಹಿಸಿದರಲ್ಲ ಎಂದು ಸಂತೋಷದಿಂದ ಅವರು ಮತ್ತಷ್ಟು ಜೋರಾಗಿ ನಕ್ಕರು.

ಅವರು ತಮ್ಮ ಕೃತಿಗಳ ಬಗೆಗೆ ತಮಗಾವ ಭ್ರಮೆಯೂ ಇಲ್ಲವೆಂಬಂತೆ ವಿನೋದ ಮಾಡಿದುದು ಅವರಿಗೆ ಸಹಜವಾಗಿತ್ತು. ಆದರೆ ಅವರ ಕೃತಿಗಳ ಶ್ರೇಷ್ಠತೆ ಬಗ್ಗೆ ನಮಗೆ ಗೊತ್ತಿತ್ತು. ಗೌರವವಿತ್ತು. ಈ ವಿನೋದದಿಂದ ಅವರ ವ್ಯಕ್ತಿತ್ವದ ಬಗ್ಗೆ ನಮ್ಮ ಗೌರವ ಇನ್ನೂ ಹೆಚ್ಚಾಯಿತು. ಅವರ ಕಾದಂಬರಿಗಳು ಗಹನವಾದ ಅಧ್ಯಯನಕ್ಕೆ, ವಿವರವಾದ ವಿಮರ್ಶಾತ್ಮಕ ಅವಲೋಕನಕ್ಕೆ ತಕ್ಕ ಉತ್ಕೃಷ್ಟ ಕೃತಿಗಳೆಂಬುದರಲ್ಲಿ ಎರಡು ಮಾತಿಲ್ಲ. ಬರಿ ಕಾದಂಬರಿಗಳಷ್ಟೇ ಅಲ್ಲ. ಅವರ ಗೀತನಾಟಕಗಳು, ವಿಡಂಬನಾತ್ಮಕ ಬರೆಹಗಳು, ಅರ್ಥಕೋಶ, ಬಾಲಪ್ರಪಂಚ, ವಿಜ್ಞಾನ ಪ್ರಪಂಚ ಮುಂತಾದ ಮಹತ್ತರ ಕಾಣಿಕೆಗಳು, ಯಕ್ಷಗಾನ, ಚಲನಚಿತ್ರ, ಬಾಲಶಿಕ್ಷಣ ಇತ್ಯಾದಿ ಪ್ರಯೋಗಗಳು ಗಂಭೀರವಾದ ಅಧ್ಯಯನಕ್ಕೆ, ಚಿಂತನೆಗೆ-ತುಲನೆಗೆ ಶ್ರೇಷ್ಠ ವಸ್ತುಗಳಾಗಿವೆ. "ಹುಚ್ಚು ಮನಸ್ಸಿನ ಹತ್ತು ಮುಖಗಳು" ಎಂದು

ತಮ್ಮ ಆತ್ಮವೃತ್ತಾಂತಕ್ಕೆ ಹೆಸರು ಕೊಟ್ಟರು. ಅವರ ಸ್ವಭಾವ ಮತ್ತು ಮನೋಧರ್ಮವೇ ಅಂತಹದು. ಕೇವಲ ಹತ್ತು ಮುಖಗಳಲ್ಲ ಹಲವು ಮುಖಗಳು ಎನ್ನಬೇಕು. ಅವರು ದಶಮುಖರಲ್ಲ. ನಮ್ಮ ಬುದ್ಧಿಯನ್ನೂ ಮನಸ್ಸನ್ನೂ ರಮಿಸುವ ಬಹುಮುಖರು.

ಅವರ ಆತ್ಮಾಭಿಮಾನ, ಆತ್ಮವಿಶ್ವಾಸ ಪ್ರಚಂಡವಾದುದು. ಹಲವಾರು ಕ್ಷೇತ್ರಗಳಲ್ಲಿ ಅವರದು ಪ್ರಚಂಡ ಸಾಧನೆಯೂ ಹೌದು. ಸಫಲರಾದೆಡೆಯೂ ಶ್ರೇಷ್ಠತೆಯನ್ನು ಹಲುಪಿಯೆ ನಿಲುಗಡೆ. ಆದರೆ ಅಹಂಕಾರದ ಸ್ವರೂಪದ ಆತ್ಮಪ್ರತ್ಯಯವಿರಲಿಲ್ಲ. ತಾವು ಸರ್ವಜ್ಞರು, ತಾವು ಸಾಧಿಸಿದ್ದೇ ಮಹತ್ತರವಾದುದು ಎಂಬ ಅಹಂಭಾವ ಅವರಲ್ಲಿರಲಿಲ್ಲ. ಆಳವಾದ ಗಂಭೀರವಾದ ಅಧ್ಯಯನ ಮಾಡದೆ, ಅನುಭವವೂ ಇಲ್ಲದೆ, ಹಗುರವಾಗಿ ಟೀಕೆ ಮಾಡುವ, ತೀರ್ಪು ಕೊಡುವ ಧೋರಣೆಯನ್ನು ಅವರು ಖಂಡತುಂಡವಾಗಿ ಖಂಡಿಸುತ್ತಿದ್ದುದು, ಅರೆಬೆಂದ ವಿಚಾರಗಳ ಬಗ್ಗೆ ತಿರಸ್ಕಾರವನ್ನು ವ್ಯಕ್ತಪಡಿಸುತ್ತಿದ್ದುದೂ ಅವರನ್ನು ತಪ್ಪಾಗಿ ತಿಳಿಯಲು ಕಾರಣವಾಗಿದ್ದವು. ಅವರು ಆಗಿನ ಕಾಲದ ಎಲ್ಲ ಹಿರಿಯರಂತೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಬರೆದರು. ಮಾತ್ರವಲ್ಲ ಬೇರೆ ಯಾವ ಸಮಕಾಲೀನರೂ ಅಷ್ಟು ಕ್ಷೇತ್ರಗಳಲ್ಲಿ ಕೆಲಸ ಮಾಡಲಿಲ್ಲ ಎಂದು ಹೇಳುವ ಹಾಗೆ ಜೀವನಕ್ಕೆ ಸಂಗತವಾದ ಮತ್ತು ಅಗತ್ಯವಾದ ಹಲವು ಕ್ಷೇತ್ರಗಳಲ್ಲಿ ಸಾಹಸದ ಪ್ರಯೋಗಗಳನ್ನು ಮಾಡಿದರು.

ಕಾರಂತರಲ್ಲಿ ತಮಗೆ ಎಲ್ಲವೂ ತಿಳಿದಿದೆ ಎಂಬ ಧೋರಣೆ ಇರಲಿಲ್ಲ. ತಿಳಿದಿರುವುದು ಸ್ವಲ್ಪ; ತಿಳಿಯಬೇಕಾದುದು ಇನ್ನೂ ಬೇಕಾದಷ್ಟಿದೆ, ಅಗಾಧವಾಗಿದೆ ಎಂದೇ ಹೇಳುತ್ತಿದ್ದರು. ಅವರದು ಮುಗಿಯದ, ನಿರಂತರವಾದ ಕುತೂಹಲ. ಯಾವ ವಿಷಯದಲ್ಲೇ ಆಸಕ್ತಿ ತಳೆದರೂ ಪಟ್ಟು ಹಿಡಿದು ಅದನ್ನು ತಲಸ್ಪರ್ಶಿಯಾಗಿ, ಕೂಲಂಕುಷವಾಗಿ ಅಧ್ಯಯನ ಮಾಡುವ, ತಮ್ಮ ಆಲೋಚನೆಯ ಹಾಗೂ ಅನುಭವದ ಒರೆಗಲ್ಲಿಗೆ ಹಚ್ಚಿ, ಉಜ್ಜಿ ಖಚಿತಪಡಿಸಿಕೊಳ್ಳುವ ಸ್ವಭಾವ. ಹೀಗೆ ಚೆನ್ನಾಗಿ ಗ್ರಹಿಸಿದುದನ್ನು ಇತರ ಸಹಜೀವಿ ಕನ್ನಡಿಗರಿಗೆ ತಿಳಿಸಬೇಕೆಂಬ ಅದಮ್ಯ ಉತ್ಸಾಹ. ಅಧ್ಯಯನದಲ್ಲಿ ಹೇಗೊ ಹಾಗೆ ಅಭಿವ್ಯಕ್ತಿಸುವಲ್ಲಿಯೂ ಮಹಾಸಾಹಸಿಗರು. ಅವರ ಬುದ್ಧಿ ಹರಿತವಾದುದು. ಹೃದಯ ಮೃದುವಾದುದು. ಪ್ರೀತಿ-ಅನುಕಂಪ ಮುಂತಾದ ಭಾವ ಪೂರ್ಣವಾದುದು. ಪ್ರತಿಭೆ ಸೃಜನಶೀಲವಾದುದು. ಮನೋಧರ್ಮ ಪ್ರಯೋಗಶೀಲವಾದುದು. ಜೀವನವಂತೂ ತೀರಾ ಸರಳವಾದುದು. ಪ್ರವಾಸಿಗರಾಗಿ ಎಂಥಾ ಸೌಕರ್ಯಹೀನ ಪರಿಸ್ಥಿತಿಗೂ ಹೊಂದಿಕೊಳ್ಳಬಲ್ಲ ಸರಳತೆ! ನಮ್ಮ ಜನರ ಬದುಕು ಉತ್ತಮವಾಗಬೇಕೆಂಬ ಕಳಕಳಿ ಕನ್ನಡದ ನೆಲ–ಜನರ ಬಗ್ಗೆ ಕಾಳಜಿ ಸಹಜವಾದುದೇ. ಇಡೀ ಮಾನವ ಕುಲದ ಬಗ್ಗೆ ಚಿಂತನೆ.

ಕುವೆಂಪು ಅವರು ಯಾವಾಗಲೂ ಮೆಚ್ಚಿ ಹೇಳುತ್ತಿದ್ದರು, ಕಾರಂತರದು ದೈತ್ಯಪ್ರತಿಭೆ ಎಂದು. ಒಬ್ಬ ವ್ಯಕ್ತಿಯಿಂದ ಇಷ್ಟು ಮಾಡಲು ಸಾಧ್ಯವೇ ಎಂದು ಅಚ್ಚರಿಪಡುವಷ್ಟು, ಒಂದು ದೊಡ್ಡ ವಿಶ್ವವಿದ್ಯಾನಿಲಯವೂ ಮಾಡಲು ಹಿಂಜರಿಯುವ, ಮಾಡಿದರೂ ಬಹುಕಾಲ ಹಿಡಿಯುವ, ಕಾರ್ಯಗಳನ್ನು ಏಕಾಕಿಯಾಗಿ ಮಾಡಿ

ತೋರಿಸಿದ್ದಾರೆ. ಅದೂ ಎಷ್ಟೋ ಕಾಲದ ಹಿಂದೆ, ಆ ಕುರಿತ ಆಲೋಚನೆಯೇ ಮಾಡದ ಸಮಯದಲ್ಲಿ! ಇದಕ್ಕೆ ನಿದರ್ಶನ ಬಾಲಪ್ರಪಂಚ, ಅರ್ಥಕೋಶ. ಬಾಲ-ಪ್ರಪಂಚ ಮಕ್ಕಳಿಗಷ್ಟೇ ಅಲ್ಲ ವಯಸ್ಕರಿಗೂ ಉಪಯುಕ್ತವಾದುದು.

ಕಾರಂತರ ಬದುಕೇ ಒಂದು ಸಾಹಸದ ಯಾತ್ರೆ. ಸುಗಮವಾಗಿ ಸುಖವಾಗಿ ನಡೆದದ್ದಲ್ಲ. ಅನೇಕ ಅಡ್ಡಿ, ಆತಂಕ, ಕಷ್ಟ-ನಿಷ್ಠುರಗಳ ಹಾದಿ. ಏನೇ ಪ್ರತಿಕೂಲ ಸ್ಥಿತಿ, ಎಡರು-ತೊಡರುಗಳು ಎದುರಾದರೂ ಎದೆಗುಂದದೆ, ನಿರುತ್ಸಾಹಗೊಳ್ಳದೆ ಮುನ್ನುಗ್ಗುವ ಚೇತನವಾದುದರಿಂದಲೆ ವಿಶ್ವವಿದ್ಯಾನಿಲಯದ ಮೆಟ್ಟಿಲು ಹತ್ತದೆಯೂ ವ್ಯಾಸಂಗದ ಔನತ್ಯವನ್ನು ಕಾರಂತರು ಸಾಧಿಸಿದರು. ಹಣದ ಸಹಾಯ ವಿಲ್ಲ, ಪ್ರೋತ್ಸಾಹವಿಲ್ಲ ಎಂದು ಯಾವಾಗಲೂ ಕೊರಗಿದವರಲ್ಲ. ಹಿಮ್ಮೆಟ್ಟಿ ದವರಲ್ಲ. ಯಾವ ಶ್ರಮ, ಯಾವ ತೊಂದರೆ, ಅಸೌಕರ್ಯಗಳನ್ನೂ ಲೆಕ್ಕಿಸಲಿಲ್ಲ. ಹಿಡಿದ ಪಟ್ಟು ಬಿಡದೆ ಆಸಕ್ತಿ ಹುಟ್ಟಿದ ಕ್ಷೇತ್ರದಲ್ಲಿ ಸ್ವಶ್ರಮದಿಂದ ಅಧ್ಯಯನ ಮಾಡಿದ ಸಾಹಸಿ ಗರು. ಬರಿದೆ ಬೌದ್ಧಿಕ ಕಸರತ್ತು, ಸಂತೋಷ ಗಳಲ್ಲಿ ನಿಲ್ಲದೆ ಪ್ರಯೋಗಗಳಲ್ಲಿ ತೊಡಗಿ ದರು. ಅದರ ಇತಿ-ಮಿತಿ, ತಮ್ಮ ಮಿತಿ ಇಷ್ಟು ಎಂದು ತಿಳಿದ ಮೇಲೆ ನಿಲ್ಲಿಸಿ ಆಸಕ್ತಿಯ ಇನ್ನೊಂದು ಕ್ಷೇತ್ರಕ್ಕೆ ಕೈಹಾಕುವರು. ಜೀವನ, ಜನರ ಬದಕು, ಅವರಿಗೆ ಮುಖ್ಯ. ಬದುಕಿಗೆ ಅನ್ವಯವಾಗದ, ಉಪಯುಕ್ತ ವಾಗದ ಬರೀ ಶಾಸ್ತ್ರಾಧ್ಯಯನದಲ್ಲಿ ಅವರ ಆಸಕ್ತಿಯಿಲ್ಲ.

ಇದು ಅವರ ವ್ಯಕ್ತಿತ್ವ ಮತ್ತು ಬದುಕಿದ ರೀತಿ. ಇನ್ನು ಅವರ ಬರೆಹವೊ ಅವರ ವ್ಯಕ್ತಿತ್ವಕ್ಕೆ ಬದುಕಿಗೆ, ಜೀವನ ದೃಷ್ಟಿಗೆ ಹಿಡಿದ ಕನ್ನಡಿ. ಅವರ ಆಲೋಚನೆ ಗಳ, ಅನುಭವಗಳ, ವಿಚಾರಧಾರೆಯ ದಾಖಲೆ. ಬರೆಹ ವೈವಿಧ್ಯಮಯವಾದುದು. ಹರಟೆ, ಪ್ರಬಂಧ, ವೈಜ್ಞಾನಿಕ ಲೇಖನಗಳು ಕವನ ಸಂಕಲನ, ಪ್ರವಾಸ ಕಥನ, ಆತ್ಮ ವೃತ್ತಾಂತ, ಕಾದಂಬರಿ, ಗೀತನಾಟಕ, ಇತ್ಯಾದಿ ಪ್ರಕಾರಗಳೆಲ್ಲ ಇವೆ. ಪ್ರಧಾನ ವಾಗಿ ಅವರು ಕಾದಂಬರಿಕಾರರಾಗಿ ಹೆಚ್ಚು ಹೆಸರಾಗಿದ್ದಾರೆ. ಅವರ ಕಾದಂಬರಿಗಳು ಜನ ಪ್ರಿಯವಾಗಿವೆ. ಯಾರೂ ಅವುಗಳನ್ನು ಓದಿ ತೃಪ್ತರಾಗಬಹುದು. ಅವರ ಎಲ್ಲ ಕಾದಂಬರಿ ಗಳೂ, "ಮೂಕಜ್ಜಿಯ ಕನಸುಗಳು" ಒಂದನ್ನು ಬಿಟ್ಟು, ವಾಸ್ತವತೆಯ ಬಗೆಯುವು. ಅವರ ಮೊಟ್ಟಮೊದಲ ಕಾದಂಬರಿ "ವಿಚಿತ್ರಕೂಟ" ೧೯೨೪ರಲ್ಲಿ ಪ್ರಕಟವಾಯಿತು. ಆನಂತರ ಬಂದ "ದೇವ ದೂತರು", "ಚೋಮನದುಡಿ" "ಮರಳಿ ಮಣ್ಣಿಗೆ", "ಬೆಟ್ಟದ ಜೀವ", "ಮುಗಿದ ಯುದ್ಧ", ಕಾದಂಬರಿಗಳಲ್ಲಿ ಒಂದೊಂದೂ ಓದುಗರ ಮನವನ್ನು ಸೆಳೆದವು. ಮೊಟ್ಟ ಮೊದಲು ಕಾರಂತರು ಪತ್ತೇದಾರಿ ಕಾದಂಬರಿ ಬರೆದು ತಮ್ಮ ಸಾಹಿತ್ಯ ಕೃಷಿಯ ನ್ನಾರಂಭಿಸಿದರು ಎಂದು ತಿಳಿದು ಬಂದಿದೆ ಆದರೆ ಅವು ಈಗ ಲಭ್ಯವಿಲ್ಲ. "ಮರಳಿ ಮಣ್ಣಿಗೆ" ಎಂಬುದೇ ಅವರಿಗೆ ದೊಡ್ಡ ಹೆಸರನ್ನು ತಂದ ಕಾದಂಬರಿ. ಗುಣದಲ್ಲಿ ಉತ್ಕೃಷ್ಟವಾಗಿದೆ. ಅದು ಬಂದ ಪ್ರಾರಂಭ ದಲ್ಲಿ ಕಾದಂಬರಿ ಕ್ಷೇತ್ರದಲ್ಲಿ ದೊಡ್ಡ ಹೊ ಅಲೆಯನ್ನದು ಎಬ್ಬಿಸಿತು. 'ಮರಳಿ ಮಣ್ಣಿಗೆ

ಮಹಾಕಾವ್ಯ ಸದೃಶವಾದ ಕಾದಂಬರಿ ಎಂಬ ಮನ್ನಣೆ ಬಂದಿತು. ವಾಸ್ತವತೆಯ ಸಾಮಾಜಿಕ ಕಾದಂಬರಿಗಳನ್ನು ಒಂದಾದ ಮೇಲೊಂದರಂತೆ ಕಾರಂತರು ಬರೆದರು. ಅವರಿಗೆ ವಸ್ತು ಯಾವುದಾದರೂ ಒಂದು ಸಾಮಾಜಿಕ ಸಮಸ್ಯೆಯೇ ಆಗಬೇಕೆಂದಿಲ್ಲ. ಒಂದು ಪ್ರದೇಶದ ಜನತೆಯು ಸಮಸ್ತ ಜೀವನ ವಸ್ತುವಾಗಬಲ್ಲುದು. 'ಮರಳಿ ಮಣ್ಣಿಗೆ' ಯಲ್ಲಿ ಎತ್ತಿಕೊಂಡುದು ಕರಾವಳಿಯ – ಕಡಲ ತಡಿಯ – ಕೋಡಿ ಎಂಬ ಒಂದು ಹಳ್ಳಿಯ ಒಂದು ಕುಟುಂಬದ ಕತೆ. ಅದೂ ಮೂರು ತಲೆಮಾರಿನದು. ರಾಮ ಐತಾಳರು, ಅವರ ಮಗ ಲಕ್ಷ್ಮಿನಾರಾಯಣ (ಲಚ್ಚ), ಅವನ ಮಗ ರಾಮ ಐತಾಳ (ತಾತನ ಹೆಸರೇ)–ಮೂರು ಪೀಳಿಗೆಗಳ ಏಳು-ಬೀಳುಗಳ ಕಥೆ. "ಮರಳಿ ಮಣ್ಣಿಗೆ"ಯಾಗಲಿ, -ಮುಗಿದಯುದ್ಧ" ಆಗಲಿ ವಸ್ತು ಕುಟುಂಬದ ಕಥೆಯಾದರೂ ಅದರ ಸುತ್ತಮುತ್ತಲಿನ ಮತ್ತು ಸಂಬಂಧದ ಕುಟುಂಬಗಳ ಮತ್ತು ಸಮಾಜದ ಕಥೆ.

ಕಾರಂತರು ತಾವು ಕಂಡುಂಡ ಜೀವನದ ಸಾಂದ್ರವಾದ ಅನುಭವವನ್ನು ಸೃಜನಶೀಲವಾಗಿ ಬಳಸಿಕೊಳ್ಳುತ್ತಾರೆ. ಅನುಭವದ ಚೌಕಟ್ಟಿನಲ್ಲಿಯೆ ಅವರ ಕಲ್ಪನೆ ವಿವಿಧ ಜೀವನ ಚಿತ್ರಗಳನ್ನು ನೈಜರೂಪದಲ್ಲಿ ಸೃಷ್ಟಿಸುತ್ತದೆ. ಮನುಷ್ಯನ ಸ್ವಭಾವವನ್ನು, ಸಮಾಜವನ್ನು, ಅದರ ಬದುಕನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವುಗಳನ್ನೈಜ ಚಿತ್ರಣವನ್ನು ಕೊಡುವುದರಿಂದ ಅವರ ಕಾದಂಬರಿಗಳು ಕಾಲ್ಪನಿಕ ಎಂದೇ ಅನಿಸುವುದಿಲ್ಲ. ನಡೆದ ಸಂಗತಿಗಳ ವೃತ್ತಾಂತ ಎನಿಸುತ್ತವೆ.

ಕಾರಂತರು ಹುಟ್ಟು ಕತೆಗಾರರು. ಅವರು ಕತೆಯನ್ನು ಬರೆಯುವುದಿಲ್ಲ, ಹೇಳುತ್ತಾರೆ. ಸಂಗತಿಗಳನ್ನು ಸ್ವಾರಸ್ಯವಾಗಿ ಹೇಳುತ್ತಲೆ ಪಾತ್ರಗಳ ಸ್ವಭಾವವನ್ನು ತೆರೆದಿಡುತ್ತಾರೆ. ಅವರ ಪಾತ್ರಚಿತ್ರಣ ಅತ್ಯಂತ ಸಹಜವಾದುದು. ಯಾವ ಪಾತ್ರವನ್ನೂ ವಿವರವಾಗಿ ವರ್ಣನೆ ಮಾಡದೆ, ಕೆಲವೇ ಮಾತುಗಳಿಂದ ಹಾಗೂ ಆ ಪಾತ್ರದ ನಡೆ-ನುಡಿಗಳಿಂದಲೆ ಆ ಪಾತ್ರದ ಚಿತ್ರ ತನಗೆ ತಾನೆ ಪೂರ್ಣವಾಗಿ ನಮ್ಮ ಮನಸ್ಸಿನಲ್ಲಿ ಮೂಡುವಂತೆ ಮಾಡುತ್ತಾರೆ. ಪ್ರಕೃತ ವರ್ಣನೆಯೂ ಎಲ್ಲೂ ದೀರ್ಘವಾಗುವುದಿಲ್ಲ. ಕತೆ ಸತತವಾಗಿ ಒಂದೇ ವೇಗ, ಒಂದೇ ಹದದಲ್ಲಿ ಸಾಗುತ್ತದೆ. ಕತೆಯನ್ನು ಹೇಳುವುದರಿಂದ ಸಹಜತೆ ಮತ್ತು ಇಷ್ಟೆಲ್ಲ ಸಾಧ್ಯವಾಗಿದೆ. ಕೇಳುತ್ತ ಎಲ್ಲೂ ಬೇಸರವಾಗುವುದಿಲ್ಲ. ಮುಂದೇನಾಗುತ್ತದೆ ಎಂಬ ಕೂತೂಹಲವನ್ನು ನಿರಂತರವಾಗಿ ಕಾಪಾಡಿಕೊಳ್ಳುತ್ತ ಕತೆ ಹೇಳುತ್ತಾರೆ. ಎಲ್ಲೂ ಪ್ರತ್ಯೇಕವಾದ ತತ್ವ ಚಿಂತನೆಯಾಗಲಿ, ನೀತಿ ಬೋಧೆಯಾಗಲಿ ಕಾಣುವುದಿಲ್ಲ. ಪಾತ್ರಗಳ ನಡೆ-ನುಡಿಗಳಲ್ಲಿ, ಸನ್ನಿವೇಶ–ಸಂಗತಿಗಳಲ್ಲಿ ಹಾಲಿನಲ್ಲಿ ಬೆರೆತ ಸಕ್ಕರೆಯಂತಿದ್ದು ಬೋಧಪ್ರದ ಅಂಶಗಳು, ಶ್ರೇಷ್ಠ ಮಾನವೀಯ ಮೌಲ್ಯಗಳ ಕಡೆಗೆ ಒಲವು, ನಮ್ಮ ಅನುಭವಕ್ಕೆ ಮಾತ್ರ ಬರುತ್ತವೆ. ಸರಳವಾದ ಮಾತುಗಳಲ್ಲಿ, ತೀರಾ ಸಾಮಾನ್ಯವಾದ ಸಂಗತಿಯೂ ವಿಶೇಷವಾಗಿ ಕಾಣುವಂತೆ ಮಾಡುವಕಥನಕಲೆ ಕಾರಂತರಿಗೆ ಸಿದ್ಧಿಸಿದೆ. ಎಷ್ಟೇ ದೀರ್ಘ ಕಥನವಾದರೂ ಅದರ ಸ್ವಾರಸ್ಯ ತಗ್ಗುವುದಿಲ್ಲ. ಎಲ್ಲೂ ಬೇಸರವುಂಟಾಗುವುದಿಲ್ಲ. ಗಹನವಾದ ಚಿಂತನೆ, ಅನುಭವೋಕ್ತಿ,

ಹಾಸ್ಯ, ವಿನೋದ, ಮನವಿಡಿಯುವ ಭಾವಸಂದರ್ಭೋಚಿತವಾಗಿ, ಕೆಲವೇ ಮಾತುಗಳಲ್ಲಿ ಹೊಮ್ಮಿ ಮನಸೆಳೆಯುತ್ತವೆ. ಕಥೆಯನ್ನು ಕೇಳುತ್ತ ಆದರ ಲೋಕದಲ್ಲಿ ಸೇರಿಕೊಂಡ ಮನಸ್ಸು ಅಲ್ಲಿ ಬರುವ ವ್ಯಕ್ತಿಗಳಿಗೆ, ಸನ್ನಿವೇಶಗಳಿಗೆ ಸ್ಪಂದಿಸುತ್ತಿರುವಂತೆಯೆ ಚಿಂತನೆಗೆ ತೊಡಗುತ್ತದೆ. ಬದುಕಿನ ಒಳನೋಟವನ್ನು ಗ್ರಹಿಸುತ್ತದೆ. ಸಾಕ್ಷೀಭೂತ ಪ್ರಕೃತಿಯ ನಿರ್ಲಿಪ್ತತೆ, ಸಮಾಜದ ನಿಷ್ಠುರತೆಗಳು ಅರಿವಾಗುತ್ತವೆ. ಕಾದಂಬರಿಯನ್ನೋದಿ ಮುಗಿಸುವ ಹೊತ್ತಿಗೆ ಸಾಂದ್ರವಾದ ಅನುಭವದಲ್ಲಿ ಮಿಂದು ಬಂದಂತಾಗುತ್ತದೆ. ಕಥಾವ್ಯಕ್ತಿಗಳ ಕಷ್ಟ-ಕಾರ್ಪಣ್ಯ ಮನವನ್ನು ತಟ್ಟುತ್ತವೆ. ಅಲ್ಲೊ ಇಲ್ಲೊ ಮೇಲ್ತೆರೆಯ ಮೇಲೆ ಹೊಳೆಯುವ ಕಿಂಚಿತ್ ನಗು, ನಲಿವು ಮುದಗೊಳಿಸುತ್ತವೆ.

ನಮ್ಮ ಸಮಾಜದ ಬಹುತೇಕ ಜನರ ಬಾಳಿನ ಭಾಗವಾಗಿರುವ, ಕಿತ್ತುತಿನ್ನುವ ಬಡತನವನ್ನು, ದಿನದಿನದ ಒಪ್ಪತ್ತಿನ ಕೂಳಿಗೂ ಭಂಗಪಡುವ ಪರಿಸ್ಥಿತಿಯನ್ನು ಕಾರಂತರ ಹಾಗೆ ನೈಜವಾಗಿ, ಕಣ್ಣೀರು ಮಿಡಿಯುವಹಾಗೆ ಚಿತ್ರಿಸಿದವರು ವಿರಳ. "ಮರಳಿ ಮಣ್ಣಿಗೆ"ಯಾಗಲಿ, "ಮುಗಿದ ಯುದ್ಧ"ವಾಗಲಿ ಇದಕ್ಕೆ ಸೊಗಸಾದ ನಿದರ್ಶನ. ತಮ್ಮ ಎಲ್ಲ ಕಾದಂಬರಿಗಳಲ್ಲೂ ಬದುಕಿನ ಅವಿಭಾಜ್ಯ ಅಂಗವಾಗಿರುವ ಬಡತನದ ಚಿತ್ರವನ್ನು ಒಂದು ಅಂಶವಾಗಿ ಯಾದರೂ ಕಾಣಿಸಿಯೇ ಕಾಣಿಸುತ್ತಾರೆ. ಅವರು ಹುಟ್ಟಿ ಬೆಳೆದ, ಓಡಾಡಿದ, ಘಟ್ಟದ ಕೆಳಗಿನ ಪ್ರದೇಶಗಳ ಮತ್ತು ಕಡಲ ತಡಿಯ ಸ್ಥಳಗಳ ಜನಜೀವನವನ್ನು ತಮ್ಮ ಕಾದಂಬರಿಗಳಲ್ಲಿ ಸಮಗ್ರವಾಗಿ ಹಿಡಿದಿಟ್ಟಿದ್ದಾರೆ. ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ. 'ಮುಗಿದ ಯುದ್ಧ'ವಂತೂ ಮೊದಲಿನಿಂದ ಕೊನೆಯವರೆಗೆ ಬಡತನ ಬವಣೆಗಳನ್ನು ಮನಮಿಡಿಯುವಂತೆ ಅತ್ಯಂತ ನೈಜವಾಗಿ ತೆರೆದಿಡುವ ಕಾದಂಬರಿ. ಇಡೀ ಜಗತ್ತನ್ನು ತಲ್ಲಣಗೊಳಿಸಿದ ಜಾಗತಿಕ ಮಹಾಯುದ್ಧ ಮುಗಿಯುವುದಕ್ಕೆ ಸರಿಯಾಗಿ ಈ ಕಾದಂಬರಿಯ ಕಥೆಯೂ ಮುಕ್ತಾಯಗೊಳ್ಳುತ್ತದೆ. ಒಳ್ಳೆ ಬುದ್ಧಿವಂತ, ಪ್ರತಿಭಾವಂತ ಎನಿಸಿಕೊಂಡ ಅಚ್ಯುತ (ಕಥಾನಾಯಕ) ಹೈಸ್ಕೂಲ್ ವಿದ್ಯಾಭ್ಯಾಸ ಮಾಡುತ್ತಿರುವಾಗ ಬಡತನದಿಂದಾಗಿ ನಡುವೆಯೆ ವಿದ್ಯಾಭ್ಯಾಸವನ್ನು ಬಿಡಬೇಕಾದ ಪರಿಸ್ಥಿತಿ ಒದಗಿದರೂ, ತಂದೆ ತೀರಿಹೋದರೂ, ತಂದೆಯ ಆಸೆಯನ್ನು ಪೂರೈಸಬೇಕೆಂಬ ತಾಯಿಯ ಒತ್ತಾಸೆಯಿಂದಾಗಿ ಓದು ಮುಂದುವರಿಸಿ ಮ್ಯಾಟ್ರಿಕ್ ಪಾಸು ಮಾಡುತ್ತಾನೆ. ಒಳ್ಳೆ ಭಾವನೆಗಳು, ಉತ್ಸಾಹ, ಲವಲವಿಕೆ ತುಂಬಿದ್ದ ಹದಿಹರೆಯದ ಕಿಶೋರ ಏನೇನೊ ಸುಂದರವಾದ ಕನಸುಗಳನ್ನು ಕಟ್ಟಿಕೊಂಡು ಶಾಲೆಯ ಮಾಸ್ತರಾಗುತ್ತಾನೆ. ಇವನ ಭವಿಷ್ಯದ ಬಗ್ಗೆ ಹಲವಾರು ಭರವಸೆಗಳು ಮೂಡುತ್ತವೆ. ಆದರೆ ವಾಸ್ತವವಾಗಿ ಆದದ್ದೇ ಬೇರೆ. ಮೊದಲೇ ಬಡತನದಲ್ಲಿ ಒದ್ದಾಡುತ್ತಿದ್ದ ಸಂಸಾರ ಉದ್ದಕ್ಕೂ ಹೆಚ್ಚು ಹೆಚ್ಚಾಗುವ ಕೊರತೆ, ಕಷ್ಟ, ಕಾರ್ಪಣ್ಯಗಳನ್ನೆದುರಿಸಲೆ ಬೇಕಾದ ಬಾಳಿನ ಯುದ್ಧವಾಗುತ್ತದೆ. ಮನೆಗೆ ಸೇರಿದ ಚಿಕ್ಕಹಿಡುವಳಿ ಭೂಮಿಯನ್ನೂ ಒತ್ತೆಯಿಟ್ಟು ಸಾಲಮಾಡಬೇಕಾಗುತ್ತದೆ. ಹೆಂಡತಿಯ ಅನಾರೋಗ್ಯ, ಮಿತ್ರ

ಅಮಾನವೀಯವರ್ತನೆ, ಸುತ್ತಲಿನ ಅನೇಕ ಒಳ್ಳೆಯವರೆಂಬ ಜನರೂ ನಾನಾ ತೊಂದರೆಗಳಲ್ಲಿ ಸಿಕ್ಕಿಕೊಂಡು ತೊಳಲುತ್ತಿರುವುದು, ಒಂದಾದ ಮೇಲೊಂದು ಸಮಸ್ಯೆ ಹುಟ್ಟಿಕೊಳ್ಳುವುದು, ಸೂಕ್ಷ್ಮಸಂವೇದನಾಶೀಲನಾದ ಅಚ್ಯುತನನ್ನು ಕ್ರಮೇಣ ಖಿನ್ನತೆಗೆ ದೂಡುತ್ತವೆ. ಕಡೆಯಲ್ಲಿ ತಾನೇ ಕ್ಷಯರೋಗಕ್ಕೆ ತುತ್ತಾಗುತ್ತಾನೆ. ಬಾಳು ನಿರಂತರವಾದ ಹೋರಾಟದಲ್ಲೇ, ಫಲಕಾಣದೆ, ಸರಿಯುತ್ತದೆ. ತಾಯಿ ಲಕ್ಷ್ಮಮ್ಮ, ಅಕ್ಕ ಸೀತೆ, ಹೆಂಡತಿ ರುಕ್ಮಿಣಿ—ಇವರ ಪ್ರೀತಿಯೊಂದು, ನಾರಾಯಣರಾಯರ, ಜಾನ್ಸನ್ ಮಾಸ್ತರರ ಸ್ನೇಹ–ಅನುಕಂಪಗಳು, ಧೈರ್ಯದ ಮಾತು, ಅಚ್ಯುತನನ್ನು ಕುಂದದ ಚೈತನ್ಯದಲ್ಲಿರಿಸುತ್ತವೆ. ಜಾಗತಿಕ ಯುದ್ಧ ಮುಗಿಯುತ್ತದೆ. ಅಚ್ಯುತನ ಮರಣದೊಂದಿಗೆ ಅವನ ಬದುಕಿನ ಯುದ್ಧವೂ ಮುಗಿಯುತ್ತದೆ. ಮುಗಿಯಿತೇ? ಮುಗಿದ ಯುದ್ಧ ಅಚ್ಯುತನಿಗಷ್ಟೆ. ಅಂತಹ ಇನ್ನೂ ಎಷ್ಟೋ ವ್ಯಕ್ತಿಗಳ ಜೀವನದಲ್ಲಿ, ಸಮಾಜದಲ್ಲಿ ಅದು ಇನ್ನೂ ಮುಗಿಯದ ಯುದ್ಧ ಅದಕ್ಕೆ ಕೊನೆ ಎಲ್ಲಿ? ಬಡತನ, ರೋಗ, ಮೌಢ್ಯ, ಕುಟಿಲತೆಗಳ ನಡುವೆಯೂ ಮಾನವೀಯ ಪ್ರೀತಿ, ಸಹಾನುಭೂತಿ, ಪರಸ್ಪರ ಸಹಾಯ, ಸೌಹಾರ್ದ, ಹಾಸ್ಯ, ಸಂತೋಷದಗಳಿಗೆಗಳೂ ಇರುವ ಸಾಮಾಜಿಕ ಜೀವನದ ನೈಜ ಚಿತ್ರಣ ಈ ಕಾದಂಬರಿಯನ್ನು ಸಮಗತಿಯಲ್ಲಿ ಓದಿಸಿಕೊಂಡು ಹೋಗುತ್ತದೆ. ನಾಗರಾಜ, ಮಾಮುಂಜಿ, ನಾರಾಯಣರಾಯರು, ಜಾನ್ಸನ್ ಮಾಸ್ತರ್, ರುಕ್ಮಿಣಿ, ಸುಬ್ಬಿ ಮರೆಯಲಾಗದ ವ್ಯಕ್ತಿಗಳಾಗಿ ಮನಸ್ಸಿನಲ್ಲಿ ನಿಲ್ಲುತ್ತಾರೆ. ಸುಬ್ಬಿ-ಅಚ್ಯುತರ ಪ್ರಣಯ ಪ್ರಸಂಗವನ್ನು ಬಹುಸಹಜವಾಗಿ, ಸಮರ್ಥವಾಗಿ ಕಾರಂತರು ಬಿಂಬಿಸುತ್ತಾರೆ. ಸನ್ನಿವೇಶದೊಂದಿಗೆ ಮನಸ್ಸಿನ ಸೂಕ್ಷ್ಮವಾದ ಎಳೆಗಳನ್ನು ಜೋಡಿಸಿ ಹೆಣೆದು ಗಾಳಿ ಬೀಸುವ–ಮರದ ರೆಂಬೆಗಳು ತೂಗುವ ಸಹಜ ಸಂಗತಿಯಷ್ಟು ವಾಸ್ತವತೆಯ ರೀತಿಯಲ್ಲಿ ಹೇಳಿ ಮುಗಿಸುತ್ತಾರೆ.

"ಮರಳಿ ಮಣ್ಣಿಗೆ", "ಅಳಿದಮೇಲೆ", "ಮೂಕಜ್ಜಿಯ ಕನಸುಗಳು" ಕಾರಂತರ ಅಭಿಜಾತ ಕೃತಿಗಳಾಗಿವೆ. "ಬೆಟ್ಟದ ಜೀವ", "ಚೋಮನ ದುಡಿ" ಇನ್ನೊಂದು ಮಜಲಿನಲ್ಲಿ ಶ್ರೇಷ್ಠವಾಗಿ ನಿಲ್ಲುತ್ತವೆ. ಈ ಕಾದಂಬರಿಗಳ ಅವಲೋಕನ ಈಗಾಗಲೆ ಬೇರೆ ಬೇರೆ ಕಡೆ, ಬೇರೆ ಬೇರೆ ಕಾಲಗಳಲ್ಲಿ ಬಂದಿವೆ. ಈ ಕೃತಿಗಳನ್ನು ಕುರಿತು ಇನ್ನೂ ವಿವರವಾದ ವಿಮರ್ಶಾತ್ಮಕ ಅವಲೋಕನಗಳಿಗೆ, ಅಧ್ಯಯನಕ್ಕೆ ಅವಕಾಶವುಂಟು.

ಕಾರಂತರು ಹಲವಾರು ಕಾದಂಬರಿಗಳ ಮೂಲಕ ಈ ಕ್ಷೇತ್ರವನ್ನು ಸಮೃದ್ಧಗೊಳಿಸಿರುವುದು ನಿಜ. ಕಾಲಕಾಲಕ್ಕೆ ಬಂದ ಕಾದಂಬರಿಗಳಲ್ಲಿ ತಾವೂ ಬೆಳೆಯುವ ಪರಿಪಾಕಗೊಂಡಿರುವುದೂ ಸುವ್ಯಕ್ತವಾಗಿದೆ. ಅವರ ಅನುಭವದ ವಿಸ್ತಾರ, ಗಹನತೆಗಳ ಜೊತೆಗೆ, ಅವರ ವಿಚಾರಗಳು, ಮನೋಧರ್ಮ, ಜೀವನದೃಷ್ಟಿ, ಮನಸ್ಸು-ತಿಳಿವು ಮಾಗಿದ ಹಾಗೆ ಹೆಚ್ಚು ಹೆಚ್ಚು ಉದಾರವೂ ಮೃದುವೂ ಆಗಿರುವುದನ್ನು ಗಮನಿಸಬಹುದು. ಅದೇ ನೇರ ನುಡಿ, ನಿಷ್ಠುರತೆ, ಚಿಕಿತ್ಸಕ ಬುದ್ಧಿ, ಮೌಲ್ಯಗಳ ದೃಢತೆ, ಕಡೆಯ ಕೃತಿಯಲ್ಲೂ ಕಾಣುವುದಾದರೂ, ಆರಂಭದಲ್ಲಿ ವ್ಯಕ್ತವಾಗುವ ಉಗ್ರತೆ, ಗಡಸು, ವಿಡಂಬನೆಯ ಮೊನಚು

ಅದೇ ರೂಕ್ಷಸ್ಥಿತಿಯಲ್ಲಿ ಉಳಿಯುವುದಿಲ್ಲ. ಪಕ್ವವಾದ ಆಲೋಚನೆಗಳು, ಸತ್ಯ ಕಾಣದ ಮುಖಗಳೂ ಇವೆ. ಆ ನಿಗೂಢತೆಯನ್ನು ಬುದ್ಧಿ-ತರ್ಕಗಳಿಂದ ಭೇದಿಸಲಾಗುವುದಿಲ್ಲ ಎಂಬ ತಿಳಿವು, ಕಾರಂತರ ಕಡೆಯ ಕೃತಿಗಳಲ್ಲಿ ಒಂದು ಬಗೆಯ ಮಾರ್ದವತೆಯನ್ನೂ ಉದಾರ ಮನೋಭಾವವನ್ನೂ ತಂದಿವೆ. "ಅಳಿದ ಮೇಲೆ" ಕಾದಂಬರಿಯಲ್ಲೇ ಇದು ಕಾಣುತ್ತದೆ. "ಮೂಕಜ್ಜಿಯ ಕನಸುಗಳು" ಕಾದಂಬರಿಯಲ್ಲಿ ಇಂಥ ಮಾಗಿದ ಮನಸ್ಸು ಕೆಲಸ ಮಾಡಿದೆ. ಹಾಗೆಂದು ಕಾರಂತರ ವೈಚಾರಿಕತೆ ವೈಜ್ಞಾನಿಕ ದೃಷ್ಟಿಗಳೇನೂ ಬದಲಾಗಿಲ್ಲ. ಯಾರೊ ದೊಡ್ಡವರು, ತಿಳಿದವರು ಹೇಳಿದರೆಂದ ಮಾತ್ರಕ್ಕೆ ಆ ವಿಚಾರಗಳನ್ನು ಕಣ್ಮುಚ್ಚಿ ಸ್ವೀಕರಿಸುವುದನ್ನಾಗಲಿ, ಮೂಢ ನಂಬಿಕೆಗಳನ್ನು ಸಮರ್ಥಿಸುವುದನ್ನಾಗಲಿ ಅವರು ಸುತರಾಂ ಒಪ್ಪುವುದಿಲ್ಲ. ಅವರಿಗೆ ಸ್ವಾನುಭವ, ಸ್ವತಂತ್ರವಾದ ಆಲೋಚನೆ ಮುಖ್ಯ, ಆದರೆ ಯಾವುದನ್ನು ತಮ್ಮ ದೃಷ್ಟಿಯಲ್ಲೇ ನೋಡಿ 'ಇದಮಿತ್ಥಂ' ಎನ್ನಲಾಗದು. ಬುದ್ಧಿಗೆ—ವಿಜ್ಞಾನಕ್ಕೆ ಮಿತಿಗಳುಂಟು. ಭಾವಕ್ಕೆ ನಂಬಿಕೆಗೆ ಮಿತಿ ಹಾಕಲಾಗದು ಭಾವದ ನೆಲೆಯಲ್ಲಿ ಅವಕ್ಕೂ ಅರ್ಥವುಂಟು. ಬೆಲೆಯುಂಟು ಕಾರಂತರಲ್ಲಿ ಈ ದೃಷ್ಟಿ ವಿಕಾಶಗೊಂಡಹಾಗೆ ತೋರುತ್ತದೆ.

"ಮೂಕಜ್ಜಿಯ ಕನಸುಗಳು "ಕಾರಂತರ ಕಾದಂಬರಿಗಳಲ್ಲಿ ಬೇರೆಯ ಮಾದರಿಯ, ಬೇರೆಯ ಆಯಾಮದ ಕೃತಿ. ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿಕೊಂಡ ಯೋಗ್ಯ ಕೃತಿ. ೮೦ ವರ್ಷದ ಮೂಕಜ್ಜಿ ೧೦ ನೇ ವಯಸ್ಸಿನಲ್ಲೇ ವಿಧವೆಯಾದವಳು. ೭೦ ವರ್ಷಕಾಲ ನೋವು ಸಂಕಟ, ಕಷ್ಟಗಳೆಲ್ಲವನ್ನು ಉಣ್ಣುತ್ತ ನಡೆಸಿದ ತಪಸ್ಸು ಸಮನಾದ ಬದುಕಿನಲ್ಲಿ ಸುತ್ತಣ ಜಗತ್ತನ್ನೂ ಜನರನ್ನೂ ಸೂಕ್ಷ್ಮವಾಗಿ ನೋಡಿ ತಿಳಿಯುವ ಶಕ್ತಿಯನ್ನು ಬೆಳೆಸಿಕೊಂಡಿರುತ್ತಾಳೆ. ಜೊತೆಗೆ ಅವಳಿಗೊಂದು ಇಂದ್ರಿಯಾತೀತವಾದ ವಿಶೇಷ ಶಕ್ತಿಯೂ ಉಂಟಾಗಿರುತ್ತದೆ. ಯಾವುದೇ ವಸ್ತುವನ್ನು ಮುಟ್ಟಿದರೂ ಸಾಕು. ಅದರ ಪೂರ್ವೋತ್ತರ ಸಮಸ್ತ ಸಂಗತಿಯೂ ದೃಕ್ಗೋಚರವಾಗಿ ತಿಳಿದುಬಿಡುತ್ತದೆ. ಮೊಮ್ಮಗ ಸುಬ್ಬರಾಯನೆದುರು ಆದೆಲ್ಲವನ್ನು ನಡುನಡುವೆ ತಾನು ಅನುಭವದಿಂದ ಕಂಡುಕೊಂಡ ಜೀವನ ತತ್ವವನ್ನು ಸೂಕ್ತಿ ರೂಪದಲ್ಲಿ ಹೇಳುತ್ತಿರುತ್ತಾಳೆ. ಈ ಜಗತ್ತು ಸುಂದರವಾದುದು ಇಲ್ಲಿನ ಬದುಕು ಪವಿತ್ರವಾದುದು. ಇದನ್ನು ಪ್ರೀತಿಸಬೇಕು. ಜೀವನದ ಸವಿಯನ್ನು ಅದು ಬರುವ ರೂಪದಲ್ಲೇ ಪೂರ್ಣವಾಗಿ ಹೀರುತ್ತ ಆನಂದವಾಗಿ ಬಾಳನ್ನು ನಡೆಸಬೇಕು. ಉತ್ಸಾಹವನ್ನೆಂದೂ ಕಳೆದುಕೊಳ್ಳಬಾರದು. ಇದು ಮೂಕಜ್ಜಿಯ ನಿಲವು. ಕಾರಂತರ ಪರಿಪಕ್ವವಾದ ಜೀವನ ದೃಷ್ಟಿಯೂ ಹೌದು.

"ಮೂಕಜ್ಜಿಯ ಕನಸುಗಳು" ಇತರ ಕೃತಿಗಳಂತೆ ವಾಸ್ತವತೆಯ ಜಾಡಿನ ಕಾದಂಬರಿಯಲ್ಲ. ಅತೀಂದ್ರಿಯ ಶಕ್ತಿಯನ್ನು ಸಾಧನ ಮಾಡಿಕೊಂಡು ವ್ಯಕ್ತ ಜಗತ್ತಿನ ಅವ್ಯಕ್ತ ಸತ್ಯವನ್ನು ಸಂದೇಶವನ್ನು ಗ್ರಹಿಸುವ ಮತ್ತು ವಿತರಿಸುವ ತಂತ್ರವನ್ನಲ್ಲಿ ಬಳಸಿದ್ದಾರೆ. ಇದರಲ್ಲಿ ಮೂಕಜ್ಜಿಯ ಕಥೆ ಸ್ವಲ್ಪ ಮಾತ್ರ. ಆಕೆಯ 'ದರ್ಶನಗಳ'ಲ್ಲಿ(ಕಾರಂತರ ವೈಚಾರಿಕ ಹಾಗೂ ವಾಸ್ತವ ದೃಷ್ಟಿ ಅವುಗಳನ್ನು 'ಕನಸುಗಳು' ಎಂದೇ ಕರೆಯು

ತ್ತದೆ) ತೆರೆಯುತ್ತ ಹೋಗುವ ಯುಗಯುಗಗಳ ಮನುಕುಲದ ಕಥೆ ಮಹತ್ತರವಾದುದು. ಎಲ್ಲ ವಿಚಾರಗಳೂ ಚರ್ಚೆಗೆ ಬರುತ್ತವೆ, ಮಾನವನನ್ನು, ಜೀವನವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತವೆ. 'ಮರಳಿ ಮಣ್ಣಿಗೆ" ವಾಸ್ತವತೆಯ ನೆಲೆಯ ಮಹಾಕಾವ್ಯಸದೃಶವಾದ ಕಾದಂಬರಿಯಾದರೆ "ಮೂಕಜ್ಜಿಯ ಕನಸುಗಳು" ದರ್ಶನ ನೆಲೆಯ ಮಹಾಕಾವ್ಯಸದೃಶವಾದ ಕೃತಿಯಾಗಿದೆ.

ಎಲ್ಲ ಕಾದಂಬರಿಗಳಲ್ಲೂ ಮನವನ್ನು ಸೆರೆ ಹಿಡಿಯುವ ಗುಣ ಕಥನಕಲೆಯಲ್ಲಿ, ಭಾಷೆಯ ನೋಡಿಯಲ್ಲಿ ಇದೆ. ಆಡಂಬರವಿಲ್ಲ. ಉತ್ಪ್ರೇಕ್ಷೆ ಇಲ್ಲ ಯಾವುದೂ ಅತಿಯಾಗದೆ ಹಿತ-ಮಿತವಾಗಿರುವುದೇ ಕಾರಂತರ ಶೈಲಿಯ ಗುಣ. ಮಾತುಗಳ ದುಂದಿಲ್ಲ. ಪೋಲಾಗುವುದಕ್ಕೆ ಪ್ರತಿಯಾಗಿ ಕೆಲವೇ ಮಾತುಗಳಲ್ಲಿ ಅಡಕವಾಗಿ ಮಾರ್ಮಿಕವಾಗಿ ಹೇಳುವ ಸಾಮರ್ಥ್ಯ ಸಹಜವಾಗಿ ಇದೆ. ಅದು ಲೋಕಾನುಭವ ಇರಬಹುದು, ಪಾತ್ರ ಚಿತ್ರಣವಾಗಬಹುದು. ರಮ್ಯವಾದ ಇಲ್ಲವೆ ಭಯಂಕರವಾದ ಪ್ರಕೃತಿಯ ವರ್ಣನೆ ಆಗಬಹುದು. ನವುರಾದ ವ್ಯಂಗ್ಯ, ತಿಳಿಯಾದ-ಚತುರವಾದ ಹಾಸ್ಯ, ವಿಡಂಬನೆ ಸಮಯೋಚಿತವಾಗಿ ನಿರೂಪಣೆಯಲ್ಲೊ ಸಂಭಾಷಣೆಯಲ್ಲೊ ಬೆರೆತು ಕಥನ ಸುರಸ ಭರಿತವಾಗುತ್ತದೆ.

ವಿಸ್ತಾರವಾದ ಹರಹಿನಲ್ಲಿ ಕಾರಂತರ ಕೃತಿಗಳನ್ನಿಟ್ಟು ಅವುಗಳ ಹಿರಿಮೆ, ವಿಶೇಷತೆಗಳನ್ನು ಗುರುತಿಸುವ, ವಿಮರ್ಶೆಯ ಒರೆಗಲ್ಲಿಗೆ ಹಚ್ಚಿ ಬೆಲೆಗಟ್ಟುವ ಕಾರ್ಯ ಇನ್ನೂ ಆಗಬೇಕಾಗಿದೆ. ಕಾರಂತರ ಸಾಧನೆಗಳು, ಸಾಹಸಗಳು, ಪ್ರಯೋಗಗಳು ವಿಸ್ಮಯಕರವಾದವುಗಳು. ಅನನ್ಯವಾದವುಗಳು. ಕನ್ನಡಕ್ಕೊಬ್ಬರೇ ಕೈಲಾಸಂ, ಕನ್ನಡಕ್ಕೊಬ್ಬರೇ ಕುವೆಂಪು ಎಂಬಂತೆ ಕನ್ನಡಕ್ಕೊಬ್ಬರೇ ಕಾರಂತ ಅವರ ವ್ಯಕ್ತಿತ್ವ ಬಹು ದೊಡ್ಡದು. ಅವರ ಕೃತಿಗಳು ಅವರ ಧೀಮಂತ ವ್ಯಕ್ತಿತ್ವವನ್ನೇ ಅಭಿವ್ಯಕ್ತಿಸುತ್ತವೆ. ಸಂಗೀತ, ಸಾಹಿತ್ಯ, ಚಿತ್ರಕಲೆ, ನೃತ್ಯ ನಾಟಕ, ಯಕ್ಷಗಾನ, ಶಾಸ್ತ್ರ ಹಾಗೂ ವೈಚಾರಿಕ ಸಾಹಿತ್ಯ, ಜೀವನ ವಿಮರ್ಶೆ, ಎಲ್ಲದರಲ್ಲೂ ಸುವ್ಯಕ್ತವಾಗುವ ಜೀವನ ಪ್ರೀತಿ, ಅದಮ್ಯವಾದ ಜೀವನೋತ್ಸಾಹ, ನಿರಂತರ ಅನ್ವೇಷಕ ಮತಿ ಎಲ್ಲರಿಗೂ ಸ್ಫೂರ್ತಿದಾಯಕವಾಗಿವೆ. ಅವರು ಮಹಾನ್ ಚೇತನವಾಗಿ ಎಲ್ಲರ ಮನದಲ್ಲಿ ನಿಂತಿದ್ದಾರೆ.

ಕಾರಂತರ ಸಾಹಿತ್ಯ ದೊಡ್ಡದು; ಅವರ ಕಪಟವರಿಯದ ಸಾಹಸ ಜೀವನ ಮತ್ತೂ ದೊಡ್ಡದು.

—ಎ. ಎನ್. ಮೂರ್ತಿರಾವ್

ಡಾ|| ಶಿವರಾಮ ಕಾರಂತ : ಬದುಕಿ ಬರೆದ ಪರಿ

ಪ್ರೊ|| ಜೆ. ಕೆ. ರಮೇಶ
ಮುಖ್ಯಸ್ಥರು
ಕನ್ನಡ ವಿಭಾಗ, ತುಂಗಾ ಕಾಲೇಜು
ತೀರ್ಥಹಳ್ಳಿ

ಡಾ||ಕೋಟ ಶಿವರಾಮ ಕಾರಂತರನ್ನು ಕಡಲಿಗೆ ಹೋಲಿಸುವುದು ಈಗ ಕ್ಲೀಷೆ ಎನಿಸುತ್ತದೆಯಾದರೂ ಅನನ್ಯವೂ ಅರ್ಥ ಪೂರ್ಣವೂ ಆಗಿದೆ. 'ಕಡಲಂತೆ ಕಾರಂತ' ಎಂಬುದು ಈಚಿಗೆ ಅವರನ್ನು ಕುರಿತು ಪ್ರಕಟವಾದ ಒಂದು ಪುಸ್ತಕದ ಹೆಸರು. ಆ ಇಡೀ ಕೃತಿ ಕಾರಂತರ ವ್ಯಕ್ತಿತ್ವ ಮತ್ತು ಸಾಹಿತ್ಯಗಳ ಪ್ರತಿ ಅಂಶವನ್ನೂ ಸಮುದ್ರದ ಸ್ವರೂಪ, ಸಂಪತ್ತುಗಳೊಂದಿಗೆ ಸಮೀಕರಿಸುತ್ತದೆ. ನಿಜ, ಕಾರಂತರು ಕಡಲು. ಅವರನ್ನು ನೆನಪಿಸಿಕೊಂಡರೆ ಸಾಗರದೆದುರು ನಿಂತಾಗಿನ ಬೆರಗು ಭಯಗಳು ಹುಟ್ಟುತ್ತವೆ. ಅವರ ಬದುಕು—ಬರಹಗಳನ್ನು ಪರಿಚಯಿಸುವ ಯತ್ನ ಸಿಂಧುವನ್ನು ಬಿಂದಿಗೆಯಲ್ಲಿ ಹಿಡಿಯುವ ಕೆಲಸದಂತೆಯೆ. ಎಂಟೆದೆ ಇದ್ದವ ಅವರ ಕೃತಿಗಳನ್ನು ವಿಮರ್ಶೆ ಮಾಡಿಯಾನಾದರೂ ಅದು ಅಪೂರ್ಣವೇ. ಅವರನ್ನು ಕುರಿತು ಯಾವುದನ್ನು ಬರೆದರೂ ಅದೊಂದು ಸಾಮಾನ್ಯ ಪರಿಚಯವಾಗಬಹುದೇ ಹೊರತು ಬೆಲೆಕಟ್ಟುವ ವಿಮರ್ಶೆಯಾಗಲಾರದು" ಎಂಬ ಹಿರಿಯ ವಿಮರ್ಶಕರೊಬ್ಬರ ಅಭಿಪ್ರಾಯ ಉತ್ಪ್ರೇಕ್ಷೆಯಲ್ಲ. "ನಿಜವಾದ ಕಾರಂತ ಏನು ಎಂಬ ಅರಿವು ಯಾರಿಗೂ ಇಲ್ಲ" ಎಂದು ಅವರ ಬಾಳ ಸಂಗಾತಿ ಲೀಲಾಕಾರಂತರು ಉದ್ಗರಿಸಿದ್ದರು. ಅಂದಮೇಲೆ ಕಾರಂತರಂಥ ದೈತ್ಯರನ್ನು ದೂರದಿಂದ ನೋಡುತ್ತ ಅಚ್ಚರಿಯಲ್ಲಿ ಅದ್ದಿ ಹೋದವನೊಬ್ಬ ಅವರನ್ನು ಪರಿಚಯಿಸುತ್ತೇನೆ ಎನ್ನುವುದು ದಾರ್ಷ್ಟ್ಯವಾದೀತು. ಹೇಗೂ ಇರಲಿ ವಿನಯದಿಂದಲೇ ಅವರನ್ನು ಕುರಿತು ಕೆಲವು ಮಾತುಗಳನ್ನು ಬರೆಯುವ ಸಾಹಸ ಮಾಡುತ್ತಿದ್ದೇನೆ.

ಶತಮಾನ ಬದುಕುವ ಆಸೆ ತನಗಿಲ್ಲವೆಂದು ಕಾರಂತರು ತಮ್ಮ ಆತ್ಮ ವೃತ್ತದಲ್ಲಿ ಹೇಳಿದ್ದರಾದರೂ ಇಡಿಯ ಇಪ್ಪತ್ತನೆಯ ಶತಮಾನ ಅವರು ಬದುಕಿದರು. ನೂರಕ್ಕೆ ನಾಲ್ಕು ಮಾತ್ರ ಕಡಿಮೆಯಾಯಿತು— ಅವರ ಆಯುಸ್ಸಿನಲ್ಲಿ (೧೯೦೨—೧೯೯೭) ಅವರ ಜೀವಿತಕ್ಕೆ ವಾರಿಧಿವಿಸ್ತಾರ ದೊರಕೊಂಡಿತು. ಈ ಅಪರೂಪದ ನಿಡುಬಾಳು ಕೂಡ ಎಲ್ಲರದರಂತಲ್ಲವೆನಿಸಿಕೊಂಡಿತು.

ಈಗಿನ ಉಡುಪಿ ಜಿಲ್ಲೆಯ ಕುಂದಾಪುರ ಸಮೀಪದ ಕೋಟದಲ್ಲಿ ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ ಜನಿಸಿದ ಕಾರಂತರ ಹಿರಿಯರು ಸಾಕಷ್ಟು ಸ್ಥಿತಿವಂತರೇ ಆಗಿದ್ದರು. ಮಕ್ಕಳೆಲ್ಲರನ್ನೂ ಚೆನ್ನಾಗಿ ಓದಿಸ

ಬೇಕೆಂಬ ಸಂಸ್ಕಾರವುಳ್ಳ ತಂದೆ. ಓದಿ ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿದ್ದ ಅಣ್ಣಂದಿರು, ಹೀಗೆ ಬೌದ್ಧಿಕ ಬೆಳವಣಿಗೆಗೆ ಅನುಕೂಲವಾಗಿದ್ದ ವಾತಾವರಣದಲ್ಲಿ ಬೆಳೆದ ಕಾರಂತರ ಶಿಕ್ಷಣ ಕುಂದಾಪುರದಿಂದ ಮಂಗಳೂರಿನಲ್ಲಿ ಕಾಲೇಜು ಸೇರುವವರೆಗೂ ಸಾಗಿತು. ಸ್ವಾತಂತ್ರ್ಯ ಚಳವಳಿಗಾಗಿ ಉನ್ನತ ಶಿಕ್ಷಣಕ್ಕೆ ಶರಣು ಹೊಡೆದರು (೧೯೨೨). ಆದರೆ ಅವರ ಕಲಿಯುವ ದಾಹವೇನೂ ಇಂಗಿಹೋಗಲಿಲ್ಲ. ಲೋಕವೇ ಅವರ ಶಾಲೆಯಾಯಿತು. ಬದುಕು ಪ್ರಯೋಗ ಶಾಲೆಯ ಸಲಕರಣೆಯಾಯಿತು. ಬಗೆಬಗೆಯ ಪ್ರಯೋಗಗಳನ್ನು ಮಾಡುತ್ತ ನಡೆದರು. ತಾವೂ ಕಲಿತು ಜಗತ್ತಿಗೇ ಕಲಿಸಿದರು.

ಸಾಮಾನ್ಯನ ಕಣ್ಣಿಗೆ ಕಾರಂತರ ಜೀವನ ವಿಚಿತ್ರವಾಗಿ ಕಾಣಲೇಬೇಕು. ಏಕೆಂದರೆ ಅಲ್ಲಿ ಎಲ್ಲವೂ ತಿರುಗುಮುರುಗು. ನಮ್ಮ ಸಮಾಜದಲ್ಲಿ ಬಹುಮಂದಿ ಸಾಧ್ಯವಾದಷ್ಟು ತಿಂದುಂಡು ಆರಾಮವಾಗಿರುವುದರಲ್ಲೇ ಬಧುಕಿನ ಸಾರ್ಥಕ್ಯ ಕಾಣುತ್ತಾರಾದರೆ ಕಾರಂತರು ಕಡಿಮೆ ಉಂಡು ಹೆಚ್ಚು ದುಡಿಯುತ್ತ ಕಾಲದೊಡನೆ ಸ್ಪರ್ಧೆಗಿಳಿದವರು. ಇದೇ ಕೆಲಸವೆಂದು ಒಂದು ಉದ್ಯೋಗಕ್ಕೋ, ಒಂದು ಹುದ್ದೆಗೋ, ಗದ್ದುಗೆಗೋ ಅಂಟಿಕೊಂಡವರಲ್ಲ. ಕಾರಂತರಿಗೆ ಯಾವ ಉದ್ಯೋಗವೆಂದರೆ ಹೇಳುವುದಕ್ಕಿಲ್ಲ. ಹಾಗೆ ನೌಕರಿ ಹಿಡಿಯುವುದೊಂದು ಅಸಾಧ್ಯದ ಕೆಲಸವಾಗಿರಲಿಲ್ಲ. ಅಂಥ ಜಾಯಮಾನವೇ ಅವರದಾಗಿರಲಿಲ್ಲ. ಸ್ವಂತ ದುಡಿಮೆ ಸ್ವಾವಲಂಬನೆ, ಸ್ವಾತಂತ್ರ್ಯ ಅವರ ಬದುಕಿನ ಮೂಲ ಮಂತ್ರಗಳಾಗಿದ್ದವು. ಹಾಗಾಗಿ ಅವರ ಕಾರ್ಯಕ್ಷೇತ್ರಗಳು ಒಂದೆರಡಲ್ಲ. ಕುಂದಾಪುರ, ಪುತ್ತೂರು, ಸಾಲಿಗ್ರಾಮ ಹೀಗೆ ವಾಸಸ್ಥಳಗಳೂ ಬೇರೆ ಬೇರೆ.

ಗಾಂಧೀಜಿಯ ಪ್ರಭಾವಕ್ಕೊಳಗಾಗಿ, ಒಂದಷ್ಟು ಕಾಲ ಸ್ವಾತಂತ್ರ್ಯ ಹೋರಾಟದ ಸುಳಿಗೆ ಸಿಕ್ಕು ಅಲೆದಾಡಿದರು. ಪತ್ರಿಕೋದ್ಯೋಗಿಯಾದರು. ವೇಶ್ಯೆಯರನ್ನು ಉದ್ಧರಿಸುವ ಹುಮ್ಮಸ್ಸಿನಲ್ಲಿ ಸಮಾಜ ಸುಧಾರಕರಾದರು. ಗ್ರಾಮ ಕೈಗಾರಿಕೆ ಪ್ರಾರಂಭಿಸಿದರು. ಸಂಶೋಧಕರಾದರು, ಚಿತ್ರಕಲಾವಿದರಾದರು, ನಟರಾಗಿ, ನಾಟಕ ಕಂಪನಿ ನಡೆಸಿದರು. ಚಲನಚಿತ್ರ ನಿರ್ಮಿಸಿದರು. ಯಕ್ಷಗಾನಕ್ಕೆ ಹೊಸದಿಕ್ಕು ತೋರಿಸಿದರು. ರಾಜಕೀಯ ಪ್ರವೇಶಿಸಿದರು. ಪರಿಸರ ಉಳಿಸಲು ಕಂಕಣ ಕಟ್ಟಿದರು. ಒಂದೇ, ಎರಡೆ ? ಈ ಎಲ್ಲ ಸಂದರ್ಭಗಳಲ್ಲೂ ಖಾಯಂ ಆಗಿ ಲೇಖಕರಂತೂ ಆಗಿದ್ದರು. ಬರಹವನ್ನೇ ಆದಾಯ ಮೂಲವಾಗಿಸಿಕೊಂಡು ಬಾಳಿ ಜಯಿಸಿದ ವಿರಳ ಸಾಹಿತಿ ಕಾರಂತರು. ತಮ್ಮಲ್ಲಿದ್ದ ಎಲ್ಲ ಶಕ್ತಿಗಳನ್ನು ಒರೆಗೆ ಹಚ್ಚಿ ವಿಕಾಸ ಹೊಂದಿಸಿದ ಸಾಹಸಿ.

ಸಾಗರ ಗಾಂಭೀರ್ಯದ ಕಾರಂತರು ಕಠೋರ ಸ್ವಭಾವದವರಂತೆ ಕಾಣುತ್ತಿದ್ದರು. ಸಂಪ್ರದಾಯದ ಜಡ್ಡುಗಟ್ಟಿದ ಜಾಡಿನಲ್ಲಿ ಸಾಗಿದ್ದ ಸಮಾಜದಲ್ಲಿ ಹೊಸ ಬಗೆಯಲ್ಲಿ ಬದುಕಲು ಹೊರಟ "ಹುಚ್ಚ"ನಿಗೆ ಎದುರಾಗಬಹುದಾದ ಎಲ್ಲ ಕಷ್ಟ-ನಷ್ಟಗಳೂ, ದುಃಖ ದುಮ್ಮಾನಗಳೂ, ಅಪಕೀರ್ತಿ ಅವಮಾನಗಳೂ ಅವರಿಗೆ ಎದುರಾದವು. ಇವುಗಳಿಗೆ ಜಗ್ಗದೆ ಬಗ್ಗದೆ ನಡೆಯುವಾಗ ತುಟಿ ಬಿಗಿಹಿಡಿಯಬೇಕಾದ್ದು, ಹುಬ್ಬು ಗಂಟಿಕ್ಕಿರ

ಬೇಕಾದ್ದು ಕಾರಂತರಿಗೆ ಅನಿವಾರ್ಯವೇ ಆಗಿದ್ದಿರಬಹುದು. ಅವರ ನುಡಿ ನೈಷ್ಠುರ್ಯದ ಹಿಂದೆ ಅತ್ಯಂತ ಮೆದುವಾದ ಅಂತಃಕರಣವೂ, ನಗೆಗಾರ ಪ್ರವೃತ್ತಿಯೂ ಇತ್ತೆಂಬುದು ಅವರನ್ನು ಹತ್ತಿರದಿಂದ ಬಲ್ಲವರಿಗೆ ಗೊತ್ತು. 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂಬ ಸೂಕ್ತಿ ಅವರಿಗೆ ಸರಿಯಾಗಿ ಹೊಂದುವಂಥದು.

ಕಾರಂತರು ಏನನ್ನು ನಂಬಿದರೊ, ನುಡಿದರೊ ಅದನ್ನೇ ಬದುಕಿದವರು. ಅವರ ವ್ಯಕ್ತಿತ್ವದಲ್ಲಿ ಎದ್ದುಕಾಣುವ ಗುಣವೆಂದರೆ ವೈಚಾರಿಕತೆ, ವೈಜ್ಞಾನಿಕ ದೃಷ್ಟಿ, ಅಂಧಶ್ರದ್ಧೆ ಅಜ್ಞಾನಗಳನ್ನು ಎಂದೂ ಒಪ್ಪಿದವರಲ್ಲ. ಕ್ರಾಂತಿಕಾರಿಯಾಗಿದ್ದ ಅಣ್ಣ ಲಕ್ಷ್ಮೀನಾರಾಯಣ ಕಾರಂತರು ಶಿವರಾಮ ಕಾರಂತರ ಬಂಡೇಳುವ ಸ್ವಭಾವಕ್ಕೆ ಪ್ರೇರಕರಾಗಿದ್ದಿರಬಹುದು. ದೈವ ಧರ್ಮಗಳನ್ನು ಅವರು ಆರಾಧಿಸಲಿಲ್ಲ. ದೇವರು ಮಾನವನ ಸೃಷ್ಟಿ ಎಂದರು. ಬುದ್ಧ ಹೇಳಿದ ಮಾನವ ಧರ್ಮವೇ ಶ್ರೇಷ್ಠವೆಂದರು. ಈ ಬದುಕೇ ಸತ್ಯವೆಂದರು. ಅದೇ ಬೆಳಕೆಂದರು. "ನನಗೆ ಇಹ ಮುಖ್ಯ, ಇಹದ ಅನುಭವ ಮುಖ್ಯ. ಅದನ್ನು ಕಡೆಗಣಿಸುವ ಯಾವ ವಿಚಾರ ಸರಣಿಯೂ ಮನುಷ್ಯ ಕುಲದ ಹಿತಕ್ಕೆ ನೆರವಾಗಲಾರದೆನಿಸುತ್ತದೆ. ನನಗೆ ಪರದ ಹಿಂದು ಮುಂದುಗಳೆರಡೂ ತಿಳಿದಿಲ್ಲ" ಎಂದರು. ಕಾರಂತರ ಈ ನಿಲುವನ್ನು ಕುವೆಂಪು, ಪುತಿನ, ಬೇಂದ್ರೆ, ಮುಂತಾದ ನವೋದಯ ಕಾಲದ ಇತರ ಸಾಹಿತಿಗಳ ವೈಚಾರಿಕತೆಯೊಂದಿಗೆ ಹೋಲಿಸಿ ನೋಡಬೇಕು. ಅವರೆಲ್ಲ ಅದ್ವೈತವೊ, ವಿಶಿಷ್ಟಾದ್ವೈತವೋ ಯಾವುದೋ ಒಂದು ತತ್ವಕ್ಕೆ ಅಂಟಿಕೊಂಡು ಶುದ್ಧ ಅಧ್ಯಾತ್ಮದ ಉದ್ದೇಶ ಉಳ್ಳವ

ದ್ದರು. ಕಾರಂತರದು ಇಂಥ ಯಾ

ತಳಹದಿಯನ್ನು ಒಲ್ಲದ ಶುದ್ಧ ವಿಚಾರ

ವಾಸ್ತವವಾದ. ಶಿಲ್ಪಕಲೆಯ ಅಸ

ಅಧ್ಯಯನಕ್ಕಲ್ಲದೆ ಯಾವ ಯಾತ್ರಾ

ದೇವಾಲಯಗಳನ್ನು ಸಂದರ್ಶಿಸದ

ನಾಸ್ತಿಕತೆಯನ್ನು ಗಮನಿಸಬೇ

ಯಾವುದೇ ಧರ್ಮದ ಲಾಂಛನಗಳಾ

ಆಚಾರಗಳಾಗಲೀ ಅವರಿಗೆ ಬೇಕಾಗ

ಹಾಗೆಂದು ಧರ್ಮನಿಷ್ಠರನ್ನು

ಆಚಾರವಂತರನ್ನು ಅವರೆಂದೂ ಅವಹ

ಮಾಡಿದವರಲ್ಲ. ಅವರನ್ನು ಗೌರವಿಸುತ್ತ

ದಷ್ಟೇ ಅಲ್ಲದೆ ಅವರ ಕಾರ್ಯಗಳಿಗೆ ನೆರ

ತ್ತಿದ್ದುದೂ ಉಂಟು.

ಮನುಷ್ಯ ಪ್ರಗತಿಗೆ ಮಾರಕ

ವ್ಯವಸ್ಥೆಯ ಎಲ್ಲ ಅನಿಷ್ಟಗಳ

ಕಾರಂತರಿಗೆ ಆಕ್ರೋಶವಿ

ಹದಿಹರೆಯದಲ್ಲೇ ಅಸ್ಪೃಶ್ಯರ ಬಗೆಗೆ

ಅನುಕಂಪ ತಾಳಿದ್ದರು. ನಲವತ್ತರ

ದಲ್ಲೇ (೧೯೩೬) ತನ್ನದಕ್ಕಿಂತ

ಕುಲದ ಹೆಣ್ಣೊಬ್ಬಳೊಂದಿಗೆ ವಿ

ಮಾಡಿಕೊಂಡರು. ವೇಶ್ಯೆಯರಿಗೆ

ಸೌಲಭ್ಯ ಒದಗಿಸಿದರು. ಯಂತ್ರ

ದಿಂದ ಮಾನವ ಕುಲಕ್ಕೆ ಬರಬಹ

ಅಪಾಯಗಳನ್ನು ಮನಗಂಡು ಸ

ರಾಕ್ಷಸೀ, ವೈಜ್ಞಾನಿಕ ಯೋಜನೆ

ವಿರೋಧಿಸಿದರು. ೯೦ರ ಇಳಿ ಹರೆ

ಇಂಥದೊಂದು ಸಾರ್ವಜನಿಕ ಸಮ

ನ್ಯಾಯಾಲಯದ ಮೆಟ್ಟಿಲು ಹತ್ತಿದ

ಜೀವನ ಶ್ರದ್ಧೆಯನ್ನು ಗಮನಿಸ

ಹಿಂದ ನಡುವೆ ಹರೆಯಕ್ಕೆ ಲೋಕದ

ನಮಗೇಕೆಂದು ಗೊಣಗುವ ಸಾವ

ು ಸಾಧ್ಯವಾದೀತೆ? ತುರ್ತು ಪರಿಸ್ಥಿತಿ ನ್ನು ಹೇರಿ ಪ್ರಜಾಪ್ರಭುತ್ವ ತತ್ವಕ್ಕೆ ತಂದಾಗ ಸರಕಾರಕ್ಕೆ ತಮಗಿತ್ತ ಭೂಷಿತ ಪ್ರಶಸ್ತಿಯನ್ನು ಹಿಂದಿರುಗಿಸಿದ ಟ್ಟ ಸಾಧಾರಣದ್ದೇ? ಇಂಥ ನಡೆ ದಾಗಿಯೇ ಕಾರಂತರು ಅಸಾಧ್ಯ- ನಿಸುತ್ತಾರೆ. ಒಟ್ಟಾರೆ ಕಾರಂತರು ು ವಾಸ್ತವವಾದಿ, ಪ್ರಖರ ವಿಚಾರವಾದಿ. ಗಿ ಅವರು ವಿವಾದಾತೀತರಲ್ಲ. ಭೂ ಾವಣೆ, ವಿಮಾನಲಾತಿಯಂಥ ಪ್ರಗತಿಪರ ಡಿಗಳು ರಾಮಜನ್ಮಭೂಮಿಯಂತ ಯ ಗೊಂದಲಗಳು, ಭಾಷಾನೀತಿ, ಣ ವಿಚಾರಗಳಿಗೆ ಸಂಬಂಧಿಸಿದಂತೆ ರು ತಾಳಿದ ನಿಲುವುಗಳು ವಿಚಾರ ತರೇ ಅವರನ್ನು ಸಂಶಯದಿಂದ ನೋಡು ತ್ತೆ ಮಾಡಿದ್ದವು. ಅಚಲರಾಗದೇ ಅವು ನ್ನು ಕಾರಂತರು ಸಮರ್ಥಿಸಿಕೊಂಡೂ ರು.

ಕಾರಂತರ ಹೋರಾಟದ ಬದುಕು ಕಳೆದ ನ ಕೊನೆಯಲ್ಲಿ ಅಂತ್ಯಗೊಂಡದ್ದೂ ಒಂದು ಆಕಸ್ಮಿಕವೆಂಬಂತೆ, ಪರರಿಗೆ ತಾನೊಂದು ಶಾರೀರಿಕ ಹೊರೆಯಾಗದಂತೆ ಬದುಕಬೇಕೆಂಬ ಇಚ್ಛೆ ನನಗಿದೆ" ಎಂದಿದ್ದ ಕಾರಂತರು ತಾಂಡವ ಮುನಿಯ ಮಾದರಿ ಯನ್ನು ಅನುಸರಿಸಲೇ ಇಲ್ಲ. ಎಂದಿನ ನಿರಂತರ ಚಟುವಟಿಕೆಯಲ್ಲೇ ಇದ್ದ ಜೀವ- ತಿರುಗಾಡುತ್ತ, ಭಾಷಣ ಮಾಡುತ್ತ- ಇದ್ದಕ್ಕಿದ್ದಂತೆ ನಿಶ್ಚಲವಾಯಿತು. ನಾಲ್ಕೈದು ದಿನ ಅದೇ ಸ್ಥಿತಿಯಲ್ಲಿದ್ದ ಚೇತನ ಡಿಸೆಂಬರ್ ಒಂಭತ್ತರಂದು ಸ್ತಬ್ಧವಾಯಿತು. ಸಾಯುವ ವರೆಗೂ ತನ್ನಿಚ್ಛೆಯಂತೆಯೇ ಬದುಕಿದ ಕಾರಂತರು ಸತ್ತಮೇಲೂ ಏನಾಗಬೇಕೆಂಬ ತಮ್ಮಿಚ್ಛೆಯನ್ನು ಬರೆದಿಟ್ಟೇ ಹೋದರು. ಯಾವುದೇ ಬಗೆಯ ಧಾರ್ಮಿಕ ವಿಧಿವಿಧಾ- ನದ ಸಂಸ್ಕಾರಗಳು ಬೇಕಿಲ್ಲವೆಂಬ ಅವರ ಉಯಿಲು ಅವರ ವಿಚಾರವಾದಿ ನಿಲುವಿನ ಘಟ್ಟಿತನಕ್ಕೆ ಸಾಕ್ಷಿಯಾಯಿತು. ಲೋಕ ಕಣ್ಣೀರಿಟ್ಟು ಗೌರವಿಸಿತು. ಸಾವಿನಲ್ಲೂ ಕಾರಂತರು ಅನ್ಯರಂತಲ್ಲವೆನಿಸಿಕೊಂಡರು.

* * * * *

ಕಾರಂತರು ತಾವು ಬದುಕಿದ್ದನ್ನೇ ಬರೆ ು. ಬರೆದದ್ದೂ ಬೆಟ್ಟದಷ್ಟು. ಶ್ರದ್ಧಾ- ತವಾಚಕನೊಬ್ಬನಿಗೆ ಓದು ಮುಗಿಸು ಕ್ಕೆ ವರ್ಷಗಳೇ ಬೇಕಾಗುವಷ್ಟು ದೊಡ್ಡ ಿ. ಲೆಕ್ಕಾಚಾರ ಹಾಕುವುದಾದರೆ ಹತ್ತಿರ ರ ಐವತ್ತು ಸಾವಿರ ಅಚ್ಚಾದ ಪುಟ ು. ಅಲ್ಲದೆ ಒಂಭೈನೂರು ಬಿಡಿ ಬರಹ ು. ಸಾವಿರಾರು ಭಾಷಣಗಳು. ಇಷ್ಟು ಗೆ ಬರೆದರು, ಯಾವಾಗ ಬರೆಸಿದರು? ಾಳುರಿಂದೀಚೆ ಹೇಳಿ ಬರೆಸುತ್ತಿದ್ದ ತೆ-ನಂಬಲೇಬೇಕಾಗಿದೆ.

ಬದುಕಿನಂತೆ ಅವರ ಬರಹವೂ ಬಹು ಮುಖಿ. ಮನುಷ್ಯನ ಒಟ್ಟೂ ಜ್ಞಾನವಿಕಾ- ಸಕ್ಕೆ ಬೇಕಾದ ಪುಸ್ತಕಗಳ ಕೊರತೆ ಕನ್ನಡ- ಕ್ಕಿದ್ದದ್ದನ್ನು ಬಲ್ಲವರಾಗಿದ್ದ ಕಾರಂತರು ತಾವೊಬ್ಬರೇ ಕೊರತೆಯನ್ನು ತುಂಬಸುವಂತೆ ಎಲ್ಲ ವಿಚಾರಗಳನ್ನು ಕುರಿತು ಕೃತಿ ರಚಿಸಿ ದರು. ವಿಜ್ಞಾನ ಪ್ರಪಂಚ, ಕಲಾಪ್ರಪಂಚ, ಬಾಲಪ್ರಪಂಚದಂಥ ವಿಶ್ವಕೋಶಗಳನ್ನು ಭಾಷಾವಿಷಯಕ ಶಬ್ದಕೋಶಗಳನ್ನು ಸಿದ್ಧ ಪಡಿಸಿದರು. ಇತಿಹಾಸ, ಸಮಾಜಶಾಸ್ತ್ರ

ವ್ಯವಹಾರ ಎಲ್ಲವನ್ನೂ ಪರಿಚಯಿಸಿದರು. ಒಂದು ವಿಶ್ವವಿದ್ಯಾನಿಲಯ ಮಾಡಬಹುದಾದ ಕೆಲಸಗಳನ್ನು ವ್ಯಕ್ತಿಗತವಾಗಿ ಸಾಧಿಸಿದರು. ಹಲವು ಸಂಸ್ಥೆಗಳಿಗಾಗಿಯೂ ತಮ್ಮ ಶ್ರಮದ ಧಾರೆಯೆರೆದರು.

ಸೃಜನಶೀಲ ಸಾಹಿತಿಯಾಗಿ ಕಾದಂಬರಿಕಾರರೆಂದು ಖ್ಯಾತರಾಗಿರುವ ಕಾರಂತರು ಮೊದಲು ಬರೆದದ್ದು ಕವಿತೆಗಳನ್ನು ಎಂದರೆ ನಂಬುವುದು ಕಷ್ಟ. ರಾಷ್ಟ್ರಗೀತ ಸುಧಾಕರ ನೀಳ್ಗವನಗಳು ಎಂಬ ಕವನ ಸಂಕಲನಗಳು ಅವರ ಆರಂಭದ ಕೃತಿಗಳು. ರಂಗಭೂಮಿ ಎಳವೆಯಿಂದಲೂ ಕಾರಂತರವನ್ನು ಬಹುವಾಗಿ ಸೆಳೆದ ಕ್ಷೇತ್ರ. ನಟನೆಯೊಂದಿಗೆ ನಾಟಕರಚನಾಕಾರ್ಯದಲ್ಲೂ ಆಗಲೇ ತೊಡಗಿಕೊಂಡಿದ್ದರು. ಕಾರಂತರು ಶೇಕ್ಸ್‌ಪಿಯರ್‌ನ ಜೂಲಿಯಸ್ ಸೀಸರ್, ಹ್ಯಾಮ್ಲೆಟ್ ನಾಟಕಗಳ ಅನುವಾದಗಳೂ ಸೇರಿದಂತೆ ಸುಮಾರು ೧೦೦ಕ್ಕೂ ಮಿಕ್ಕು (ಕೆಲವು ಅಪ್ರಕಟಿತ) ನಾಟಕಗಳನ್ನು ಬರೆದಿದ್ದಾರೆಂಬುದೂ ಅಚ್ಚರಿಪಡಬೇಕಾದ ಸಂಗತಿಯೇ. ಇವು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಗದ್ಯನಾಟಕ, ಗೀತನಾಟಕ, ನೃತ್ಯರೂಪಕ ರೇಡಿಯೋ ನಾಟಕ, ಹಾಸ್ಯ, ದುರಂತ, ಹೀಗೆ ವೈವಿಧ್ಯಪೂರ್ಣ ರಚನೆಗಳಾಗಿವೆ. ಹಲವು ನಾಟಕಗಳು ರಂಗದ ಮೇಲೆ ಯಶಸ್ವಿಯೂ ಆಗಿವೆ. ಅದಾಗ್ಯೂ ಯಾಕೋ ಕಾರಂತರು ನಾಟಕಕಾರರಾಗಿ ಸಾಹಿತ್ಯಾಭಿಮಾನಿಗಳ ಮನಸ್ಸಿನಲ್ಲಿ ನೆಲೆಗೊಳ್ಳಲಿಲ್ಲ.

ಸುಮಾರು ಮೂವತ್ತು ಸಣ್ಣ ಕತೆಗಳು, ಕಾರಂತರ ಲೇಖನಿಯಿಂದ ಹೊರಹೊಮ್ಮಿವೆ. 'ವಸಂತ' ವಿಚಾರವಾಣಿ ಪತ್ರಿಕೆಗಳನ್ನು ನಡೆಸುತ್ತಿದ್ದ ಕಾಲಕ್ಕೆ ಜನರಿಗಾಗಿ ಬರೆಯುತ್ತಿದ್ದ ಕತೆಗಳಿವಾದರೂ, ಕೇವಲ ಜನರಂಜನೆ ಇವುಗಳ ಉದ್ದೇಶವಾಗಿರಲಿಲ್ಲ. ಅಂದಿನ ಸಮಾಜವನ್ನೇ, ಅವುಗಳಲ್ಲಿ ತೆರೆದು ತೋರಿದ್ದಾರೆ. ಬಡವರ, ಸ್ತ್ರೀಯರ, ಶೋಷಣೆ, ಜಾತೀಯತೆ, ಮೌಢ್ಯ ಮುಂತಾದ ಅನಿಷ್ಟ ಪದ್ಧತಿಗಳ ಖಂಡನೆ, ಶಿಕ್ಷಣ ಪ್ರಸಾರಣೆ, ಸಮಾಜಸುಧಾರಣೆ, ಸಂಸ್ಕೃತಿ ಸುಧಾರಣೆ ಮುಂತಾದ ನವೋದಯ ಕಾಲದ ಆದರ್ಶಗಳ ಪ್ರತಿಪಾದನೆ ಅವುಗಳಲ್ಲಿದೆ. ಕಥನ ಕೌಶಲದ ದೃಷ್ಟಿಯಿಂದ ಅವರು ಶ್ರೇಷ್ಠವೆನಿಸಲಿಲ್ಲ. ಕನ್ನಡ ಸಣ್ಣಕತೆಗಳ ಶೈಶವಾವಸ್ಥೆಯ ಪ್ರತಿನಿಧಿಗಳಂತೆ ಅವರ ಕತೆಗಳಿವೆ—ಎಂದರೆ ಅಪಚಾರವಾಗಲಾರದು.

ಕಾರಂತರ ಜೀವನದಲ್ಲಿ ಎದ್ದುಕಾಣುವ ಹವ್ಯಾಸವೆಂದರೆ ಪ್ರವಾಸ. ದೇಶವಿದೇಶಗಳಲ್ಲಿ ಹಲವುಬಾರಿ ಹಲವು ಉದ್ದೇಶಗಳಿಗಾಗಿ ಅವರು ಸಂಚಾರಮಾಡಿದ್ದಾರೆ. ಆಗೆಲ್ಲ ಅವರ ದೃಷ್ಟಿ ಶಿಲ್ಪ, ಚಿತ್ರ, ಸಂಗೀತ, ರಂಗಭೂಮಿ, ಸಾಹಿತ್ಯ ಮುಂತಾದ ಕಲೆಗಳ ಕಡೆಗೇ ನೆಟ್ಟದ್ದು ಹೆಚ್ಚು. ಉಳಿದಂತೆ ವಿವಿಧ ಜನಾಂಗಗಳ ಜನಜೀವನ, ಸಂಸ್ಕೃತಿಗಳ ಗಂಭೀರ ಅಧ್ಯಯನ ನಡೆಸಿದರು. ಈ ಎಲ್ಲ ಅನುಭವಗಳ ಸಾರ ಅವರ ಅಪೂರ್ವ ಪಶ್ಚಿಮ, ಅಬೂವಿನಿಂದ ಬರಾಮಕ್ಕೆ ಮುಂತಾದ ಪ್ರವಾಸ ಕಥನಗಳಲ್ಲಿ ದೊರೆಯುತ್ತದೆ. ದೇಶೀಯ ವ್ಯಕ್ತಿಗಳ ಸೊಗಸಾದ ಚಿತ್ರಣ ಹಳ್ಳಿಯ ಹತ್ತು ಸಮಸ್ತರು ಮೈಲಿಕಲ್ಲಿನೊಡನೆ ಮಾತುಕತೆ ಮುಂತಾದ ಪ್ರಬಂಧಗಳಲ್ಲಿದೆ. ಕಾರಂತಜ್ಜನ ಮಕ್ಕಳ ಸಾಹಿತ್ಯದ್ದು ಮತ್ತೊಂದೇ ಪ್ರಪಂಚ. ಇವಲ್ಲದೆ ಆತ್ಮಕಥೆಗಳು, ಅನುವಾದಗಳು,

ಸಂಪಾದನೆಗಳು, ಇಂಗ್ಲಿಷ್ ಕೃತಿಗಳು ಹೀಗೇ ಕಾರಂತರ ಸಾಹಿತ್ಯ ಸೃಷ್ಟಿ ಎಷ್ಟು ಅಗಾಧವೆಂದರೆ ಬರೆದಷ್ಟನ್ನು ಹೆಸರಿಸಿ ಮುಗಿಸುವುದೂ ಕಷ್ಟದ ಕೆಲಸ–ಶ್ರೀ ಶೇಖರ ಇಡ್ಯ ಶ್ರೀಮತಿ ಮಾಲಿನಿ ಮಲ್ಯ ಈಚೆಗೆ ಅವರ ಕೃತಿಗಳನ್ನು ಪರಿಪೂರ್ಣವಾಗಿ ಪಟ್ಟಿ ಮಾಡಿ ಸಂಪಾದನೆಮಾಡಿ ಉಪಕರಿಸಿದ್ದಾರೆ.

ಇನ್ನು ಕಾರಂತರ ಪ್ರತಿಭಾ ಕಾರಂಜಿಯ ಮುಖ್ಯ ಧಾರೆಯಾದ ಕಾದಂಬರಿಗಳ ಕಡೆಗೆ ಬರೋಣ. ಕನ್ನಡವಷ್ಟೇ ಏಕೆ ಭಾರತೀಯ ಸಾಹಿತ್ಯದ ಯಾವತ್ತೂ ಮುಖ್ಯ ಕಾದಂಬರಿಕಾರರಲ್ಲಿ ಒಬ್ಬರಾದ ಕಾರಂತರ ಒಟ್ಟು ನಲವತ್ತೈದು ಕಾದಂಬರಿಗಳು ಇಲ್ಲಿಯವರೆಗೆ ಪ್ರಕಟವಾಗಿವೆ. ಇವುಗಳಲ್ಲಿಯೂ ಮೊದಲಿನವು ಪತ್ತೇದಾರಿಗಳೆಂದರೆ ವಿಸ್ಮಯವಾಗುತ್ತದೆ. (ವಿಚಿತ್ರಕೂಟ ಮತ್ತು ಭೂತ)

ಕಾರಂತರ ಕಾದಂಬರಿ ಬರವಣಿಗೆಯ ಉದ್ದೇಶ ಬದುಕನ್ನು ಬಲ್ಲಂತೆ ಚಿತ್ರಿಸುತ್ತ ಜೀವನವನ್ನು ಜಾಲಾಡಿ ಸತ್ಯ ಶೋಧಿಸುವುದೇ ಹೊರತು ಮನರಂಜನೆಯಲ್ಲ. ಇಲ್ಲದ ಕಲ್ಪನಾಲೋಕವನ್ನು ಅವರು ಕಟ್ಟುವುದೇ ಇಲ್ಲ. ಹಾಗಾಗಿ ಅವರ ಎಲ್ಲ ಕೃತಿಗಳಲ್ಲಿ ಕಂಡುಂಡ ಅನುಭವಗಳೇ ಸಾಕಾರಗೊಳ್ಳುತ್ತವೆ. ಅವರ ಮನದ ಭಾವಗಳೇ ಅಭಿವ್ಯಕ್ತವಾಗುತ್ತವೆ.

ಪ್ರಸಿದ್ಧಕೃತಿ ಮರಳಿಮಣ್ಣಿಗೆ ಅವರದೇ ಕುಟುಂಬದ ಮೂರು ತಲೆಮಾರಿನ ಜೀವಿತದ ಪ್ರತಿಬಿಂಬ. ಚೋಮನದುಡಿ, ಕುಡಿಯರ ಕೂಸುಗಳು ಗ್ರಾಮ ಸಂಚಾರ ಸಂದರ್ಭಗಳಲ್ಲಿ ತಾವು ಕಂಡ ಹರಿಜನ ಗಿರಿಜನರ ಬದುಕಿನ ಚಿತ್ರಣಗಳು. ಅನುಕಂಪದೊಂದಿಗೆ ಅಸ್ಪೃಶ್ಯರು, ಸ್ವತಂತ್ರರೂ, ಸ್ವಾವಲಂಬಿಗಳೂ ಆಗಿ ಬಾಳುವಂತಾಗಬೇಕೆಂಬ ಪ್ರಗತಿಪರ ಕಾಳಜಿ ಇವುಗಳಲ್ಲಿ ಕಾಣುತ್ತದೆ. ಸ್ವಪ್ನದ ಹೊಳೆ ಕಣ್ಣಾರೆ ಕಂಡ ಮುಗ್ಧ ಶಿಕ್ಷಕಿಯೊಬ್ಬಳ ಆದರ್ಶ ಅದ್ಯಾಪಕನೊಬ್ಬನ ಜೀವನವನ್ನೊಳಗೊಂಡಿದೆ. ಬೆಟ್ಟದ ಜೀವ ಕಾರಂತರ ನಿಸರ್ಗ ಪ್ರೇಮದ ದ್ಯೋತಕ— ಕುತೂಹಲದ ಸಂಗತಿ ಎಂದರೆ ಕಡಲತೀರದ ಕಾರಂತರಿಗೆ ಕಡಲಿಗಿಂತ ಕಾಡಿನ ವ್ಯಾಮೋಹ ಹೆಚ್ಚಾಗಿರುವುದು. ಮರಳಿಮಣ್ಣಿಗೆಯಲ್ಲಿನ ವರ್ಣನೆಗಳನ್ನು ಬಿಟ್ಟರೆ ಅವರ ಇತರ ಕೃತಿಗಳಲ್ಲಿ ಕಡಲು ಪ್ರತ್ಯಕ್ಷವಾಗುವುದಿಲ್ಲವೆಂದೇ ಹೇಳಬಹುದು. ಆದರೆ ಬೆಟ್ಟದಜೀವದಲ್ಲಲ್ಲದೆ ಇನ್ನಿತರ ಅನೇಕ ಕೃತಿಗಳಲ್ಲಿ ಗಿಡ ಮರ ಗುಡ್ಡ ಹೂವು ಪ್ರಾಣಿಪಕ್ಷಿಗಳ ಕುರಿತು ತನ್ಮಯತೆ ಕಾಣುತ್ತದೆ—ಮೈ ಮನಗಳ ಸುಳಿಯಲ್ಲಿ ಕಾರಂತರು ನಿಕಟರಾಗಿ ನೋಡಿದ ವೇಶ್ಯೆಯರ ಜೀವನವನ್ನು ಬಿಂಬಿಸುತ್ತದೆ. ಅವರಿಗೆ ಮೈಯಷ್ಟೆ ಇರುವುದಲ್ಲವೆಂದು ಸಾರುತ್ತ ಸ್ತ್ರೀ ಪುರುಷ ಸಂಬಂಧಗಳ ಸೂಕ್ಷ್ಮ ಎಳೆಗಳನ್ನು ಬಿಡಿಸುತ್ತ ಸಾಗುತ್ತದೆ. ಗೊಂಡಾರಣ್ಯ ಮತ್ತು ಈಚಿನ ಕಾದಂಬರಿಗಳಾದ ನಾವು ಕಟ್ಟಿದ ಸ್ವರ್ಗ, ಕಣ್ಣಿದ್ದೂ ಕಾಣರು, ನಷ್ಟ ದಿಗ್ಗಜರು ಮುಂತಾದವುಗಳಲ್ಲಿ ಸದ್ಯದ ಮೌಲ್ಯರಹಿತ ರಾಜಕೀಯ, ಧಾರ್ಮಿಕ, ಸಾಮಾಜಿಕ ವ್ಯವಹಾರಗಳ ಕಟು ವಿಡಂಬನೆ ಇದೆ. ಕೊನೆಯ ಕೃತಿಗಳಲ್ಲೊಂದಾದ ಅದೇ ಊರು ಅದೇ ಮರದಲ್ಲಿ ಪರಿಸರ ರಕ್ಷಣೆಯ ಆಸ್ಥೆ ಸಾಹಿತ್ಯರೂಪ ಪಡೆದಿದೆ. ಹೀಗೆ ಕಾರಂತರ ಬದುಕಿನೊಂದಿಗೇ ಅವರ ಸಾಹಿತ್ಯವೂ ಬೆಳೆಯುತ್ತದೆ. ಕಾಲಕ್ರಮದಲ್ಲಿ ವ್ಯಕ್ತಿ ಮತ್ತು

ಸಮಾಜದಲ್ಲಾಗುವ ಪರಿವರ್ತನೆಗಳನ್ನನು ಸರಿಸಿ ಕಾದಂಬರಿಗಳ ವಸ್ತುಗಳಲ್ಲೂ ಬದಲಾವಣೆಯಾಗುತ್ತದೆ. ವಸ್ತುವಿನ, ಮರುಕಳಿಕೆ ಎಂಬುದು ಕಾರಂತರಲಿಲ್ಲವೆಂದೇ ಹೇಳಬಹುದು. ಹೀಗಾಗಿ ಇಡೀ ಶತಮಾನದ ಭಾರತೀಯ ಬದುಕನ್ನು ಕಾರಂತರು ಸಾಹಿತ್ಯ ರೂಪದಲ್ಲಿ ಸೃಷ್ಟಿಸಿ ಕೊಟ್ಟಿದ್ದಾರೆಂದರೆ ತಪ್ಪಾಗುವುದಿಲ್ಲ.

ವೈಚಾರಿಕ ಪ್ರಜ್ಞೆ ಕಾರಂತರ ವಿಶಿಷ್ಟ ಗುಣವಷ್ಟೆ. ಈ ವಿಚಾರವಂತಿಕೆ, ಮೌಢ್ಯದ ವಿರುದ್ಧದ ಅಸಮಾಧಾನ ದೇವದೂತರುವಿನಿಂದ ಹಿಡಿದು ಅನೇಕ ಕೃತಿಗಳಲ್ಲಿ ಸನ್ನಿವೇಶಗಳಲ್ಲಿ ಕಾಣಿಸುತ್ತದೆ. ಲೈಂಗಿಕ ವಿಚಾರ ಅವರನ್ನು ಬಹುವಾಗಿ ಕಾಡಿದ ಸಂಗತಿ. ಮೂಕಜ್ಜಿಯ ಕನಸು ಇದರ ನಿಗೂಢತೆಯನ್ನು ಶೋಧಿಸುತ್ತದೆ. ಲೈಂಗಿಕತೆಯ ಹಲವು ಆಯಾಮಗಳು ಕೀಳು ಭಾವನೆಗೆ ಎಡೆಯಿಲ್ಲದಂತೆ ಅವರ ಕಾದಂಬರಿಗಳ ಅನೇಕ ಸಂದರ್ಭಗಳಲ್ಲಿ ವ್ಯಕ್ತವಾಗಿವೆ. ಅವರಕಾದಂಬರಿಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವೇಶ್ಯೆಯರಿದ್ದಾರೆ, ವಿಟರಿದ್ದಾರೆ, ವಿವಾಹ ಬಾಹಿರ ಸಂಬಂಧಗಳಿವೆ. (ಉದಾಹರಣೆಗೆ, ಕೇವಲ ಮನುಷ್ಯರು, ಧರ್ಮರಾಯನ ಸಂಸಾರ) ಇವರಲ್ಲಿ ಅಸಹಾಯಕರು, ದುಷ್ಟರು, ಒಳ್ಳೆಯವರು ಎಲ್ಲರೂ ಇದ್ದಾರೆ. ಸಹಾನುಭೂತಿಯಿಂದ ಇಂಥ ವ್ಯಕ್ತಿಗಳನ್ನು ಕಾರಂತರು ಚಿತ್ರಿಸುತ್ತಾರೆ. ಕಾರಂತರು ಸ್ವತಃ ಮಾಡಿಕೊಂಡಿದ್ದ ಅಂತರ್‌ಜಾತೀಯ ವಿವಾಹದ ಪ್ರಸಂಗಗಳೂ ಅದರ ಫಲಶೃತಿಗಳೂ ಕಾದಂಬರಿಗಳಲ್ಲಿವೆ. ಅವರ ಪ್ರಮುಖ ಕಾಳಜಿಯಾದ ಕಲೆ, ಚೋಮನದುಡಿ ಮೆಟ್ಟಿನ ಜನಪದ ಕಲೆಯಿಂದ ಹಿಡಿದು ಚಿತ್ರಕಾರರು, ಸಂಗೀತಗಾರರು, ನಟರು ಹೀಗೆ ಬೇರೆ ಬೇರೆ ಕೃತಿಗಳ ವರ್ಣನೆಗಳಲ್ಲಿ ಹಾಸುಹೊಕ್ಕಾಗಿದೆ. ಹೀಗೆ ಅವರ ಕೃತಿಗಳ ಹಿಂದೆ ಅವರ ಭಾವನೆಗಳಿವೆ. ಅವರೇ ಇದ್ದಾರೆ; ಇದಕ್ಕೆ ದೊಡ್ಡ ಪುರಾವೆಯಾಗಿ ಸ್ವತಃ ಕಾರಂತರೇ ಪಾತ್ರವಾಗಿ ಬಂದಿದ್ದು, ನಿರೂಪಕ ಮತ್ತಿತರ ಪಾತ್ರಗಳ ಮರೆಯಲ್ಲಿ ನಿಂತಿದ್ದು ಬಹಳಷ್ಟು ಕಥೆ ಗೋಚರಿಸುತ್ತದೆ. ಒಂಟಿದನಿಯ ಜಗನ್ನಾಥರಾಯನಲ್ಲಿ ಆದರ್ಶ ಪತ್ರಕರ್ತ ಕಾರಂತ, ಅದೇ ಊರು ಅದೇ ಮರ, ಗೋಪಾಲಯ್ಯನಲ್ಲಿ ಗಾಂಧಿವಾದಿ ಕಾರಂತ, ನಾವು ಕಟ್ಟಿದ ಸ್ವರ್ಗದ ದೇವೇಂದ್ರಪ್ಪನಲ್ಲಿ ಸದ್ಯದ ಸ್ಥಿತಿಗಾಗಿ ಮರುಗುವ ಕಾರಂತ— ಹಲವು ಸಂದರ್ಭಗಳಲ್ಲಿ ಕಾರಂತರು ನಾನು ಈ ದೇಶದಲ್ಲಿ ಏಕೆ ಹುಟ್ಟಿದೆ ಎಂದು ಬಹಿರಂಗವಾಗಿಯೇ ಮರುಗಿದ್ದಾರೆ—ಅಳಿದಮೇಲೆಯಲ್ಲಿನ ವಿಚಾರವಾದಿಯಾಗಿಯೂ ಆಚಾರವಂತರಿಗೆ ನೆರವಾಗುವ ನಿರೂಪಕ ಕಾರಂತ —ಹೀಗೇ ಒಟ್ಟನಲ್ಲಿ ಅನುಭವದ ಪ್ರಾಮಾಣಿಕತೆ" ಎಂಬೊಂದು ಮಾಪಕ ವಿಮರ್ಶಕರ ಬಳಿ ಇದೆಯಷ್ಟೆ. ಅದರಿಂದ ಕಾರಂತರ ಕೃತಿಗಳನ್ನು ಅಳೆಯುವುದಾದರೆ ಅವರಷ್ಟು ನೇರವಾದ ಅನುಭವಗಳನ್ನು ಅನುಸರಿಸಿಕೊಂಡು ಬರೆದ ಲೇಖಕರು ಮತ್ತೊಬ್ಬರಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು.

ಕಥೆ ಹೇಳುವುದಕ್ಕಾಗಿ ಕಸರತ್ತು ಮಾಡಿ ತಂತ್ರಗಳನ್ನು ತಂದವರು ತಾವಲ್ಲವೆಂದು ಕಾರಂತರು ಹೇಳಿದ್ದಾರಾದರೂ ದೇವದೂತರುನಂತಹ ವಿಡಂಬನಾತ್ಮಕ ಕೃತಿಯಲ್ಲಿ 'ಅಳಿದ ಮೇಲೆ, ಮೂಕಜ್ಜಿಯ ಕನಸುವಿನಂತಹ ಶ್ರೇಷ್ಠ ಕೃತಿಗಳಲ್ಲಿ ತಂತ್ರ ಕೌಶಲ್ಯ

ಎದ್ದು ಕಾಣುತ್ತದೆ. ಅದು ಅಪ್ರಜ್ಞಾ ಪೂರ್ವಕ ಎನ್ನುವುದು ಕಷ್ಟವಾಗುತ್ತದೆ. ಕಾರಂತರ ಬರವಣಿಗೆಯ ಶೈಲಿ ಹರಿತ ವಾದದ್ದು, ಗಂಭೀರವಾದದ್ದು. ಕೆಲವೊಮ್ಮೆ ತನ್ನನ್ನೂ, ಇತರರನ್ನೂ ಲೇವಡಿಮಾಡುವ ಲಘು ಧಾಟಿ ಅದಕ್ಕೆ ಬರುತ್ತದೆ. ಕಾರಂತ ರಲ್ಲಿ ಎಲ್ಲೆಲ್ಲೂ ಕಾಣುವ ಬುದ್ಧಿಪ್ರಾಧಾನ್ಯತೆ ಗದ್ಯದಲ್ಲಿಯೂ ಕಾಣುತ್ತದೆ. ಎಂದೂ ಅದು ಅತಿರಂಜಿತವಾಗುವುದಿಲ್ಲ. ಕಾರಂತರು ಬರೆದದ್ದೆಲ್ಲ ಚಿನ್ನವೆನ್ನಬೇಕಾಗಿಲ್ಲ. ಬಹು ವಾಗಿ ಬರೆದದ್ದರಿಂದ ಕೆಲವಷ್ಟು ಜಳ್ಳು ಅದರಲ್ಲಿ ಇಲ್ಲದಿಲ್ಲ. ಬಹಳಷ್ಟು ವಿಚಾರಗಳು ಮರುಕಳಿಸಿಯೂ ಇವೆ. ಅದೇನೇ ಇದ್ದರೂ ಗುಣಪ್ರಮಾಣಗಳೆರಡರಲ್ಲೂ ಕಾರಂತರ ಸಾಹಿತ್ಯ ಅನುಪಮವಾದದ್ದು. ಅದಕ್ಕಾಗಿ ಅವರಿಗೆ ಸಂದ ಮನ್ನಣೆಗಳೂ ಅಸಂಖ್ಯಾತ. ಜ್ಞಾನಪೀಠ, ಪದ್ಮವಿಭೂಷಣಗಳಿಂದ ತೊಡಗಿ ಪಂಪ ಪ್ರಶಸ್ತಿ, ಅಕಾಡೆಮಿ ಪ್ರಶಸ್ತಿ ಗಳು, ಅಧ್ಯಕ್ಷ ಪೀಠಗಳು, ಇತ್ಯಾದಿ ಸಣ್ಣ ದೊಡ್ಡ ಮರ್ಯಾದೆಗಳೆಲ್ಲ ಅವರಿಗೆ ಸಲುವಳಿ ಯಾಗಿವೆ. ಈ ಎಲ್ಲ ವಿಚಾರಗಳಲ್ಲಿಯೂ ಕನ್ನಡಕ್ಕೊಬ್ಬರೇ ಕಾರಂತ. ಅವರ ವ್ಯಕ್ತಿತ್ವ, ಸಾಹಿತ್ಯಗಳಿಗೆ ಮತ್ತೆ ಹೋಲಿಕೆ ಇಲ್ಲ. ಸಾಗರೌ ಸಾಗರೋಪಮಃ

ತೀವ್ರವೂ, ಸತ್ವಯುತವೂ, ವೈಶಿಷ್ಟ್ಯವೂ ಆದ ಸಾಹಿತ್ಯವನ್ನು ನಮಗೆ ಒದಗಿಸಿದ ಈ ಚೈತನ್ಯ ಯಾವ ಮೂಲದಿಂದ ಹೊರಟಿತೋ. ಬೆಳೆದು ನಿಂತ ಈ ಸಾಹಿತ್ಯರಾಶಿ—ಅವರು ಮೆಚ್ಚುವ ಈ ಬೆಟ್ಟಗಳ ಎತ್ತರದಷ್ಟಿದ್ದರೂ ಅವರ ಕ್ರಿಯಾಭಿವ್ಯಕ್ತಿ ಅಲ್ಲಿಗೆ ನಿಲ್ಲದು. ಕಾರಂತರು ನೃತ್ಯಪಟುಗಳೂ ಹೌದು, ಜತೆಗೆ ಅಭಿನಯಕಾರರು, ಪತ್ರಿಕೋದ್ಯಮಿ, ಮುದ್ರಕ, ಪ್ರಕಾಶಕ, ಛಾಯಾಚಿತ್ರಗ್ರಾಹಕ, ಚಿತ್ರಕಲಾವಿದ, ಮರದ ಕುಸುರಿ ಕೆಲಸ ಮಾಡುವಾತ; ಇನ್ನೂ ಹೇಳುವುದಾದರೆ ಪ್ರಾಣಿಗಳನ್ನು ಸಾಕುವ ವ್ಯವಸಾಯಿ. ಅದಕ್ಕೂ ಹಿಂದೆ ಸತ್ಯಾಗ್ರಹದ ಸ್ವಯಂಸೇವಕ, ಸಮಾಜ ಸುಧಾರಕ, ಗ್ರಾಮ ಕಾರ್ಯಕರ್ತ, ಶಿಕ್ಷಣದಲ್ಲಿ–ಪ್ರಯೋಗಶಾಲಿ—ಹೀಗೆ ಹತ್ತು ಹಲವು ಪಾತ್ರ ಗಳಲ್ಲಿ ನವೆದು, ಅವರೇ ತಮ್ಮ ಆತ್ಮವೃತ್ತದಲ್ಲಿ ಬರೆದಂತೆ ಎಲ್ಲಾ ಅವತಾರ ಗಳನ್ನೂ ತೋರಿ ಬರಹದ ಕೀಟವಾಗಿಯಷ್ಟೆ ಇರದ ಬರಹಗಾರರೆಂದರೆ ನಮ್ಮಲ್ಲಿ ಕಾರಂತರೊಬ್ಬರೆ.

—ಎಚ್. ವೈ. ಶಾರದಾ ಪ್ರಸಾದ್

ಕಾರಂತ—ಬದುಕು, ಬರೆಹ

ಶ್ರೀಪಾದ ಭಟ್
ಜಾನಪದ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

ಮನುಷ್ಯನ ಸೃಜನಶೀಲ ಶಕ್ತಿಯ ಗ್ರಹಿಕೆಗಳು ಮತ್ತು ಸಾಧನೆ–ಸಿದ್ಧಿಗಳ ಸಾಕ್ಷಾತ್ ರೂಪ ಶಿವರಾಮ ಕಾರಂತರು. ಮನುಷ್ಯನ ಆಸಕ್ತಿಗಳು ರೂಪಿಸಿಕೊಂಡಂತೆ ಬೆಳೆಯುತ್ತವೆ. ಒಬ್ಬನ ಆಸಕ್ತಿಯ ಕ್ಷೇತ್ರ ವಿಜ್ಞಾನವೆಂದರೆ ಆತ ಸಾಹಿತಿಯೂ ಆಗಬಲ್ಲ, ನಿರ್ದೇಶಕನೂ ಆಗಬಲ್ಲ, ನಟನೂ, ಕಲಾವಿದನೂ, ಹೋರಾಟಗಾರನೂ, ಪುಢಾರಿಯೂ ಏನೆಲ್ಲ ಆಗಬಲ್ಲ. ಮನುಷ್ಯನಿಗೆ ಅದರಲ್ಲೂ, ತೀರ ಸಾಮಾನ್ಯ ಮನುಷ್ಯನಿಗೆ ಒಟ್ಟಾರೆ ಮಾನವ ಸಮುದಾಯ ಸಾಧಿಸಿದ ಯಾವುದೇ ಕ್ಷೇತ್ರದಲ್ಲೂ ದುಡಿಯುವ ಮತ್ತು ತನ್ನದೇ ಆದ ಕೊಡುಗೆಯನ್ನು ನೀಡಬಹುದಾದ ಸಾಧ್ಯತೆಗಳು ಖಂಡಿತ ಇರುತ್ತವೆ. ಒಂದೇ ಒಂದು ಕೊರತೆಯಾಗಬಹುದಾದ ಅಂಶವೆಂದರೆ ಆಸಕ್ತಿ ಮತ್ತು ಪರಿಶ್ರಮ. ಈ ಜೋಡಿ ಅಂಶ ಕೂಡಿತೆಂದರೆ ಅದು ಮನುಷ್ಯನ ಬುದ್ಧಿ, ಕರ್ತೃತ್ವಶಕ್ತಿ, ಸಾಧನೆಯ ಅನಂತ ಸಾಧ್ಯತೆ ಇನ್ನೆಲ್ಲವನ್ನು ಒಟ್ಟಿಗೆ ತೋರಿಸುತ್ತದೆ. ಇದು ಏನನ್ನು ಹೇಳುತ್ತಿದೆ ಎಂದರೆ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿನ ಮಾನವ ಸಮುದಾಯ ಸಾಮೂಹಿಕವಾಗಿ ಸಮಾಜಕ್ಕೆ ಅಥವಾ ನಾಗರಿಕತೆಗೆ ಏನೆಲ್ಲವನ್ನು ನೀಡಬಲ್ಲುದೋ ಅವೆಲ್ಲ ಆಯಾ ಕಾಲಘಟ್ಟದ ಒಬ್ಬೊಬ್ಬ ಸದಸ್ಯನಲ್ಲೂ ಪ್ರತಿಫಲಿಸಬಲ್ಲುದು ಆದರೆ ಇಂಥ ಪ್ರತಿಫಲಕ್ಕೆ ತೆರೆದುಕೊಳ್ಳುವವರು ತೀರ ಅಪರೂಪ. ಹದಿನಾರನೆಯ ಶತಮಾನದ ಲಿಯೋನಾರ್ಡ ಡ. ವಿಂಚಿಯವರನ್ನು ಮತ್ತು ಈ ಶತಮಾನದ ಶಿವರಾಮ ಕಾರಂತರನ್ನು ಮಾತ್ರ ಇಲ್ಲಿ ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಭಾರತದಲ್ಲೇಕೆ ಇಡೀ ವಿಶ್ವದಲ್ಲಿ ಕಾರಂತರಂಥ ಇನ್ನೊಬ್ಬರನ್ನು ಇಂದು ಗುರುತಿಸುವುದು ಅಸಾಧ್ಯವಾಗುತ್ತದೆ. ಹೇಳಿ ಕೇಳಿ ಇದು 'ವಿಶೇಷಜ್ಞರ' ಯುಗ. ಮನುಷ್ಯನ ಬಲಕಿವಿಯ ತಜ್ಞನೇ ಒಬ್ಬ. ಎಡಕಿವಿಯ ತಜ್ಞನೇ ಒಬ್ಬ. ಅವನಿಗೆ ಎಡಕಿವಿ ಗೊತ್ತಿಲ್ಲ, ಇವನಿಗೆ ಬಲಕಿವಿ ಗೊತ್ತಿಲ್ಲ. ಒಂದೊಂದಕ್ಕೂ ಒಬ್ಬೊಬ್ಬರ ಬಳಿ ಸಾರಬೇಕು. ಪರಿಸ್ಥಿತಿ ಹೀಗಿರುವಾಗ ಒಬ್ಬರೇ ಎಲ್ಲವೂ ಆಗಿ ಕಾಣುವ ಕಾರಂತರು ನಿಜಕ್ಕೂ ಪುರುಷ ಸಾಮಾನ್ಯರಲ್ಲ, ಮಹಾಪುರುಷರು.

ಕಾರಂತರ ಅವಿರತ ಚಟುವಟಿಕೆ, ಓದು, ಬರೆಹ, ಭಾಷಣ, ಸ್ವಾತಂತ್ರ ಹೋರಾಟ, ನಾಟಕ, ಹರಿಕಥೆ, ಯಕ್ಷಗಾನ ಕಲಿಕೆ,

ಕಲಿಸುವಿಕೆ, ಸಮಾಜ ಸುಧಾರಣೆ, ರಾಜಕೀಯ ಮತ್ತು ಪರಿಸರ ಹೋರಾಟ–ಒಂದೊಂದರಲ್ಲೂ ಹೊಸ ಪ್ರಯೋಗ, ಸ್ವಂತಿಕೆಯ ಛಾಪು ಉಳಿಸುವ ವಿಶಿಷ್ಟ ಸೃಜನಶೀಲತೆ. ಕಾರಂತರ ಸೃಷ್ಟಿ ಶಕ್ತಿಯಲ್ಲಿ ಸಿಂಹಪಾಲು ದಕ್ಕಿದ್ದು ಸಾಹಿತ್ಯಕ್ಕೆ. ಒಂದು ಅರ್ಥದಲ್ಲಿ ಶೈಕ್ಷಣಿಕವಾಗಿ ಯಾವುದೇ ಗಮನಾರ್ಹ ಹುದ್ದೆ ಅವರಲ್ಲಿ ಇಲ್ಲದಿದ್ದುದರಿಂದ ಒಂದು ವೇದಿಕೆಯಾಗಿಯೋ ಅಥವಾ ತಮ್ಮ ಜಂಗಮ ಮನಸ್ಸಿನ ಸೃಷ್ಟಿಗಳನ್ನು ಒಂದೆಡೆ ನೆಲೆಯಾಗಿಸುವ ಪ್ರಯತ್ನದಲ್ಲೋ ಸಾಹಿತ್ಯ ಅವರಿಗೆ ಅನಿವಾರ್ಯವೇ ಆಯಿತು. ಅದು ಪತ್ರಿಕೆ, ಕಾದಂಬರಿ, ನಾಟಕ, ಕಥೆ, ಯಾವುದೇ ರೂಪದಲ್ಲಿರಬಹುದು. ಅವರ ಚಿಂತನೆಯ ಧಾಟಿ ದಕ್ಕುತ್ತಿರುವುದೂ ಸಾಹಿತ್ಯ ಸೃಷ್ಟಿಯ ಮೂಲಗಳಿಂದಲೇ. ಏಕೆಂದರೆ, ಅವರ ಸಾಹಿತ್ಯ ಸೃಷ್ಟಿ ಬಹುಮುಖವಾದುದು. ತಮ್ಮ ಚಿಂತನೆಯ ಲಹರಿಗೆ ಸರಿಹೊಂದುವ ಸಾಹಿತ್ಯ ಪ್ರಕಾರವನ್ನು ಅವರು ಆಯ್ಕೆ ಮಾಡಿಕೊಳ್ಳುತ್ತಾರೆ. ಅಂತೆಯೇ ಈ ಮೊದಲೇ ತಮ್ಮ ಅನುಭವ ಮತ್ತು ಉದ್ದೇಶಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. 'ದೈವ ಎಂಬುದು ವಾಸ್ತವ ಜಗತ್ತಿನ ಒಂದು ಪ್ರಾಣಿಯಲ್ಲ, ಇಲ್ಲವೇ ಅಂಗಡಿಯಲ್ಲಿಟ್ಟು ಮಾರುವ ವಸ್ತುವೂ ಅಲ್ಲ. ಅದೊಂದು ಮಾನಸಿಕ ಪರಿಭಾವನೆ ಇಲ್ಲವೇ ನಂಬಿಕೆ. ಆ ನಂಬಿಕೆಯೇ ಮಾನವನನ್ನು ನೇರ ಮಾರ್ಗದಲ್ಲಿ ನಡೆಸುವ ಶಕ್ತಿ. ಸುಗುಣ ಸಾಕಾರನೆಂಬ ದೈವದ ಬಗೆಗಿನ ಭಾವನೆ ಕೇವಲ ಮಿಥ್ಯಾದೃಷ್ಟಿ'–ಎಂಬ ಮಾತನ್ನು ಮೂಕಜ್ಜಿ ಹೇಳುತ್ತಾಳೆ. ಈ ಮಾತು ಕಾರಂತರ ವಿಚಾರ ವಿಮರ್ಶೆಯ ಅನುಭವದಿಂದ ಹೊರಟಿದೆ ಎಂಬುದು ಸ್ಪಷ್ಟ. ಕಾದಂಬರಿಯಂಥ ಗಂಭೀರ ಪ್ರಕಾರದಲ್ಲಿ ಅಲ್ಲದೆ ಉಳಿದ ಪ್ರಕಾರದಲ್ಲಿ ದಾಖಲಾದರೆ, ಇಲ್ಲಿನ ವಾಕ್ಯ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳಲು ಹೆಣಗಬೇಕಾಗುತ್ತದೆ. ಕಾರಂತರು ಮೂಲತಃ ವಿಚಾರ ಹೃದಯಿಗಳು, ಭಾವ ಹೃದಯಿಗಳಲ್ಲ. ಬಹುಶಃ ಈ ಕಾರಣದಿಂದಾಗಿಯೇ ಅವರ ಸಾಹಿತ್ಯ ಸೃಷ್ಟಿಯಲ್ಲಿ ಕಾದಂಬರಿಗೆ ಅಗ್ರಸ್ಥಾನ, ಕಾವ್ಯ ಇಲ್ಲವೇ ಇಲ್ಲ ಎನ್ನಬಹುದಾದಷ್ಟು ಗೌಣ. ಕಾವ್ಯ ಭಾವಕ್ಕೇ ಹೊರತು ವಿಚಾರಕ್ಕಲ್ಲ. ೧೯೨೪ (ವಿಚಿತ್ರಕೂಟ) ರಿಂದ ಹಿಡಿದು ೧೯೮೬ (ಅಂಟಿದ ಅಪರಂಜಿ) ರ ವರಗೆ ಅವರ ಕಾದಂಬರಿ ಸೃಷ್ಟಿ ನಿರಂತರವಾಗಿ ನಡೆದಿತ್ತು. ಆದರೆ ಅವರ ಸಾಹಿತ್ಯ ಕೃಷಿ ಕಾದಂಬರಿಗೇ ಮೀಸಲು ಅಲ್ಲ. ಅವರ ಕೃಷಿಯ ಮೊದಲ ಫಲವೇ ಕವನ ಸಂಗ್ರಹ (ರಾಷ್ಟ್ರಗೀತ ಸುಧಾಕರ,೧೯೨೩) ಅಲ್ಲಿಗೆ ಕಾವ್ಯದುಡಿಮೆ ನಿಂತಿತೆಂದೇ ಹೇಳಬೇಕು. ಮತ್ತೆ ಅವರ ಕಾವ್ಯ ಕಾಣವುದು 'ಸೀಳ್ಗವನಗಳು' (೧೯೯೨) ಸಂಕಲನದಲ್ಲಿ. ಈ ಅವಧಿಯಲ್ಲಿನ ಅವರ ಸಾಹಿತ್ಯ ಫಲಗಳನ್ನು ಹಲವು ರೂಪಗಳಲ್ಲಿ ಗುರುತಿಸಬಹುದು. ಕಾರಂತರ ವೈವಿಧ್ಯಮಯ ಸಾಹಿತ್ಯ ದೃಷ್ಟಿಯಲ್ಲಿ ಅವರ ಅನುಭವ, ಗ್ರಹಿಕೆಗಳ ಅಗಾಧತೆ ತಕ್ಕಮಟ್ಟಿಗೆ ಅರ್ಥವಾಗಬಹುದು, ಅವರು ಪತ್ರಿಕೆಗಳಿಗೆ, ಸಾಮಾನ್ಯರಿಗೆ, ಮಿತ್ರರಿಗೆ ಬರೆಯುತ್ತಿದ್ದ ಪತ್ರಗಳಲ್ಲಿ, ಸಂಭಾಷಣೆಗಳಲ್ಲಿ, ಭಾಷಣಗಳಲ್ಲಿ ಚಿಂತನೆ ಮಡುಗಟ್ಟಿರುತ್ತಿದ್ದವು. ಇವೆಲ್ಲವುಗಳ ಮಧ್ಯೆ, ಸಿನಿಮಾ, ರಂಗಕಲೆ, ಯಕ್ಷಗಾನ, ಪ್ರವಾಸಾದಿಗಳು ನಡೆಯುತ್ತಲೇ ಇದ್ದವು. ಬಹುಶಃ ಕಾರಂತರ

ಇಷ್ಟೊಂದು ಮಹಾರೂಪದ ಸಾಹಿತ್ಯ ರಾಶಿಯನ್ನು ನೀಡಿದ್ದರೂ ಇನ್ನೂ ಅಷ್ಟೇ ಪ್ರಮಾಣದ ಸಾಹಿತ್ಯ ರಾಶಿಯನ್ನು ತಮ್ಮೊಂದಿಗೇ ಒಯ್ದಿದ್ದಾರೆ ಎಂದು ಅನ್ನಿಸದೇ ಇರದು. ಅವರ ಇಂಥ ಸಾಮರ್ಥ್ಯಕ್ಕೆ ಸರಿಹೊಂದುವ ಪದವೇ ಹೊಳೆಯುತ್ತಿಲ್ಲ. 'ಸೃಜನಶೀಲ ಬುಲ್ಡೋಜರ್' ಎನ್ನಬಹುದೇನೋ. ಅಂಥ ರಾಕ್ಷಸ ದುಡಿಮೆ ಅವರದು.

ಕಾರಂತರ ಬದುಕನ್ನು ಮತ್ತು ಬರೆಹವನ್ನು ಬೇರ್ಪಡಿಸಲು ಸಾಧ್ಯವಾಗುವುದಿಲ್ಲ. ಕಾರಣ ಅವರು ಆರಂಭದಿಂದ ಅಂತ್ಯದವರೆಗೆ ಚಿಂತಿಸದೆ ಬದುಕಿದವರಲ್ಲ, ಅವುಗಳನ್ನು ತಮ್ಮ ಬರೆಹ, ಪ್ರಯೋಗಗಳಲ್ಲಿ ತಾರದೆ ಬಿಟ್ಟವರೂ ಅಲ್ಲ. ವಾಸ್ತವವಾಗಿ ಕಾರಂತರ ಸಾಹಿತ್ಯ ಸೃಷ್ಟಿ ಏನೇ ಇದ್ದರೂ, ಅವರ ಕ್ರಿಯಾಶೀಲ ಮತ್ತು ಸೃಜನಾತ್ಮಕ ಹುಡುಕಾಟ ಅವರನ್ನು ಈ ಎತ್ತರಕ್ಕೆ ಏರಿಸಿದೆ. ಸಾಹಿತ್ಯ, ಅವರ ಪ್ರತಿಭೆಯ ಒಂದು ಮುಖ ಅಷ್ಟೆ. ಅಥವಾ ಈಗಾಗಲೇ ಹೇಳಿದಂತೆ ಅನುಭವಗಳ ದಾಖಲೆಗೆ ಒಂದು ಮಾಧ್ಯಮ. ಕಾರಂತರ ವ್ಯಕ್ತಿತ್ವದ ಅಗಾಧತೆಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಅವರ ಕೃತಿಗಳ ಪಾತ್ರ ವಿಶ್ಲೇಷಣೆಗೆ ಈಚೆಗೆ ತೊಡಗಲಾಗುತ್ತಿದೆ. ಅವರ ಒಟ್ಟಾರೆ ಸಾಹಿತ್ಯ ಸೃಷ್ಟಿಯ ಬಗ್ಗೆ ಗಂಭೀರ ಅಧ್ಯಯನಗಳು ನಡೆದಾಗ ಮಾತ್ರ ಅಗಾಧತೆಯ ಅರಿವಾಗಲು ಸಾಧ್ಯ. ಒಂದು ಬೃಹತ್ ಸಂಸ್ಥೆಯೋ ಅಥವಾ ವಿಶ್ವವಿದ್ಯಾನಿಲಯವೋ ಮಾಡಬಹುದಾದ ಕೆಲಸಕಾರ್ಯಗಳನ್ನು ಕಾರಂತರು ತಮ್ಮ ಜೀವಿತದಲ್ಲಿ ಮಾಡಿ ತೋರಿಸಿದ್ದಾರೆ. ವ್ಯಂಗ್ಯವೆಂದರೆ, ಕಾರಂತರ ಅಧ್ಯಯನಕ್ಕೆ ಈಗ ಒಂದು ಸಂಸ್ಥೆಯೋ ಅಥವಾ ವಿಶ್ವವಿದ್ಯಾನಿಲಯವೋ ಬೇಕಾಗಿದೆ.

ಒಟ್ಟಾರೆ ತಮ್ಮ ಚಿಂತನೆಯನ್ನು ಆಲೋಚನಾ ಧಾಟಿಗಳನ್ನು ಹರಿಯಬಿಡುವುದು ಕಾರಂತರ ಸ್ವಭಾವ. ಈ ದೃಷ್ಟಿಯಲ್ಲಿ ಅವರ ಭಾಷಣಕ್ಕೂ, ಕಾದಂಬರಿಗೂ, ಸ್ಥೂಲವಾಗಿ ಹೇಳುವುದಾದರೆ ಇಡೀ ಸಾಹಿತ್ಯಕ್ಕೂ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ತಾವು ಅನುಭವಿಸಿದಷ್ಟು ಕಂಡಷ್ಟು, ಮತ್ತು ಹೇಳಬಹುದಾದಷ್ಟು: ಇದು ಅವರ ಸೃಷ್ಟಿ ಶಕ್ತಿಯ ಮುಖ್ಯ ಲಕ್ಷಣ. ಹೀಗಾಗಿಯೇ ತಮ್ಮ ನಿರ್ಧಾರವನ್ನು ಮುಕ್ತ ಮರು ಚಿಂತನೆಗೆ ಅವರು ಒಡ್ಡುವುದಿಲ್ಲ, ಯಾವುದೇ ಕ್ಷೇತ್ರದ ಬಗ್ಗೆ ತಾವು ಹೇಳುವಾಗಲೂ ಆಯಾ ಕ್ಷೇತ್ರದಲ್ಲಿ ಈಗಾಗಲೇ ದುಡಿದವರನ್ನು ಲಕ್ಷಿಸುವುದೂ ಇಲ್ಲ. ನೇರ ನಡೆ–ನುಡಿಯಂತೆಯೇ 'ತಮ್ಮ ಕಾಣ್ಕೆ'ಯಷ್ಟೇ ಮುಖ್ಯವಾಗುವಂತೆ ಕಾಣುತ್ತದೆ.

ಗದ್ಯ ಪ್ರಕಾರಕ್ಕೆ ಒಗ್ಗಿದಷ್ಟು ಪದ್ಯ ಪ್ರಕಾರಕ್ಕೆ ಅದರಲ್ಲೂ ಕಾವ್ಯಪ್ರಕಾರಕ್ಕೆ ಕಾರಂತರು ಒಗ್ಗಲಾಗಲಿಲ್ಲ. ಕಾವ್ಯ ಬಯಸುವ ಕನಿಷ್ಠ ವ್ಯವಧಾನ, ಕಾವ್ಯ ತಂತ್ರ, ವಿಚಾರವನ್ನು ಹಿಡಿದಿಟ್ಟು ವಿಶಿಷ್ಟ ಬಂಧದಲ್ಲಿ ಕೊಡುವ ಕಲೆ ಹಾಗೂ ಕಾವ್ಯ ರಚನೆಯ ಸೂತ್ರಗಳಿಗೆ ತಮ್ಮನ್ನು ಅರ್ಪಿಸಿಕೊಳ್ಳಲಾಗದಿದ್ದುದೇ ಇದಕ್ಕೆ ಕಾರಣವಿರಬೇಕು. ಗದ್ಯದಲ್ಲಿ ಮನದ ಓಟದಂತೆ ಯೋಚನೆಯ ದಾಖಲೆ ಸುಲಭ, ಸಾಧ್ಯ. ಕಾವ್ಯ ಪ್ರಕಾರಗಳಲ್ಲೂ ಗೀತ ನಾಟಕಗಳಿಗೆ ಅವರು ಒಲವು ತೋರಿದ್ದು ಬಹುಶಃ ಅಲ್ಲಿ

ಗದ್ಯವೇ ಪ್ರಧಾನ ಅಂಶವಾಗಿ ಮೆರೆಯುವುದರಿಂದ ಇರಬೇಕೆಂದು ಊಹಿಸಲು ಶಕ್ಯವಿದೆ.

ಹೊಸತನ್ನು ಹುಡುಕುವುದು, ಅವರ ಜಾಯಮಾನ. ಅವರು ಬರೆಹಕ್ಕೆ ಆರಂಭಿಸಿದ ಹೊಸತು ನವೋದಯ ಕಾಲ. ಕಾವ್ಯ ಆಗ ಮೆರೆಯುತ್ತಿತ್ತು, ಮೊಳಗುತ್ತಿತ್ತು. ಆದರೆ ಕಾರಂತರು ಕಾದಂಬರಿ ರಚನೆಗೆ ತೊಡಗಿದರು. ಹೊಸತನ ಹುಡುಕುವ ಅವರ ಸ್ವಭಾವ ಅವರ ಪ್ರಯೋಗಶೀಲತೆಗೆ ಅಷ್ಟೇ ಸೀಮಿತ. ಅವರ ಮೊದಲ ಕಾದಂಬರಿಯ ವಸ್ತು, ತಂತ್ರ, ಭಾಷೆ, ಸಂವಿಧಾನ, ಪಾತ್ರ ನಿರ್ವಹಣೆ ಇತ್ಯಾದಿಗಳು (ಪತ್ತೇದಾರಿ ವಿಷಯ ಮೂಲವಸ್ತುವಾದ್ದರಿಂದ ತುಸು ಭಿನ್ನವೆನಿಸಿದರೂ), ಕಡೆಯ ಕಾದಂಬರಿಯ ವಸ್ತು, ತಂತ್ರ, ಭಾಷೆ, ಸಂವಿಧಾನ, ಪಾತ್ರ ನಿರ್ವಹಣೆ ಇತ್ಯಾದಿಗಳಲ್ಲಿ ಒಂದೇ ವಾಸನೆಯನ್ನು ತೋರುತ್ತವೆ.

ಕಾರಂತರ ಪ್ರವಾಸಾನುಭವ, ಜೀವನ ಚರಿತ್ರೆ, ಮತ್ತು ಅಗಾಧ ಓದು–ಇವು ಭಾರತೀಯ ಸಮಾಜದ ಅನಿಷ್ಟಗಳನ್ನು, ಚಿಂತನಾರಹಿತ ಜೀವನ ಕ್ರಮವನ್ನು ಕಂಡು ಕೆರಳುವಂತೆ ಮಾಡುತ್ತಿದ್ದವು. ಅವರ ಭಾಷಣಗಳಲ್ಲಿನ ಸಮಾಜದ ಕಟು ವಿಡಂಬನೆ, ಕೃತಿಗಳ ಪಾತ್ರಗಳಲ್ಲಿ ಬರುವ ಸಮಾಜದ ಪೂರ್ವನಿರ್ಧಾರಿತ ವಸ್ತು. ವಿಷಯಗಳ ಬಗ್ಗೆ ಬಿಚ್ಚಿ ಹೇಳುವ, ಅಂಕು-ಡೊಂಕು ತೋರಿಸುವ ಹರಿತ ಮಾತುಗಳು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ. ಮೇಲ್ವರ್ಗದವರು, ಶಿಷ್ಟಪರಂಪರೆಯವರು, ಬ್ರಾಹ್ಮಣರು ವಿಶೇಷವಾಗಿ ಉದಾಸೀನ ಮಾಡುತ್ತಿದ್ದ ವಿಷಯಗಳ ಬಗ್ಗೆ ಕಾರಂತರು ವಿಶೇಷ ಸೆಳೆತಕ್ಕೆ ಒಳಗಾಗುತ್ತಿದ್ದಂತೆ, ಅವರ ಕಾರ್ಯಗಳು ತೋರಿಸುತ್ತವೆ. ಅಂತರ್-ಜಾತೀಯ ವಿವಾಹ, ವಿಧವಾ ವಿವಾಹ ಪ್ರೇರಣೆ, ಕೊಳಚೆ ನಿರ್ಮೂಲನೆ, ಇತ್ಯಾದಿ ಕೆಲಸಗಳು ಅವರ ವೈಶಿಷ್ಟ್ಯವನ್ನು, ಒಬ್ಬ ಸಹಜ, ಸಾಮಾನ್ಯ ಮನುಷ್ಯನಿಗೆ ಇರಬೇಕಾದ ಗುಣಗಳನ್ನು ಸಾರುತ್ತವೆ. ಸಮಾಜ ಮತ್ತು ಪರಂಪರೆಯ ಯಾವುದೇ ದೃಷ್ಟಿಗೆ ತನ್ನನ್ನು ಮಾರಿಕೊಳ್ಳದ, ಯಾವ ಪೂರ್ವ ಮುದ್ರೆಯೂ ಇಲ್ಲದ ನಿಷ್ಕಲ್ಮಶ ಮನಸ್ಸಿನ ವಿಚಾರವಂತನ ನಡವಳಿಕೆಗಳು ಇಲ್ಲೆಲ್ಲ ಗೊತ್ತಾಗುತ್ತದೆ. ಪರಂಪರೆಯ ಮೂಢ ಮನಸ್ಸುಗಳನ್ನು ಪ್ರಶ್ನಿಸುವ ಮನಸ್ಸಿನ ಕಾರಂತರು, ಪರಂಪರೆಯ ಶಿಷ್ಟ ಧೋರಣೆಯನ್ನು ಎಲ್ಲ ಬಗೆಯಲ್ಲೂ ವಿರೋಧಿಸಿದ್ದು ಹಾಗೂ ಶಿಷ್ಟ ಪರಂಪರೆಯ ಉದಾಸೀನಕ್ಕೊಳಗಾದ ಜಾನಪದ ಮತ್ತು ಯಕ್ಷಗಾನಗಳನ್ನು ಪ್ರೀತಿಸಿದ್ದು ಆಶ್ಚರ್ಯವಾಗಿ ಕಾಣಿಸುವುದಿಲ್ಲ.

ಕಾರಂತರಲ್ಲಿ ಕಡೆಯವರೆಗೂ ಇದ್ದ ಸರಳತೆ, ಜೀವಂತಿಕೆ ಮಾತ್ರ ಅನನ್ಯವಾದುದು. ಯಾವುದೋ ಸಾಮಾನ್ಯ ಪತ್ರಿಕೆಗೂ ಪ್ರತಿಕ್ರಿಯಿಸುವುದು, ಸಾಮಾನ್ಯನಿಗೂ ಉತ್ತರಿಸುವುದು 'ಸಾಮಾನ್ಯ ಪ್ರಸಿದ್ಧರಲ್ಲೂ ಅಪರೂಪ. ಕಾರಂತರು ಹೀಗಲ್ಲ, ಅವರನ್ನು ಗೌರವಿಸುವ ಹಲವು ಕಾರಣಗಳಲ್ಲಿ ಇದೂ ಒಂದೆಂದು ಮರೆಯಲಾಗದು. ಸಮಕಾಲೀನ 'ಸ್ಪಂದನೆ, ಅವರು ಸಮಾಜಕ್ಕೆ ಹೇಳಿದ ಒಂದು ಪಾಠ: ಅಂದಂದಿನ ಸಮಸ್ಯೆ ಮತ್ತು ಪರಿಸ್ಥಿತಿಗೆ ಪ್ರತಿಕ್ರಿಯಿಸುವುದೇ ಜೀವಂತಿಕೆ. ಅವರ ರಾಜಕೀಯ ಮತ್ತು ಪರಿಸರದ ಹೋರಾಟಗಳಲ್ಲಿ ಅವರು ಇದನ್ನು ತೋರಿಸಿ

ದರು. ಕಾರಂತರಿಗೆ ಬಂದ ರಾಷ್ಟ್ರೀಯ ಅಂತಾರಾಷ್ಟ್ರೀಯ ಪ್ರತಿಷ್ಠಿತ ಪ್ರಶಸ್ತಿಗಳು, ಆರು ವಿ.ವಿ.ಗಳ ಗೌರವ ಡಾಕ್ಟೊರೇಟ್ ಈ ಮುಂತಾದವು ಸಮಕಾಲೀನ ಸಮಾಜ ಕಾರಂತರನ್ನು ಪ್ರೀತಿಸಿದ, ನಡೆಸಿಕೊಂಡ ರೀತಿಗೆ ಸಾಕ್ಷಿ. ಆದರೆ, ಇದೇನೂ ಕಾರಂತ ರಿಗೆ ದೊಡ್ಡದಲ್ಲ, ಬಹುಶಃ ಅವರ ಎಲ್ಲ ಸಾಧ್ಯತೆಯ ಮೂಲ ಬಂಡವಾಳವಾದ ವೈಚಾರಿಕತೆಯನ್ನು ಸಮಾಜ ಅಳವಡಿಸಿ ಕೊಂಡರೆ, ಅಷ್ಟು ಮಟ್ಟಿಗೆ ಅದು ಕಾರಂತ ರಿಗೆ ಸಲ್ಲಿಸುವ ದೊಡ್ಡ ಗೌರವವಾಗುತ್ತದೆ. ತಮ್ಮ ಪ್ರಯೋಗಶೀಲತೆ, ವೈಚಾರಿಕತೆ, ಮುಕ್ತ–ನಿಷ್ಠುರ ದೃಷ್ಟಿಗಳಿಂದಾಗಿ ಯಾವ ದೃಷ್ಟಿಯಿಂದ ನೋಡಿದರೂ ಕಾರಂತರು ಭಿನ್ನವಾಗಿ ಕಾಣುತ್ತಾರೆ. ಒಟ್ಟನಲ್ಲಿ ಕಾರಂತರು ರಾಷ್ಟ್ರೀಯ ಚಳವಳಿ ಮತ್ತು ನವೋದಯಗಳ ಶಕ್ತಿ–ಸಾಧ್ಯತೆಗಳು ಹುಟ್ಟಿ ಸಿದ "ವಿಲಕ್ಷಣ ಪ್ರತಿಭೆ" ಎನ್ನಬಹುದು.

ಕಾರಂತರ ಸೃಜನ ಸಾಮರ್ಥ್ಯ ಪಶ್ಚಿಮ ಘಟ್ಟದ ಹೊಳೆಯ ಸಾಮರ್ಥ್ಯ ದಂತೆ. ಅದು ಅಷ್ಟು ಸಮೃದ್ಧವಾಗಿದೆ. ನಿರಂತರವಾಗಿದೆ. ನಿಶ್ಚಿತವಾದ ನಿಲುವನ್ನು ಯಾವತ್ತೂ ಕಾಯ್ದುಕೊಂಡಿದೆ. ಕಾರಂತರು ಬದುಕಿನ ಸಮಸ್ತ ಅನುಭವಗಳಿಗೆ ತಮ್ಮನ್ನು ತಾವು ತೆರೆದ ಮನಸ್ಸಿನಿಂದ ಒಡ್ಡಿ ಕೊಂಡವರು. ಅವರ ಅನುಭವವೇ ಅವರಿಗೆ ಪುಸ್ತಕ. ವಾಸ್ತವದ ನೆಲೆಯಲ್ಲಿ ನಿಂತು ಅದರೊಳಗಿನ, ಆದರಾಚೆಯ ಗೊತ್ತುಗಳನ್ನು, ರಹಸ್ಯಗಳನ್ನು ಭೇದಿಸುವರು ಯಾರೋ ಸಿದ್ಧಪಡಿಸಿದ ತೀರ್ಮಾನಗಳಿಂದ ಬದುಕನ್ನು ಒಪ್ಪಿದವರಲ್ಲ. ಸಂಪ್ರದಾಯದ ಗೆರೆಯಾಚೆ ನಿಂತು ಬದುಕನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದವರು. ಇದು ಕಾರಂತರ ವೈಚಾರಿಕತೆಯ ನೆಲೆಗಟ್ಟು. ಈ ಬಗೆಯ ತಾತ್ವಿಕ ಹಿನ್ನಲೆ, ವೈಚಾರಿಕ ನಿಲುವು ಅವರ ಕಾದಂಬರಿಗಳ ಪುಟಪುಟಗಳಲ್ಲಿಯೂ ಇದೆ.

—ಡಾ| ಜಿ. ಎಸ್. ಶಿವರುದ್ರಪ್ಪ

ಕಾರಂತರ ಬದುಕು-ಬರಹ—ಸ್ಮೃತಿಗಳು

ಸೀತಾರಾಮ ಜಾಗೀರ್‌ದಾರ್
'ಕಲ್ಪ' ೪೦೬/ಬಿ, ೩ನೇ ಮುಖ್ಯ ರಸ್ತೆ
ಸರಸ್ವತೀಪುರಂ, ಮೈಸೂರು-೫೭೦೦೯

ಶಿವರಾಮ ಕಾರಂತರು ತಮ್ಮ ಹುಟ್ಟೂರಾದ ಕುಂದಾಪುರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಕಾಲೇಜು ಅಭ್ಯಾಸಕ್ಕೆ ಮಂಗಳೂರಿಗೆ ಹೋಗಿ ಅಲ್ಲಿನ ಸರ್ಕಾರಿ ಕಾಲೇಜನ್ನು ಸೇರಿದರು. ಕಾಲೇಜು ಸೇರಿದ ಹೊಸದರಲ್ಲಿಯೆ ಗಾಂಧೀಜಿಯವರ "ಅಸಹಕಾರದ ಆಂದೋಲನ" ಆರಂಭವಾಯಿತು. ಗಾಂಧೀಜಿ ಅವರ ಕರೆಗೆ ಓಗೊಟ್ಟ ಕಾರಂತ ಕಾಲೇಜು ಮೆಟ್ಟಲುಗಳನ್ನು ಇಳಿದುಬಿಟ್ಟರು; ವಿದ್ಯಾರ್ಜನೆಗೆ ಮತ್ತೆ ಆ ಮೆಟ್ಟಲುಗಳನ್ನು ಹತ್ತಲೇ ಇಲ್ಲ. ಸುತ್ತಲಿನ ಪ್ರಪಂಚವೇ ಕಾಲೇಜಾಯಿತು; ಪದವಿಗಳ ಅಧ್ಯಯನಕ್ಕೆ ಪೂರ್ಣವಿರಾಮ ಬಿದ್ದಿತು. ಅವರ ಮೈಮನದ ಸುಳಿವೆಲ್ಲ ಗಾಂಧೀಜಿ ವಿಚಾರಧಾರೆಯಾಯಿತು. ಯೌವನ ಸಹಜವಾದ ಆದರ್ಶಗಳನ್ನು ಹೊತ್ತು ಮನೆ ಮಾರುಗಳ ಅನುಕೂಲತೆಗಳನ್ನು ತೊರೆದು ಗ್ರಾಮಾಭಿವೃದ್ಧಿ, ಗಾಂಧೀವಿಚಾರ ಪ್ರಸಾರ ಹಾಗೂ ಖಾದಿ ಮಾರಾಟ ಮುಂತಾಗಿ ಸಮಾಜ ಸುಧಾರಣೆಯ ಕೆಲಸಗಳನ್ನು ರಚನಾತ್ಮಕವಾಗಿ ಕೈಗೊಂಡರು. ಹೋರಾಟದ ಸಮಯದಲ್ಲಿ ಕಾರಂತರಿಗೆ ಜೀವನದ ಜೀವಂತಪಾಠ ದೊರೆಯಿತು. ಆದರ ವಿಸ್ತಾರಕೃತಿ ಅವರ ಹೃದಯಪಟಲದಲ್ಲಿ ಮೂಡಿ ನಿಂತಿತು; ಸ್ಮೃತಿಯಲ್ಲಿ ಸಂಚಯನಗೊಂಡಿತು. ಎಲ್ಲಕ್ಕೂ ಹೆಚ್ಚಾಗಿ ಕಿಂಚಿತ ಬಡತನಕ್ಕೆ ಹೊಂದಿಕೊಂಡು ತನ್ನ ಕಾಲಮೇಲೆ ತಾನೇ ನಿಲ್ಲುವ ಧೈರ್ಯ ಸ್ಥೈರ್ಯಗಳನ್ನು ಪಡೆದುಕೊಂಡರು; ನಿರಂತರ ದುಡಿಮೆಗೆ ತಮ್ಮನ್ನು ಒಡ್ಡಿಕೊಳ್ಳುವ, ಒಪ್ಪಿಸಿಕೊಳ್ಳುವ, ಮನೋಧರ್ಮವನ್ನು ಬೆಳಸಿಕೊಂಡರು. ಗಾಂಧೀಜಿಯವರ ಆದರ್ಶ ಸ್ವಾತಂತ್ರ್ಯ ಬಂದ ಮೇಲೆ ಜನಮನದಲ್ಲಿ ಆಳಸಿಹೋದ ರೀತಿಯಲ್ಲೇ ಕಾರಂತರಲ್ಲೂ ತನ್ನ ಆಕರ್ಷಣೆಯನ್ನು ಕಳೆದುಕೊಂಡಿತು. ಆಕರ್ಷಣೆ ಕಳೆದರೂ ಅದು ತನ್ನ ಒಂದು ಜಲಚಿಹ್ನೆಯನ್ನು ಅವರ ಜೀವನದಲ್ಲಿ ಬಿಟ್ಟಿತು. ತನ್ನಿಮಿತ್ತ ಸ್ವಾವಲಂಬನೆ, ಪ್ರಾಮಾಣಿಕತೆ ಮತ್ತು ಕಾರ್ಯನಿಷ್ಠೆ ಇವು ಸ್ವಭಾವಗತವಾಗಿ ನಿಂತವು. ಪ್ರತ್ಯಕ್ಷವಿದ್ದರೂ ಪರೀಕ್ಷಿಸಿಯೆ ಒಪ್ಪುವ ಚೆಲುವನ್ನು ಕಂಡರೆ ಬಾಗುವ–ಸ್ಪಂದಿಸುವ–ಮನೋವೃತ್ತಿ ಹಾಗೂ ಬಾಳ್ವೆಯನ್ನು ನಾವು ನಿಜವಾದ ರೀತಿಯಲ್ಲಿ ತಿಳಿಯಬೇಕಾದರೆ ಅದರ ವಿಷಯದಲ್ಲಿ ಪೂರ್ವ ನಿರ್ಧರಿತ ಅಭಿಪ್ರಾಯಗಳನ್ನು ಕಣ್ಣು ಮುಚ್ಚಿಕೊಂಡು ಅನುಸರಿಸಬಾರದು ಎಂಬುದೂ ಅವರ ಜೀವನದ ದಾರಿಯಲ್ಲಿ

ದಾರಿದೀಪಗಳಾದವು. "ನಮ್ಮ ಬದುಕಿಗಿಂತ ಹಿರಿದಾದ ದೇವರು ನಮಗೆ ನಿಲುಕಲಾರ ನೆಂಬುದೇ ನನ್ನ ತಿಳಿವು" ಎಂದಿದ್ದಾರೆ ಕಾರಂತರು.

ಕಾರಂತರ ಪ್ರಕಾರ "ಬಾಳು ನನಗೆ ಮುಖ್ಯ. ಬಾಳನ್ನು ತಿಳಿಯಬೇಕಾದ ಸಾಧನಗಳೂ ಅಷ್ಟೇ ಮುಖ್ಯ. ಇಂದ್ರಿಯ ಗಳು ನಮ್ಮ ವೈರಿಗಳಲ್ಲ; ಅವುಗಳಿಂದ ಬೆಳೆಯುವ ಮನಸ್ಸು, ಬುದ್ಧಿಗಳಾಗಲೀ ನಮ್ಮ ವೈರಿಗಳಾಗಲಾರವು. ಅವೇ ನಮ್ಮ ಜೀವಿತದ ಮುಖ್ಯ ಸಾಧನಗಳು. ಈ ಎಲ್ಲ ವಿಚಾರಗಳಿಂದ–ಪ್ರಪಂಚ, ಬದುಕು, ಜೀವ ನದ ದೃಷ್ಟಿಕೋನ. ಕಾರಂತರು ಅಧ್ಯಯನ ಶೀಲರು. ಅವರ ಅಧ್ಯಯನಕ್ಕೆ ಗಡಿಗೆರೆ ಗಳೇ ಇಲ್ಲ! ಭೂಮಿಯ ಬುಡಕ್ಕಿಂತ ಕೆಳಗೆ, ಆಕಾಶದ ನೀಹಾರಿಕೆಗಳ ಆಚೆಗೆ ಇರುವ ಏನೆಲ್ಲ ವಿಷಯಗಳ ಅಧ್ಯಯನವನ್ನು ಅವರು ಮಾಡಿದ್ದಾರೆ.

ಜೀವನ ಎನ್ನುವುದು ಒಂದು ದೊಡ್ಡ ಪ್ರವಾಹ. ಜೀವಿಗಳು ಆ ಪ್ರವಾಹದಲ್ಲಿನ ಚಿಕ್ಕ ಅಂಶಗಳು. ಒಂದೊಂದು ಜೀವಿಗೂ ತನ್ನದೇ ಆದ ಮತ್ತು ತಾನಿರುವ ಪರಿಸರದ ಎರಡು ವಿಧಾನಗಳಲ್ಲಿ ಈಜಬೇಕಾಗುತ್ತದೆ. ಈ ಎರಡು ಚಕ್ರಗಳ ಮೇಲೆ ಬಾಳಬಂಡಿ ಮುಂದಕ್ಕೆ ಸಾಗಬೇಕಾಗುತ್ತದೆ. ಸ್ವಾರ್ಥದ ಶಲಾಕಾಪಂಜರದಲ್ಲಿ ಸಿಲುಕಿದ ವ್ಯಕ್ತಿ ಪರಿ ಸರವನ್ನು ಗಣಿಸುವುದಿಲ್ಲ; ಅದರ ಬಗ್ಗೆ ಚಿಂತಿಸುವುದಿಲ್ಲ. ತಾ ಸಾಯ್ತು ತನ್ನ ಬೆಳವಣಿಗೆ ಆಯ್ತು! "ಜೀವಿಗೆ ಬದುಕು ಮುಖ್ಯ. ಅದೇ ಸರ್ವಸ್ವ" ಕಾರಂತರು ಹೀಗೆಂದು ಹೇಳಿದರೂ ಸಮಾಜಶಕಟವನ್ನು ಸಾಧ್ಯವಾದಷ್ಟು ಶಕ್ತಿಯುತವಾಗಿಯೇ ಎಳೆದರು. ಸಮಾಜವನ್ನು ಕೇವಲ ಸರ್ಪ ಎನ್ನದೇ ಸುಮ ಎಂದೂ ತಲೆಯ ಮೇಲೆ ಧರಿಸಿದರು. ಕಾಮುಕಸ್ತೂರಿಯ ಸಮಸ್ಯೆ ಯನ್ನು ಎದುರಿಸುವಲ್ಲಿ ಅವರು ವಿಶ್ವಾಮಿತ್ರ ರಾದರು; ಭಾರ್ಗವರಲ್ಲ. ಈ ಸಂಬಂಧದಲ್ಲಿ ಅವರು "ಮನುಷ್ಯ ಸ್ವಭಾವದ ಪರಿಚಯವೇ ಗಾಂಧೀಜೀಗಿಲ್ಲ!" ಎನ್ನುವಷ್ಟರಮಟ್ಟಿಗೆ ಹೋದರು.

ಮನುಷ್ಯನನ್ನು ಆರಂಭದಿಂದಲೂ ಕಾಡುತ್ತ ಬಂದಿರುವ ಕೆಲಸಂಗತಿಗಳೆಂದರೆ ಜೀವನ, ದೇವರು, ಧರ್ಮ ಹಾಗೂ ಇವುಗಳ ಪರಸ್ಪರ ಸಂಬಂಧ. ಸಾವಿರಾರು ಜನ, ಕಾವೇರಿಸಲಿಲದ ಹಾಗೆ ಸಲೀಸಾಗಿ ಬಾಳಿ ಬದುಕಿ ಬಯಲಾಗಿದ್ದಾರೆ. ಆ ಬಗ್ಗೆ ಚಿಂತನ ಮಾಡಿದವರು ಎಲ್ಲೋ ಕೆಲವರು. ಕಾರಂತರು ಅಂತಹ ಕೆಲವರಲ್ಲಿ ಒಬ್ಬರು. ತತ್ವಶಾಸ್ತ್ರ, ಮಾನವಶಾಸ್ತ್ರ ಹಾಗೂ ಸಮಾಜಶಾಸ್ತ್ರ ಮುಂತಾಗಿ ಮಾನವಿಕ ಹಾಗೂ ಅದಕ್ಕೆ ಹತ್ತಿರವಾದ ವೈಜ್ಞಾನಿಕ ವಿಚಾರಗಳ ಬಗ್ಗೆ ಅವರು ಚಿಂತನ ಮಂಥನ ಗಳನ್ನು ಮಾಡಿದರು. ಹೀಗೆ ಮಾಡುವಾ ಗಲೇ ಅವರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿ ಸಿದರು. ಅದು ನಡೆದದ್ದು ಪತ್ರಿಕಾ ವ್ಯವ ಸಾಯದ ಮುಖಾಂತರ. "ವಸಂತ" ಪತ್ರಿಕೆ ಅವರ ಜೀವನದ ರೂವಾರಿ. ಆ ಪಾಕ್ಷಿಕದಲ್ಲಿ ಅವರು ಬರೆಯಲು ಆರಂಭಿಸಿದ್ದು ೧೯೨೪ ರಲ್ಲಿ. ಆ ಪತ್ರಿಕೆಗೆ ಮನೋರಂಜನೆಗಿಂತ ಹೆಚ್ಚಾಗಿ ಮನೋವಿಕಾಸವೇ ಮುಖ್ಯ ಉದ್ದೇಶವಾಗಿತ್ತು. ಅಂದಿನ ಸಮಕಾಲೀನ ಸಮಸ್ಯೆಗಳಾದ ಅಸ್ಪೃಶ್ಯೋದ್ಧಾರ, ಪಾನ ನಿರೋಧ, ಕೈನೂಲಿನ ಬಟ್ಟೆ (ಖಾದಿ), ಬ್ರಹ್ಮಚರ್ಯ, ಅಹಿಂಸೆ ಮುಂತಾಗಿ

ಗಾಂಧಿಜೀಯವರ ಗಾಥಾಗಳು–ಗತಿಬದ್ಧ–ವಿಚಾರಧಾರೆಗಳು ಲೇಖನಗಳ ವಿಷಯಗಳಾದರೆ ಸೃಜನಶೀಲ ಬರವಣಿಗೆಯೇ ಅವುಗಳಿಗೆ ಆಸಿಕೊಂಡು ಸೃಷ್ಟಿಯಾಯಿತು.

ಕಾರಂತರ ಕುಟುಂಬವೇ ಅವರಿಗೆ ಪ್ರಪಂಚದ ಕಲ್ಪನೆಯನ್ನು ಕೊಟ್ಟಿರಬೇಕು. ಕಾರಂತರ ತಂದೆ ಶೇಷಕಾರಂತ, ತಾಯಿ 'ಲಕ್ಷ್ಮಿಅಮ್ಮ.' ಸೋದರರು ಏಳುಜನ, ಸೋದರಿಯರು ಇಬ್ಬರು ಮತ್ತೆ ವಾಸ್ತವದಲ್ಲಿ ಹದಿನಾಲ್ಕು ಮಕ್ಕಳನ್ನು 'ಹೆತ್ತಳಾ ತಾಯಿ.' ಕಾರಂತರ ಅಜ್ಜಿ 'ಮಹಾಲಕ್ಷ್ಮಿ' ಹಡೆದ ಎರಡು ಮಕ್ಕಳಲ್ಲಿ ಒಂದನ್ನು ಕಳೆದುಕೊಂಡವಳು. ಅಂತೆಯೆ ಇದ್ದೊಬ್ಬ ಮಗ, ಸೊಸೆ ಹಾಗೂ ಮೊಮ್ಮಕ್ಕಳ ಮೇಲೆ ಎಲ್ಲಿಲ್ಲದ ಪ್ರೀತಿಯ ಕಣ್ಣು, ಮನೆಯ ಬೇಸಾಯ, ದನಕರ ಏನೆಲ್ಲವನ್ನೂ ಕಾಪಾಡಿಕೊಂಡು ಸಂಸಾರ ನಡೆಸಿದ ಧೀರೆ ಆಕೆ. ಆ ಅಜ್ಜಿ ಕಾಶಿರಾಮೇಶ್ವರಗಳ ಯಾತ್ರೆಯನ್ನು ಶಿವರಾಮಕಾರಂತರ ನೇತೃತ್ವದಲ್ಲಿಯೆ ಮಾಡಿದರು. ಆಕೆ ಮಡಿದದ್ದು ಸುಮಾರು ೧೯೨೨–೨೩ರಲ್ಲಿ, ಕಾರಂತರ ಇಪ್ಪತ್ತರ ವಯಸ್ಸಿನಲ್ಲಿ. ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟ "ಮೂಕಜ್ಜಿಯ" ಮೂಲರೂಪ, ಪಾತ್ರ ಪರಿಕಲ್ಪನೆಯ ಆಲಂಬನದ, ಆಕಾರ, ಈಕೆಯೇ ಇರಬೇಕು.

ಬಾಲ್ಯದಲ್ಲಿ ಓದಿದ ಓದು ; ಯವ್ವನದಲ್ಲಿ ಓದಿದ ಓದು ಮತ್ತು ಓರ್ವ ವ್ಯಕ್ತಿ ತಾನು ಪಡೆದ–ಪಡೆವ–ಸುತ್ತಮುತ್ತಲಿನ ಪರಿಸರದ ಪ್ರಭಾವ. ಆಕರ್ಷಣೆಗಳು ಪ್ರತಿಯೊಬ್ಬ ಬರಹಗಾರನ ಹೃದಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಅವನ ಬರವಣಿಗೆಯನ್ನು ರೂಪಿಸುವ ರೂವಾರಿಗಳೂ ಅವೇ ಎಂದರೂ ತಪ್ಪಲ್ಲ. ಶಿವರಾಮ ಕಾರಂತರು ಈ ನಿಸರ್ಗನಿಯಮಕ್ಕೆ ಹೊರತಲ್ಲ. ಅವರು ಓದಿದ ಆ ಸೆಕ್ಸಟನ್ ಬ್ಲೇಕ್‌ನ ಬರವಣಿಗೆ ಪರ್ಲ್ ಬಕ್ಕಳ ಬರವಣಿಗೆ ಮತ್ತು ಥಾಮಸ್‌ಹಾರ್ಡಿಯ ಬರವಣಿಗೆ ಅವರನ್ನು ರೂಪಿಸಿವೆ. "ವಿಚಿತ್ರ ಕೂಟ" ಮತ್ತು "ಭೂತ" ಇವು ಬ್ಲೇಕನ ಬರವಣಿಗೆಯ ಮಾದರಿಯಲ್ಲಿ ಹುಟ್ಟಿದ ಬರವಣಿಗೆ–ಪತ್ತೇದಾರಿ ಕಾದಂಬರಿಗಳು ಎಂದಿದ್ದಾರೆ ವಿ. ಎಂ. ಇನಾಂದಾರರು. ಇದೇ ರೀತಿಯಲ್ಲಿ ಪರ್ಲ್‌ಬಕ್ಕಳ 'ಗುಡ್‌ಅರ್ಥ್' ಹಾಗೂ ಥಾಮಸ್ ಹಾರ್ಡಿಯ 'ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಗಳ ಪ್ರಭಾವದಲ್ಲಿ ಮೂಡಿ ಬಂದುವು. 'ಮರಳಿ ಮಣ್ಣಿಗೆ' ಮತ್ತು ಚಿಗುರಿದ ಕನಸು' ಎಂಬ ಕಾದಂಬರಿಗಳು.

ಕಾರಂತರ ಕಾದಂಬರಿ ಪ್ರಪಂಚವನ್ನು ತಿಳಿಯಬೇಕಾದರೆ ಅವರ ಇಡೀ ಜೀವನದ ಅವಲೋಕನ ಅವಶ್ಯವಾಗುತ್ತದೆ. ಅವರ ಕೃತಿಗಳೆಂದರೆ ಸಮಾಜಬಿಂಬದ ಪ್ರತಿಬಿಂಬಗಳು. ಅವರು ಸಾಮಾಜಿಕ–ಸಾಂಸ್ಕೃತಿಕ ಪುನರುಜ್ಜೀವನದ 'ಹೀರೋ.' ಪರಂಪರೆ ಹಾಗೂ ಪ್ರತಿಭಟನೆಗೆ ಆವರ ಎಲ್ಲ ಬರವಣಿಗೆಗಳಲ್ಲಿ ಕಾಣದೊರೆಯುತ್ತದೆ. ೧೯೨೦–೩೦ರ ದಶಕಗಳಲ್ಲಿ 'ಕನ್ಯಾಬಲಿ ಅಥವಾ ಸೂಳೆಯ ಸಂಸಾರ' 'ಚೋಮನ ದುಡಿ' 'ಗರ್ಭಗುಡಿ' ಮುಂತಾದ ಸಾಮಾಜಿಕ ಪರಿವರ್ತನೆಯ ಕೃತಿಗಳನ್ನು ರಚಿಸಿದರು. ಅವುಗಳ ಹಿಂದಿನ ಆಶೆ ಪರಿವರ್ತನಕ್ಕೆ ಪ್ರೇರಣೆ. ಅನಂತರ ಬಂದ ಕಾದಂಬರಿಗಳು ಹೆಚ್ಚು ವಸ್ತುನಿಷ್ಠವಾದವು. ಇವುಗಳಲ್ಲಿ ಭಾವುಕನಾದ ಮಾನವ ಮತ್ತು ಪ್ರಕೃತಿಯ ಆವೇಶ ಇವುಗಳನ್ನು

ಎಳೆಎಳೆಯಾಗಿ ತೊಳೆತೊಳೆಯಾಗಿ ಬಿಡಿಸಿದ್ದಾರೆ. ದೇಶ, ಕಾಲ ಹಾಗೂ ಕಾರ್ಯಾಚರಣೆ ಕಾರಂತರ ಕಾದಂಬರಿಗಳಲ್ಲಿ ಹೊಂದಿಕೊಂಡಿರುವಷ್ಟು, ಪ್ರಾಶಸ್ತ್ಯವನ್ನು ಪಡೆದಿರುವಷ್ಟು, ಇತರರ ಕಾದಂಬರಿಗಳಲ್ಲಿ ಕನ್ನಡದಲ್ಲಿ—ಕಾಣ ದೊರೆಯುವು. ಇವುಗಳಲ್ಲಿ ನಿಸರ್ಗವೂ ಇನಿತು ಜೀವಂತವಾಗಿ ಕಂಗೊಳಿಸುತ್ತದೆ. ಕಾರಂತರು ಬೆಳೆದಂತೆ ತಮ್ಮ ಆ ವಯೋಮಾನಕ್ಕೆ ಅನುಸರಿಸಿ ತಮ್ಮ ನಿರ್ದಿಷ್ಟವಾದ ಮಾನವತಾವಾದಿ ಜೀವನ ದರ್ಶನವನ್ನು ಅಭಿವ್ಯಕ್ತಿಗೊಳಿಸಲು ಆರಂಭಿಸಿದರು. ಇವು ಮೂರನೆಯ ಘಟ್ಟದ ಕಾದಂಬರಿಗಳು. 'ಅಳಿದ ಮೇಲೆ' ಮತ್ತು 'ಮೂಕಜ್ಜಿಯ ಕನಸುಗಳು' ಈ ಬಗೆಯವೆನ್ನಬಹುದು. ಪತ್ತೇದಾರಿ, ಸಾಮಾಜಿಕ ಹಾಗೂ ತಾತ್ವಿಕ ಎಂದು ಮೂರು ನೆಲೆಗಟ್ಟಿನಲ್ಲಿಯೂ ಕಾರಂತರ ಕಾದಂಬರಿಗಳನ್ನು ಅಭ್ಯಸಿಸಬಹುದು. ಪತ್ತೇದಾರಿ ಕಾದಂಬರಿಗಳನ್ನು ಆರಂಭದಲ್ಲೇ ಬರೆದು ಅನಂತರ ಆ ಬಗೆಯ ಕಾದಂಬರಿಗಳನ್ನು ಬರೆಯಲಿಲ್ಲ. ಪ್ರಾಯಃ ತಮ್ಮ ಮನೋವೃತ್ತಿಗೆ ಆ ಬಗೆ ಒಗ್ಗದೆಂದು ಅವರಿಗೆ ತೋರಿರಬೇಕು. ಅಂತೆಯೆ ಅವರ ಲೇಖನಿಯಿಂದ ಆ ಬಗೆಯ ಉತ್ತಮ ಬರಹ ಬರಲಿಲ್ಲ. ಸುತ್ತಮುತ್ತಲಿನ ಸಾಮಾಜಿಕ ಸುಖವನ್ನು ಕೆಡಿಸುವ ಅಂಥ ಶ್ರಷ್ಟೆಗಳನ್ನು, ಕಾರ್ಯಗಳನ್ನು, ಸಂಕುಚಿತ ಮನೋವೃತ್ತಿಗಳನ್ನು, ಕ್ಷುಲ್ಲಕ ಆಚರಣೆಗಳನ್ನು, ಬಡತನದ ನೋವು ನಲಿವುಗಳನ್ನು ಕುರಿತು ಬರೆಯುವುದು. ಅವುಗಳ ಚಿತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಕಡೆಯುವುದು ಹೆಚ್ಚು ಅರ್ಥಯುತವೆಂದು ಭಾವಿಸಿದರೆಂದು ತೋರುತ್ತದೆ. ಅಂತೆಯೇ ಸಾಮಾಜಿಕ ಕಾದಂಬರಿಗಳ ಕೃತಿರಚನೆಗೆ ಹೆಚ್ಚು ಸಂಖ್ಯೆಯಲ್ಲಿ ಬಂದಿವೆ—ಬರೆದಿದ್ದಾರೆ. ಅವುಗಳಿಂದಲೇ ಕಾರಂತರಿಗೆ ಗರಿ ಮೂಡಿದುದು; ಸಹಸ್ರಾರು ಜನರ ಹೃದಯಗಳನ್ನು ಗೆಲ್ಲಲು ಸಾಧ್ಯವಾದದ್ದು; ಮಿಕ್ಕ ಬರವಣಿಗೆ ಆ ತೂಕಕ್ಕೆ ಬರದು.

ಕಾರಂತರ ಕಾದಂಬರಿಗಳನ್ನು ಓದಿದವರ ಸಂಖ್ಯೆ ಮತ್ತು ಇತರ ಬರವಣಿಗೆಗಳನ್ನು ಓದಿದವರ ಸಂಖ್ಯೆ ಇವನ್ನು ತೋಲನಕ್ಕೆ ತ್ರಾಸಿನಲ್ಲಿ ಹಾಕಿದರೆ ಅಂಕಿಅಂಶಗಳು ಖಚಿತ ಸಂಗತಿಗಳನ್ನು ನೀಡುತ್ತವೆ. ಕಾರಂತರ ಕಾದಂಬರಿಗಳ ಸಂಖ್ಯೆ ಸುಮಾರು ೫೦ರ ಎಡಬಲದಲ್ಲಿದೆ. ಅವುಗಳ ಒಟ್ಟು ಬರಹದ ಪ್ರಮಾಣ (ಪುಟ ಸಂಖ್ಯೆ) ಅವರ ಇತರ ಬರಹಗಳೆಲ್ಲದರ ಒಟ್ಟು ಪ್ರಮಾಣದಷ್ಟೇ ಆಗುತ್ತದೆ; ಎಂದರೆ ಅವುಗಳದೇ ಭೀಮಪಾಲು. 'ದೇವದೂತರು' (೧೯೨೮) ಕಾದಂಬರಿಯಿಂದ ಆರಂಭಿಸಿ ಹುಟ್ಟಿದ ಈ ಪ್ರಕಾರ ಅವರ ಆಯುಷ್ಯದ ಕೊನೆಗಾಲದವರೆಗೂ ಮಹಾಪೂರವಾಗಿ ಹರಿದಿದೆ; ನದಿಯಂತೆಯೆ ಹರಿದಿದೆ. ಅದರ ಪಾತ್ರ, ಹರಿದಂತೆ, ಮುಂದೆ ಮುಂದೆ ಸಾಗಿದಂತೆ ಹಿಗ್ಗುತ್ತ ಹಿಗ್ಗುತ್ತ ಆಳವಾಗುತ್ತ 'ಆಳ ನಿರಾಳ' ಪದ್ಧತಿಯಲ್ಲಿ ಸಲಿಲ ಹರಿದಿದೆ; ಕಾರಂತ, ಅಂತ ಕಂಡರೂ ಅದು ಹರಿಯುತ್ತಲಿದೆ. ಸಾಹಿತಿ ಸಾಯುತ್ತಾನೆ. ಆದರೆ ಅವನ ಸಾಹಿತ್ಯ ಪ್ರಪಂಚ ಅದು ನಿರಂತರ.

ಕಾರಂತರ ಕೃತಿಗಳ ಪೈಕಿ 'ಕನ್ಯಾಬಲಿ' 'ಚೋಮನ ದುಡಿ' 'ಸರಸಮ್ಮನ ಸಮಾಧಿ' 'ಸನ್ಯಾಸಿಯ ಬದುಕು' 'ಗೊಂಡಾರಣ್ಯ' 'ಜಗದೋದ್ಧಾರನಾ' ಮತ್ತು 'ಆಳ ನಿರಾಳ' ಕೃತಿಗಳನ್ನು ಒಂದು ಗುಂಪಾಗಿ

ನೋಡಬಹುದು. ಇವುಗಳ ಉದ್ದೇಶ ಸಮಾಜದಲ್ಲಿಯ ಕುರುಡು ಕಟ್ಟಳೆಗಳನ್ನು ಹಾಗೂ ಅವುಗಳಿಂದ ಆಗಬಹುದಾದ ದುರಂತಗಳನ್ನು ಚಿತ್ರಿಸುವುದು. ಜೀವನ ಒಂದು ನದಿ, ಸಾಹಿತಿ ಅದರ ವೀಕ್ಷಕ, ಅನಂತರ ಅದರ ಚಿತ್ರಕ. ವೀಕ್ಷಣೆಯಲ್ಲಿ ಅನುಭವ, ಚಿತ್ರಣದಲ್ಲಿ ರಸದ ಸೃಷ್ಟಿ. 'ಕನ್ಯಾಬಲಿ' ನಿರ್ಭಾಗ್ಯ ಯುವತಿಯ ದುರಂತ ಮರಣವನ್ನು ವಸ್ತುವನ್ನಾಗಿ ಹೊಂದಿದೆ. 'ಚೋಮನದುಡಿ' ಅಸ್ಪೃಶ್ಯ ಸಮಸ್ಯೆಯನ್ನು ಕುರಿತಾಗಿದೆ. 'ಸರಸಮ್ಮನ ಸಮಾಧಿ' ದಾಂಪತ್ಯ ಜೀವನಗಳ ವಿರಸವನ್ನು ಚಿತ್ರಿಸಿದೆ. 'ಸಂನ್ಯಾಸಿಯ ಬದುಕು' ಹಾಗೂ 'ಜಗದೋದ್ಧಾರ ನಾ' ಕಾವಿ ಬಟ್ಟೆಯ ಕಪಟ ನಾಟಕಗಳನ್ನು ಚಿತ್ರಿಸುತ್ತವೆ. 'ದೇವದೂತರು' ಮತ್ತು 'ಆಳನಿರಾಳ' ವಿಡಂಬನೆಯ ಒಡಲಿನಲ್ಲಿ ಧರ್ಮ, ರಾಜಕೀಯ, ಕಲೆ, ಸಂಸ್ಕೃತಿ ಎಂಬ ವಿಷಯಗಳ ವಿಮರ್ಶೆಯಾಗಿವೆ. 'ಗೊಂಡಾರಣ್ಯ' ರಾಜಕೀಯ ಕುತಂತ್ರಗಳ ಕೈಪಿಡಿ ಎನ್ನುವಷ್ಟು ಮೌಲಿಕ ಸಂಗತಿಯಾಗಿದೆ. ರಾಜಕೀಯ ಜೀವನ ಈಗ ದಿನಗಳೆದಂತೆ ಇನ್ನಷ್ಟು ಗೊಂಡಾರಣ್ಯ–ಗುಂಡಾರಣ್ಯ– ಆಗುತ್ತಿದೆಯೆನ್ನುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ.

'ಮರಳಿ ಮಣ್ಣಿಗೆ' 'ಬೆಟ್ಟದ ಜೀವ' 'ಮುಗಿದ ಯುದ್ಧ' 'ಔದಾರ್ಯದ ಉರಳಲ್ಲಿ' ಇವು, ಕಾರಂತರು ನಿರ್ಮಾಣ ಕಾರ್ಯದಲ್ಲಿ ತೊಡಗಿದಾಗ ಅವರ ಮನೋಭೂಮಿ ವಿಶೇಷವಾಗಿ ಪ್ರೀತಿಯ ಅಗಾಧ ಸಾಮರ್ಥ್ಯವನ್ನು, ಮನುಷ್ಯರು ಮನುಷ್ಯರಾಗಿ ಬಾಳುವುದನ್ನು ಚಿತ್ರಿಸುವುದಾಗಿತ್ತು ಎಂಬುದನ್ನು ನಿರೂಪಿಸುತ್ತವೆ.

'ಕರುಳಿನಕರೆ' 'ಜಾರುವದಾರಿಯಲ್ಲಿ' 'ಬತ್ತದತೊರೆ' ಮತ್ತು 'ಒಡಹುಟ್ಟಿದವರು' ನಿರಪೇಕ್ಷ ಪ್ರೀತಿಯನ್ನು ಪ್ರತಿಬಿಂಬಿಸುತ್ತವೆ. ಮರಳಿಮಣ್ಣಿಗೆಯ ಪಾರ್ವತಿ, ಸರಸ್ವತಿ ಹಾಗೂ ನಾಗವೇಣಿ, ಕರುಳಿನಕರೆಯ ಭಾಗೀರಥಿ, ವೆಂಕಮ್ಮ ಮತ್ತು ಸರಸಿ, ಬತ್ತದ ತೊರೆಯ ಮಂಜುಳಾ, ವಿನತಾ ಹಾಗೂ ಅಂಜಲಿ; ಒಡಹುಟ್ಟಿದವರು ಕೃತಿಯ ವಾಸಂತಿ ಹಾಗೂ ಶೇವಂತಿ ಹೀಗೆ ಸ್ತ್ರೀಯರ ಪಾತ್ರಗಳಲ್ಲಿ ಸ್ತ್ರೀಗೆ ಸಹಜವಾದ ಭಾವನೆಗಳನ್ನು ಕಂಡರಿಸಿದ್ದಾರೆ. ಒಂದೊಂದು ತೆರ. ಎಲ್ಲರಲ್ಲೂ ಮುಖ್ಯಗುಣ –ಸ್ವಭಾವ–ಪ್ರೀತಿ. ಕಾರಂತರ ಪ್ರೀತಿಯ ಹಲವು ಮುಖಗಳನ್ನು ಇಲ್ಲಿ ಕಾಣಬಹುದು. ಕಾರಂತರ ದೃಷ್ಟಿಯಲ್ಲಿ ತಾಯ್ತನಕ್ಕೆ ಬಹಳ ದೊಡ್ಡ ಸ್ಥಾನವಿದೆ. 'ಹೆತ್ತಳಾ ತಾಯಿ' ಕೃತಿಯಲ್ಲೂ ಇದನ್ನು ಕಾಣಬಹುದು. ಬತ್ತದ ತೊರೆಯ ಅಂಜಲಿ ಮದುವೆಯಾಗದೆಯೂ ಮಗುವನ್ನು ಪಡೆಯುವ ಆಶೆಯಲ್ಲೂ ಇದನ್ನು ಕಾಣಬಹುದು.

'ಮೊಗಪಡೆದ ಮನ' 'ಚಿಗುರಿದ ಕನಸು' ಹಾಗೂ 'ಸ್ವಪ್ನದ ಹೊಳೆ' ಇವು ಕಾರಂತರ ದೃಢಮನಸನ್ನು, ಹಿಡಿದಕಾರ್ಯದಲ್ಲಿಯ ತಲ್ಲೀನತೆಯನ್ನು ಮತ್ತು ಕಾರ್ಯಪೂರೈಸುವಲ್ಲಿಯ ಕನಸನ್ನು ಪ್ರತಿಬಿಂಬಿಸುತ್ತವೆ. ನರ್ತಕ, ಕೃಷಿಕ ಹಾಗೂ ಲೇಖಕ ಕಾರಂತರನ್ನು ಓದುಗ ಇಲ್ಲಿ ಗುರುತಿಸಬಹುದು.

'ನಂಬಿದವರನಾಕ ನರಕ' ಮತ್ತು 'ಶನೀಶ್ವರನ ನೆರಳಲ್ಲಿ'—ನಂಬಿಕೆಗೂ ಬದುಕಿಗೂ ಇರುವ ನಿಕಟಬಾಂಧವ್ಯ ಈ ಕಾದಂಬರಿಗಳ ವಸ್ತುವಾಗಿದೆ. ಒಂದರಲ್ಲಿ ಮೇಲ್ಜಾತಿ ಹಾಗೂ ಕೀಳ್ಜಾತಿಯ ನಂಬಿಕೆ;

ತಿಳಿಯದೆಯೆ ಮದುವೆಯ ಕಾರ್ಯ ನಡೆದುದು ಮನುಷ್ಯತ್ವವನ್ನು ಇನಿತು ಮರೆತು ಮರಣದಲ್ಲಿ ನಾಯಕಿಯ ಅಂತ್ಯ ವನ್ನು ತಿಳಿಸುತ್ತದೆ. ಎರಡನೆಯದು ನೂರೊಕ್ಕಲುಗ್ರಾಮದ ನಾಶವನ್ನು ನಿರೂಪಿಸುತ್ತದೆ. 'ಶನೀಶ್ವರ' ಹಾಗೂ 'ಕಾವೇರಿ' ಇಡೀ ಗ್ರಾಮಜೀವನವನ್ನೇ ನಿಯಂತ್ರಿಸುತ್ತಾರೆ. ಎರಡರಲ್ಲಿನ ಹೊಂದಾಣಿಕೆ ತಪ್ಪಿದಾಗ ಗ್ರಾಮಕ್ಕೆ ಗ್ರಾಮವೇ ಈರ್ಷೆ ಹಾಗೂ ಅಸೂಯೆಗಳ ಸಂಗ್ರಾಮ ಭೂಮಿ ಆಗುತ್ತದೆ. ಶನೀಶ್ವರನ ನೆರಳಲ್ಲಿ' 'ಬೆಟ್ಟದ ಜೀವ' ಮತ್ತು 'ಕುಡಿಯರಕೂಸು' ಅಂತೆಯೆ 'ಚೋಮನ ದುಡಿ' ಕಾರಂತರ ಜಾನಾಂಗಿಕ ಅಧ್ಯಯನದ ಆಳಅಗಲಗಳನ್ನು ಬಿತ್ತರಿಸುತ್ತವೆ. 'ಕುಡಿಯರ ಕೂಸು' ಮಲೆಕುಡಿಯರ— ಆದಿವಾಸಿಗಳ–ಜೀವನವನ್ನು ನಿರೂಪಿಸು ತ್ತದೆ.

'ಮರಳಿಮಣ್ಣಿಗೆ' 'ಚಿಗುರಿದ ಕನಸು' ಒಂದು ಘಟ್ಟವನ್ನು ಸೂಚಿಸಿದರೆ 'ಸಮೀಕ್ಷೆ' ಹಾಗೂ 'ಅಳಿದಮೇಲೆ' ಇನ್ನೊಂದು ಘಟ್ಟವನ್ನು ಸೂಚಿಸುತ್ತವೆ. ಎಂಥಬಾಳು ಮನುಷ್ಯನಿಗೆ ಅರ್ಥಪೂರ್ಣವಾದದ್ದು, ಜೀವನಕ್ಕೆ ಸಾರ್ಥಕ್ಯವನ್ನು ತಂದುಕೊಡು ವಂತಹದು ಎಂಬ ಚಿಂತನ ಹೆಚ್ಚು ಮಹತ್ವ ವನ್ನು ಪಡೆಯಿತು. ಸಾರ್ಥಕ ಹಾಗೂ ನಿರರ್ಥಕಗಳ ಚಿಂತನೆಯಲ್ಲಿ ರಸಸೃಷ್ಟಿ ಆಗ ಬೇಕೆಂಬ ಮನೋಭಾವದಲ್ಲಿ ಕೃತಿಗಳು ರಚಿಸಲ್ಪಟ್ಟವು. ಸಮೀಕ್ಷೆಗೆ ಬರೆದ ಮುನ್ನುಡಿ ಯಲ್ಲಿ ಈ ಮಾತು ಸ್ಪಷ್ಟವಾಗುತ್ತದೆ:

> ಒಬ್ಬೊಬ್ಬರ ಬದುಕಿಗೆ ಒಂದೊಂದು ಆದರ್ಶ ನೆರವಾಗಬಹುದು. ಒಂದೊಂದು ಗುರಿ ಕೈದೀವಿಗೆಯಂತೆ ನಡೆಯಿಸಿಕೊಂಡು ಹೋಗಬಹುದು. ಒಬ್ಬನ ಬೆಳಕು ಇನ್ನೊಬ್ಬನಿಗೆ ಬೆಳಕೇ ಆಗಿ ಕಾಣಿಸ ದಿರಲೂಬಹುದು. ಈ ತತ್ವ ಒಪ್ಪಲು ಸಿದ್ಧರಿದ್ದವರಿಗೆ—ತಮ್ಮ ಅಚೀಚೆ ಅನೇಕ ಸುಂದರ ದೃಶ್ಯಗಳು ಕಾಣಿಸಬಹುದು. ಆದರೆ ಹುಡುಕಿನೋಡಬೇಕು. ಯಶಸ್ಸು ಬಾಜಾರದಲ್ಲಿ ಮೆರೆಯಬಹುದು. ಕರ್ತವ್ಯ ಮಾಡಿದ್ದು ಅಷ್ಟೊಂದು ಬೆಳಕಿಗೆ ಬರ ಲಾರದು.
>
> * * * *
>
> ಒಂದಿಷ್ಟು ಆಡಂಬರವಿಲ್ಲ; ಬಂದುದೂ ಗೊತ್ತಿಲ್ಲ; ಹೋದುದೂ ಗೊತ್ತಿಲ್ಲ. ಯಾವುದು ಅರ್ಥವತ್ತಾದ ಬಾಳು? ಅರ್ಥವರಿಯಲೆತ್ನಿಸಿ ಅದರಂತೆ ಬಾಳ ಲೆತ್ನಿಸಿದ ಸೋಲೂ ಯಶಸ್ವಿಯಾದುದಲ್ಲ ವೇನು? ಬಾಳಿನಲ್ಲಿ ಕಾಣಿಸದ ಅರ್ಥ ಎಲ್ಲಿದ್ದರೇನು? ಎಷ್ಟಿದ್ದರೇನು? ಯಾರ ಸಲುವಾಗಿ ಆದಿರಬೇಕು?

ಈ ಮನೋಭೂಮಿಕೆಯಲ್ಲಿ ಕೃತಿ ರಚಿಸಲು ಪಡೆದ ಪ್ರೇರಣೆಯನ್ನು ವಿಶ್ಲೇಷಿಸಿದರೆ ಕಾರಂತರ ಬೆಳವಣಿಗೆಯ ಇನ್ನೊಂದು ಘಟ್ಟ ವನ್ನು ಕಾಣಬಹುದು. ಕೃತಿಯ ರೂಪಣದ ಹಿನ್ನೆಲೆಯೆ ವ್ಯತ್ಯಾಸವಾಗಿದೆ. ಅಸ್ತಿತ್ವದ ಯಥಾರೂಪಣಕ್ಕೂ ಏಕೆ ಅಸ್ತಿತ್ವದಲ್ಲಿ ಇರ ಬೇಕು? ಎಂಬುದರ ಚಿಂತನದ ಚಿತ್ರಕ್ಕೂ ಮೂಲಭೂತ ವ್ಯತ್ಯಾಸವಿದೆ. ಇದೇ ವಿಚಾರ ಧಾರೆಯಲ್ಲಿ ಹುಟ್ಟಿದ್ದು 'ಮೂಕಜ್ಜಿಯ ಕನಸು' ಕೂಡ. ಸತ್ತುಹೋದ ಪಾತ್ರಕ್ಕಿಂತ ಅದು ಸತ್ತುಹೋದಮೇಲೆ ಉಳಿದದ್ದೇನು? ಎಂಬ ಪ್ರಶ್ನೆಯೆ ಕಾರಂತರಿಗೆ—ಕಾದಂಬರಿ ಕಾರರಿಗೆ—ಮಹತ್ವದ್ದಾಗಿದೆ.

ಮೂಕಜ್ಜಿ ಮನುಷ್ಯಳು, ಅಂತೆಯೆ ಆಕೆ ಆಗಾಗ ಕನಸು ಕಾಣುತ್ತಾಳೆ. ಅವಳ ಹಾಗೂ ಕಥಾನಿವೇದಕನ ಸಂಭಾಷಣೆಗಳ ಮುಖಾಂತರ ಕಾರಂತರ ಜೀವನದರ್ಶನ. ಜೀವನದ ಬಗ್ಗೆ ಜಗತ್ತಿನ ಬಗ್ಗೆ, ಬುದ್ಧಿವಾದಕ್ಕೆ ಆದಷ್ಟು ಸಮೀಪವಿದ್ದು ಇರುವಷ್ಟು ದಿನ ನಮಗೂ ಹಿತವಾಗಿ, ನಾಲ್ಕು ಜನರಿಗೂ ಹಿತವಾಗಿ ಬಾಳುವುದಷ್ಟೇ ಎನ್ನುತ್ತಾಳೆ ಅಜ್ಜಿ. 'ನಾಲ್ಕು ದಿನ ಚಂದಾಗಿ ಇರಬೇಕು' ಎಂಬುದು ಮೂಕಜ್ಜಿಯ ತತ್ವ. ಹಿತವಾಗಿ ಬಾಳುವುದೆಂದರೆ ಆಚೀಚಿನ ಎಲ್ಲ ಜೀವಿಗಳಿಗೂ ಹಿತವಾಗುವ ಹಾಗೆ ಇರಬೇಕು. ಇದು ಕಠಿಣವಾದ ಕೆಲಸ "ಆಗ ಇಷ್ಟನ್ನಾದರೂ ಮಾಡಬಹುದು: ಇನ್ನೊಬ್ಬರಿಗೆ ಅನ್ಯಾಯವಾಗದ ರೀತಿಯಲ್ಲಿ ಬದುಕುವುದು. ಪರರಿಗೆ ಸುಖಕೊಡಲು ಬಾರದೆ ಹೋದರೆ ದುಃಖ ಕೊಡದೆ ಇರುವುದಷ್ಟು."

ನಿವೇದಕನ 'ವಾಸ್ತವಿಕ ದೃಷ್ಟಿ' (ಸರಳ ದೃಷ್ಟಿ) ಮೂಕಜ್ಜಿಯ ತಾತ್ವಿಕದೃಷ್ಟಿ ಎರಡು ದೃಷ್ಟಿಕೋನಗಳು ಒಂದರೊಳಗೊಂದು ಇನಿತು ಹಾಸುಹೊಕ್ಕಾಗಿ ನೇಯಲ್ಪಟ್ಟಿವೆ. ಅಂತೆಯೆ ಪ್ರತಿಯೊಂದು ಘಟನೆಗೂ ಎರಡೆರಡು ಆಯಾಮಗಳು ನಿರ್ಮಾಣವಾಗುತ್ತವೆ–ಅಸ್ತಿತ್ವಕ್ಕೆ ಬರುತ್ತವೆ. ಮೂಕಜ್ಜಿ 'ಮೂಕ' ಅಜ್ಜಿಯಲ್ಲ! ಮತ್ತೆ ಭಯಂಕರ ಮೂಕಾಂಬಿಕೆಯೂ ಅಲ್ಲ. ಆಕೆಯ ದೃಷ್ಟಿ, ಕೋಣ ಅಲ್ಲ. ಕಾರಂತರ ಜೀವನತತ್ವವೇ–ದೃಷ್ಟಿಕೋನವೇ –ಮೂಕಜ್ಜಿಯ ಕನಸುಗಳು.

'ಮೂಕಜ್ಜಿಯ ಕನಸುಗಳು' ಅನಂತರ 'ಉಕ್ಕಿದ ನೊರೆ' 'ಮೈಮನಗಳ ಸುಳಿಯಲ್ಲಿ' 'ಕೇವಲ ಮನುಷ್ಯರು, 'ಧರ್ಮರಾಯನ ಸಂಸಾರ' 'ಮೂಜನ್ಮ' 'ಇಳೆಯೆಂಬ' 'ಅದೇ ಊರು, ಅದೇ ಮರ' 'ಕನ್ನಡಿಯಲ್ಲಿ ಕಂಡಾತ' 'ಗೆದ್ದ ದೊಡ್ಡಸ್ತಿಕೆ' 'ನಾವು ಕಟ್ಟಿದ ಸ್ವರ್ಗ' ಮತ್ತು 'ಕಣ್ಣಿದ್ದು ಕಾಣರು' ಮುಂತಾಗಿ ಹಲವು ಕಾದಂಬರಿಗಳನ್ನು ಕಾರಂತರು ರಚಿಸಿದ್ದಾರೆ. ಆದರೂ ಅಜ್ಜ ಕಾರಂತರ ಪಾತ್ರ–ಚಿತ್ರ–ಮೂಕಜ್ಜಿಯಲ್ಲೇ ಹೆಚ್ಚು ಸ್ಫುಟವಾಗಿ ಮೂಡಿದೆ ಎಂದರೆ ತಪ್ಪಾಗದು.

ಇಪ್ಪತ್ತನೇ ಶತಮಾನದಲ್ಲೇ ನಮ್ಮಲ್ಲಿ ಕಾರಂತರಷ್ಟು ದೊಡ್ಡ ವ್ಯಕ್ತಿ ಹುಟ್ಟಿಲ್ಲ, ಬೆಳೆದಿಲ್ಲ, ಸಾಧಿಸಿಲ್ಲ. ತಮ್ಮ ವೈಯಕ್ತಿಕ ಶಕ್ತಿಗಳನ್ನು ವಿಕಾಸಗೊಳಿಸಿಕೊಂಡು ಅದರ ಮೂಲಕ ನಿಜವಾದ ಸಮಾಜ ಸೇವೆ ಮಾಡಿದ್ದಾರೆ.

—ಗೋಪಾಲಕೃಷ್ಣ ಅಡಿಗ

ಕಾರಂತರ ಕೃತಿಗಳಲ್ಲಿ ಅಚ್ಚರಿ, ಎಚ್ಚರ, ಲಜ್ಜೆ

ದೇವು ಹನೆಹಳ್ಳಿ
ಕಾರ್ಯಕ್ರಮ ನಿರ್ವಾಹಕರು
ಆಕಾಶವಾಣಿ
ಮಂಗಳೂರು

ಒಂದು ಸಾತ್ವಿಕ-ಸಂವೇದನಾಶೀಲ ಮನಸ್ಸಿನ ಬದುಕು, ಬರಹಗಳನ್ನು ಸ್ಮೃತಿ ರೂಪಿಸಿದಾಗ ಅವು ಒಂದು ಸಮಾಜದ, ಒಂದು ಜನಸಮುದಾಯದ ಪ್ರಜ್ಞೆಯಾಗುತ್ತವೆ. ಸ್ಮೃತಿಯೆಂದರೆ ಎಚ್ಚರ, ನೆನಪು. ತಾನು ಬಾಳಿದ ನೆನಪು. ತಾನು ಅಭಿವ್ಯಕ್ತಿಸಿದ ವಿಚಾರಗಳ ನೆನಪು. ಬಾಳಿದ್ದನ್ನು ಅಭಿವ್ಯಕ್ತಿಸುವಾಗ ಎಚ್ಚರ. ಅಭಿವ್ಯಕ್ತಿಸಿದ್ದನ್ನು ಬಾಳಿನಲ್ಲಿ ಕಾಣುವ, ಕಾಣಿಸುವ ಎಚ್ಚರ, ಪ್ರಾಮಾಣಿಕತೆ. ಎಚ್ಚರ ಪರಿಪೂರ್ಣವಾಗುವುದು ಅಚ್ಚರಿ ಮತ್ತು ಲಜ್ಜೆ ಅದರ ಹಿಂದುಮುಂದಿದ್ದಾಗ. ಒಂದು ತೆರೆದ, ಸಂವೇದನಾಶೀಲ ಮನ ಅರಿವಿನತ್ತ ಕ್ರಮಿಸುವುದು ಅಚ್ಚರಿ, ಎಚ್ಚರ ಮತ್ತು ಲಜ್ಜೆ–ಇವು ಮೂರು ಮೇಳೈಸಿದಾಗ. ಸ್ಮೃತಿಯೆಂದರೆ ಅರಿವು ಕೂಡಾ ಹೌದು. ಅಚ್ಚರಿ, ಎಚ್ಚರ ಮತ್ತು ಲಜ್ಜೆ-ಬೌದ್ಧಿಕ ಪಾರಮ್ಯಕ್ಕಿಂತ, ಬೌದ್ಧಿಕ ಪ್ರಾಮಾಣಿಕತೆಯನ್ನು ಪ್ರಾಮುಖ್ಯವನ್ನಾಗಿಸುತ್ತವೆ. ತನ್ನ ಎಚ್ಚರವು ಒಂದು ಜನಸಮುದಾಯದ ಪ್ರಜ್ಞೆಯಾಗಬೇಕು ಎಂಬುವುದು ಅಂತಹ ಅಭಿವ್ಯಕ್ತಿಯ ಆಶಯವಾಗಿರುವುದು ಸಹಜ. ಆ ಆಶಯ ಸೋತಾಗ ಆ ಎಚ್ಚರ-ಅಭಿವ್ಯಕ್ತಿ ಸಮಾಜದ ಪ್ರಜ್ಞೆಯಾಗುವಲ್ಲಿ ಸೋಲುವುದು ಮತ್ತು ಸಮಾಜ ಆ ಎಚ್ಚರ-ಅಭಿವ್ಯಕ್ತಿಯನ್ನು ತನ್ನ ಪ್ರಜ್ಞೆಯನ್ನಾಗಿಸುವಲ್ಲಿ ಸೋಲುವುದು ಹತಾಶೆಯೆಡೆಯಿಕ್ಕುತ್ತದೆ. ಈ ಎಚ್ಚರ, ಅಭಿವ್ಯಕ್ತಿ, ಆಶಯ, ಹತಾಶೆಗಳು ತಿರುತಿರುಗಿ ಜೇಡನ ಬಲೆಯಂತೆ ವೃತವೃತ್ತಗಳ ಹಂದರವಾಗುವುದನ್ನು ಕಾರಂತರ ಬದುಕು, ಬರಹ ಮಾತುಗಳಲ್ಲಿ ಕಾಣುತ್ತೇವೆ.

ಅಚ್ಚರಿ

ಕರಿಯನಿಗೆ (ಕುಡಿಯರ ಕೂಸು) ಜ್ಞಾನದ ಅಪೇಕ್ಷೆ ಇಲ್ಲವೆಂದಲ್ಲ. ಅವನಿಗೆ ಅದರ ಕಲ್ಪನೆಯಿಲ್ಲ. ಅವನ ಅಚ್ಚರಿ ಬಾಲ್ಯದ ಮುಗ್ಧತೆಯಿಂದ,ಸರಳತೆಯಿಂದ ಪ್ರಚೋದಿತವಾದದ್ದು. ಆ ಅಚ್ಚರಿ ತಂದ ಅರಿವು-ತಿಳಿವು ಅನುಭವವಾಗುತ್ತದೆ. ಆ ಅಚ್ಚರಿಗೆ, ಅಚ್ಚರಿ ತರುವ ಅನುಭೂತಿಗೆ ವಾಚಿಕ ಅಭಿವ್ಯಕ್ತಿಯ ಹಂಗಿಲ್ಲ, ಹಂಬಲವಿಲ್ಲ, ಅಗತ್ಯವೂ ಇಲ್ಲ. "ಹಾ ಎಷ್ಟು ಚಂದದ ಗೋಡೆ! ಎಂದು ನುಡಿಯುತ್ತಾನೆ ಕರಿಯ, ಎದುರಿನ ಮಲೆಯ ಬೆಡಗನ್ನು ಕಂಡು ಪಾಪ-ಸೌಂದರ್ಯ ನೋಡುವ ಕಣ್ಣಿದ್ದರೂ, ಉಣ್ಣುವ ಆಸೆಯಿದ್ದರೂ ಬಾಯಿಗೆ ತಕ್ಕ ಮಾತು ಬರಲೊಲ್ಲದುದಕ್ಕೆ ಚಂದ, 'ಚಂದ, ಚಂದ, ಎಷ್ಟು ಚಂದ'

ಎಂಬ ಒಂದೆರಡು ನುಡಿಗಳಲ್ಲೇ ಈ ಬ್ರಹ್ಮಾಂಡ ಸೊಗಸನ್ನು ಚಿತ್ರಿಸಲೆತ್ನಿಸುತ್ತಾನೆ" ಎನ್ನುತ್ತಾನೆ ನಿರೂಪಕ. ಆ ಅಚ್ಚರಿಗೆ, ಆನಂದಕ್ಕೆ ಉಪಾಸನೆಗೆ ಈ ವಾಚಿಕ ಬಡತನ ಯಾವ ಚ್ಯುತಿಯನ್ನೂ ತರದು. ವಾಚ್ಯವಾದರೆ ಚ್ಯುತಿಯೇ ಬಂದೀತು. ಕಾರಂತರು ಈ ಎಳೆಯನ್ನು ಯಕ್ಷಗಾನಕ್ಕೂ ಸುತ್ತುತ್ತಾರೆ. ಯಕ್ಷಗಾನಕ್ಕೆ ನುಸುಳಿದ ಅತಿಮಾತುಗಾರಿಕೆ, ಅತಿರೇಕ ಮಾತುಗಾರಿಕೆ ಅದರ ಅಂದವನ್ನು ಅದು ಕೊಡುವ ಆನಂದವನ್ನು ಹೇಗೆ ಕೆಡಿಸಿತು ಎಂಬುದನ್ನು ಮನಗಂಡು ತಮ್ಮ ಪ್ರಯೋಗಗಳಲ್ಲಿ ಮಾತನ್ನೇ ಬಿಟ್ಟುಬಿಟ್ಟರು.

ಈ ಅಚ್ಚರಿ, ಅದು ತಂದ ಆನಂದ ಮತ್ತು ಅರಿವು ಕರಿಯನ ಬಾಲ್ಯದ ಮುಗ್ಧತೆಯನ್ನು ಅವನು ಬೆಳೆದಂತೆ ವಿವೇಕವನ್ನಾಗಿ ಪರಿವರ್ತಿಸಿದವು.

ಆ ಮುಗ್ಧತೆಯನ್ನು, ವಿವೇಕವನ್ನು ಅವನು ಗಳಿಸಿದ್ದಲ್ಲ, ಉಳಿಸಿಕೊಂಡದ್ದು. ಇದು ಕಾದಂಬರಿಯಲ್ಲೊಂದು ಪ್ರತಿಮೆಯಾಗಿ ರೂಪುಗೊಳ್ಳುತ್ತದೆ. ಹಿಂದಿನಿಂದಲೂ ಸಾಹಿತ್ಯದಲ್ಲಿ ಆನೆಯು ಶಕ್ತಿ, ಮುಗ್ಧತೆ, ವಿನಯಶೀಲತೆ, ಜ್ಞಾನಗಳ ಸಂಕೇತವಾಗಿದೆ. ತನ್ನ ಕುಲದವರು, ಕುರುಡುಭಕ್ತ, ಬಟ್ಟ, ಧನಿಗಳೂ ಕೂಡಾ ತನ್ನನ್ನು 'ಆನೆ ಹಿಡಿದವನು' ಎಂದು ಹೊಗಳುವಾಗ ಕರಿಯ ವಿನಯದಿಂದ ಹಿಡಿದೆನೆಂದರೆ ಅಹಂಕಾರವಾದೀತು, ಅದನ್ನು ನಾನು ಉಳಿಸಿ ತಂದು ಸಾಕಿದೆನಷ್ಟೆ. ದೇವರು ಬಯಸಿದಷ್ಟು ದಿನ ನನ್ನ ಬಳಿ ಇರುತ್ತದೆ' ಎನ್ನುತ್ತಾನೆ. ಕರಿಯ ತನ್ನ ಮುಗ್ಧತೆಯನ್ನು ವಿವೇಕವನ್ನಾಗಿಸುವಲ್ಲಿ ಸಫಲನಾಗಿದ್ದಾನೆ.

ಕರಿಯನ ಸೌಂದರ್ಯೋಪಾಸನೆಯ ಬಗ್ಗೆ ಹೇಳುತ್ತಾ ನಿರೂಪಕ 'ಚಿತ್ರಿಸಲೆಳಸುತ್ತಾನೆ' ಎನ್ನುತ್ತಾನೆ; ಅದು ಮನೋಭಿತ್ತಿಯಲ್ಲಿ, ಕರಿಯನದು ಮುಗ್ಧ ಅಚ್ಚರಿ. ವಸಂತ ದೇಸಾಯಿಯದು ಪ್ರಬುದ್ಧ ಕಲಾವಿದನ ಅಚ್ಚರಿ. ಆದರೂ ವಾಚ್ಯವಾಗಿ ಸೊನ್ನೆಯೇ! ಅವನೂ ಬಾಯ್ತೆರೆದು ವಿವಶನಾಗಿ ಮೂಕನಾದ ಸಂದರ್ಭಗಳೂ ಬರುತ್ತವೆ. 'ನೀವು ಕಲೆಯ ಬಗ್ಗೆ ತಿಳಿದವರು' ಎಂದು 'ಹಿಂಬಾಲಕರು' ಹೇಳಿದರೂ 'ಇಲ್ಲಪ್ಪ' ಎನ್ನುತ್ತಾನೆ. ಅವನೂ ತನ್ನ ಅಚ್ಚರಿಯನ್ನು ಹೇಳಲಾರ. 'ಚಿತ್ರಿಸಲೆಳಸುತ್ತಾನೆ' ಅಷ್ಟೆ.

ಕಾರಂತರನ್ನು ಚಿತ್ರಕಾರನನ್ನಾಗಿ, ನರ್ತಕನನ್ನಾಗಿ, ಛಾಯಾಚಿತ್ರಕಾರನನ್ನಾಗಿ ಅಲೆಮಾರಿಯನ್ನಾಗಿ, ಕಲಾವಿಮರ್ಶಕನನ್ನಾಗಿ ಮಾಡಿದ್ದು ಕರಿಯ-ದೇಸಾಯಿಯರ ಅಚ್ಚರಿ.

ಎಚ್ಚರ

ಭಾರತ ಕ್ರಮಿಸುತ್ತಿರುವ ಅಧೋಮಾರ್ಗದ ಅರಿವಿದ್ದೂ, ತನ್ನ ಕರ್ತವ್ಯವನ್ನು ತನ್ನ ಮಿತಿಯನ್ನರಿತು ಪ್ರಾಮಾಣಿಕನಾಗಿ ನಡೆಸುವ ಅರುಣಾಚಲಯ್ಯ(ಗೊಂಡಾರಣ್ಯ) ಎಚ್ಚರ, ಗೊಂದಲ, ಅಸಹನೆ, ಬುದ್ಧಿತೀಕ್ಷ್ಣತೆ, ಹತಾಶೆಗಳ ಮೊಟ್ಟೆ ಕಾಂಚನಮಾಲೆ (ಗೊಂಡಾರಣ್ಯ) ನಿರ್ಲಿಪ್ತ ನಳಿನಿಗುಪ್ತ (ಮೂಜನ್ಮ,) ಹೆಡ್ಡ, ನಿಷ್ಪ್ರಯೋಜಕ ಎಂಬ ಹಣೆಪಟ್ಟಿಗೆ ಸಿಡಿದೆದ್ದು, ತಾನು ಗೆಲ್ಲಲಾರೆ, ಭಾರತಕ್ಕೆ ಭವಿಷ್ಯವಿಲ್ಲ ಎಂಬ ಅರಿವಿದ್ದರೂ, ಕೊನೆತನಕ ತನ್ನ ಚಾಣಕ್ಯ ತಂತ್ರಗಳಿಗೆ ವಿರಾಮ ನೀಡದ ರಮಾಕಾಂತ ಬಾಪಟ್ ಯಾನೆ ಚಂದ್ರಕಾಂತ ಗುಪ್ತ (ಮೂಜನ್ಮ),ಎಂತಹ ದುರ್ಬರ ಪ್ರಸಂಗಗಳಲ್ಲಿಯೂ ತಮ್ಮ ನಿಷ್ಕಪಟ, ಪ್ರಾಮಾಣಿಕ ಸರಳ ಜೀವನ ಪ್ರೇಮವನ್ನು ತೊರೆಯದ

ಕಾವೇರಮ್ಮ, ರುಕ್ಮಾಯಿ, ಗೋಗಾಲಯ್ಯ ಪಾರ್ಬೋತಿ, ಸರಸೋತಿ, ನಾಗವೇಣಿ (ಶನೀಶ್ವರನ ನೆರಳಲ್ಲಿ, ಸನ್ಯಾಸಿಯ ಬದುಕು, ಬೆಟ್ಟದ ಜೀವ. ಮರಳಿ ಮಣ್ಣಿಗೆ), ನಿಸ್ಮಾರಿಗಳಾದ ಮೂಕಜ್ಜಿ, ಲಕ್ಷ್ಮಣರಾಯ (ಮೂಕಜ್ಜಿಯ ಕನಸುಗಳು, ಅದೇ ಊರು, ಅದೇ ಮರ), ಲೋಕ ನನ್ನನ್ನು ನೋಡಿ ನಕ್ಕರೆ, ಲೋಕವನ್ನು ನೋಡಿ ನಾನು ನಕ್ಕೇನು. ಎಂಬ ದಾರ್ಷ್ಟ್ಯದ ವಿಕ್ಷಿಪ್ತ ಚಂದ್ರಯ್ಯ (ಸರಸಮ್ಮನ ಸಮಾಧಿ) ವಿಕ್ಷಿಪ್ತ ಜಯರಾಮ (ಇನ್ನೊಂದೇ ದಾರಿ), ಕಡು ಎಚ್ಚರದಲ್ಲಿಯೂ ತನ್ನ ನೈಚ್ಯಭಾವವನ್ನು ಮೆಟ್ಟಲು ಜಾಣಾಕ್ಷತನ ತೋರುವ ಜಿ. ವಿ. ಕಾಸರಕ್ (ಕಣ್ಣಿದ್ದೂ ಕಾಣರು), ಕಟ್ಟೆಚ್ಚರದಲ್ಲಿ ಕನಸು ಕಾಣುವ ಚಂದ್ರಯ್ಯ ಕೃಷ್ಣರಾಯ, ಮೂಕಜ್ಜಿ, (ಸರಸಮ್ಮನ ಸಮಾಧಿ, ಸ್ವಪ್ನದ ಹೊಳೆ, ಮೂಕಜ್ಜಿಯ ಕನಸುಗಳು), ಸರಳ ನಿರಾಡಂಬರಿ ದೇಸಾಯಿ (ಆಳ, ನಿರಾಳ), ಮನುಷ್ಯನ ಆಲೋಚನೆ, ಕಲ್ಪನೆಗಳ ಮಿತಿಯನ್ನು, ಮುಖ್ಯವಾಗಿ ತನ್ನ ಮಿತಿಯನ್ನು ಅರಿತು, ಯಾವುದೋ ಒಂದು ನೆಲೆಯಲ್ಲಿ ಪ್ರಾಮಾಣಿಕತೆ, ಸರಳತೆ, ವಿವೇಚನೆ, ಅರಿವು ತಿಳಿವು, ಎಲ್ಲವೂ ಸಮಾನಾರ್ಥಕ ಪದಗಳು ಎಂಬರಿವು ಮೂಡಿಸುವ ಜಾಣ (ಕಣ್ಣಿದ್ದೂ ಕಾಣರು), ಸ್ವಂತಿಕೆಯ ಹುಡುಕಾಟದಲ್ಲಿ ಎಚ್ಚರವಾಗಿರುವ ಶ್ರೀನಿವಾಸ (ಸಮೀಕ್ಷೆ)....

'ಉದ್ಧರಿ ತತ್ವಜ್ಞಾನಿ' ನೆಹರೂವಿನ ಹೊಗಳುಭಟ್ಟ ದೇಶವಾದಿಗಳು, ಲೆನಿನ್ ಮತ್ತು ಸ್ಟಾಲಿನರು ರಕ್ತದಲ್ಲಿ ಅದ್ದಿ ರಷ್ಯಾದಲ್ಲಿಯೇ ಕೊಳೆಯಿಸಿಟ್ಟದ್ದ ಮಾರ್ಕ್ಸ್‌ನ ಬೀಜಗಳನ್ನು ಭಾರತದ ಮರುಭೂಮಿಯಲ್ಲಿ ಬಿತ್ತುವ ಶ್ರಮವಾದಿಗಳು ಈ ದೇಶವನ್ನು ಎತ್ತಕೊಂಡೊಯ್ದಾರು ಎಂಬುದನ್ನು ಕಾರಂತರು ಅಂದೇ ಮನಗಂಡಿದ್ದರು. ೧೯೫೪ರಲ್ಲಿ ಬರೆದ ಗೊಂಡಾರಣ್ಯದಲ್ಲಿ ಹತಾಶೆ ಇಣಿಕಿದರೂ ಆಶಾವಾದಕ್ಕೆ ಸ್ವಲ್ಪವಾದರೂ ಎಡೆಯಿತ್ತು. ಅರುಣಾಚಲಯ್ಯ ಚುನಾವಣೆಯಲ್ಲಿ ಗೆದ್ದಿದ್ದಾರೆ. ಆದರೂ ಕೊಲೆಯಾದರು. ಕಾದಂಬರಿಕಾರನ ಹತಾಶೆಯಿಂತಲೋ, ಕಾಂಚನಮಾಲೆಯ ಹತಾಶೆಯಿಂದಲೋ ಸೇತುರಾಯ ತನ್ನ ಪರಿವಾರ ಗಣಗಳೊಂದಿಗೆ ನಿರ್ನಾಮವಾಗಿದ್ದಾನೆ. ಇದರಿಂದಾಗಿ ಕಾದಂಬರಿಯು ಕೊನೆ ಅಸಮರ್ಪಕ, ಅಸಹಜ, ಅತಿರೇಕ ಅನ್ನಿಸಿದರೂ ಆಶಾವಾದಕ್ಕೆ ಎಡೆಯಿತ್ತು. ಕಮ್ಯುನಿಸಂ ಮತ್ತು ಮಾರ್ಕ್ಸಿಸಂಗಳನ್ನು ತಿರಸ್ಕಾರದಿಂದ ದ್ವೇಷದಿಂದ ನೋಡುವ ನಿಲುವು ಇದು ಎನ್ನುವುದಕ್ಕಿಂತ 'ಎರವಲು ತಂದ' ಉದಾಹರಣೆ'ಯನ್ನು ಎಚ್ಚರದಿಂದ ನೋಡುವ ಯತ್ನ ಈ ಗೊಂಡಾರಣ್ಯ ಎನ್ನಬಹುದು.

ಆದರೆ ೧೯೭೪ರಲ್ಲಿ ಬರೆದ (ಸನ್ನಿವೇಶ ಸ್ವಾತಂತ್ರ್ಯಾನಂತರದ ಹಿಂದು ದಶಕ) 'ಮೂಜನ್ಮ' ಹಾಗೂ ೧೯೮೦ರಲ್ಲಿ ಬರೆದ 'ನಾವು ಕಟ್ಟಿದ ಸ್ವರ್ಗ' ಕಾದಂಬರಿಗಳಲ್ಲಿ ಈ ಆಶಾವಾದ, ಭರವಸೆ, ನಿರೀಕ್ಷೆಗಳು ಸಂಪೂರ್ಣ ಮಾಯವಾಗಿವೆ. ಮೂಜನ್ಮ ಕಾದಂಬರಿಯ ಮುನ್ನುಡಿಯಲ್ಲಿ ಕಾರಂತರು ಹೇಳುತ್ತಾರೆ. "ಸ್ವತಂತ್ರ ಭಾರತದ ೨೬ ವರ್ಷಗಳ ಇತಿಹಾಸ ಈ ಲೇಖನವನ್ನು ಎಷ್ಟು ದುಃಖಕ್ಕೆ ಗುರಿಮಾಡಿದೆ, ಎಂಥ ನಿರಾಶೆಯಿಂದ ತುಂಬಿಸಿದೆ ಎಂಬುದನ್ನು ಆ ಅವಧಿಯ ಒಂದು ಚಿತ್ರವು ತಮಗೆ ತೋರಿಸಿಕೊಟ್ಟೀತು.

ಇಂದು ನಮ್ಮ ದೇಶದ ಜನರು ಕೇವಲ ವ್ಯಕ್ತಿಲಾಭ, ಸ್ವಾರ್ಥಗಳಿಗಾಗಿ ತಮ್ಮ ಶೀಲ

ವನ್ನು ದಿನೇ ದಿನೇ ಕಳೆದುಕೊಳ್ಳುತ್ತಾ ಬಂದಿದ್ದಾರೆ. ಅಂಥದೇ ಪುಢಾರಿಗಳ ಪೂಜೆಯನ್ನು ತೊಡಗಿ, ಅವರ ಹೆಜ್ಜೆಯ ಜಾಡಿನಲ್ಲಿ ತಾವೂ ನಡೆದು. ಹಣದ ದಾರಿದ್ರ್ಯದ ಜತೆಯಲ್ಲಿ ನೈತಿಕ ಬರಗಾಲವನ್ನು ತಾವು ತಂದುಕೊಳ್ಳುತ್ತಿದ್ದಾರೆ ಎಂಬುದೇ ನನ್ನ ಮುಖ್ಯ ಕೊರಗು."

ಗಾಂಧೀವಾದದಲ್ಲಿನ ಕಾರಂತರ ಭ್ರಮನಿರಸನವನ್ನು ನಾವು 'ಮರಳಿ ಮಣ್ಣಿಗೆ'ಯ ರಾಮನಲ್ಲಿ ಯಥಾವತ್ತಾಗಿ ಕಾಣುತ್ತೇವೆ. ಅನ್ಯರಲ್ಲಿ ಆದರ್ಶವನ್ನು ಹುಡುಕುವ ಗೊಡವೆಯೇ ಬೇಡ, ಸ್ವಂತಿಕೆಯ ಹುಡುಕಾಟದಲ್ಲಿ ಆದರ್ಶವನ್ನು ಕಂಡುಕೊಳ್ಳುತ್ತೇನೆ ಎಂಬ ಕಾರಂತರ ನಿಲುವಿನ ನೆರಳನ್ನು 'ಮರಳಿ ಮಣ್ಣಿಗೆ'ಯಲ್ಲಿ ಕಾಣುತ್ತೇವೆ. ನೆಹರೂವಿನ ಅರೆಬೆಂದ ಡಾಂಭಿಕ ಆದರ್ಶಗಳು ಹುಚ್ಚು ಪರಿಕಲ್ಪನೆಗಳು ವಸಂತ ದೇಸಾಯಿಯ ಬಾಯಲ್ಲಿ ನುಚ್ಚುನೂರಾಗುತ್ತವೆ.

ಮಣಿಪಾಲದ ಒಂದು ಸಭೆಯಲ್ಲಿ ಕೇಂದ್ರ ಅರ್ಥಮಂತ್ರಿ ಕೃಷ್ಣಕುಮಾರ್ ಕೋಟಿ ಕೋಟಿ ಲೆಕ್ಕದಲ್ಲಿ ಬರಿಗೈಯಲ್ಲಿ ಮೊಳ ಹಾಕುತ್ತಿದ್ದಾಗ 'ನಾಸಿಕದ ಪ್ರಿಂಟಿಂಗ್ ಪ್ರೆಸ್ ಇರುವ ತನಕ ನಿಮ್ಮ ಕೋಟಿ ಕೋಟಿಗಳಿಗೆ ಬರವಿಲ್ಲ. ಭಾರತವನ್ನು ಭಿಕ್ಷುಕರ ದೇಶವನ್ನಾಗಿಸಿದ್ದೀರಿ' ಎಂದು ಅಬ್ಬರಿಸಿದ್ದರು. ಚಂಪ್ರಾಂತಗುಪ್ತರು ನೇರವಾಗಿ ಹೇಳುತ್ತಾರೆ. 'ಗಾಂಧಿಯೊಬ್ಬ ದಡ್ಡ, ತನ್ನ ಹಿಂಬಾಲಕರನ್ನೆಲ್ಲ ಅನುಯಾಯಿಗಳೆಂದು ತಿಳಿದಿದ್ದಾರೆ, ಅವರೆಲ್ಲ ಹೊಗಳುಭಟ್ಟರು ಅಷ್ಟೆ'. ಕೊನೆಕೊನೆಗೆ ಕಾರಂತರ ಹತಾಶೆ ಅವರ obsession ಆಗಿತ್ತೆಂದರೂ ಸರಿಯೇ. ಇದರಿಂದಾಗಿ ಅವರ ಕೆಲವು ಪಾತ್ರಗಳಲ್ಲಿ, ಕಾದಂಬರಿಗಳಲ್ಲಿ (ಮುಖ್ಯವಾಗಿ ನಾವು ಕಟ್ಟಿದ ಸ್ವರ್ಗ, ಅಳಿ ನಿರಾಳ, ನಷ್ಟ ದಿಗ್ಗಜಗಳು) ವಾಚಾಳಿತನ ಕಂಡುಬಂದು ಅವು ಉತ್ತಮ ಕಾದಂಬರಿಗಳಾಗುವಲ್ಲಿ ಸೋಲುತ್ತವೆ. ಈ ಸ್ವಾತಂತ್ರ್ಯ ಸ್ವರ್ಣಮಹೋತ್ಸವ ಆರಂಭವಾದ ಆಗಸ್ಟ ೧೫ ೧೯೯೭ ರಂದು ಅವರು ಮಣಿಪಾಲದಲ್ಲಿ ಮಾಡಿದ ಭಾಷಣ ಅವರ ಹತಾಶೆ, ಭ್ರಮನಿರಸನ, ನಿರಾಸೆಗಳು ಮೊತ್ತವಾಗಿತ್ತು. 'ಇದನ್ನು ಕಾಣಲು ನನಗೆ ದೀರ್ಘಾಯುಷ್ಯವೇ' ಎಂದು ನೋವು ವಿಷಾದಗಳಿಂದ ಕಾರಂತರು ಕೇಳುವಂತಾದುದು ದೇಶದ ದೌರ್ಭಾಗ್ಯ.

ಒಬ್ಬನನ್ನು ನಾಶಮಾಡಿ ಹತ್ತು ಜನಕ್ಕೆ ಹಂಚುವುದು ಸಮಾಜವಾದವಲ್ಲ ಎಂಬುದು ಕಾರಂತರು 'ಗೊಂಡಾರಣ್ಯ' ಮತ್ತು 'ಮೂಜನ್ಮ'ಗಳಲ್ಲಿ ಪ್ರತಿಪಾದಿಸಿದ ಅಭಿಪ್ರಾಯ. ದುಡ್ಡಿದ್ದವರೆಲ್ಲರೂ ಅಪರಾಧಿಗಳೆಂಬುದು ಸರಕಾರದ ತೀರ್ಮಾನವಾಗಬಾರದು, ದುಡ್ಡಿದ್ದವರ ತಲೆಹೊಡೆಯುವುದು ಸಮಾನತೆಯಲ್ಲ ಎಂಬುದು ಮುಖ್ಯವಾಗುತ್ತದೆ. ಇದಕ್ಕೆ ನೂರೊಕ್ಕಲು ಗ್ರಾಮದ ಮುಗ್ಧ ಕುಡುಬಿ ಮುದುಕ ಬಹು ಎಚ್ಚರದ, ವಿವೇಕದ ಅಭಿಪ್ರಾಯ ನೀಡುತ್ತಾನೆ "ಹೊಟ್ಟೆಗೆ ಇಲ್ಲವಾದರೆ ಬೇಡಿಯಾದರೂ ತಿನ್ನಬಹುದು, ತಲೆಹೊಡೆದು ಬದುಕುತ್ತೇನೆ ಎಂದರೆ ನ್ಯಾಯವಾದೀತೇ ? ಆ ಕಾಲಕ್ಕೆ ನಮ್ಮ ತಲೆಯನ್ನು ಹೊಡೆಯುವವನು ಮತ್ತೊಬ್ಬ ಹುಟ್ಟುವುದಿಲ್ಲವೇ ?"

ಬಡವನಾದವನಿಗೆ ಕುಳಿತು ತಿನ್ನುವ ಸಿರಿವಂತನನ್ನು ಕಂಡರೆ ಸಹಜವಾಗಿಯೇ ರೋಷ ಬರಬಹುದು ಆದರೆ ಅದು ಸರಕಾರದ ನೀತಿ

ಯಾಗಬಾರದು. 'Absenty Land-lordism' ಅನ್ನು ತುಳಿಯುವ ಯತ್ನದಲ್ಲಿ ಪರಿಹಾರವನ್ನು ನೀಡದಾಗ ಅನ್ನದ ಹಾದಿ ಕಳೆದುಕೊಂಡು ಬಡವರಾದವರಿಲ್ಲವೇ ಎಂದು ಕೇಳುತ್ತಾನೆ ವಸಂತ ದೇಸಾಯಿ. ಒಕ್ಕಲ ಮಸೂದೆಯ ಬೆನ್ನಿಗೇ ನೂರಾರು ಜನರು ನಿರ್ಗತಿಕರಾದವರನ್ನು ಕಂಡವರು ಕಾರಂತರು. 'ಕಾರಂತರು ಭೂಸುಧಾರಣಾ ವಿರೋಧಿ" ಎಂಬ ಆರೋಪ ಅಷ್ಟು ಗಟ್ಟಿಯಾದುವಲ್ಲ ಎನ್ನಿಸುತ್ತದೆ. ಏಕೆಂದರೆ ಅವರೆಂದೂ ಭೂಹಿಡುವಳಿ ಮಿತಿಗೆ ವಿರೋಧಿಯಾಗಿರಲಿಲ್ಲ.

ಇಂತಹ ಬೂಟಾಟಿಕೆಯ ವರ್ಗಕಲಹವನ್ನು ಸೃಷ್ಟಿಸಿ ಬಡಿದಾಡುವ ಸಮಾಜವಾದದ ಟೀಕೆಯನ್ನು ಕಂಡು ಕಾರಂತರನ್ನು 'ಬಂಡವಾಳಶಾಹಿ' 'ಸಂಪ್ರದಾಯವಾದಿ' ಎಂದು ಹಳಿದ ಸಮಾಜವಾದಿಗಳಿದ್ದಾರೆ. ಆದರೆ ಇಂತಹ ಸಮಾಜವಾದಿಗಳೂ ಸರಕಾರ ನೀಡುವ ನಿವೇಶನಗಳನ್ನು ಪಡೆದಿದ್ದಾರೆ. ಅಕ್ರಮ ಭೂಮಿ ಸಕ್ರಮಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಯಾವಾವುದೋ ಪ್ರಾಜೆಕ್ಟ್‌ಗಳನ್ನು ಎಗರಿಸಿದ್ದಾರೆ, ತೋಟಭೂಮಿ ಕಾಣಿ ಮಾಡಿಕೊಂಡಿದ್ದಾರೆ. ಆದರೆ ತಮ್ಮ ಜೀವನದ ಬಹುಪಾಲನ್ನು ಸಾಲದಲ್ಲಿಯೇ ಕಳೆದ, ವೈಯಕ್ತಿಕ ಆಸ್ತಿಯಲ್ಲಿ ನಂಬಿಕೆಯಿರದ ಕಾರಂತರು ಸ್ವಂತ ಮನೆಯನ್ನೂ ಮಾಡಿಕೊಳ್ಳಲಿಲ್ಲ, ಮಾಡುವ ಅಪೇಕ್ಷೆಯನ್ನೂ ತೋರಲಿಲ್ಲ. ತನ್ನ ಶ್ರಮದ ಬಗ್ಗೆ ಹಣದ ಬಗ್ಗೆ ಗೌರವವನ್ನಿರಿಸಿಕೊಂಡು, ಅದನ್ನು ಪೋಲುಮಾಡದ, ಸಪಾತ್ರರನ್ನು ಹುಡುಕಿ ದಾನಮಾಡಿದ ನಿಷ್ಠುರವಾದಿ ಲಕ್ಷ್ಮಣರಾಯರನ್ನು ಚಿತ್ರಿಸಿದ ಕಾರಂತರು, 'ನನಗೆ ಮೂರು ಹೆಣ್ಣುಮಕ್ಕಳು, ಇನ್ನೂ ಮೂರು ಹುಟ್ಟಲಿವೆ, ಅವುಗಳ ಮದುವೆಗೆ ಹಣಕೊಡಿ' ಎಂದು ಮುದುಕಿ ಕಾವೇರಮ್ಮನನ್ನು ಛೇಡಿಸಿದ ಕಾರಂತರು ಮಾತ್ರ ನಿಜ ಜೀವನದಲ್ಲಿ ಲಕ್ಷ್ಮಣರಾಯರಾದ ಸಂದರ್ಭ ಕಡಿಮೆ, ಕಾವೇರಮ್ಮನೇ ಆದರು.

ಒಂದು ಜನಾಂಗದ ಪ್ರಜ್ಞೆ ಹೇಗಿರಬೇಕು ಎಂಬುದನ್ನು ಕೂಡಾ ಕಾರಂತರು ಮೂಕಜ್ಜಿಯಲ್ಲಿ ತೋರಿಸಿದ್ದಾರೆ. ತನ್ನ ಸಾವಿನ ಬಗ್ಗೆ ಮಾತನಾಡದ ಏಕೈಕ ಮುದುಕಿ ಆಕೆ! ತಾನು ಚಿತ್ರಿಸಿದ ಹೆಚ್ಚಿನ ಮುದುಕಿಯರನ್ನು 'ಸುಖವಾಗಿ ಸಾಯಲು' ಬಿಟ್ಟ ಕಾರಂತರು ಮೂಕಜ್ಜಿಯನ್ನು ಇನ್ನೂ ಗಟ್ಟಿಯಾಗಿ ಉಳಿಸಿದ್ದಾರೆ!

'ಮಾನವನ ಕಲ್ಪನೆಗೂ ಒಂದು ಮಿತಿ ಇದೆ' ಎಂದ ಕಾರಂತರು ಜಾಣನಂತಹ ಒಂದು ಪಾತ್ರವನ್ನು ಸೃಷ್ಟಿಸಿದ್ದು ಸಹಜವೆ. ಅವನ ಹೆಸರೂ ಸಮರ್ಪಕವೇ. ಜಾಣ ತನ್ನ ಮಿತಿಯನ್ನು ಅರಿತವನು! ಆತ ತನಗೆ ಎದುರಾದ ಯಾವುದೇ ಸಮಸ್ಯೆಗಳಿಗೆ, ಪ್ರಶ್ನೆಗಳಿಗೆ ತಾರ್ಕಿಕ, ಊಹನಾತ್ಮಕ ಸಮರ್ಥನೆಗಳನ್ನು ಕೊಡುವುದಿಲ್ಲ. ದೇವರು ಕೂಡ ಅವನ ಮಟ್ಟಿಗೆ ಒಂದು ಊಹಾನಾತ್ಮಕ, ದುರ್ಬಲ ಸಮರ್ಥನೆ ಅಷ್ಟೆ. ತನ್ನ ಅತೀಂದ್ರಿಯ ಜ್ಞಾನದ ಬಗ್ಗೆ ಏನೂ ಹೇಳಲಾರ, ಹೇಳುವುದೂ ಇಲ್ಲ. ಇತರರಂತೆ ಅವನಿಗೂ ಅದೊಂದು ಆಶ್ಚರ್ಯವೇ. ಆದ್ದರಿಂದ ಅವನ ನಿಲುವು "ಸದ್ಯಕ್ಕೆ ನನಗೆ ಹೊಳೆಯುವ ವಿಷಯವೆಂದರೆ ನನ್ನ ಹಾಗೆ ಹುಟ್ಟಿದವರ ಜತೆಯಲ್ಲಿ ನಾನೂ ಬಾಳುತ್ತಿದ್ದೇನೆ. ಎಂಬುವುದು; ಅದನ್ನು ಇಲ್ಲ ಎನ್ನುವಂತಿಲ್ಲ. ಇಲ್ಲಿರುವ ಉಳಿದ ಜೀವಿಗಳಂತೆ ನಾನು ಹುಟ್ಟಿದ್ದೇನೆ; ಆ ನಾನು ಸಾಯುತ್ತೇನೆ. ಆ ನಡುವೆ ಬದುಕಿರುವ ಅವಧಿಯಲ್ಲಿ ಹೇಗಿರಬೇಕು ಎನ್ನುವ ವಿಷಯ ನನಗೆ ಮುಖ್ಯ.

ನಾನು ಉಳಿದ ಜೀವಿಗಳ ಜೊತೆಯಲ್ಲಿ ಹೊಂದಿಕೊಂಡು ಬಾಳುವುದು ಮುಖ್ಯ." ಜಾಣನದು ತೀರಾ ಸರಳ, ವಾಸ್ತವ ಕನಸುಗಳು ; ಈ ಕನಸುಗಳನ್ನು ಕಾಣಲು ಎಚ್ಚರವಿದ್ದರೆ ಸಾಕು, ನಿದ್ರಿಸಬೇಕಾಗಿಲ್ಲ. !

ಈ ಜಾಣನ ತಮ್ಮ ಇಳಿಯೆಂಬ.... ಕಾದಂಬರಿಯ ಆನಂದರಾಯ. ಮನುಷ್ಯ ಸಂಬಂಧಗಳ ಸಿಕ್ಕುಗಳ ನಡುವೆಯೂ ನಮ್ಮ ಮಿತಿಯನ್ನು ದಾಟಲಾರೆವು. ಕೊನೆಯಲ್ಲಿ ತನ್ನ ಮಿತಿಯನ್ನು ಅರಿಯುತ್ತಾನೆ. "ಜಗತ್ತಿನಲ್ಲಿ ನಾವೇನು ತಿಳಿಯುವುದಿದ್ದರೂ ಅದಕ್ಕೆ ನಮ್ಮ ನಮ್ಮ ಅಲ್ಪಮತಿ, ಪಕ್ಷಪಾತ, ಪೂರ್ವಾಗ್ರಹಪೀಡೆ, ಅಜ್ಞಾನ ಎಷ್ಟೆಲ್ಲ ಅಡ್ಡ ಬರುವುದಿಲ್ಲ ಎನಿಸುತ್ತದೆ."

ಕಾರಂತರ ಪರಿಸರವಾದ, ಸಮಾಜವಾದ ವ್ಯಕ್ತಿವಾದ ; ವಾಣಿಜ್ಯ, ಜಾತಿವ್ಯವಸ್ಥೆ, ಇಹ-ಪರ;ದೇವರು, ದಾಂಪತ್ಯ ಜೀವನ ಇವೆಲ್ಲದರ ಬಗ್ಗೆ ಅವರ ನಿಲುವುಗಳ ಮೂಲ ಜಾಣನೇ.ವ್ಯಷ್ಟಿ-ಸಮಷ್ಟಿಯಲ್ಲಿ,ಮನುಷ್ಯ-ಮನುಷ್ಯನಲ್ಲಿ, ಮನುಷ್ಯ-ಇತರ ಜೀವಿಗಳಲ್ಲಿ ಮನುಷ್ಯ-ಪರಿಸರದಲ್ಲಿ ಅಭೇದ ಕಲ್ಪನೆಯ ಜೀವನವಾದ. ಜೀವನಕ್ಕೆ ಧರ್ಮ, ದೇವರು, ಪರ,. ಪುಣ್ಯಸಂಪಾದನೆ, ಶಾಸ್ತ್ರ ಇತ್ಯಾದಿ ಯಾವುದೂ ಬೇಕಾಗಲಾರವು. 'ಬಾಳ್ವೆಯೇ ಬೆಳಕು' ಧರ್ಮ, ಸನ್ಯಾಸದ ಹೆಸರಿನಲ್ಲಿ, ದೇವರು ದಿಂಡರು ಇತ್ಯಾದಿ ಠಕ್ಕಿನಲ್ಲಿ ಜೀವನ ನಿರಾಕರಣವೆಂದರೆ ಈ ಬೆಳಕಿಗೆ ಕಣ್ಣು ಮುಚ್ಚಿದಂತೆ ಬಾಳುವುದು, ಬಾಳಗೊಡುವುದೇ ಧರ್ಮ ಎನ್ನುತ್ತಾನೆ ಜಾಣ. ಬಾಳ್ವೆಯೇ ಮುಖ್ಯವಾದರೆ ನಾನು ಅಮುಖ್ಯವೆ ಎಂಬ ಪ್ರಶ್ನೆ ಬರುತ್ತದೆ. "ಬಾಳ್ವೆ ಇರುವುದೇ ಬದುಕುವುದಕ್ಕಾಗಿ ; ಬದುಕಿನಿಂದ ಬೆಳೆಯುವುದಕ್ಕಾಗಿ. ಮಳೆಯಾಗಿ ಉದುರಿದ ಹನಿ ಅಲ್ಪವಾಗಿರಬಹುದು. ಆ ಹನಿ ನೆಲದಲ್ಲಿ ಬಿದ್ದು ಹುದುಗಿ ಹೋಗುವ ಅದರ ಆಟ ಕ್ಷಣಿಕವಾಗಿಯೂ ತೋರಬಹುದು, ಜೀವನ ಪ್ರವಾಹದಲ್ಲಿ ಹುಟ್ಟಿ ಸಾಯುವ ಪ್ರತಿಯೊಂದು ಜೀವಿಯೂ ಹೀಗೆ ಕ್ಷಣಿಕವೂ ಅಲ್ಪವೂ ಹೌದು. ಆದರೆ ಅಂತಹ ಹನಿಗಳೇ ನೆಲವನ್ನೊಡೆದು ಬುಗ್ಗೆಗಳಾಗುತ್ತವೆ. ಅವು ಜಿನುಗಬೇಕು- ಹಂಬಲಿಸಿ ಹರಿಯಬೇಕು. ನದಿಯಾಗಿ ಹಿಗ್ಗಿ ವಿಸ್ತರಿಸಿ ತೊಡರುಗಳನ್ನು ಕೊಚ್ಚಿಮುಂದಕ್ಕೆ ಹರಿಯಬೇಕು. ಬೀಳುವ ಮಳೆಯ ಹನಿಗೆ ನಾಳಿನ ನದಿಯ ಕಲ್ಪನೆ ಆಗದಾದರೂ ಆ ನದಿಗೆ ಅಂಥ ಹನಿಗಳೇ ಕಾರಣ." ಈ ಅರಿವು ಬಂದು ಬದುಕಿನಿಂದ ತಾನು ಬೆಳೆದು ಪುನಃ ಬದುಕು ಬೆಳೆಯಲು ಅವಕಾಶವಾಗಬಹುದು. "ನಾನೆಂಬ ಅರಿವುಳ್ಳ ಜೀವ, ಬದುಕನ್ನು ನಿರಾಕರಿಸಿ ಪಡೆಯುವ ಸುಖಕ್ಕಿಂತ, ಮಿತಿಸಾಧನ ಸ್ವೀಕರಣೆಯೇ ಯೋಗ್ಯ ಹಾದಿಯೆಂದು ನನಗನಿಸುವುದು. ಆದರಿಂದ ನಮ್ಮಿಂದ ಸಾಗುವ ಮುಂದಿನ ಜೀವನಕ್ಕೆ ನಮ್ಮದೂ ಒಂದು ಸೇವೆ ಸಲ್ಲಿಸಬಹುದು" ಸ್ವಂತಿಕೆಯನ್ನು ಹಂಬಲಿಸುತ್ತಾರೆ,ಮುಖ್ಯವೆನ್ನುತ್ತಾರೆ ಎಂಬ ಕಾರಣಕ್ಕೆ ಕಾರಂತರನ್ನು ವ್ಯಕ್ತಿವಾದಿಯೆನ್ನಲು ಬರುವುದಿಲ್ಲ. ಆ ಸ್ವಂತಿಕೆಯೂ ಸಮಷ್ಟಿ ಜೀವನಕ್ಕೆ ಪೂರಕವಾಗಿರಬೇಕು. ತನ್ನ ಸ್ವಂತಿಕೆಯನ್ನು ಹಾಳುಗೆಡೆಯುವುದು, ಅಲ್ಲಗಳೆಯುವುದು ಸಮಷ್ಟಿವಾದದ ತಿರುಳೇನಲ್ಲ. ಅದಕ್ಕೇನೆ ವಸಂತ ದೇಸಾಯಿ ಹೇಳುತ್ತಾನೆ, "ನಮ್ಮ ಹಾಗೆ ಅವರಿದ್ದಿರಲಿಲ್ಲ ; ಅವರ ಹಾಗೆ ನಾವು ಇಲ್ಲ. ಹೆಚ್ಚು ಬೇಡ, ನಾನು ನಾರಾಯಣಯ್ಯನವರ ಹಾಗೂ ಇಲ್ಲ ; ಅವರು ನನ್ನ ಹಾಗೂ ಇಲ್ಲ. ನನ್ನ ಮನಸ್ಸಿಗೆ ಕಾಣುತ್ತದೆ ನೀವು ನಿಮ್ಮ ಹಾಗೆಯೇ ಇರಬೇಕು, ನಾನು..

ನನ್ನ ಹಾಗೆಯೇ ಇರಬೇಕು" ದೇಸಾಯಿ ಇನ್ನೊಂದು ಕಡೆ ಹೇಳುತ್ತಾನೆ, "ಎಲ್ಲಿತನಕ ನನ್ನ ವಾದದಲ್ಲಿ ನನಗೆ ಸತ್ಯ ಕಾಣಿಸುತ್ತಿದೆಯೋ ಅಲ್ಲಿಯತನಕ ನಾನೊಬ್ಬನೆ ಇದ್ದರೂ ನನ್ನ ಪಕ್ಷ ಇದ್ದಂತೆಯೆ." ಇದು ಸ್ವಂತಿಕೆಯನ್ನು ಬಿಂಬಿಸುತ್ತದೆಯೇ ವಿನಃ ವ್ಯಕ್ತಿಪಾರಮ್ಯವನ್ನಲ್ಲ.

ಪರಿಸರದ ವಿಷಯದಲ್ಲಂತೂ ಅವರು ಅತಿರೇಕದ, ವಿಕಲ್ಪಗೊಂಡ ವ್ಯಕ್ತಿವಾದವನ್ನು ಮಾನವ ವಾದವನ್ನು ತಿರಸ್ಕರಿಸುತ್ತಾರೆ. ಮನುಷ್ಯ ಪರಿಸರಗಳ ನಡುವಿನ ಅಭೇದ ಕಲ್ಪನೆಯ ಪರಿಹಾರವೆನ್ನುವುದು ಅವರ ನಿಲುವು ತಮ್ಮ ಒಂದು ಲೇಖನದಲ್ಲಿ ಹೇಳುತ್ತಾರೆ."....ತನ್ನ ಸುತ್ತಮುತ್ತಲಿನ ಪರಿಸರವನ್ನು ಅಲ್ಲಿ ಬಾಳುತ್ತಿರುವ ಇತರ ಜೀವ ಕೋಟಿಗಳನ್ನು ಅಲಕ್ಷಿಸಿ, ತಾನು ನಿಸರ್ಗವನ್ನು ಗೆಲ್ಲುವುದಕ್ಕಾಗಿಯೇ ಎಂಬ ಭಾವನೆಯನ್ನು ತಳೆಯತೊಡಗಿದ...." (ತರಂಗ ೧೧–೮–೮೫)

ತಮ್ಮ ೯೬ ವರ್ಷಗಳ ಅತಿ ಪುಟ್ಟ ಜೀವನಾವಧಿಯಲ್ಲಿ ಕಾರಂತರು ಮೂಕಜ್ಜಿಯಾದರು, ಸರಸೋತಿ, ಪಾರೋತಿ, ನಾಗವೇಣಿ, ಕಾವೇರಮ್ಮನಾದರು, ದೇಸಾಯಿಯಾದರು, ಕಾಸರಕನಾದರು, ಕೃಷ್ಣರಾಯ, ಚಂದ್ರಯ್ಯ, ಜಯರಾಮುನಾದರು, ಶಿವಣ್ಣ ಪಾಠಾಳಿ, ರುಕ್ಮಾಯಿಯಾದರು.... ಈ ಕಡು ಎಚ್ಚರದ ಪ್ರಯಾಣಕ್ಕೆ ಪರಿಭ್ರಮಣಕ್ಕೆ ಭಾರ್ಗವರಾಮನ ಪಾದವಲ್ಲದೆ ಮತ್ತಾವುದು ಸರಿ!? ಅದರ ವಿಸ್ತಾರಕ್ಕೆ ಪಡುಗಡಲೇ ಸರಿ. ತೊಂಬತ್ತಾರು ವರ್ಷಗಳ ಕಿರು ಅವಧಿಗೆ ಹಿಂದಿನ ಮಿಲಿಯ ಮಿಲಿಯಾಂತರ ವರ್ಷಗಳ ಸ್ಮೃತಿಯನ್ನು ತುಂಬಿ ಬೆಳಕು ಹೊಮ್ಮಿಸಿದ ಎಚ್ಚರದ ಆ ವಿರಾಟ್ ಸ್ವರೂಪ ನಿಷ್ಕ್ರಿಯವಾದುದು ಒಂದೇ ಬಾರಿ-ಡಿಸೆಂಬರ್ ೯, ೧೯೯೭ರಂದು ಮಣಿಪಾಲದ ಆಸ್ಪತ್ರೆಯಲ್ಲಿ, ಆ ಎಚ್ಚರವನ್ನು ಮುಂದಿನ ಬಾಳಿಗೆ ಹರಿಸಿಯೇ.

ಲಜ್ಜೆ

ಸೀತಾರಾಮು ತಂದೆ-ತಾಯಂದಿರನ್ನು ಗೌರವಿಸಿದವನಲ್ಲ, ಅವರನ್ನು ಕಾಣಲು ಹಂಬಲಿಸಿದವನೂ ಅಲ್ಲ. ವಿಧವೆ ತಾಯಿಯನ್ನು, ಅಣ್ಣಂದಿರನ್ನು ಎಷ್ಟು ಬೇಕೋ ಅಷ್ಟೇ ಹಚ್ಚಿಕೊಂಡವನು. ಅವರಿಂದಾದ ಸಹಾಯವನ್ನು ಹಂಗೆಂದು ಬಗೆದವನು. ಹಂಗು ಮಾತ್ರವಲ್ಲ, ಅದು ಪಾಪದ ಹಣವೆಂಬ ಭೀತಿ, ತಿರಸ್ಕಾರವೂ ಇತ್ತು- 'ಯಜಮಾನ್' ಸಂಸ್ಥೆಗಳು ಯಾವ ತಳಹದಿಯ ಮೇಲೆ ನಿಂತಿವೆ ಎಂಬುದನ್ನು ಅರಿತವನು. ಈ ಲಜ್ಜೆಯೇ ಅವನ ಪ್ರಜ್ಞೆಯನ್ನು ರೂಪಿಸಿದ್ದು, ಗಣಪತಿ ಹೆಗಡೆ ಮತ್ತು ಮಾನಿಯವರಲ್ಲಿ ಅವನ ಪ್ರಶ್ನೆಯೂ ಅದೇ, 'ನಾನು ಯಾರ ಮಗನೆಂದು ತಿಳಿದೂ ನನ್ನನ್ನು ಆದರಿಸುವಿರಾ?' ಈ ಧರ್ಮಪ್ರಜ್ಞೆ ಧರ್ಮಸೂಕ್ಷ್ಮ ಅವನಿಗೆ ಎಲ್ಲಿಂದ ಬಂತು? ತಂದೆತಾಯಿಯಿಂದ ಅಲ್ಲ ಖಂಡಿತ. ಅದು ಅವನಜ್ಜಿಯ ಬಳುವಳಿ. ಅವನಜ್ಜಿ ಅಂದರೆ ಅಚ್ಯುತಭಟ್ಟರ ಹೆಂಡತಿ; ತನ್ನ ಮಗನಿಗೆ (ಸೀತಾರಾಮುನ ತಂದೆ) ಹೇಳಿದ್ದು "ಕೇಳದೆಯೇ ಕೊಟ್ಟಿದ್ದಲ್ಲವೇ? ದೊಡ್ಡಸ್ತಿಕೆ ಎಂಬುದು ಅದು, ಹಾಗೆ ಕೊಡಬಲ್ಲ ಗುಣ. ಕೊಟ್ಟ ಗುಣವನ್ನು ಮಾತ್ರ ನೀನು ಕಸ ಎಂದು ತಿಳಿಯಬೇಡ. ನಿನ್ನ ಅಪ್ಪನಿಗಾದರೆ ಆ ಹಣವು ಕಸ, ಇಸ್ಪೀಟು ಆಡಿ ಕಸದ ಹಾಗೆಯೇ ಕಳೆದು ಬರುತ್ತಾರೆ, ನೋಡು." ಈ ಪ್ರಜ್ಞೆ ಸೀತಾರಾಮುನ ಲಜ್ಜೆ, ಎಚ್ಚರಗಳಿರಡೂ.

ತನ್ನನ್ನು ತಾನು ಅವಲೋಕಿಸದಿರುವವನು ಅಹಂಕಾರ, ದಾರ್ಷ್ಟ್ಯಗಳು ತುಂಬಿದ್ದವು

ಪರಮಯ್ಯನಲ್ಲಿ. 'ತನ್ನ ಕೋಳಿ ಇಲ್ಲದೆ ಬೆಳಗನ್ನು ಕಾಣದ ಪ್ರಪಂಚದ ಅವಸ್ಥೆಯನ್ನು ನೋಡಿ ನಗುವ ಮುದುಕಿಯಂತೆ ಅಹಂಭಾವದಿಂದ ಎಲ್ಲವನ್ನೂ ತೊರೆದು ಹೋದ ಪರಮಯ್ಯನಿಗೆ ಅವನ ಮುಖವನ್ನು ಅವನಿಗೇ ತೋರಿಸುವ ಕನ್ನಡಿ ಹಿಡಿಯುವವರು ಬೇಕಾಗಿತ್ತು. ಅದು ಜೀವ ಮಲೆಮನೆಯವರೆಗೆ ಸಾಗಿದಾಗ, ಜೀವ-ಜೀವನವೆರಡೂ ಮಲೆಮನೆಯಲ್ಲಿ ಹಣ್ಣಾ-ದಾಗ ದೊರಕಿತು. ಮಂಜಯ್ಯನವರು ಆ ಕನ್ನಡಿಯನ್ನು ಎತ್ತಿತೋರಿದವರು. ಹಿಂದಿ-ರುಗಿ ತನ್ನವರನ್ನು ಸೇರಲು ಲಜ್ಜೆ ; ಆದರೂ ಆ ಲಜ್ಜೆ ತನ್ನನ್ನರಿಯಲು ಸಹಕಾರ ಮಾಡಿತು. ಕೊನೆಯಲ್ಲಿ ತಿಳಿಯುತ್ತಾನೆ, "ಮೊದಲಿಗಿಂತಲೂ ಎಷ್ಟೋ ಸಂಸ್ಕರಿಸಿದರೂ, ಹಳೆಯ ದೇಹ, ಹಳೆಯ ಮನಸ್ಸುಗಳನ್ನು ಹೊತ್ತು ನಲಿಯುತ್ತಿರುವ ತನ್ನ ರೂಪವನ್ನು ಕನ್ನಡಿಯಲ್ಲಿ ಕಂಡಾಗ-ತೀರಾ ಕುರೂಪವಾಗಿ ಕಾಣಿಸದೆ ಹೋದರೂ, ಸುರೂಪವಾಗಿಲ್ಲವಲ್ಲ ಎಂಬ ಮಿತಿ ಕಾಣುತ್ತದೆ."

ಕೊನೆಗೂ ದೊಡ್ಡಸ್ತಿಕೆ ಯಾವುದು ಎಂಬರಿವಾಗುತ್ತದೆ ಬಾಲಕೃಷ್ಣಯ್ಯನವರಿಗೆ. ತಾವು ಅಪವಾದ ಹೊರಿಸಿದ ಆ ತರುಣ ಅಪ್ಪೈತ್ತರಕ್ಕೆ ಬೆಳೆದು ನಿಂತಾಗ ತಾವೆಷ್ಟು ಕುಬ್ಜರೆಂಬ ಲಜ್ಜೆ ಅವರ ಕಾಲನ್ನು ಅಳಿಯನ, ಮಗಳ ಮನೆ ತನಕ ನಡೆಸಿತು.

ಮರಳಿಮಣ್ಣಿಗೆಯ ಸತ್ಯಭಾಮೆಯು ಪಾರೋತಿ, ಸರಸೋತಿ, ನಾಗವೇಣಿಯ ಮಟ್ಟಕ್ಕೇರುವ ಧೀಮಂತೆಯಲ್ಲ, ಅವಳಿಗೆ ತನ್ನ ಮಿತಿ ಅರಿವಾಗುತ್ತದೆ, ಎರಡು ಪ್ರಸಂಗದಲ್ಲಿ. ಆ ಲಜ್ಜೆ ಅವಳನ್ನು ಬೆಳಿಸಿತು. ಇಬ್ಬನಿಗೆ ತಲೆಯೊಡ್ಡಿ ಸ್ವಲ್ಪ ಜ್ವರ ಕಾದ ಲಚ್ಚನನ್ನು ಕಂಡು ಅದೆಷ್ಟು ಹಳಿದಳು ಪಾರೋತಿಯನ್ನು! ಆ ಹತಭಾಗ್ಯೆ ಅದೆಷ್ಟು ನೊಂದುಕೊಂಡಳೋ! ಸತ್ಯಭಾಮೆಗೆ ಅದರ ಅರಿವಾದದ್ದು ಎಷ್ಟೋ ವರ್ಷಗಳ ನಂತರ. ತನ್ನಿಂದಾಗಿ ರಾಮನ ಮೈ ಬೆಚ್ಚಗಾದರೂ ನಾಗವೇಣಿ ಅದನ್ನು ಹಚ್ಚಿಕೊಳ್ಳದೆ, ಅದರಿಂದಾದದ್ದು ಎಂಬುದನ್ನು ಒಪ್ಪದೆ, ಅವಳನ್ನೇ ಸಮಾಧಾನಿಸಿದಾಗ ತಾನೆಷ್ಟು ಕುಬ್ಜಳು ಈ ಸೊಸೆಯೆದುರು ಎಂದುಕೊಂಡಳು.

ನಾಗವೇಣಿ ಅಳಿವೆಗೆ ಹಾರಿಕೊಳ್ಳುತ್ತಾಳೆ. ಮಂದರ್ತಿಯಿಂದ ತಿರುಗಿ ಬಂದ ನಂತರ "ಮನೆಯ ಇತಿಹಾಸವೆಲ್ಲ ಸರಸೋತಿಯಿಂದ ಅವಳ ಕಿವಿಗೂ ಬಿದ್ದಿತು. 'ತನ್ನ ಸೊಸೆಯೊಂದು ದೇವತೆ', ಎಂದು ಅವಳಿಗೂ ಕಂಡಿತು. ಮೇಲೆ, ನಾಲ್ಕೇ ನಾಲ್ಕು ದಿನಕ್ಕೆ ತನ್ನ ಮನಸ್ಸು ನೆಮ್ಮದಿ ಕಾಣದೆ, ಮಗಳ ಮನೆಗೆ ಹೋದುದಕ್ಕೆ ನಾಚಿಕೆ ಆಯಿತು."

ಸರಳ, ಹಳ್ಳಿಗ ತಂಬಾಕದ ಶಿವಣ್ಣನವರಿದ್ದಾರೆ. ತನ್ನ ಮಾತು ಪ್ರತಿಜಾರಿ ಎಡವಿದಾಗ ನಾಚಿಕೊಳ್ಳುತ್ತಾರೆ. ದೇಸಾಯಿಯ ಮಾತಿನ ಚಾಟಿಯೇಟಿಗೆ ತಿಣುಕಿದರೂ ಆ ಲಜ್ಜೆಭಾವ ಅವರನ್ನು ಶುಂಠರನ್ನಾಗಲು ಬಿಡುವುದಿಲ್ಲ. ಅಂತರಂಗದಲ್ಲಿಯೇ ವಿಚಾರಿಸಿ ಲಜ್ಜೆಗೊಂಡು ತಾನೆಷ್ಟು ಚಿಕ್ಕವ, ತನ್ನ ತಿಳಿವು ಅದೆಷ್ಟು ಕಿರಿದಾದುದು ಎಂದು ಅರಿಯುತ್ತಾರೆ.

ಹೀಗೆ ಬಾಳು ಬೆಳಕಾಗಲು, ತ್ರಿಕರಣ ಶುದ್ಧಿಗೋಸ್ಕರ, ಮನೋವೈಶಾಲ್ಯ-

ಹೃದಯ ವೈಶಾಲ್ಯ ಸಾಧಿಸಲು ಅಚ್ಚರಿ, ಎಚ್ಚರ ಮತ್ತು ಲಜ್ಜೆ ಹೇಗೆ ಸಾಧನಗಳಾಗ ಬಲ್ಲವು ಎಂಬುದರ ಒಂದು ವಿಶಾಲಬಲೆ ಯನ್ನು ನಾವು ಕಾರಂತರ ಬದುಕಿನಲ್ಲೀ, ಬರಹದಲ್ಲಿ ಮಾತಿನಲ್ಲಿ ಕಾಣುತ್ತೇವೆ. [ಕೆಲವೇ ಕೆಲವು ಪುಟಗಳ ಮೇಲೆ ಈ ಬಲೆ ಯನ್ನು ಹರಡಿ ಬಿಡಿಸುತ್ತೇವೆ ಎಂಬುದು ಅಜ್ಞಾನದ, ಅಹಂಕಾರದ ಮಾತಾದೀತು] ಈ ವಿಶಾಲಬಲೆಯೇ ಕಾರಂತ ಸ್ಮೃತಿ. ಸ್ಮೃತಿಯೆಂದರೆ ಎಚ್ಚರ, ನೆನಪು. ಸ್ಮೃತಿ ಯೆಂದರೆ ಅರಿವು, ಪ್ರಜ್ಞೆ. ಅದು ಕಾರಂತರ ಯುಗಪ್ರಜ್ಞೆ ಮೂಕಜ್ಜಿಯ ಯುಗಪ್ರಜ್ಞೆ.

ಆದರೆ ಪರಿಸ್ಥಿತಿ ಸನ್ನಿವೇಶಗಳು ಇಂತಹ ಕಟ್ಟೆಚ್ಚರದ ಮನಸ್ಸನ್ನೂ ಅಸಹಾಯಕತೆಗೆ, ವಿವೇಶತೆಗೆ ತಳ್ಳಿ ನಮ್ಮನ್ನು ಗೊಂದಲಕ್ಕೆ ನೂಕುತ್ತವೆ. ಗರ್ಭಗುಡಿಯನ್ನು ಬರೆದ ಕಾರಂತರು, ಗೋಕರ್ಣದಲ್ಲಿ ಕಾಸರಕನ ಹಣ್ಣನ್ನು ಹಿಂಡಿದ ಕಾರಂತರು ಉಡುಪಿ ಮಠದಲ್ಲಿ ಸನ್ಮಾನ ಸ್ವೀಕರಿಸಿದರು! ಬಹು ರಾಷ್ಟ್ರೀಯ ಕಂಪೆನಿಗಳನ್ನು ವಿರೋಧಿಸಿದ ಕಾರಂತರು ರಾನ್ ಸಾಮರ್ಸ್ ಮಾಡಿದ ಸನ್ಮಾನವನ್ನು ಸ್ವೀಕರಿಸಿದರು! 'ಈ ಭೂಲೋಕದಲ್ಲಿ ನಿಮ್ಮ ಹವ್ಯಕರು ಎಷ್ಟು ಸಾರಸ್ವತರು ಎಷ್ಟು' ಎಂದು ಪ್ರಶ್ನಿಸಿದ 'ಜಾಣ' ಕಾರಂತರು ತಮ್ಮ ಜೀವನದ ಅಂತಿಮ ಕಾಲದಲ್ಲಿ ಬ್ರಾಹ್ಮಣ ಸಂಘದ ಉದ್ಘಾಟನೆಯನ್ನೂ ನೆರವೇರಿಸಿದರು! ಜನ ಯಾಕೆ ಅಂಗಿ ಬದಲಿಸದಷ್ಟು ಸುಲಭವಾಗಿ ನಂಬಿಕೆಗಳನ್ನು ಬದಲಿಸುತ್ತಾರೆ ಮತ್ತು ಹೇಗೆ ನಂಬಿಕೆಗಳ ಮಾರಾಟ ನಡೆಯುತ್ತದೆ ಎಂದು ದೇಸಾಯಿಯ ಬಾಯಲ್ಲಿ ಹೇಳಿಸಿದ ಕಾರಂತರು, ಜ್ವರದಿಂದಲೇ ಪ್ರಕ್ಷುಬ್ಧಗೊಂಡ ನೀರಲ್ಲಿ ಹೇಗೆ ಪಾದ್ರಿಗಳು ಗಾಳಹಾಕು ತ್ತಾರೆ ಎಂದು ಚೋಮನ ದುಡಿಯಲ್ಲಿ ಮನೋಜ್ಞವಾಗಿ ಚಿತ್ರಿಸಿದ ಕಾರಂತರು ಸಂದೇಶ ಪ್ರತಿಷ್ಠಾನದಲ್ಲಿ ದೀಪ ಬೆಳಗಿಸಿ ಗೋಷ್ಠಿಯನ್ನು ಉದ್ಘಾಟಿಸುತ್ತಾರೆ! ಯಕ್ಷ ಗಾನದಲ್ಲಿ ಭಾಗವತ ನಿರ್ದೇಶಕನಾಗಿರು ತ್ತಾನೆ, ಸಾಕ್ಷಿಯಾಗಿರುತ್ತಾನೆ. ಅವನು ಒಂದನೆಯ ವೇಷಧಾರಿ. ಅವನು ಉಳಿದ ಎಲ್ಲಾ ಪಾತ್ರಗಳನ್ನು ವಿಚಾರಿಸಿಕೊಳ್ಳು ತ್ತಾನೆ, ಉಳಿದ ಪಾತ್ರಗಳು ತಮ್ಮನ್ನು ನಿವೇದಿಸಿಕೊಳ್ಳುವುದೂ ಭಾಗವತನಲ್ಲಿಯೇ. ಅವನು ಯಜ್ಞ ಸಮ್ಮುಖದಲ್ಲಿ ಸ್ಥಾಪಿಸಿದ ಬ್ರಹ್ಮನಂತೆ. ಅವನು ಅಧಿಕೃತ. ಕಾರಂತರ ಯಕ್ಷಗಾನ ಪ್ರಯೋಗಗಳಲ್ಲಿ ಭಾಗವತ ಕೇವಲ 'ಹಿಮ್ಮೇಳದವರಲ್ಲಿ' ಒಬ್ಬನಾಗಿ ರಂಗದಿಂದಲೇ ಅದೃಶ್ಯನಾಗುತ್ತಾನೆ. [ಯಕ್ಷ ಗಾನದಲ್ಲಿ ಹಿಮ್ಮೇಳ-ಮುಮ್ಮೇಳ ವಿಂಗಡ-ಣೆಯೇ ತೀರಾ ಇತ್ತೀಚಿನದು]. ಹೀಗೆ ಕಾರಂತರು ಒಬ್ಬ 'ಚಾರಿತ್ರಿಕ' 'ಪ್ರತಿನಿಧಿ' ಯನ್ನು ಕೆಡವಿಬಿಡುತ್ತಾರೆ. ಯಕ್ಷಗಾನದ 'ಭಾಗವತ' ಕಲ್ಪನೆಯೇ ಅನನ್ಯವಾದದ್ದು. ಕಾರಂತರು ಆ ಕಲ್ಪನೆಯನ್ನು ಚಿವುಟಿಬಿಡು ತ್ತಾರೆ. ಇದನ್ನು ನಾವು ಗಮನಿಸುವಂತೆ ಮಾಡುವುದೂ, ಗಮನಿಸಿ ನೋವುಣ್ಣುವಂತೆ ಮಾಡುವುದೂ ಕಾರಂತರು ಹುಟ್ಟಿಸಿದ, ರೂಪಿಸಿದ ಸ್ಮೃತಿಯೆ! ಸ್ಮೃತಿಯೆಂದರೆ ಎಚ್ಚರ, ನೆನಪು. ಸ್ಮೃತಿಯೆಂದರೆ ಪ್ರಜ್ಞೆ ಅರಿವು.

೧೯೫೫ರ ಜೂನ್ ೧೦, ೧೧ ಮತ್ತು ೧೨ರಂದು ಮೈಸೂರಿನಲ್ಲಿ ೩೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಶ್ರೀ ಶಿವರಾಮ ಕಾರಂತರು ಈ ಸಮ್ಮೇಳನದ ಅಧ್ಯಕ್ಷರು. ರಾಷ್ಟ್ರಕವಿ ಕುವೆಂಪು ಅವರು ಈ ಸಮಾರಂಭದ ಸಮಾರೋಪದಲ್ಲಿ ಹೀಗೆ ಹೇಳಿದರು :

"ಕಾರಂತರು ಆಶಾವಾದಿಗಳು, ಧೀರರು, ತಮ್ಮ ಭಾಷಣವನ್ನು ನಿಮಗಿತ್ತಿದ್ದಾರೆ. ಅವರು ಏಕೆ ಖಾರವಾಗಿ, ಕಟುವಾಗಿ ನುಡಿಯುತ್ತಾರೆ? ಇಷ್ಟು ಸೌಮ್ಯಮೂರ್ತಿ ಇಷ್ಟೇಕೆ ಕಟುವಾಗಿ ನುಡಿಯುತ್ತಾರೆ? ಎಂದು ಯೋಚಿಸಿದರೆ ಬಹುಜನರು ಶ್ಲಾಘಿಸಬಹುದಾದ ಮಾತನ್ನೇ ಆಡಿದ್ದಾರೆ. ಸಾಹಿತ್ಯದ ಬಗ್ಗೆ ಕೆಲವರಿಗೆ ರುಚಿಸಬಹುದಾದ, ಕೆಲವರಿಗೆ ರುಚಿಸದ ಮಾತನ್ನೇ ಆಡಿದ್ದಾರೆ."

—ಈ ಬಗ್ಗೆ ಕಾರಂತರಿಂದ ಬಂದ ಪ್ರತಿಕ್ರಿಯೆ :

"ನನ್ನ ಮಾತು ಕಟುವೆಂದು ಶ್ರೀ ಪುಟ್ಟಪ್ಪನವರು ಮೃದುವಾಗಿಯೇ ತಿಳಿಸಿದ್ದಾರೆ. ಒಂದೊಂದು ಬಾಳು ಒಂದೊಂದು ರೀತಿ. ಯಾರನ್ನೂ ಕಚ್ಚಬಂದ ಹಾವು ನಾನಲ್ಲ. ಯಾರನ್ನೂ ನಾನು ಟೀಕಿಸಿಲ್ಲ. ನನ್ನನ್ನೇ ನಾನು ಟೀಕಿಸಿಕೊಂಡಿದ್ದೇನೆ. ನನ್ನಲ್ಲಿ ಉಂಟಾದ ನೋವನ್ನು ತಿಳಿಸಿದ್ದೇನೆ."

"ನನ್ನ ಕಠಿಣವಾದ ಮಾತು ಕನ್ನಡ ಜನರ ಅಂತರಂಗದ ಧ್ವನಿ. ಮಾನವನನ್ನು ಪ್ರತಿಸ್ಪರ್ಧಿಸಿ ನಿಂತಿರುವ ಹಿಮಾಲಯದಷ್ಟು ಕೆಲಸ ನಡೆಯಬೇಕಾಗಿದೆ. ನಾವೂ ಅಷ್ಟೇ ದೊಡ್ಡವರಾಗಿ ಕಾರ್ಯಸಾಧಿಸುವ."

(ಉದ್ಧೃತ: ಪ್ರಬುದ್ಧ ಕರ್ನಾಟಕ ಸಂಪುಟ ೩೬–ಸಂಚಿಕೆ ೨, ೧೯೫೫)

Reg. No. KRNN.29
WPP 6

LICENCE No. 21
LICENCED TO POST WITH PAYMENT

ಸಮಿತಿಯ ಹೊಸ ಪ್ರಕಟಣೆಗಳು

ಕಾರಂತ ದರ್ಶನ

ಕಾರಂತರ ಬದುಕು, ಬರಹ ಸ್ಮೃತಿಗಳನ್ನೊಳಗೊಂಡ ನಾಡಿನ ಗಣ್ಯರ, ಹೆಸರಾಂತ ಬರಹಗಾರರ, ಅಭಿಮಾನಿಗಳ ಲೇಖನಗಳ ಸಂಗ್ರಹ—**ಕಾರಂತ ದರ್ಶನ**

ಕಾರಂತರ ವಿಶಿಷ್ಟ ಚಿತ್ರಗಳೊಂದಿಗೆ ಡೆಮಿ ೧/೮, ೧೬೪ ಪುಟಗಳ ಅಪೂರ್ವಕೃತಿ.

ಸಂಪಾದಕೀಯ ಸಂಕಲನ

ಪುಸ್ತಕ ಪ್ರಪಂಚದಲ್ಲಿ ಈ ಹಿಂದೆ ಪ್ರಕಟಗೊಂಡ ಡಾ|| ದೇಜಗೌ ಅವರ ಸಂಪಾದಕೀಯ ಲೇಖನಗಳ ಸಂಗ್ರಹ—**ಸಂಪಾದಕೀಯ ಸಂಕಲನ**

ನಾಡಿನ ಖ್ಯಾತ ಕಲಾವಿದರಾದ ಪಿ. ಆರ್. ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖ ಚಿತ್ರದೊಂದಿಗೆ, ಡೆಮಿ ೧/೮, ೧೪೪ ಪುಟಗಳ ಡಿ.ಟಿ.ಪಿ ಮುದ್ರಣ. ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಈ ಕೃತಿಗಳು ಕಡಿಮೆದರದಲ್ಲಿ ಲಭ್ಯ. ಪ್ರತಿಗಳಿಗಾಗಿ ಸಂಪರ್ಕಿಸಿ:

ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

Edited by Chandrashekhararadhya, Printed by Papanna
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.